ತೆನೆಗಳನ್ನು ಕೆಳಗೆ ತೂಗುಬಿಟ್ಟು, ಒಂದಕ್ಕೊಂದು ಹೆಣೆದು ಬತ್ತದ ತೋರಣವನ್ನು ಮಾಡಿ ಬಾಗಿಲಿಗೆ ಕಟ್ಟುವುದೂ ಉಂಟು. ಹಳ್ಳಿಗಳಲ್ಲಿ ಇದನ್ನು ಬಾಗಿಲು ಬತ್ತ ಎನ್ನುತ್ತಾರೆ.

ಸ್ವಲ್ಪ ಅನುಕೂಲವಂತರ ಮನೆಗಳಲ್ಲಿ ಬಳೆಗಳ ಚೂರು ಹಾಗೂ ಸಣ್ಣ ದೊಡ್ಡ ಮಣಿಗಳಿಂದ ಬಾಗಿಲುತೋರಣವನ್ನು ಮಾಡಿ ಬಾಗಿಲಿಗೆ ಕಟ್ಟಿ ಅದರ ಸರಪಳಿಗಳನ್ನು ಚಿತ್ರಪಟಗಳ ಮೇಲೆ ತೂಗುಬಿಡುವುದುಂಟು. ಬಣ್ಣಬಣ್ಣದ ಸಣ್ಣ ಮಣಿಗಳಿಂದ ಮಾಡಿದ ಸರಸ್ವತಿ, ಲಕ್ಷ್ಮಿ, ಕಾಮಧೇನು, ಪಟ್ಟದ ಆನೆ, ಪಟ್ಟದ ಕುದುರೆ ಮುಂತಾದ ರಚನೆಗಳನ್ನೊಳಗೊಂಡಂತೆ ವಿವಿಧ ನಮೂನೆಯ ಚಿತ್ತಾಕರ್ಷಕ ತಟ್ಟೆಗಳನ್ನು ಗೋಡೆಗಳಲ್ಲಿ ಅಲಂಕಾರಕ್ಕಾಗಿ ತೂಗುಹಾಕುವುದು, ಕಸೂತಿ ಹಾಕಿದ ಕೊಕ್ಕೆ ಸೂಜಿಯಿಂದ ಹೆಣೆದ ಪರದೆಗಳನ್ನು ಬಾಗಿಲುಗಳಿಗೆ ಇಳಿಬಿಡುವುದು, ಮುಖ್ಯ ಹಜಾರಗಳಲ್ಲಿ ಕೆತ್ತನೆ ಕೆಲಸಗಳಿಂದ ಅಲಂಕರಿಸಿದ ಅತ್ಯುತ್ತಮ ಮರದಿಂದ ಮಾಡಿದ ಆಕರ್ಷಕ ಚಿತ್ರಗಳನ್ನು ಬಿಡಿಸಿದ ಚೌಕದ ಹಲಗೆಯನ್ನು ಮಾಡಿಗೆ ಮೊಳೆಗಳಿಂದ ಕೂರಿಸುವುದು, ಕುಸುರಿ ಕೆಲಸದ ಕಂಬಗಳಿಗೆ ಬೆಳ್ಳಿಯ ಹೂಗಳನ್ನು ಅಂಟಿಸುವುದು, ಹಿತ್ತಾಳೆಯ ರೇಕುಗಳನ್ನು ಬಿಚ್ಚಿ ಎಳೆಯುವುದು ಮುಂತಾದವನ್ನು ಕಾಣಬಹುದು. (ಎಂ.ಜೆ.ಬಿ.)

ಕರ್ನಾಟಕಕ್ಕೆ ಐರೋಪ್ಯ ಸಂಪರ್ಕ ಒದಗಿಬಂದ ಕಾಲದಿಂದ ಇಲ್ಲಿನ ಗೃಹ ನಿರ್ಮಾಣದ ತಂತ್ರ ಮತ್ತು ಸ್ವರೂಪದಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡುವು. ಟಿಪ್ಪುಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಕಟ್ಟಿದ ಅವನ ಅರಮನೆ, ಬೆಂಗಳೂರಿನ ಅರಮನೆ ಮುಂತಾದೆಡೆಗಳಲ್ಲಿನ ಐರೋಪ್ಯ ರೀತಿಯ ಪಾವಟಿಗೆ, ಟೆರೇಸ್ ಚಾವಣಿ ಇವುಗಳು ಬಹುಶಃ ಫ್ರೆಂಚ್ ತಂತ್ರಜ್ಞರ ಮೂಲಕ ಬಳಕೆಗೆ ಬಂದಿತ್ತು. ಆದರೆ ಐರೋಪ್ಯ ಗೃಹನಿರ್ಮಾಣತಂತ್ರದ ಪ್ರಭಾವ ದಿನೇ ದಿನೇ ವರ್ಧಿಸಲಾರಂಭವಾದುದು 19ನೆಯ ಶತಮಾನದ ಆದಿಭಾಗದಿಂದ. ಶ್ರೀರಂಗಪಟ್ಟಣ, ಬೆಂಗಳೂರು, ಮೈಸೂರು, ಮಂಗಳೂರು, ಬಳ್ಳಾರಿ, ಬೆಳಗಾಂವಿ ಪಟ್ಟಣಗಳಲ್ಲಿ ಎಲ್ಲಾ ರೀತಿಯ ದೊಡ್ಡ ಗೃಹಗಳು ಹೆಚ್ಚುಮಟ್ಟಿಗೆ ಐರೋಪ್ಯ ಅಧಿಕಾರಿಗಳಿಗೆ ನಿರ್ಮಿತವಾದುವು. ಮೈಸೂರು, ಬೆಂಗಳೂರು ಮೊದಲಾದೆಡೆಗಳಲ್ಲಿ ಈ ರೀತಿಯ ಮನೆಗಳನ್ನು ಕಟ್ಟುವುದು ಉನ್ನತಸ್ಥಾನದ ಒಂದು ಚಿಹ್ನೆಯಾಗಿ ಅನೇಕ ಸ್ಥಳೀಯ ಶ್ರೀಮಂತರೂ ಆ ವಿಧಾನಗಳನ್ನು ಅನುಕರಿಸಲಾರಂಭಿಸಿದರು. ಹಿಂದಿನ ಕಾಲದಲ್ಲಿ ಮನೆಗಳ ಮುಂದೆ ಜಗಲಿಗಳಿದ್ದು ಅವು ಬೀದಿಯೆಡೆಗೆ ತೆರೆದುಕೊಂಡಂತಿದ್ದ ಕಟ್ಟಡಗಳು ಬಹುಸಾಮಾನ್ಯವಾಗಿದ್ದರೆ, ಈಗ ದೊಡ್ಡ ಸುತ್ತುಗೋಡೆ ಇರುವ ಆವರಣದ ಮಧ್ಯದಲ್ಲಿ ಮನೆಯನ್ನು ನಿರ್ಮಿಸಿ ಸುತ್ತಲೂ ತೋಟ ಬೆಳೆಸುವ ಅಥವಾ ಮನೆಯ ಮುಂದೆ ಸ್ವಲ್ಪ ಜಾಗವನ್ನು ಬಿಟ್ಟು ಕಾಂಪೌಂಡ್ ಕಟ್ಟಿ, ಮನೆ ರಸ್ತೆಯಿಂದ ಸ್ವಲ್ಪ ಹಿಂದೆ ಇರುವಂತೆ ಕಟ್ಟುವ ಸಂಪ್ರದಾಯ ವಿಶೇಷವಾಗಿ ಬೆಳೆಯಿತು. ಗೃಹರಚನೆಯಲ್ಲಿ ವರಾಂಡ, ದೊಡ್ಡ ಹಜಾರ, ಅಡುಗೆಕೋಣೆ, ಓದುವ ಕೋಣೆ, ಮಲಗುವ ಕೋಣೆ ಹೀಗೆ ಪ್ರತ್ಯೇಕ ಉದ್ದೇಶಗಳಿಗಾಗಿ ಪ್ರತ್ಯೇಕ ಕೋಣೆಗಳನ್ನು ದೊಡ್ಡದಾಗಿ ಅಳವಡಿಸುವ ರೂಢಿ ಬಂತು. ತೊಟ್ಟಿ ಮನೆಗಳಿಗೆ ಬದಲಾಗಿ ಪೂರ್ಣ ಮುಚ್ಚಿದ ಮಾಳಿಗೆಯ ಮನೆಗಳನ್ನು ಕಟ್ಟುವುದೂ ಜಂತಿಗಳನ್ನು ಗೋಡೆಗಳ ಮೇಲೆ ಅಡ್ಡಡ್ಡವಾಗಿ ಹಾಸಿ ಮೇಲೆ ಇಟ್ಟಿಗೆ ಚದರಗಳನ್ನು ಒತ್ತಾಗಿ ಜೋಡಿಸಿ ಮಾಡಿದ ಮಟ್ಟಚಾವಣಿಯನ್ನು (ಮದ್ರಾಸ್ ಟೆರೇಸ್) ಹಾಕುವುದೂ ರೂಢಿಗೆ ಬಂದುವು. ಕೆಲವೆಡೆ ಎರಡು ಮೂರು ಅಂತಸ್ತಿನ ಮನೆಗಳೂ ರಚಿತವಾದುವು. ಮನೆಗಳ ಮುಂಭಾಗದಲ್ಲಿ ಐರೋಪ್ಯ ರೀತಿಯ ಡೋರಿಕ್, ಕಾರಿಂಥಿಯನ್ ಮೊದಲಾದ ಕಂಬಗಳನ್ನು ಅಳವಡಿಸಿರುವುದೂ ಅಲ್ಲಲ್ಲಿ ಕಂಡುಬರುತ್ತದೆ. 19ನೆಯ ಶತಮಾನದ ಗೃಹನಿರ್ಮಾಣದಲ್ಲಿ ಕಂಡುಬಂದ ಇನ್ನೊಂದು ಮುಖ್ಯ ಬದಲಾವಣೆ ಮಂಗಳೂರು ಹೆಂಚಿನ ಅಳವಡಿಕೆ. ಬಾಸೆಲ್ ಮಿಶನ್‌ರವರಿಂದ 1865ರಲ್ಲಿ ಮಂಗಳೂರಿನಲ್ಲಿ ಮೊದಲ ಮಂಗಳೂರು ಹೆಂಚು ಕಾರ್ಖಾನೆ ಪ್ರಾರಂಭವಾಯಿತು. ಇದಕ್ಕೆ ಸ್ವಲ್ಪ ಮುಂಚೆಯೇ ಪ್ಲೆಬಿತ್ ಎಂಬ ಆಂಗ್ಲರು ಮಂಗಳೂರು ಹೆಂಚನ್ನು ತಯಾರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದರು. ಮಂಗಳೂರಿನ ಹಲವು ಕಾರ್ಖಾನೆಗಳು ಹೆಂಚು ತಯಾರಿಕೆಯನ್ನು ತಯಾರಿಸಲಾರಂಭಿಸಿದ ಕಾಲದಿಂದ ಕರ್ನಾಟಕದ ಎಲ್ಲೆಡೆಯೂ ಇದು ಬಳಕೆಗೆ ಬಂತು. ಅನಂತರ ಬೆಂಗಳೂರು ಮೊದಲಾದ ಇತರೆಡೆಗಳಲ್ಲೂ ಇಂಥ ಕಾರ್ಖಾನೆಗಳು ಸ್ಥಾಪಿತವಾದುವು.

20ನೆಯ ಶತಮಾನದಲ್ಲಿ ಕಬ್ಬಿಣ, ಸಿಮೆಂಟ್, ಮೊಸಾಯಿಕ್, ಟೈಲ್ಸ್, ಗ್ರಾನೈಟ್, ಮಾರ್ಬಲ್ ಮೊದಲಾದ ಹೊಸ ರಚನಾ ಸಾಮಗ್ರಿಗಳು ಬಳಕೆಗೆ ಬಂದುದರಿಂದ ಮನೆಗಳ ರಚನಾ ತಂತ್ರವೂ ಸ್ವರೂಪವೂ ಅಗಾಧವಾಗಿ ಬದಲಾವಣೆಯಾಗಿದೆ. ಐರೋಪ್ಯ ನಾಗರಿಕತೆಯ ಪ್ರಭಾವವೂ ಈ ಕಾಲದಲ್ಲಿ ಹೆಚ್ಚಾದುದರಿಂದ ಜನರ ಜೀವನ ವಿಧಾನವೂ ಬದಲಾಗುತ್ತ ಬಂದು ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಮನೆಗಳ ನಿರ್ಮಾಣ ಮಾಡುವುದು ಇಂದಿನ ಪ್ರವೃತ್ತಿ. ಮನೆಗಳನ್ನು ಕಟ್ಟುವುದೇ ಒಂದು ಉದ್ಯಮವಾಗಿ ವಿನ್ಯಾಸಕಾರರು, ಕಟ್ಟುವವರು ಇವರ ಒಂದು ತಾಂತ್ರಿಕವರ್ಗ ಬೆಳೆದಿದೆ. ಮನೆಗಳ ನವೀನತೆ ವೈವಿಧ್ಯಗಳ ಎಡೆಗೆ ಗಮನ ಹೆಚ್ಚಾಗಿದೆ. ಇದರ ಜೊತೆಯಲ್ಲೇ ದೊಡ್ಡ ಪಟ್ಟಣಗಳ ಬೆಳೆವಣಿಗೆ, ಜನಸಂಖ್ಯೆಯ ಹೆಚ್ಚಳ ಇತ್ಯಾದಿ ಕಾರಣಗಳಿಂದ ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಫ್ಲ್ಯಾಟ್ ರೀತಿಯ ಮನೆಗಳನ್ನು ರಚಿಸುವುದು, ದೊಡ್ಡ ಮನೆಗಳನ್ನು ವಿಂಗಡಿಸಿ ವಠಾರಗಳನ್ನು ಮಾಡುವುದು, ಹಿಮ್ಮನೆಗಳನ್ನು ಜೋಡಿಸುವುದು ಇವೂ ಹೆಚ್ಚಾಗಿವೆ. ಈ ಬದಲಾವಣೆಗಳು ದೊಡ್ಡ ಪಟ್ಟಣ ನಗರಗಳಲ್ಲಿ ಹೆಚ್ಚು. ಗ್ರಾಮಾಂತರ ಪ್ರದೇಶಗಳಲ್ಲಿ ಹಳೆಯ ಜನಪದ ಸಂಪ್ರದಾಯ ಇನ್ನೂ ಸಾಕಷ್ಟು ಉಳಿದಿದೆ. (ಐ.)

ಆಧುನಿಕ ಗೃಹಾಲಂಕರಣ ಸಂಪ್ರದಾಯದಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಈಗ ಗೃಹಾಲಂಕರಣ ವಿದ್ಯೆ (ಇಂಟೀರಿಯರ್ ಡೆಕೊರೇಷನ್) ಶಾಸ್ತ್ರರೂಪವಾಗಿ ಬೆಳೆದಿದೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಡಿಪ್ಲೊಮಾ ಮತ್ತು ಪದವಿ ಶಿಕ್ಷಣಗಳ ಪಠ್ಯವಿಷಯವೂ ಆಗಿದೆ. ಮನೆಯನ್ನು ಶುಚಿಯಾಗಿಡುವುದು, ಪುಷ್ಪಗಳ ಜೋಡಣೆ (ಹೂವಿನ ಕುಂಡ), ಮನೆಯ ಅಲಂಕರಣ ಮುಂತಾದುವುಗಳನ್ನು ಗೃಹವಿಜ್ಞಾನ ಶಿಕ್ಷಣದಲ್ಲಿ ಕಲಿಸುತ್ತಾರೆ. ಇಂದಿನ ಜನ ಅನೇಕ ಮಹಾನಗರಗಳನ್ನು ಕಂಡಿರುತ್ತಾರೆ. ಅಲ್ಲಿನ ಗೃಹಾಲಂಕರಣ ವಿಧಾನಗಳಲ್ಲಿ ಅತ್ಯುತ್ತಮವಾದುದನ್ನು ಆಯ್ದುಕೊಂಡು ತಮ್ಮ ಗೃಹಗಳ ಅಲಂಕರಣಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಸರಳತೆ ಹಾಗೂ ಶುಭ್ರತೆಗೆ ಈಗ ಆದ್ಯತೆ. ಶ್ರೀಮಂತರಾದವರು ಬೆಲೆಬಾಳುವ ಪೀಠೋಪಕರಣಗಳು ಮತ್ತು ನೂತನ ಅಲಂಕರಣ ವಿಧಾನಗಳಿಂದ ಗೃಹವನ್ನು ಅಲಂಕರಿಸುತ್ತಾರೆ. ಮಧ್ಯಮವರ್ಗದವರು, ಬಡವರು ತಮ್ಮ ಮನೆಗಳನ್ನು ತಮ್ಮದೇ ಆದ ರೀತಿಯಲ್ಲಿ ಸರಳವಾಗಿ ಅಲಂಕರಿಸುತ್ತಾರೆ. ಮಧ್ಯಮವರ್ಗದ ಮನೆಗಳಲ್ಲಿ ವರಾಂಡದಲ್ಲಿ ಕೆಲವಾರು ಕುರ್ಚಿಗಳನ್ನೂ ನಡುವೆ ಒಂದು ಚಿಕ್ಕ ಟೀಪಾಯಿ ಅಥವಾ ಮೇಜನ್ನೂ ಇಡುತ್ತಾರೆ. ಮೇಜಿನ ಮೇಲೆ ಕಸೂತಿ ಕೆಲಸ ಮಾಡಿದ ಅಥವಾ ಬಣ್ಣಬಣ್ಣದ ಬಟ್ಟೆಯನ್ನು (ಟೇಬಲ್ ಕ್ಲಾತ್) ಹಾಸುತ್ತಾರೆ. ಗೋಡೆಗೆ ಸ್ವಾಗತ ಬಯಸುವಂಥ ಚಿತ್ರಪಟವನ್ನು ತೂಗುಹಾಕುತ್ತಾರೆ. ಮನೆಯ ಪಡಸಾಲೆಯಲ್ಲಿ ಸುತ್ತಲೂ ನಾಲ್ಕು ಬೆತ್ತದ ಕುರ್ಚಿಗಳಲ್ಲಿ ಮೆತ್ತಗಿನ ದಿಂಬುಗಳನ್ನೂ ಇಟ್ಟು ನಡುವೆ ಒಂದು ಟೀಪಾಯಿಯನ್ನಿಡುತ್ತಾರೆ. ಗೋಡೆಯಲ್ಲಿ ಕೊರೆದು ಮಾಡಿದ ಕಪಾಟಿನಲ್ಲಿ ಕೆಲವಾರು ಸುಂದರ ಗೊಂಬೆಗಳನ್ನೂ ಅಲಂಕರಣ ವಸ್ತುಗಳನ್ನೂ ಓರಣವಾಗಿಡುತ್ತಾರೆ. ಒಂದು



ಮಲಗುವ ಕೋಣೆ

ಮೂಲೆಯಲ್ಲಿ ರೇಡಿಯೊ ಸ್ಟ್ಯಾಂಡು, ಈಗ ಟಿವಿ ಸ್ಟ್ಯಾಂಡು, ಅದರ ಕೆಳಗಡೆ ಪುಸ್ತಕಗಳನ್ನಿಡುವ ಅಲೆಮಾರಿನಲ್ಲಿ ಒಪ್ಪವಾಗಿ ಪುಸ್ತಕಗಳನ್ನು ಜೋಡಿಸಿಡುತ್ತಾರೆ. ಅದರ ಮೇಲ್ಭಾಗದಲ್ಲಿ ಹಾಗೂ ಎರಡು ಗೋಡೆಗಳು ಸೇರುವೆಡೆಯಲ್ಲಿ ಗೊಂಬೆಗಳನ್ನಿಡುವ ಪೀಠವನ್ನಿರಿಸುತ್ತಾರೆ. ಅದರ ಮೇಲ್ಭಾಗದಲ್ಲೊಂದು ಹೂದಾನಿಯನ್ನಿರಿಸುತ್ತಾರೆ. ಅಷ್ಟೇ ಸುಂದರವಾದ ಪ್ರಕೃತಿಸೌಂದರ್ಯದ ಫೋಟೋ ಕ್ಯಾಲೆಂಡರ್‌ಗಳನ್ನೂ ತೂಗುಹಾಕುವುದುಂಟು. ಮತ್ತೆ ಕೆಲವರು ಮಧ್ಯದ ಗೋಡೆಯ ಹತ್ತಿರ ಮಂಚವೊಂದನ್ನು ಹಾಕಿ, ಅದರ ಮೇಲೆ ಮೆತ್ತಗಿನ ಹಾಸು ಹಾಸುತ್ತಾರೆ. ಮಂಚದ ಒಂದು ತುದಿಯಲ್ಲಿ ಒಂದು ಕಪಾಟನ್ನು ಇನ್ನೊಂದು ಪಕ್ಕದಲ್ಲಿ ಮತ್ತೊಂದು ಕಪಾಟನ್ನಿಟ್ಟು, ಒಂದರಲ್ಲಿ ಕಲಾಪೂರ್ಣ ವಸ್ತುಗಳನ್ನೂ ಮತ್ತೊಂದರಲ್ಲಿ ಪುಸ್ತಕಗಳನ್ನೂ ಇಡುತ್ತಾರೆ. ಇತ್ತೀಚೆಗೆ ಸೋಫಾಸೆಟ್ ಈ ಜಾಗವನ್ನು ಆಕ್ರಮಿಸಿದೆ. ದೇವರ ಮನೆ ಇದ್ದರೆ ಅದನ್ನು ಸುಂದರವಾಗಿ ಅಲಂಕರಿಸುತ್ತಾರೆ. ಇದರಲ್ಲಿ ಒಂದು ಜಗಲಿ, ಅದರ ಮೇಲೆ ಸುಂದರವಾದ ಮಂಟಪ, ಅದರಲ್ಲಿ ಆರಾಧ್ಯ ದೇವರು, ಮಂಟಪದ ಎರಡು ಬದಿಯಲ್ಲಿ ಸದಾ ಉರಿಯುತ್ತಿರುವ ನಂದಾದೀಪಗಳು, ಸುತ್ತ ರಂಗವಲ್ಲಿ– ಈ ವ್ಯವಸ್ಥೆ ಸಾಮಾನ್ಯ. ಸುಂದರವಾದ ಬಣ್ಣ ಬಣ್ಣದ ಪುಷ್ಪಗಳಿಂದ ಹೂವಿನ ಹಾರಗಳಿಂದ ದೇವರನ್ನು ಶೃಂಗರಿಸುತ್ತಾರೆ. ಊಟದ ಮನೆಯನ್ನು ಈಗ ಹೆಚ್ಚು ಹೆಚ್ಚು ಅಲಂಕಾರಿಕವಾಗಿ ಇಡುತ್ತಾರೆ. ಮಧ್ಯದಲ್ಲಿ ಊಟದ ಮೇಜು ಕುರ್ಚಿಗಳನ್ನಿಟ್ಟು, ಅದರ ಮೇಲೆ ಅಲಂಕಾರದ ದೃಷ್ಟಿಯಿಂದ ಸುಂದರವಾದ ಬೊಂಬೆಯನ್ನಿಡುತ್ತಾರೆ. ಎರಡೂ ಗೋಡೆಗಳು ಸೇರುವ

ಕಡೆಗಳಲ್ಲಿ ಒಂದು ನಿಲುವನ್ನಿಟ್ಟು ಅದರ ಮೇಲೂ ಗೊಂಬೆಗಳನ್ನಿಡುತ್ತಾರೆ. ಗೋಡೆಯಲ್ಲಿ ಸುಂದರವಾದ ಪ್ರಕೃತಿ ಸೌಂದರ್ಯವನ್ನೋ ಪುಷ್ಪಸೌಂದರ್ಯವನ್ನೋ ಬೀರುವ ಚಿತ್ರಪಟವನ್ನೂ ತೂಗುಹಾಕುತ್ತಾರೆ. ಮಲಗುವ ಕೋಣೆಗಳನ್ನು ಆಕರ್ಷಕವಾದ ರೀತಿಯಲ್ಲಿ ಅಲಂಕರಿಸುತ್ತಾರೆ. ಕಣ್ಣಿಗೆ ತಂಪನ್ನೀಯಬಲ್ಲ ತಿಳಿನೀಲಿ, ಕೆನೆ ಬಣ್ಣವನ್ನು ಗೋಡೆಗೆ ಬಳಿಯುತ್ತಾರೆ. ಸುಂದರವಾದ ಪರದೆಗಳನ್ನು ಇಳಿಬಿಡುತ್ತಾರೆ. ಗೋಡೆಗೆ ಸುಂದರವಾದ ಕೆತ್ತನೆ ಕೆಲಸದ, ಕುಸುರಿಕೆಲಸದ ವಾಲ್ ಪ್ಲೇಟನ್ನು ತೂಗಿಸುತ್ತಾರೆ. ಉತ್ತಮವಾದ ಮರದ ಮಂಚದ ಮೇಲೆ ಮೆತ್ತನೆಯ ಹಾಸಿಗೆ, ನೆಲಕ್ಕೆ ರತ್ನಗಂಬಳಿ, ಬಾಗಿಲಿನಲ್ಲಿ ಕಾಲೊರಸು, ಚಾಪೆ, ಮಂಚಕ್ಕೆ ಒಂದು ಸೊಳ್ಳೆಪರದೆ, ಮಕ್ಕಳ ತೊಟ್ಟಿಲಿದ್ದರೆ ಅದಕ್ಕೂ ಸೊಳ್ಳೆಪರದೆಯನ್ನು ತೂಗುಬಿಟ್ಟು ಅದರ ಮೇಲಿನ ತಟ್ಟೆಗಳಿಗೆ ಪಕ್ಷಿಗಳ ಬಟ್ಟೆಯ ಗೊಂಬೆಯನ್ನು ಗಿಲಿಗಿಲಿ ಶಬ್ದಮಾಡುವ ಆಟಿಕೆಗಳನ್ನು ತೂಗಿಸುತ್ತಾರೆ. ಕೆಲವೊಂದು ಭಾವಚಿತ್ರಗಳು, ಪಕ್ಕದಲ್ಲೊಂದು ಸ್ಟ್ಯಾಂಡು, ಅದರ ಮೇಲೆ ಟಿ.ವಿ., ರೇಡಿಯೋ, ಮಂಚದ ತಲೆಯ ಭಾಗದಲ್ಲಿ ಸ್ಟೂಲಿನ ಮೇಲೆ ಗೋಡೆಬಣ್ಣದ ಟೇಬಲ್ ಲ್ಯಾಂಪ್, ಇನ್ನೊಂದು ಪಕ್ಕದಲ್ಲಿ ಕನ್ನಡಿಯುಳ್ಳ ಬೀರು, ಪ್ರಸಾಧನಸಾಮಗ್ರಿಗಳು ಇತ್ಯಾದಿಯಾಗಿ ಸಜ್ಜುಗೊಳಿಸುವುದು ಸಾಮಾನ್ಯ.

ಇಂದಿಗೂ ಹೆಚ್ಚಿನ ಮನೆಗಳಲ್ಲಿ ರಂಗವಲ್ಲಿ ಗೃಹಾಲಂಕಾರ ಸಾಧನಗಳಲ್ಲಿ ಬಹುಮುಖ್ಯ. ದೇವರಮನೆಯಲ್ಲಿ, ಮುಂಬಾಗಿಲ ಹೊಸ್ತಿಲಿನಲ್ಲಿ, ಮನೆಯ ಪ್ರವೇಶ ದ್ವಾರದಲ್ಲಿ ರಂಗವಲ್ಲಿ ಹಾಕುವುದಕ್ಕೆ ಧಾರ್ಮಿಕ ಹಿನ್ನೆಲೆಯಿದ್ದರೂ ಅದು ಮನೆಗೊಂದು ಅಲಂಕಾರವನ್ನೂ ಶೋಭೆಯನ್ನೂ ನೀಡುತ್ತದೆ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಎಲ್ಲ ಮನೆಗಳಲ್ಲೂ ಮುಂಜಾನೆ ಗುಡಿಸಿ ಸಾರಿಸಿ, ಅಕ್ಕಿಹಿಟ್ಟು ಸುಣ್ಣಕಲ್ಲಿನ ಪುಡಿ ಇವುಗಳಿಂದ ರಂಗವಲ್ಲಿಯನ್ನು ಹಾಕಿ ಅಲಂಕರಿಸುತ್ತಾರೆ. ಹಬ್ಬಹರಿದಿನಗಳಲ್ಲಿ ಬಣ್ಣಬಣ್ಣದ ಪುಡಿಗಳಿಂದ ರಂಗವಲ್ಲಿಯನ್ನು ಹಾಕುತ್ತಾರೆ. ಮನೆಯಂಗಳ ಹಾಗೂ ದೇವರ ಕೋಣೆಯಲ್ಲಿ ನಿತ್ಯವೂ ರಂಗವಲ್ಲಿ ಹಾಕುವುದಾದರೆ, ಅತಿಥಿಗಳು ಆಗಮಿಸಿದಾಗ ಊಟದ ಮನೆಯನ್ನೂ ಪಡಸಾಲೆಯನ್ನೂ ನೂರಾರು ಬಗೆಯ ನಾನಾ ರಂಗಿನ ಪುಡಿಗಳ ರಂಗವಲ್ಲಿಯಿಂದ ಅಲಂಕರಿಸುತ್ತಿದ್ದುದುಂಟು. ನಗರ ಪ್ರದೇಶಗಳಲ್ಲಿನ ಮನೆಗಳ ಮುಂಭಾಗ ಸಿಮೆಂಟಿನದಾಗಿರುವುದರಿಂದ ನೀರು ಹಾಕಿ ತೊಳೆದರೆ ಸಾಕಾಗುತ್ತದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮಣ್ಣಿನ ನೆಲವಾದುದರಿಂದ ಅದನ್ನು ಗುಡಿಸಿ, ಪ್ರತಿನಿತ್ಯವೂ ಸಗಣಿಯಿಂದ ಸಾರಿಸಿ ಬಿಳಿಯ ಬಣ್ಣದ ರಂಗವಲ್ಲಿಯನ್ನು ಹಾಕುತ್ತಾರೆ. ಕೆಂಪುನೆಲ, ಹಸುರು ಸಾರಣೆ ಇವುಗಳ ಹಿನ್ನೆಲೆಯಲ್ಲಿ ಬಿಳಿಬಣ್ಣದ ರಂಗವಲ್ಲಿ ಬಹು ಸುಂದರವಾಗಿ ಕಾಣುತ್ತದೆ. ಅದರಲ್ಲೂ ಮನೆಯಂಗಳದಲ್ಲಿ ರಂಗವಲ್ಲಿ ಹಾಕಿ, ಅದರ ನಡುವೆ ಸ್ವಲ್ಪ ಸಗಣಿಯನ್ನಿಟ್ಟು, ಅದರ ಮೇಲೆ ಕುಂಬಳದ ಪುಷ್ಪಗಳನ್ನಿಟ್ಟರೆ ಅನಿಷ್ಟ ಪರಿಹಾರವಾಗುತ್ತದೆ ಎಂಬ ನಂಬಿಕೆಯಿಂದ ಕೆಲವರು ಹೀಗೆ ಅಲಂಕರಿಸುವುದುಂಟು. ಇದು ಮತ್ತಷ್ಟು ಸುಂದರವಾಗಿರುತ್ತದೆ. ಮತ್ತೆ ಕೆಲವರು ಆಯಾ ವಾರಗಳಿಗನುಗುಣವಾಗಿ ಸೋಮವಾರ ಶಿವಪೀಠ, ಮಂಗಳವಾರ ಕಾಲಪೀಠ, ಬುಧವಾರ ಸ್ವಸ್ತಿಕೆ ಹೀಗೆ ಹಾಕುತ್ತಾರೆ. ಇದು ವೈವಿಧ್ಯಮಯವಾಗಿರುತ್ತದೆ. ಪಂಚಮಿ, ನವರಾತ್ರಿ, ಸೀಗೆ ಹುಣ್ಣಿಮೆ, ದೀಪಾವಳಿ, ಯುಗಾದಿ ಮುಂತಾದ ವರ್ಷದ ಹಬ್ಬಗಳಲ್ಲಿಯಂತೂ ಮಹಿಳೆಯರು ಬಹು ಸುಂದರವಾದ ರಂಗವಲ್ಲಿಗಳನ್ನಿಟ್ಟು ಮನೆಯನ್ನು ಅಲಂಕರಿಸುತ್ತಾರೆ. ನಾಗಪಂಚಮಿಯಂದು ದುಂಡಗಿನ ಅಥವಾ ಚೌಕಾಕಾರದಲ್ಲಿ ಜೋಡುನಾಗಗಳ ರಂಗವಲ್ಲಿಯನ್ನೆಳೆದರೆ, ಸೀಗೆ ಹುಣ್ಣಿಮೆಯಂದು ಮನೆಯಲ್ಲಿರುವ ಬುಟ್ಟಿಗಳನ್ನು ಕೆಂಪುಮಣ್ಣಿನಿಂದ ಅಥವಾ ಸಗಣಿಯಿಂದ ಸಾರಿಸಿ, ಅದರ ಸುತ್ತಲೂ ಚುಕ್ಕಿಗಳನ್ನಿಟ್ಟು ಸುಣ್ಣದಿಂದ ರಂಗವಲ್ಲಿ ತೆಗೆಯುತ್ತಾರೆ. ದೀಪಾವಳಿಯಂದು ಮನೆಯ ಮುಂದೆ ರಂಗವಲ್ಲಿಗಳ ಪೈಪೋಟಿಯೇ ನಡೆಯುತ್ತದೆಯೇನೋ ಎಂಬಂತೆ ಬಣ್ಣ ಬಣ್ಣದ ರಂಗವಲ್ಲಿಗಳನ್ನು ಹಾಕುತ್ತಾರೆ. ಲಕ್ಷ್ಮೀ ಪೂಜೆಯಂದು ಲಕ್ಷ್ಮಿಗೆ ಪ್ರಿಯವಾದ ಕಮಲದ ರಂಗವನ್ನೂ ಸುಣ್ಣದಿಂದ ಕೋಟೆಯನ್ನೂ ಬಿಡಿಸುವುದುಂಟು. ಚೈತ್ರಮಾಸದ ಗೌರಿಯ ಮುಂದೆಯೂ ಹೀಗೆ ರಂಗವಲ್ಲಿ ಹಾಕುತ್ತಾರೆ. ಈಗೀಗ ನಗರದ ಮಹಿಳೆಯರು ಬಿಳಿ ಪೆಯಿಂಟಿನಿಂದ ಮನೆಯ ವರಾಂಡ, ಪಡಸಾಲೆ ಇವುಗಳ ಸುತ್ತಲೂ ಗೋಡೆಯ ಉದ್ದಕ್ಕೆ ಎಲೆಬಳ್ಳಿಗಳ ರಂಗವಲ್ಲಿಯನ್ನು ಹಾಕುವುದುಂಟು.

ಸ್ವಲ್ಪ ಅನುಕೂಲವಂತರು ಜಲಸಸ್ಯಗಳನ್ನೂ ಜಲಚರಗಳನ್ನೂ ಇಡುವುದಕ್ಕಾಗಿ ಮಾಡಿದ ಅಕ್ವೇರಿಯಂ ಎಂಬ ಮೀನು ತೊಟ್ಟಿ ಅಥವಾ ಕೊಳವನ್ನು ಮನೆಯ ವರಾಂಡದಲ್ಲಿರಿಸಿ ಅದು ಕಾಣುವಂತೆ ಬಣ್ಣಬಣ್ಣದ ದೀಪಗಳಿಂದ ಅಲಂಕರಿಸುತ್ತಾರೆ. ಸುಂದರವಾದ ಗಿಳಿ ಅಥವಾ ಪಕ್ಷಿ ಪಂಜರವನ್ನು ವರಾಂಡದಲ್ಲಿ ತೂಗುಹಾಕುವುದೂ ವಾಡಿಕೆಯಾಗಿದೆ. ವಿವಿಧ ಬಗೆಯ ಸಾಕುನಾಯಿಗಳು ಮನೆಗೆ ಶೋಭೆಯೆಂದು ಸಾಕುವವರೂ ಇದ್ದಾರೆ. ನಗರ ಪ್ರದೇಶಗಳಲ್ಲಿ ಈ ಹವ್ಯಾಸ ಹೆಚ್ಚು.

ಚಿತ್ರಪಟಗಳನ್ನೂ ಗೃಹಾಲಂಕರಣದ ಸಾಧನಗಳನ್ನಾಗಿ ಉಪಯೋಗಿಸುತ್ತಾರೆ. ಕೌಟುಂಬಿಕ ಚಿತ್ರಗಳನ್ನು ಪಡಸಾಲೆಯಲ್ಲೂ ಪ್ರಕೃತಿಸೌಂದರ್ಯದ ಚಿತ್ರಪಟಗಳನ್ನು ವರಾಂಡದಲ್ಲೂ ತೂಗುಹಾಕುತ್ತಾರೆ. ಮನೆಮಕ್ಕಳ ಫೋಟೋಗಳನ್ನು ಫ್ರೇಮಿನೊಳಗಿಟ್ಟು ಮೇಜಿನ ಮೇಲಾಗಲಿ, ಬೀರುವಿನ ಮೇಲಾಗಲಿ ಇಡುವುದುಂಟು. ಫಲಪುಷ್ಪಗಳ, ನೈಸರ್ಗಿಕ ಸೌಂದರ್ಯದ ವಾಲ್ ಪ್ಲೇಟ್‌ಗಳನ್ನು ತೂಗಿಸುತ್ತಾರೆ. ಹಾಗೆಯೇ ಬೆಲೆಬಾಳುವ ಪೀಠೋಪಕರಣಗಳನ್ನು ಆಧುನಿಕ ರೀತಿಯಲ್ಲಿ ಅಲಂಕರಿಸಿ, ಮನೆಯಲ್ಲಿರುವ ಕನ್ನಡಿ, ಚಿತ್ರಪಟಗಳು, ಹೂದಾನಿಗಳು, ಗೊಂಬೆಗಳು ಮೊದಲಾದುವನ್ನು ವ್ಯವಸ್ಥಿತವಾಗಿರಿಸಿ ಮನೆಯನ್ನು ಅಲಂಕರಿಸುವುದುಂಟು. ಶ್ರೀಮಂತರು ಮತ್ತು ವಿಲಾಸಿಗಳು ನಡುಮನೆಯಲ್ಲಿ ಚಾವಣಿಯ ಮಧ್ಯಕ್ಕೆ ಜಗಮಗಿಸುವ 'ಶಾಂಡಲೇರ್' ದೀಪ ಗುಚ್ಛವನ್ನು ಅಳವಡಿಸುವುದೂ ಉಂಟು.

ಅತ್ಯಾಧುನಿಕ ಪ್ರವೃತ್ತಿಯವರು ಕಿಟಕಿ ಬಾಗಿಲುಗಳಿಗೆ ಸುಂದರವಾದ ಪರದೆಗಳನ್ನು ಹಾಕುವುದರಲ್ಲಿಯೂ ತಮ್ಮ ಅಭಿರುಚಿಯನ್ನು ವ್ಯಕ್ತಪಡಿಸುತ್ತಾರೆ. ಪ್ರಶಾಂತ ವಾತಾವರಣದ ಅಪೇಕ್ಷೆಯುಳ್ಳವರು ತಿಳಿಬಣ್ಣಗಳ ಪರದೆಗಳನ್ನು ಉಪಯೋಗಿಸಿದರೆ, ಉತ್ಸಾಹಮಯವಾದ ವಾತಾವರಣವನ್ನು ಬಯಸುವವರು ದಟ್ಟವಾದ ಬಣ್ಣಗಳನ್ನು ಉಪಯೋಗಿಸುವರು. ಮತ್ತೆ ಕೆಲವರು ಗೋಡೆಯ ಬಣ್ಣಗಳಿಗೆ ಹೊಂದಿಕೆಯಾಗಬಲ್ಲ ಪರದೆಗಳನ್ನು ಬಳಸುತ್ತಾರೆ. ಕೆಲಮಟ್ಟಿಗೆ ದಟ್ಟ, ಕೆಲಮಟ್ಟಿಗೆ ತಿಳಿ, ಕೆಲಮಟ್ಟಿಗೆ ಪ್ರಕಾಶಹೀನ, ಕೆಲಮಟ್ಟಿಗೆ ಪ್ರಕಾಶಮಾನ ಎಂಬ ಉಕ್ತಿಗನುಗುಣವಾಗಿ ಗೋಡೆಯ ಬಣ್ಣಗಳಿಗೆ ಹೊಂದಿಕೆಯಾಗುವಂತೆ ಕಿಟಕಿ ಮೇಜುಗಳ ಹೊದಿಕೆ, ಬಾಗಿಲು ಕಿಟಕಿ ಪರದೆಗಳನ್ನು ಆರಿಸಿರುತ್ತಾರೆ. ಬಾಗಿಲುಗಳಿಗೆ ಇಳಿಬಿಟ್ಟ ಪರದೆಗಳನ್ನು ಎರಡು ಭಾಗಗಳಾಗಿ ಕತ್ತರಿಸಿ ಹೊಲಿದು ನಿರಿಗೆ ತೆಗೆದು, ಅರ್ಧಅರ್ಧ ಭಾಗವನ್ನು ಪ್ಲಾಸ್ಟಿಕ್ ಮಣಿಗಳಿಂದ ಮತ್ತು ರಿಬ್ಬನ್‌ಗಳಿಂದ ಕಟ್ಟುವುದೂ ಉಂಟು. ಸೋಫಾದ ಮೇಲೆ ಇರಿಸುವ ಒರಗುದಿಂಬಿಗೆ ಸುತ್ತಲೂ ನಿರಿಗೆ ಕಟ್ಟಿ ಹೊಲಿದ ಚೀಲವನ್ನು ಹಾಕಿ ನಡುವೆ ಸುಂದರವಾದ ಕಸೂತಿ ಕೆಲಸವನ್ನು ಮಾಡುತ್ತಾರೆ.



**ಅಲಂಕೃತಗೋಡೆ**

ಗೃಹಾಲಂಕಾರದಲ್ಲಿ ಹೂಗಳ ಪಾತ್ರ ಬಹಳ ಹಿರಿದು. ಅರಳಿದ ಹೂಗಳನ್ನು ಹಸುರೆಲೆಗಳನ್ನು ಹೂದಾನಿಗಳಲ್ಲಿಟ್ಟು (ಫ್ಲವರ್ ವಾಸ್) ಅಲಂಕರಿಸಿ ಮೇಜಿನ ಮೇಲಿಡುವುದು ಹೆಚ್ಚಾಗಿ ಬಳಕೆಗೆ ಬರುತ್ತಿದೆ. ಹೂಗಳನ್ನು ಒಂದೆಡೆಯಲ್ಲಿ, ತರಕಾರಿಗಳನ್ನು ಒಂದೆಡೆಯಲ್ಲಿ ಜೋಡಿಸುವುದು, ಹೂದಾನಿಗಳಲ್ಲಿ ಅಚ್ಚುಕಟ್ಟಾಗಿ ಹೂಗಳನ್ನು ಜೋಡಿಸುವುದು ಒಂದು ಕಲೆಯೇ ಆಗಿದೆ. ಜಪಾನೀಯ ಹೂವಿನ ಅಲಂಕಾರದ ಪ್ರಭಾವ ಅಲ್ಲಲ್ಲಿ ಕಾಣುತ್ತದೆ. ಇಕೆಬಾನಾ ಕಲೆ ಪ್ರಚಾರಗೊಂಡಿದೆ.

ಮನೆಯ ಸೊಬಗು ಹೆಚ್ಚಿಸಲು ಮನೆ ಮುಂದೆ ಸುಂದರವಾದ ಕೈ ತೋಟ ಮಾಡುವುದು, ಅಲಂಕಾರಿಕ ಸಸ್ಯಗಳು ಮತ್ತು ಹೂವಿನ ಗಿಡಗಳನ್ನು ಕುಂಡಗಳಲ್ಲಿ ಜೋಡಿಸುವುದು, ಅಲಂಕಾರಿಕ ಕುಂಡಗಳಲ್ಲಿ ಇಳಿಬೀಳುವ ಸಸ್ಯಗಳನ್ನು ಇಟ್ಟು ಮನೆಯ ಮುಂದೆ ಚಾವಣಿಗೆ ತೂಗುಹಾಕುವುದು ರೂಢಿಯಲ್ಲಿದೆ. (ಎಂ.ಜಿ.ಬಿ.)

ಮಾನವನ ಆವಶ್ಯಕತೆಗಳಲ್ಲಿ ಮನೆಗೆ ಹೆಚ್ಚಿನ ಸ್ಥಾನವಿದೆ. ಕುಟುಂಬವತ್ಸಲರಾದ ಭಾರತೀಯರಿಗಂತೂ ಮನೆಯೇ ಕೇಂದ್ರಬಿಂದು. ಬಡವ ಬಲ್ಲಿದರೆಲ್ಲರೂ ತಮ್ಮ ತಮ್ಮ ಮನೆಯನ್ನು ಬಹಳ ಪ್ರೀತಿಸುತ್ತಾರೆ. ದೊಡ್ಡ ದೊಡ್ಡ ನಗರಗಳಲ್ಲಿ ಜನಸಂಖ್ಯೆ ವಿಪರೀತವಾಗಿ ಹೆಚ್ಚಿ ಗಲ್ಲಿ ಗಲ್ಲಿಗಳಲ್ಲಿ ವಠಾರಜೀವನ ಪ್ರಾರಂಭವಾದ ಮೇಲೆ ವೈಯಕ್ತಿಕವಾಗಿ ಮನೆಗಳ ಅಚ್ಚುಕಟ್ಟು ಮಾಯವಾಗುತ್ತಿದೆಯಾದರೂ ಹಳ್ಳಿಗಳಲ್ಲಿ ಇಂದಿಗೂ ಜನ ತಮ್ಮ ಬಡ ಜೋಪಡಿಗಳನ್ನೇ ಅಂದವಾಗಿ ಇಟ್ಟುಕೊಂಡಿರುತ್ತಾರೆ.

ಸುಣ್ಣ–ಬಣ್ಣ, ಸಾರಣೆ–ಕಾರಣೆ, ರಂಗವಲ್ಲಿ, ಹಸುರು ತೋರಣ, ಮಂಚ ಚಾಪೆ, ಮಣೆ, ತೂಗುಮಣೆ, ದೀಪ–ಧೂಪ–ಇವು ಸಾಮಾನ್ಯವಾಗಿ ಹಿಂದಿನಿಂದ ನಡೆದು ಬಂದಿರುವ ಗೃಹಾಲಂಕರಣ ಸಾಧನಗಳು.

ಹಿಂದಿನ ಕಾಲದ ಮನೆಗಳಲ್ಲಿ ಒಟ್ಟುಕುಟುಂಬದವರು ವಾಸಿಸಲು ಯೋಗ್ಯವಾಗು ವಂಥ ದೊಡ್ಡ ದೊಡ್ಡ ಪಡಸಾಲೆ, ದೇವರಮನೆ, ಅಡುಗೆಮನೆಗಳಿರುತ್ತಿದ್ದವು. ಅವರ ಆವಶ್ಯಕತೆಗೆ ಅಷ್ಟು ಸಾಕಾಗುತ್ತಿದ್ದವು. ಒಕ್ಕಲತನ, ವ್ಯಾಪಾರ ಅವರ ಮುಖ್ಯ ಉದ್ಯೋಗವಾದುದರಿಂದ ಮನೆಯ ಬಹುಭಾಗ ದನದ ಕೊಟ್ಟಿಗೆ ಮತ್ತು ಉಗ್ರಾಣಗಳಾಗಿರುತ್ತಿದ್ದುವು. ಪಡಸಾಲೆಯಲ್ಲಿ ಒಂದು ಮಂಚ ಇರುತ್ತಿತ್ತು. ಅದರ ಮೇಲೆ ಸುಂದರವಾದ ಜಮಖಾನೆ ಹಾಸಿ ದಿಂಬುಗಳನ್ನಿಡುತ್ತಿದ್ದರು. ಪಡಸಾಲೆಯ ಗೋಡೆಯ ಮೇಲ್ಭಾಗವೆಲ್ಲ ಬಹುಪಾಲು ರವಿವರ್ಮನ, ಮಿಕ್ಕಂತೆ ಸ್ಥಳೀಯ ಕಲೆಗಾರರ ಚಿತ್ರಪಟಗಳಿಂದ ಅಲಂಕೃತವಾಗಿರುತ್ತಿತ್ತು. ಇದ್ದವರು ಕಾಡುಕೋಣ ಇಲ್ಲವೆ ಜಿಂಕೆಯ ಕೊಂಬುಗಳನ್ನೊ, ಹುಲಿಯ ಮುಖವನ್ನೊ, ಅಲಂಕಾರಕ್ಕಾಗಿ ಗೋಡೆಗೆ ತಗಲಿಸುತ್ತಿದ್ದರು. ನೆಲವನ್ನು ಸೆಗಣಿಯಿಂದ ಸಾರಿಸುತ್ತಿದ್ದರು. ನೆಲದ ಅಂಚಿಗೆ ಗೋಡೆಗೆ ಹೊಂದಿದಂತೆ ಸುಣ್ಣ ಹಾಗೂ ಕೆಮ್ಮಣ್ಣಿನ ಪಟ್ಟಿಗಳನ್ನು ಎಳೆಯುತ್ತಿದ್ದರು. ಗೋಡೆಗೆ ದಟ್ಟವಾಗಿ ಬಣ್ಣ ಹಚ್ಚುತ್ತಿದ್ದರು. ಇಲ್ಲವೆ ಸುಣ್ಣ, ಹಳದಿ ಮಟ್ಟಿ, ಹುರಿಮಂಜುಗಳಿಂದ ಇಡೀ ಗೋಡೆಯನ್ನು ಸಾರಿಸುತ್ತಿದ್ದರು. ಹಳದಿ, ಕೆಂಪು ಬಣ್ಣದ ಗೋಡೆ, ಸೆಗಣಿಯಿಂದ ಸಾರಿಸಿದ ಹಸುರು ನೆಲ, ಅಂಚಿನ ಸುಣ್ಣ ಇತ್ಯಾದಿಗಳಿಂದ ಮನೆಗಳು ರಂಗುರಂಗಾಗಿ ಕಾಣುತ್ತಿದ್ದವು. ಬೆಳಗ್ಗೆ ಎದ್ದೊಡನೆ ಮನೆಯಂಗಳವನ್ನು ಸಾರಿಸಿ ರಂಗವಲ್ಲಿ ಹಾಕಿ, ಹೊಸ್ತಿಲನ್ನು ಪೂಜಿಸಿ ಮನೆಗೆಲಸ ಪ್ರಾರಂಭಿಸುವುದು ಗೃಹಿಣಿಯ ನಿತ್ಯ ನಿಯಮವಾಗಿತ್ತು.

ಇಂದು ನಾಗರಿಕ ಆವಶ್ಯಕತೆಗಳಿಗನುಸರಿಸಿ ಹುಸಿ (ವೆರಾಂಡ), ಪಡಸಾಲೆ (ಡ್ರಾಯಿಂಗ್‌ರೂಮ್), ಓದುವಕೋಣೆ, ಮಲಗುವ ಕೋಣೆ, ದೇವರಮನೆ, ಅಡುಗೆ ಮನೆ, ಊಟದಮನೆ, ದಾಸ್ತಾನು ಕೋಣೆ ಸ್ನಾನದಮನೆ, ಗರಾಜ್ – ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಮನೆಗಳು ಅವರವರ ಆರ್ಥಿಕ ಪರಿಸ್ಥಿತಿಗೆ, ಅವರವರ ಮನದೊಲವಿಗೆ ತಕ್ಕಂತೆ ನಿರ್ಮಾಣಗೊಳ್ಳುತ್ತವೆ. ಇತ್ತೀಚೆಗೆ ಪೌರಸ್ತ್ಯ ಹಾಗೂ ಪಾಶ್ಚಾತ್ಯ ಪದ್ಧತಿಗಳ ಸಮ್ಮಿಳನ ಭಾರತೀಯ ಗೃಹಾಲಂಕರಣಗಳಲ್ಲಿ ಹಾಸುಹೊಕ್ಕಾಗಿ ಕಂಡುಬರುತ್ತಿದೆ. ಮನೆಯ ಅಲಂಕಾರಕ್ಕೆ ಸಿರಿತನ ಬಡತನಗಳಿಗಿಂತ ಕಲಾವಿಲಾಸಿ ದೃಷ್ಟಿ ಮುಖ್ಯವಾಗುತ್ತಿದೆ.

ಪಡಸಾಲೆಯ ಅಲಂಕಾರಕ್ಕೆ ಭಾರತೀಯರು ಹೆಚ್ಚು ಗಮನ ಕೊಡುತ್ತಾರೆ. ಅಪ್ಪಟ ಭಾರತೀಯ ಪದ್ಧತಿಯಲ್ಲಿ ಪಡಸಾಲೆ ಅಲಂಕೃತವಾಗಬೇಕು ಎನ್ನುವವರು, ಅದರ ಮಧ್ಯದ ಗೋಡೆಯ ಬಳಿ ಒಂದು ಮಂಚವನ್ನೋ ದಿವಾನವನ್ನೋ ಹಾಕುವರು. ಅದರ ಮೇಲೆ ಮೆತ್ತನೆಯ ಹಾಸಿಗೆ ಹಾಸಿ ಸುಂದರವಾದ ಹೆಣಿಗೆಯ ಇಲ್ಲವೆ ಅಚ್ಚಿನ ಬಣ್ಣಬಣ್ಣದ ಹೊದಿಕೆಯನ್ನು ಹಾಸಲಾಗುವುದು. ರಾಜಸ್ತಾನ ಹಾಗೂ ಮಧ್ಯಭಾರತದಲ್ಲಿ ಮಂಚಗಳನ್ನು ಕಲಾಪೂರ್ಣವಾಗಿ ಮಾಡುತ್ತಾರೆ. ಹಾಸಿಗೆ ಹಾಸಿದ ಮಂಚದ ಎರಡೂ ಬದಿಗೆ ಉದ್ದವಾದ ಲೋಡುಗಳನ್ನಿಡುವರು. ಬೆನ್ನಿಗೆ ಆಸರೆಯಾಗಲು ಬಣ್ಣಬಣ್ಣದ ದಿಂಬುಗಳನ್ನಿಡುವರು. ಮಂಚದ ಮುಂಭಾಗದಲ್ಲಿ ಭಾರತೀಯರ ಕಲಾಕೌಶಲದಿಂದ ಕಂಗೊಳಿಸುವ ಜಮಖಾನೆ, ರತ್ನಗಂಬಳಿ ಮೊದಲಾದವುಗಳಲ್ಲಿ ಒಂದನ್ನು ಹಾಸುವರು. ಮಂಚದ ಒಂದು ಬದಿಗೆ ಕಲಾಪೂರ್ಣ ವಸ್ತುಗಳ ಕಪಾಟು, ಇನ್ನೊಂದು ಬದಿಗೆ ಪುಸ್ತಕಗಳ ಕಪಾಟುಗಳನ್ನಿಡುವರು. ಮನೆಯ ಹಿರಿಯರು, ಮಕ್ಕಳು ಸದಾ ಆನಂದದಿಂದ ಪಡಸಾಲೆಯಲ್ಲಿಯೇ ಹೆಚ್ಚಿನ ವೇಳೆ ಕಳೆಯುವರು.

ಅಡುಗೆಮನೆಯಲ್ಲಿ ಸಾರಿಸಿದ ನೆಲದ ಮೇಲೆ ಬಣ್ಣಬಣ್ಣದ ಮಣೆಗಳನ್ನು ಹಾಕಿ ಹಸುರು ಕುಡಿಬಾಳೆಯನ್ನಿಟ್ಟು ಅದರ ಸುತ್ತಲೂ ಕಲಾಪೂರ್ಣವಾದ ರಂಗವಲ್ಲಿಯನ್ನಿಕ್ಕಿ, ಹಬ್ಬಹರಿದಿನಗಳಲ್ಲಿ, ಅತಿಥಿ ಅಭ್ಯಾಗತರು ಬಂದಾಗ ಉಣಬಡಿಸುವುದು ಭಾರತೀಯ ಗೃಹಿಣಿಗೆ ಸಂತಸದ ಸುಗ್ಗಿ. ಈಗ ಈ ಸ್ಥಾನವನ್ನು ಡೈನಿಂಗ್ ಟೇಬಲ್ ಆಕ್ರಮಿಸಿದೆ.

ದೇವರಮನೆಯಲ್ಲಿ ಜಗಲಿಯ ಮೇಲೆ ಮಂಟಪವನ್ನಿಟ್ಟು ಅದರಲ್ಲಿ ಆರಾಧ್ಯ ದೇವತೆಯ ಮೂರ್ತಿಯನ್ನಿರಿಸುವರು. ಮಂಟಪದ ಎರಡೂ ಬದಿಗೆ ಅಂದಚೆಂದದ ನಂದಾದೀವಿಗೆಗಳು; ಸುತ್ತಲೂ ರಂಗವಲ್ಲಿ, ಗಂಟೆಜಾಗಟೆ, ಪಂಚಾರತಿ, ಬಗೆಬಗೆಯ ದೀಪಸ್ತಂಭಗಳು, ಬಣ್ಣ ಬಣ್ಣದ ಹೂಗಳಿಂದ ದೇವರಮನೆ ಕಲಾಪೂರ್ಣವಾಗಿ ಕಂಗೊಳಿಸುವುದು.

ಇಂದಿನ ಗೃಹಿಣಿ ಹಳೆಯ ಪದ್ಧತಿ ಹೊಸಪದ್ಧತಿಗಳಲ್ಲಿಯ ಒಳ್ಳೆಯದನ್ನು, ಕಲಾಪೂರ್ಣವಾದುದನ್ನು ಆಯ್ದುಕೊಂಡು ಗೃಹಾಲಂಕಾರ ಮಾಡುವುದು ವಾಡಿಕೆಯಾಗಿದೆ. ಕಸದಲ್ಲಿಯೂ ರಸವನ್ನು ತೆಗೆಯಬಲ್ಲ ಕುಶಲ ಕಲೆಗಾರ್ತಿಯಾದ ಗೃಹಿಣಿಯು ಮನೆಯನ್ನು ಸೊಬಗಿನ ಬೀಡನ್ನಾಗಿ ಮಾಡುವವಳು. ಇತ್ತೀಚೆಗೆ ಬಣ್ಣಗಳ ಭಾವಗಳನ್ನರಿತು ಬೇರೆ ಬೇರೆ ಕೋಣೆಗೆ ಬೇರೆ ಬೇರೆ ಬಣ್ಣಗಳನ್ನು ಹಚ್ಚುತ್ತಾರೆ. ಪಡಸಾಲೆಗೆ ಕೆನೆಬಣ್ಣವಾದರೆ ಊಟದ ಮನೆಗೆ ತಿಳಿಗುಲಾಬಿ, ಮಲಗುವ ಕೋಣೆಗೆ ತಿಳಿಹಳದಿ, ಅಡುಗೆಯ ಮನೆಗೆ ತಿಳಿಹಸುರು ಇಲ್ಲವೆ ತಿಳಿನೀಲಿ ಬಣ್ಣಗಳನ್ನು ಹಚ್ಚುವುದರಲ್ಲಿಯೂ ಗೃಹಾಲಂಕರಣ ಕಲೆ ಅಡಗಿದೆ. ಮನೆಯ ಆಕರ್ಷಣೆಗೆ ಬಣ್ಣವೇ ಆಧಾರ. ಕೋಣೆ ಸಣ್ಣದಿದ್ದರೂ ತಿಳಿಬಣ್ಣ ಹಚ್ಚಿದರೆ ನೋಡಲಿಕ್ಕೆ ವಿಶಾಲವಾಗಿ ಕಾಣುವುದು. ಬಣ್ಣಗಳ ಪರಿಣಾಮ ವಾತಾವರಣದ ಮೇಲೆ ಆಗುತ್ತದೆ. ದಟ್ಟ ಬಣ್ಣಗಳು ಉತ್ಸಾಹದಾಯಕವಾಗಿ ವರ್ಣರಂಜಿತವಾಗಿ ಕಾಣಿಸುತ್ತವೆ. ತಿಳಿ ಬಣ್ಣಗಳು ಶಾಂತಿದಾಯಕವಾಗಿ, ಉಲ್ಲಾಸದಾಯಕವಾಗಿ ತೋರುತ್ತವೆ. ನೆಲಕ್ಕೆ ಸಿಮೆಂಟ್ ಕಾಂಕ್ರೀಟ್ ಇಲ್ಲವೆ ಮೊಸಾಯಿಕ್ ಮಾಡಿಸುವುದು, ಈಗ ಗ್ರಾನೈಟ್, ಅಮೃತಶಿಲೆ, ವೆಟ್ರಿಫೈಡ್ ಟೈಲ್ ಹಾಕಿಸುವುದು ರೂಢಿಯಾಗಿದೆ. ಮೇಲ್ಚಾವಣಿಗೆ ಬಿಳಿ ಇಲ್ಲವೆ ತಿಳಿಬಣ್ಣಗಳನ್ನು ಉಪಯೋಗಿಸುವರು.

ಹುಸಿಯಲ್ಲಿ ಕೆಲವು ಕುರ್ಚಿಗಳನ್ನಿಡುವರು. ಪಕ್ಕದ ಟೀಪಾಯಿಯ ಮೇಲೆ ಓದುವ ಪತ್ರಿಕೆಗಳನ್ನು ಜೋಡಿಸಿಡುವರು. ಪಡಸಾಲೆಯಲ್ಲಿ ಸೋಫಾಸೆಟ್, ದಿವಾನ, ರೇಡಿಯೊ, ಟಿವಿ, ಅಲಂಕಾರದ ಕಲಾಕುಶಲ ವಸ್ತುಗಳ ಕಪಾಟು, ಪುಸ್ತಕಗಳ ಕಪಾಟು ಇವನ್ನು ಕಾಣಬಹುದು. ಹಿಂದಿನಂತೆ ಹತ್ತಾರು ಚಿತ್ರಗಳನ್ನು ಸದಾ ಕಾಲವೂ ತೂಗುಹಾಕುವ ಬದಲು ಒಂದೆರಡು ನಿಸರ್ಗ ಸೌಂದರ್ಯದ ವರ್ಣಚಿತ್ರಗಳನ್ನು ಗೋಡೆಗೆ ಹಾಕಿದ್ದು ಮಾಸಕ್ಕೊ ಪಕ್ಷಕ್ಕೊ ಒಮ್ಮೆ ಅವನ್ನು ಬದಲಿಸುವರು. ನೆಲಕ್ಕೆ ಚಾಪೆ ಇಲ್ಲವೆ ರತ್ನಗಂಬಳಿ ಹಾಸುವರು. ಹೂದಾನಿಗಳಲ್ಲಿ ಜಪಾನಿ ಪದ್ಧತಿಯಂತೆ ಹೂಗಳನ್ನಲಂಕರಿಸಿ ಪಡಸಾಲೆಯ ನಡುವಿನಲ್ಲೋ ಮೂಲೆಯೊಂದರಲ್ಲೋ ಇಡುವುದು ಗೃಹಾಲಂಕರಣದ ಮುಖ್ಯ ಅಂಗವಾಗಿದೆ. ಹೂಗಳಲ್ಲಿ ಮನವನ್ನರಳಿಸುವ ಶಕ್ತಿ ಇದೆ. ಅವುಗಳ ಬಣ್ಣ ಪಡಸಾಲೆಯ ಒಟ್ಟಂದದ ಬಣ್ಣಕ್ಕೆ ಹೊಂದಿಕೆಯಾಗುವಂತಿದ್ದರೆ ಬಹು ಚೆನ್ನು.

ಆಧುನಿಕ ಗೃಹಾಲಂಕಾರ ಕಲೆಯಲ್ಲಿ ಬಾಗಿಲು, ಕಿಟಕಿಗಳಿಗೆ ಪರದೆಯನ್ನು ಹಾಕುವುದು ಮುಖ್ಯವಾಗಿದೆ. ಕಿಟಕಿಗಳ ಮೂಲಕ ಚೆನ್ನಾಗಿ ಗಾಳಿ, ಬೆಳಕು ಬರುವಂತೆ ಅಲ್ಲಿನ ಪರದೆಗಳು ತೆಳ್ಳಗಿರಬೇಕು. ತಿಳಿಬಣ್ಣದವಾಗಿರಬೇಕು. ಬಾಗಿಲು ಪರದೆಗಳು ದಪ್ಪಬಟ್ಟೆಯುವಿರಬೇಕು. ದಟ್ಟಬಣ್ಣದವಿರಬೇಕು. ಗೋಡೆಯ ಬಣ್ಣಕ್ಕೆ ಹೊಂದಿಕೆಯಾಗುವಂತಿರಬೇಕು. ವರ್ಣಗಳ ಸಾಮರಸ್ಯದಂತೆ ಅನೇಕ ವೇಳೆ ವರ್ಣಭಿನ್ನತೆಯೂ ಕಣ್ಣಿಗೆ ಹಿತವಾಗಬಲ್ಲದು. ಕುರ್ಚಿ, ದಿವಾನಗಳ ಹಾಗೂ ದಿಂಬುಗಳ ಹೊದಿಕೆಗಳು ಒಂದೇ ಬಣ್ಣದವಿರಬೇಕು. ಅವುಗಳ ಮೇಲೆ ಕಲಾಪೂರ್ಣವಾದ ಕಸೂತಿಕೆಲಸ, ಇಲ್ಲವೆ ಬಣ್ಣದ ಚಿತ್ರಗಳು ಇದ್ದರೆ ಒಳ್ಳೆಯದು.

ಊಟದ ಮನೆಯಲ್ಲಿ ಕುರ್ಚಿ, ಮೇಜು, ಕೈ ತೊಳೆಯಲು ಸಿಂಕ್, ಊಟ ಹಾಗೂ ಚಹಗಳಿಗೆ ಬೇಕಾಗುವ ಪಿಂಗಾಣಿಯ ಪಾತ್ರೆಗಳನ್ನಿಡುವ ಕಪಾಟು–ಇವು ಇರಬೇಕು. ಊಟದ ಮನೆಯ ಗೋಡೆಗಳಿಗೆ ಹಣ್ಣು ಹಂಪಲದ, ಸೃಷ್ಟಿ ಸೊಬಗಿನ ವರ್ಣಚಿತ್ರಗಳನ್ನು ಹಾಕುವುದು ವಾಡಿಕೆ. ಬಣ್ಣಬಣ್ಣದ ಹೂಗಳಿಂದಲಂಕೃತವಾದ ಹೂದಾನಿ ಮತ್ತು ಹಣ್ಣಿನ ತಟ್ಟೆಗಳು ಊಟದ ಮನೆಗೆ ಅಲಂಕಾರವಾಗುತ್ತವೆ.

ಆಧುನಿಕ ಅಡುಗೆಮನೆಗಳು ಬಹಳ ಅಚ್ಚುಕಟ್ಟಾಗಿರುತ್ತವೆ. ಗ್ಯಾಸ್ ಇಲ್ಲವೆ ವಿದ್ಯುತ್ ಒಲೆಗಳ ಮೇಲೆ ಅಡುಗೆ ಮಾಡುವುದರಿಂದ ಹೊಗೆ ಮನೆ ಅಲ್ಲಿ ಪ್ರವೇಶಿಸುವಂತಿಲ್ಲ. ಆಹಾರಧಾನ್ಯಗಳನ್ನು, ಅಡುಗೆ ಪದಾರ್ಥಗಳನ್ನು ಹಿತ್ತಾಳೆ, ಸ್ಟೀಲು, ಅಲ್ಯುಮಿನಿಯಮ್ ಇಲ್ಲವೆ ಪ್ಲಾಸ್ಟಿಕ್ ಡಬ್ಬಗಳಲ್ಲಿ ಹಾಕಿ ಒಪ್ಪವಾಗಿ ಓರಣವಾಗಿ ಇಡುವುದರಿಂದ ಅಡುಗೆಮನೆಯ ಶೋಭೆ ಹೆಚ್ಚುತ್ತದೆ. ಉಪ್ಪಿನಕಾಯಿ, ಮೊರಬ್ಬಗಳನ್ನು ಗಾಜಿನ ಭರಣಿಗಳಲ್ಲಿ (ಜಾಡಿ) ಹಾಕಿ ಸಾಲುಸಾಲಾಗಿ ಇಡುವರು. ಅಡುಗೆಮನೆಯಲ್ಲಿ ತರಕಾರಿಗಳನ್ನೇ ಹೂದಾನಿಗಳಲ್ಲಿ ಅಲಂಕರಿಸಿ ಇಡಬಹುದಾಗಿದೆ.

ಮಲಗುವ ಕೋಣೆಯ ಗೋಡೆಗಳಿಗೆ ಕಣ್ಣಿಗೆ ತಂಪನ್ನೀಯಬಲ್ಲ ತಿಳಿಬಣ್ಣವನ್ನು ಉಪಯೋಗಿಸುತ್ತಾರೆ. ಬಾಗಿಲು, ಕಿಟಕಿಗಳಿಗೆ ಕಲಾಪೂರ್ಣವಾದ ಅಂದಚೆಂದದ ಪರದೆಗಳನ್ನಿಳಿಬಿಡುತ್ತಾರೆ. ಮಂಚಕ್ಕೆ ಸೊಳ್ಳೆಪರದೆ, ನೆಲಕ್ಕೆ ಚಾಪೆ, ಬಾಗಿಲಿಗೆ ಕಾಲೊರಸಿ ಹಾಕುತ್ತಾರೆ. ಮಲಗುವ ಕೋಣೆಯಲ್ಲಿ ವೈಯಕ್ತಿಕ ಭಾವಚಿತ್ರಗಳನ್ನು ಹಾಕಬಹುದು. ಹೂದಾನಿಗಳಲ್ಲಿ ಹೊಸ ಹೂಗಳಿದ್ದರೆ ದುಡಿದು ದಣಿದು ಬಂದ ದೇಹಕ್ಕೆ ಶಾಂತಿಯೂ ಮನಸ್ಸಿಗೆ ಆನಂದವೂ ಸಿಗುತ್ತವೆ.

ಮನೆಯ ಒಳಗಿನ ಅಲಂಕರಣದಂತೆ ಮನೆಯ ಹೊರಗಿನ ಅಲಂಕರಣವೂ ಮುಖ್ಯ ವಿಷಯವಾಗಿದೆ. ಮನೆಯ ಹೊರಬಾಗಿಲಿನ ಅಕ್ಕಪಕ್ಕಗಳಲ್ಲಿ ಬಣ್ಣ ಬಣ್ಣದ ಕ್ರೋಟನ್ ಮತ್ತು ಹೂಗಳ ಗಿಡಗಳಿರಬೇಕು. ಬಾಗಿಲ ಮೇಲೆ ಏರಿದಂತೆ ಮಲ್ಲಿಗೆಯೋ

ಜಾಜಿಯೋ ಬೋಗನ್‌ವಿಲವೋ ಹಬ್ಬಿದ್ದರೆ ಸೊಗಸು ಇನ್ನೂ ಹೆಚ್ಚುತ್ತದೆ. ಮನೆಗೆ ನೇರ ಎದುರಿಗೊ ಒಂದು ಪಕ್ಕದಲ್ಲೊ ಸಣ್ಣ ಹೂತೋಟ ಒಂದಿದ್ದು ಅದರ ನಡುವೆ ನಾಲ್ಕು ತೋಟದ ಕುರ್ಚಿಗಳನ್ನು ಹಾಕಿದ್ದರೆ ಅಲ್ಲಿ ಕೂಡಲು ದೇಹಕ್ಕೂ ಮನಸ್ಸಿಗೂ ಬಹಳ ಹಿತ. ಕುಂಡಗಳಿದ್ದರೆ ಜಾಗದ ಮಿತವ್ಯಯವಾಗುತ್ತದಲ್ಲದೆ ಅವುಗಳ ವಿನ್ಯಾಸದಲ್ಲೂ ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ.

ದೇಹಾಲಂಕರಣದಂತೆ ಗೃಹಾಲಂಕರಣವೂ ಎಂದೂ ಔಚಿತ್ಯದ ಎಲ್ಲೆಯನ್ನು ಮೀರಬಾರದು. ರಬ್ಬಾರುಬ್ಬಿಯಾದ ಬಣ್ಣಗಳು, ಅತ್ಯಲಂಕರಣದ ಆಣೆಕಟ್ಟುಗಳು, ಪರದೆಗಳು ಇದ್ದಲ್ಲಿ ಇಡೀ ಮನೆ ರಸಿಕರ ಮನಸ್ಸಿಗೆ ಜುಗುಪ್ಸೆಯನ್ನು ತರಬಲ್ಲದು. ಆದ್ದರಿಂದ ಮಿತಾಲಂಕರಣವೇ ನಿಜವಾಗಿ ಸರಿಯಾದ ಅಲಂಕರಣ.

ಮಿಕ್ಕ ವಿಷಯಗಳಲ್ಲಿ ಹೇಗೋ ಹಾಗೆ ಗೃಹಾಲಂಕರಣ ವಿಚಾರದಲ್ಲೂ ಆಗಲೇ ಒಂದು ಸಂಪ್ರದಾಯ ಏರ್ಪಟ್ಟು ಬಿಟ್ಟಿದೆ. ಇದರಿಂದಾಗಿ ಅನೇಕ ಮನೆಗಳ ಆಂತರಿಕ ವಿನ್ಯಾಸ ಏಕರೀತಿಯದಾಗಿ ತೋರುತ್ತದೆ. ಇತ್ತೀಚೆಗೆ ಇದನ್ನು ಮುರಿದು ಹೊಸ ಬಗೆಯಲ್ಲಿ ಹೊಸ ಅಭಿರುಚಿಗಳನ್ನು ವ್ಯಕ್ತಪಡಿಸುವಂತೆ ಮನೆಗಳನ್ನು ಅಲಂಕರಿಸುವುದರ ಕಡೆ ಗಮನ ಕೊಡಲಾಗುತ್ತಿದೆ. ಇಂಟೀರಿಯರ್ ಡೆಕೊರೇಷನ್ ಒಂದು ಫ್ಯಾಷನ್ ಆಗಿಯೂ ಸಾಮಾಜಿಕ ಜೀವನದಲ್ಲಿ ಸ್ಥಿರಗೊಂಡಿದೆ. ದುಡ್ಡುಕೊಟ್ಟರೆ ನಿಮ್ಮ ಮನಕ್ಕೆ ಒಪ್ಪುವ ಅಲಂಕರ ಮಾಡುವ ನೂರಾರು ಕಂಪನಿಗಳು, ಒಳಾಲಂಕರಣ ಪರಿಣತರು ನೂರಾರು ಸಂಖ್ಯೆಯಲ್ಲಿ ದೊರೆಯುತ್ತಾರೆ.

ಅಲಂಕರಣಕ್ಕೂ ಶುಚಿತ್ವಕ್ಕೂ ಹತ್ತಿರದ ಸಂಬಂಧವಿದೆ. ಒಂದು ದೃಷ್ಟಿಯಿಂದ, ಅಲಂಕರಣಗಳು ಇಲ್ಲದಿದ್ದರೂ ತೀರ ಶುಚಿಯಾಗಿರುವ ಮನೆ ಸುಂದರವಾಗಿಯೇ ಕಾಣುತ್ತದೆ. ದಿನಕ್ಕೆ ಎರಡು ಬಾರಿ ದೂಳು ಹೊಡೆದು, ವಾರ ಎರಡು ವಾರಗಳಿಗೊಮ್ಮೆ ಪರೀಕ್ಷಿಸಿ ಗೃಹಾಲಂಕರಣಗಳನ್ನು ಸಂರಕ್ಷಿಸಬೇಕಾಗುತ್ತದೆ.

ಗೃಹಾಲಂಕರಣ ವಿದ್ಯೆ ಈಗ ಒಂದು ಶಾಸ್ತ್ರವಾಗಿ ಬೆಳೆದಿದೆ. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಈ ವಿಷಯದಲ್ಲಿ ಡಿಪ್ಲೊಮ ಮತ್ತು ಪದವಿಗಳನ್ನು ನೀಡಲಾಗುತ್ತಿದೆ.

(ಎಸ್.ಎಚ್.ಎಂ.)

**ಗೃಹನಿರ್ಮಾಣ ಸಹಕಾರ ಸಂಘ :** ಪರಸ್ಪರ ಸಹಾಯದ ಮೂಲಕ ಸ್ವಸಹಾಯ – ಎಂಬ ತತ್ತ್ವದ ತಳಹದಿಯ ಮೇಲೆ ರಚಿತವಾದ ಸಹಕಾರ ವ್ಯವಸ್ಥೆಯ ಚೌಕಟ್ಟಿನೊಳಗೆ ಜನಕ್ಕೆ ವಸತಿಸೌಲಭ್ಯವನ್ನೊದಗಿಸುವ ಉದ್ದೇಶದಿಂದ ಸ್ಥಾಪಿತವಾದ ಸಂಘ (ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ). ಅಲ್ಪ ವರಮಾನವಿರುವವರು ಸಹಕಾರಿ ಗೃಹನಿರ್ಮಾಣ ಯೋಜನೆಯ ಅಡಿಯಲ್ಲಿ ಸಂಘಟಿತರಾಗಿ, ತಮಗೆ ಬೇಕಾದ ನಿವೇಶನಗಳನ್ನೋ ಮನೆಗಳನ್ನೋ ಪಡೆಯುತ್ತಾರೆ. ಸಹಕಾರ ಸಂಘದ ಮೂಲಕ ಸಂಘಟಿತರಾದ ಅವರು ಸಂಘದ ಮೂಲಕ ಸದಸ್ಯರಿಗಾಗಿ ಮನೆಗಳನ್ನು ಕಟ್ಟಬಹುದು, ಸದಸ್ಯರಿಗೆ ಸಾಲ ಕೊಡಬಹುದು, ನಿವೇಶನಕ್ಕಾಗಿ ಹಣ ಒದಗಿಸಬಹುದು. ವೈಯಕ್ತಿಕವಾಗಿ ಸಾಧಿಸಲು ಕಷ್ಟವಾದ ಒಳಚರಂಡಿ, ಉಪರಸ್ತೆ, ಉದ್ಯಾನ ಇತ್ಯಾದಿಗಳನ್ನು ಸಂಘದ ಮೂಲಕ ಸದಸ್ಯರು ತಮ್ಮ ವಸತಿ ಸ್ಥಳದಲ್ಲಿ ಸಾಧಿಸಬಹುದು. ಆರ್ಥಿಕವಾಗಿ ಅಶಕ್ತರಾದವರಿಗೆ, ಈ ಶಕ್ತಿ ನೀಡಬಲ್ಲ ಸಾಧನ ಸಹಕಾರ.

ಜೊತೆಗೂಡುವುದರಿಂದ ಜನರಲ್ಲಿ ಪರಸ್ಪರ ಸ್ನೇಹ, ವಿಶ್ವಾಸ ಬೆಳೆದು, ಸಹಕಾರ ಮನೋಭಾವ ಮೂಡುತ್ತದೆ; ತಮ್ಮ ಸಂಸ್ಥೆಯ ಹೊಣೆಗಾರಿಕೆ ನಿರ್ವಹಿಸಿ, ತಮಗೆ ಅಗತ್ಯವಾದ ವಸತಿ ಮುಂತಾದ ಸೌಲಭ್ಯಗಳನ್ನು ಪಡೆಯುವ ಆತ್ಮವಿಶ್ವಾಸ ಉದಿಸುತ್ತದೆ. ಸಹಕಾರಿ ಗೃಹನಿರ್ಮಾಣ ಸಂಸ್ಥೆಗಳು ಸ್ವೇಚ್ಛಿಕ ಸಂಸ್ಥೆಗಳಾದ್ದರಿಂದ, ಸಮಾನ ಅಧಿಕಾರವುಳ್ಳ ಸದಸ್ಯರ ಆಡಳಿತಕ್ಕೆ ಒಳಪಟ್ಟಿರುವುದರಿಂದ ಹೆಚ್ಚು ಪರಿಣಾಮಕಾರಿಯೂ ವಸತಿ ಸಮಸ್ಯೆಗಳನ್ನು ಬಗೆಹರಿಸಬಲ್ಲವು. ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳ ಸಾಧನೆಯ ಪರಿಮಿತಿಯಿಂದಾಗಿ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಗೃಹನಿರ್ಮಾಣ ಕಾರ್ಪೊರೇಷನ್‌ಗಳು ಸ್ಥಾಪಿತವಾಗಿ, ವಸತಿ ಸಮಸ್ಯೆಯನ್ನು ನಿವಾರಿಸುವಲ್ಲಿ ಗಣನೀಯ ಸೇವೆ ಸಲ್ಲಿಸಿವೆ. ಲಾಭದ ಉದ್ದೇಶ ಇಲ್ಲದೆ ಕನಿಷ್ಠವೆಚ್ಚದಲ್ಲಿ ಅತ್ಯಲ್ಪ ಆಡಳಿತ ಖರ್ಚಿನಿಂದ ಕಾರ್ಯಸಾಧಿಸುವ ಸಹಕಾರಿ ಗೃಹನಿರ್ಮಾಣ ಸಂಘಗಳು ಬೃಹತ್ ಗಾತ್ರದಲ್ಲಿ ನಿವೇಶನಗಳಿಗಾಗಿ ಭೂಮಿಯನ್ನು ಕೊಳ್ಳುವುದರ ಜೊತೆಗೆ ಮರಮುಟ್ಟು ಮತ್ತಿತರ ಸಾಮಗ್ರಿಗಳನ್ನು ಒಟ್ಟೊಟ್ಟಿಗೆ ಕಡಿಮೆ ವೆಚ್ಚದಲ್ಲಿ ಪಡೆಯಬಲ್ಲುವು.

ಖಾಸಗಿ ಸಂಸ್ಥೆಗಳು ಅಲ್ಪ ಅಥವಾ ಮಧ್ಯಮ ಆದಾಯದವರಿಗಾಗಿ ಸೂಕ್ತ ವಸತಿಗಳನ್ನು ಒದಗಿಸಲು ಅಸಮರ್ಥವಾಗಿರುವಾಗ, ಸಹಕಾರ ಸಂಘ ಈ ನಿಟ್ಟಿನಲ್ಲಿ ಸಫಲತೆಗಳಿಸಬೇಕೆಂದು ನಿರೀಕ್ಷಿಸುವುದು ಸಹಜ. ಆರ್ಥಿಕ ಯೋಜನೆಯಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಸಾಧಿಸಿ ಜನತೆಯಲ್ಲಿ ಅರಿವು ಮೂಡಿಸಿ ನೆರವು ನೀಡಬಲ್ಲ ಸೂಕ್ತ ಸಾಧನ ಕೂಡ ಇದಾಗಿದೆ.

ಕೆಲವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಹಕಾರಿ ಗೃಹನಿರ್ಮಾಣ ಚಳವಳಿ ಅದ್ಭುತ ಪ್ರಗತಿ ಸಾಧಿಸಿದೆ. ಮುಖ್ಯವಾಗಿ ಇಂಗ್ಲಿಷ್ ಮಾತನಾಡುವ ರಾಷ್ಟ್ರಗಳಲ್ಲಿ ಮತ್ತು ಬಲ್ಗೇರಿಯ, ಜರ್ಮನಿ, ಸ್ವಿಟ್ಜರ್ಲೆಂಡ್‌ಗಳಲ್ಲಿ ಗೃಹನಿರ್ಮಾಣ ಸಹಕಾರ ಸಂಘಗಳ ಸಾಧನೆಗಳು ಮಹತ್ತ್ವದ್ದಾಗಿವೆ. ಬ್ರಿಟನಿನಲ್ಲಿ ಗೃಹನಿರ್ಮಾಣ ಸಂಘಗಳು ಸಾಲ ನೀಡುವುದರ ಜೊತೆಗೆ ಕಟ್ಟಡ ರಚನೆಗೆ ಅಗತ್ಯವಾದ ಸಾಮಗ್ರಿಗಳನ್ನು ಸಂಗ್ರಹಿಸಿ ಹಂಚುತ್ತವೆ. ತಜ್ಞ ವಾಸ್ತುಶಿಲ್ಪಿಗಳ ನೆರವನ್ನು ಒದಗಿಸುತ್ತವೆ.



ನಗರಾಭಿವೃದ್ಧಿ ಮಂಡಲಿ ನಿರ್ಮಿಸಿದ ನವೀನ ಮಾದರಿ ಮನೆಗಳ ಸಾಲು

**ಭಾರತ :** ಭಾರತದಲ್ಲಿ 1915 ರಿಂದ ಈ ಚಳವಳಿ ಕ್ರಮವಾಗಿ ಬೆಳೆದಿದೆ. ರಾಜ್ಯ ಸರ್ಕಾರಗಳು ಸುಲಭ ಬಡ್ಡಿದರದಲ್ಲಿ ಸಾಲ ನೀಡಿ, ನಿವೇಶನಗಳನ್ನು ಒದಗಿಸಿ ಕಟ್ಟಡ ಸಾಮಗ್ರಿಗಳನ್ನು ಪೂರೈಸಿ ನೆರವಾಗುತ್ತಿವೆ.

ಇಂದು ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಒರಿಸ್ಸ, ತಮಿಳುನಾಡು, ಆಂಧ್ರಪ್ರದೇಶ, ರಾಜಸ್ತಾನ, ಮತ್ತು ಪಶ್ಚಿಮ ಬಂಗಾಳದಲ್ಲಿ ರಾಜ್ಯಮಟ್ಟದ ಗೃಹ ನಿರ್ಮಾಣ ಸಂಘಗಳು ಕೆಲಸ ಮಾಡುತ್ತಿವೆ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಸಹಕಾರಿ ಗೃಹ ಹಣಕಾಸು ಸಂಸ್ಥೆಗಳು ಹಲವು ಮಹಡಿಗಳ ಮನೆ ಕಟ್ಟಿಸಲು ಗೃಹ ನಿರ್ಮಾಣ ಸಂಘಗಳಿಗೆ ಹಣ ಒದಗಿಸುತ್ತವೆ. ತಮಿಳುನಾಡಿನಲ್ಲಿ ಗೃಹಅಡಮಾನ ಸಂಘಗಳು ಪ್ರಾಥಮಿಕ ಗೃಹಅಡಮಾನ ಸಂಘಗಳ ಸದಸ್ಯರಿಗೆ ಹೊಸ ಮನೆಗಳನ್ನು ಕಟ್ಟಲು ಅಥವಾ ಹಳೆಯವನ್ನು ರಿಪೇರಿ ಮಾಡಲು ಹಣ ಒದಗಿಸುತ್ತಿವೆ. ಕರ್ನಾಟಕದಲ್ಲಿ ಗೃಹನಿರ್ಮಾಣ ಕಾರ್ಪೋರೇಷನ್ ತನ್ನ ಸದಸ್ಯ ಗೃಹನಿರ್ಮಾಣ ಸಂಘಗಳಿಗೆ ಅಥವಾ ಅದರ ಸದಸ್ಯರಿಗೆ ಗೃಹನಿರ್ಮಾಣಕ್ಕಾಗಿ ಹಣ ಕೊಡುತ್ತದೆ. ಇದ್ದ ಮನೆಯ ಬಡಾವಣೆ ಅಥವಾ ರಿಪೇರಿಗಾಗಿಯೂ ಪ್ರಾಥಮಿಕ ಸಂಘಗಳ ಸದಸ್ಯರಿಗೆ ಸಾಲ ಒದಗಿಸಲಾಗುತ್ತದೆ. ಅಲ್ಲದೆ ನಿವೇಶನಗಳನ್ನು ಅಥವಾ ಭೂಮಿಯನ್ನು ಕೊಳ್ಳಲು ಈ ಸಂಘಗಳಿಗೆ ಅಲ್ಪಾವಧಿ ಸಾಲವನ್ನು ಕಾರ್ಪೋರೇಷನ್ ಒದಗಿಸುತ್ತದೆ.

ಕೈಗಾರಿಕೆಯ ಅಭಿವೃದ್ಧಿ, ಜನಸಂಖ್ಯೆಯ ಹೆಚ್ಚಳ ಹಾಗೂ ನಗರಗಳ ಬೆಳೆವಣಿಗೆಯೊಂದಿಗೆ ವಸತಿಗಳ ಬೇಡಿಕೆಯೂ ತೀವ್ರ ಹೆಚ್ಚಿ, ಅದರ ಪೂರೈಕೆ ಅತ್ಯಂತ ಜಟಿಲವೆನಿಸುವುದು ಸಹಜ. ಖಾಸಗಿ ಕ್ಷೇತ್ರದಲ್ಲಿ ಲಾಭೋದ್ದೇಶದಿಂದ ವಸತಿಗಳನ್ನು ನಿರ್ಮಿಸಬಹುದಾದರೂ, ಅವು ಅಸ್ತವ್ಯಸ್ತವಾಗಿದ್ದು, ಒಂದೆಡೆ ಭವ್ಯ ಸೌಧಗಳಿಗೂ ಇನ್ನೊಂದೆಡೆ ಕೊಳಚೆಪ್ರದೇಶಗಳಿಗೂ ಎಡೆ ಮಾಡಿಕೊಡಬಹುದು. ಸಹಕಾರ ಸಂಘಟನೆ ಮಾತ್ರವೇ ವ್ಯವಸ್ಥಿತವಾಗಿ ಈ ಸಮಸ್ಯೆಯನ್ನು ಬಗೆಹರಿಸಬಲ್ಲುದು.

ಭಾರತದಲ್ಲಿ ಪ್ರಥಮ ಗೃಹನಿರ್ಮಾಣ ಸಹಕಾರ ಸಂಘ ಮದ್ರಾಸ್ ಪ್ರಾಂತದಲ್ಲಿ 1913–14ರಲ್ಲಿ ಸ್ಥಾಪಿತವಾಯಿತು. ಮುಂಬಯಿ ಆ ಬಳಿಕ ಹೆಜ್ಜೆಯಿಟ್ಟು ಪ್ರಖ್ಯಾತವಾದ ಸಾರಸ್ವತ ಸಹಕಾರ ವಸತಿ ಸಂಘವನ್ನು 1915ರಲ್ಲಿ ಸ್ಥಾಪಿಸಿತು. ಮುಂದೆ ಇತರ ರಾಜ್ಯಗಳೂ ಈ ದಿಸೆಯಲ್ಲಿ ಮುನ್ನಡೆದುವು.

ಆದರೂ ಈ ಕ್ಷೇತ್ರದಲ್ಲಿ ಸಹಕಾರ ಚಳವಳಿ ಸಾಧಿಸಿರುವ ಪ್ರಗತಿ 1954–55ರ ವರೆಗೂ ಗಣನೀಯವಾಗಿರಲಿಲ್ಲ. ಇಡೀ ದೇಶದಲ್ಲಿ ಈ ಅವಧಿಯಲ್ಲಿ ಈ ಕ್ಷೇತ್ರದಲ್ಲಿ ನಿರ್ಮಿತವಾದ ವಸತಿಗಳು ಪಟ್ಟಣಗಳಲ್ಲಿ ಸುಮಾರು 24.327 ಹಾಗೂ ಗ್ರಾಮ ಪ್ರದೇಶದಲ್ಲಿ 2.345. ಮುಂದಿನ ಐದು ವರ್ಷಗಳಲ್ಲಿ ಸಾಧಿಸಲಾದ ಪ್ರಗತಿ ಹೀಗಿದೆ:

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ವಸತಿ ನಿರ್ಮಾಣಕ್ಕಾಗಿ ರೂ. 38.5 ಕೋಟಿ ಒದಗಿಸಲಾಯಿತು. ಇದು ಎರಡನೆಯ ಯೋಜನೆಯಲ್ಲಿ ರೂ. 84 ಕೋಟಿಗೂ ಮೂರನೆಯ ಯೋಜನೆಯಲ್ಲಿ ರೂ. 122 ಕೋಟಿಗೂ ಏರಿತು. ನಾಲ್ಕನೆಯ ಯೋಜನೆಯಲ್ಲಿ ರೂ. 96.70 ಕೋಟಿ ಅಂದಾಜು ಮಾಡಲಾಗಿದೆ.

ಹಿಂದಿನ ಮೈಸೂರು ರಾಜ್ಯದಲ್ಲಿ ಗೃಹನಿರ್ಮಾಣವನ್ನು ತ್ವರಿತಗೊಳಿಸಲು 1950ರಲ್ಲಿ ಮೈಸೂರು ರಾಜ್ಯ ಸಹಕಾರಿ ಗೃಹನಿರ್ಮಾಣ ಕಾರ್ಪೋರೇಷನನ್ನು ಸ್ಥಾಪಿಸಲಾಯಿತು. ಅದು ಇತರ ವಸತಿ ನಿರ್ಮಾಣ ಸಹಕಾರ ಸಂಘಗಳಿಗೆ ಹಣ ಒದಗಿಸುವ

ಕೇಂದ್ರಸಂಸ್ಥೆಯಾಗಿದೆ. ಈ ಸಂಸ್ಥೆಗೆ ಸರ್ಕಾರದಿಂದ ಹಣ ದೊರೆಯುತ್ತದೆ. ಸರ್ಕಾರ ಅಲ್ಪ ವರಮಾನ ಮತ್ತು ಮಧ್ಯಮ ವರಮಾನದವರ ವಸತಿ ಯೋಜನೆಯನ್ನು ಆರಂಭಿಸಿದಾಗ ಸಹಕಾರ ಕ್ಷೇತ್ರಗಳಲ್ಲಿ ಈ ಕಾರ್ಯ ನಿರ್ವಹಿಸುವ ಹೊಣೆಯನ್ನು ಈ ಕಾರ್ಪೊರೇಷನ್‌ಗೆ ವಹಿಸಿಕೊಡಲಾಯಿತು.

ಇವಲ್ಲದೆ ರಾಜ್ಯದಲ್ಲಿ ಹರಿಜನ–ಗಿರಿಜನ ವಸತಿ ನಿರ್ಮಾಣ ಕಾರ್ಪೊರೇಷನ್ ಕೂಡ ಇದೆ. ಅದು ಹರಿಜನ–ಗಿರಿಜನ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಹಣ ಒದಗಿಸುತ್ತದೆ.

ಕಳೆದೆರಡು ದಶಕಗಳಿಂದ ಹಲವಾರು ಸರ್ಕಾರಿ ಸಂಸ್ಥೆಗಳು, ಬ್ಯಾಂಕುಗಳು, ವಿಶ್ವವಿದ್ಯಾನಿಲಯಗಳು ತಮ್ಮ ಉದ್ಯೋಗಿಗಳಿಗೆ ಗೃಹಾವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ತಮ್ಮದೇ ಆದ ಗೃಹ ನಿರ್ಮಾಣ ಸಂಘಗಳನ್ನು ಸ್ಥಾಪಿಸಿಕೊಂಡು ಬಡಾವಣೆಗಳನ್ನು ನಿರ್ಮಿಸುತ್ತಿವೆ. ಅಲ್ಲದೆ ಖಾಸಗಿ ಗೃಹನಿರ್ಮಾಣ ಸಂಸ್ಥೆಗಳೂ ಇಂದು ಭಾರತಾದ್ಯಂತ ವ್ಯಾಪಿಸಿದ್ದು ಬಡಾವಣೆಗಳ ನಿರ್ಮಾಣದಲ್ಲಿ ನಿರತವಾಗಿವೆ. (ಪಿ.ಎಸ್.ಬಿ.)

**ಗೃಹಪದ್ಧತಿ :** ಇಂಗ್ಲೆಂಡಿನ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿ ಚಟುವಟಿಕೆಗಳಿಗಾಗಿ ಇರುವ ಒಂದು ಸಾಮಾಜಿಕ ವ್ಯವಸ್ಥೆ (ದಿ ಹೌಸ್ ಸಿಸ್ಟಮ್). ಇದನ್ನು ಯುವಜನರ ಆವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆ ನಿರ್ದಿಷ್ಟವಾಗಿ ಅಳವಡಿಸಲಾಗಿದೆ. ಇದರ ಉಪಯುಕ್ತತೆಯನ್ನರಿತು ಇದನ್ನು ಇತರ ವಸತಿ ಪ್ರೌಢಶಾಲೆಗಳಲ್ಲೂ ಸಾಮಾನ್ಯ ಪ್ರೌಢಶಾಲೆಗಳಲ್ಲೂ ಅಳವಡಿಸಿಕೊಳ್ಳಲಾಗಿದೆ.

ಪಬ್ಲಿಕ್ ಶಾಲೆಯ ಪ್ರತಿ ವಿದ್ಯಾರ್ಥಿಯೂ ಎರಡು ಗುಂಪುಗಳ ಸದಸ್ಯನಾಗಿರುತ್ತಾನೆ. ಪಾಠಪ್ರವಚನಗಳು ನಡೆಯುವಾಗ ಆತ ತನ್ನ ತರಗತಿಗೆ ಸೇರಿರುತ್ತಾನೆ. ಪಾಠಪ್ರವಚನಗಳ ಅನಂತರ ಆತ ತನ್ನ ಗೃಹಕ್ಕೆ ಸೇರಿರುತ್ತಾನೆ. ಇಲ್ಲಿ ಗೃಹವೆಂದರೆ ವಿದ್ಯಾರ್ಥಿಯ ಸ್ವಂತ ಮನೆಯಲ್ಲ; ಶಾಲೆಯಲ್ಲಿ ಆತನ ಊಟೋಪಚಾರ, ಕ್ರೀಡೆ, ವ್ಯಾಸಂಗಾದಿಗಳಿಗಾಗಿ ಗೊತ್ತುಪಡಿಸಿದ ಜಾಗ, ಅಷ್ಟೆ. ಇಂಥ ಗೃಹದಲ್ಲಿ ಸಾಮಾನ್ಯವಾಗಿ ಐವತ್ತು ವಿದ್ಯಾರ್ಥಿಗಳಿರುತ್ತಾರೆ. ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಒಂದು ಶಾಲೆಯಲ್ಲಿ ಐದೋ ಹತ್ತೋ ಹನ್ನೆರಡೋ ಗೃಹಗಳಿರಬಹುದು. ಪ್ರತಿಗೃಹದ ಮೇಲ್ವಿಚಾರಣೆಯನ್ನು ಒಬ್ಬ ಉಪಾಧ್ಯಾಯ ನೋಡಿಕೊಳ್ಳುತ್ತಾನೆ. ವಿದ್ಯಾರ್ಥಿ ಶಾಲೆಯ ಹೊರಗೆ ಹೇಗೆ ಕ್ರಮಬದ್ಧವಾದ ಜೀವನವನ್ನು ನಡೆಸಬೇಕೆಂಬ ವಿಷಯದಲ್ಲಿ ಈ ಗೃಹವ್ಯವಸ್ಥೆ ಮಾರ್ಗದರ್ಶನ ನೀಡುತ್ತದೆ. ಗೃಹಾಧಿಪತಿ ತನ್ನ ಕಿರಿಯ ಸ್ನೇಹಿತರಲ್ಲಿ ವೈಯಕ್ತಿಕವಾಗಿ ಆಸಕ್ತಿಯುಳ್ಳವನಾಗಿದ್ದು ಅವರಲ್ಲಿರುವ ಅತಿ ತೀವ್ರತರವಾದ ಸಾಂಘಿಕ ಶಕ್ತಿಗಳನ್ನು ಹೊರಹೊಮ್ಮಿಸಿ ಅವರ ಅನೇಕ ಸಾಮಾಜಿಕ ಚಟುವಟಿಕೆಗಳಿಗೆ ಬಹಿರ್ದ್ವಾರಗಳನ್ನು ಸೃಷ್ಟಿಸಿ ತನ್ಮೂಲಕ ಅವರನ್ನು ಒಂದು ಸ್ಥಿಮಿತಕ್ಕೆ ತರಲು ಪ್ರಯತ್ನಿಸುತ್ತಾನೆ. ಪ್ರತಿ ಗೃಹದಲ್ಲೂ ಸದಸ್ಯರ ಅನುಕೂಲಕ್ಕಾಗಿ ಆಟೋಟಗಳು, ವ್ಯಾಯಾಮ, ಸಂಗೀತ ಮತ್ತು ಚರ್ಚಾಕೂಟಗಳೇ ಆದಿಯಾಗಿ ಎಲ್ಲ ತರಹದ ಸಾಮಾಜಿಕ ಚಟುವಟಿಕೆಗಳಿಗೂ ಅವಕಾಶವಿದೆ. ಗೃಹಪದ್ಧತಿಯ ಮಾನಸಿಕ ಮೌಲ್ಯವನ್ನು ಕಂಡುಕೊಂಡು ಅಭಿವೃದ್ಧಿಪಡಿಸಿದವರಲ್ಲಿ ಥಾಮಸ್ ಆರ್ನಲ್ಡ್ ಮತ್ತು ಅವನ ಸಮಕಾಲೀನರು ಮುಖ್ಯರು.

ಗೃಹ ಗೃಹಗಳ ನಡುವೆ ಕಾಲಕಾಲಕ್ಕೆ ಸ್ಪರ್ಧೆಗಳು ಏರ್ಪಡುವುದರಿಂದ ವಿದ್ಯಾರ್ಥಿಗಳ ಪ್ರತಿಭೆಗೆ ಕೈಚಳಕಕ್ಕೆ ವ್ಯಾಸಂಗಕ್ಕೆ ಸದವಕಾಶ ಒದಗಿದಂತಾಗುತ್ತದೆ. ಅತಿ ಚತುರರೆನಿಸಿದ ವಿದ್ಯಾರ್ಥಿಗಳನ್ನೆಲ್ಲ ಒಂದೇ ಗೃಹಕ್ಕೆ ಸೇರಿಸುವ ಬದಲು ಅವರನ್ನು ಎಲ್ಲ ಗೃಹಗಳಿಗೂ ಸಮಾನವಾಗಿ ಹಂಚುತ್ತಾರಾಗಿ ಈ ವ್ಯವಸ್ಥೆ ಇನ್ನೂ ಚೆನ್ನಾಗಿ ಕೆಲಸ ಮಾಡಲು ಅವಕಾಶ ದೊರೆತಿದೆ.

ತನ್ನ ಒಟ್ಟಾರೆ ಕೀರ್ತಿಗೆ ಗಮನ ಕೊಡುವ ರೀತಿಯಲ್ಲಿ ಪ್ರತಿಯೊಂದು ಗೃಹವೂ ತನ್ನದೇ ಆದ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತದೆ. ಪಬ್ಲಿಕ್ ಶಾಲೆಗಳಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಪ್ರಾಮುಖ್ಯವಿದೆಯಾಗಿ ಗೃಹಗಳು ತಮ್ಮ ತಮ್ಮಲ್ಲೇ ಸ್ಪರ್ಧಿಸುವಂತೆ ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತದೆ. ನ್ಯಾಯನಿಷ್ಠೆ, ಒಳ್ಳೆಯ ನಡತೆ, ತನ್ನ ಗುಂಪಿನ ಅಭಿಮಾನ ಮುಂತಾದ ಉತ್ತಮ ಗುಣಗಳನ್ನು ವಿದ್ಯಾರ್ಥಿ ವೃದ್ಧಿಸಿಕೊಳ್ಳಲು ಇಲ್ಲಿ ಅವಕಾಶವಿದೆ. (ಕೆ.ಬಿ.)

**ಗೃಹರಕ್ಷಕ ದಳ :** ದೇಶದ ಆಂತರಿಕ ಭದ್ರತೆಯನ್ನು ರಕ್ಷಿಸಲು ನೆರವಾಗುವ ನಾಗರಿಕರ ಸುಸಂಘಟಿತ ಸ್ವಯಂಸೇವಕ ದಳ (ಹೋಂ ಗಾರ್ಡ್ಸ್). ರಾಜಕೀಯ, ಕೋಮುವಾರು ಮತ್ತು ಭಾಷಾವಾರು ಪಂಗಡಗಳಿಂದ ದೂರವಿದ್ದು, ತಮ್ಮ ನಿತ್ಯದ ಉದ್ಯೋಗ ಮತ್ತು ದಿನಚರಿಯ ಜೊತೆಗೆ ದೇಶಸೇವೆಗೆ ಕೊಂಚ ಕಾಲವನ್ನು ಮೀಸಲಿಡುವ ರಾಷ್ಟ್ರಕರ ಸೇವಾದಳವಿದು. ನಾಡಿನ ಶಾಂತಿಪಾಲನೆ ಇದರ ಮುಖ್ಯ ಕರ್ತವ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸೂಚನೆಯಂತೆ ಹೊಣೆ ಯಾದ ಕರ್ತವ್ಯವನ್ನು ಮತ್ತೊಬ್ಬರಿಗೆ ಹೊರೆ ಆಗದಂತೆ ನೆರವೇರಿಸುತ್ತದೆ. ಮಹಿಳೆಯರೂ ಗೃಹರಕ್ಷಕದಳದಲ್ಲಿ ಉತ್ತಮ ಸೇವೆ ಸಲ್ಲಿಸಬಹುದೆಂದು ಮನಗಂಡು ಮಹಿಳಾ ಗೃಹರಕ್ಷಕ ದಳವನ್ನು ಸಹ ಜಾರಿಗೆ ತರಲಾಗಿದೆ. ಇಂದು ಭಾರತಾದ್ಯಂತ ಎಲ್ಲ ರಾಜ್ಯ ಗಳಲ್ಲೂ ಗೃಹರಕ್ಷಕ ದಳಗಳಿವೆ. 1946ರ ಡಿಸೆಂಬರಿನಲ್ಲಿ ಗೃಹರಕ್ಷಕ ದಳದ ಬೀಜಾಂಕುರವಾಯಿತೆನ್ನಬಹುದು. ಮುಂಬಯಿ ಪ್ರಾಂತ ಕೋಮುಗಲಭೆಗಳಿಂದ ತತ್ತರಿಸುತ್ತಿದ್ದಾಗ ಕೆಲವು ಮಂದಿ ಸಮಾಜಸೇವಕರೂ ನಾಗರಿಕ ಪ್ರಜ್ಞೆಯುಳ್ಳ ಯುವಕರೂ ನಾಡಿನ ಶಾಂತಿಪಾಲನೆಗೆ, ಜನರ ಮಾನ, ಪ್ರಾಣ ಮತ್ತು ಆಸ್ತಿರಕ್ಷಣೆಗೆ ಮುಂದೆ ಬಂದರು. ಮುಂಬಯಿ ಸರ್ಕಾರ ಇಂಥ ಒಂದು ಸ್ವಯಂ ಸೇವಕ ದಳದ ಅಗತ್ಯತೆಯನ್ನು ಮನಗಂಡು ಮುಂಬಯಿ ಗೃಹರಕ್ಷಕ ದಳದ ಕಾಯಿದೆಯನ್ನು ಜಾರಿಗೆ ತಂದು (1947) ಗೃಹರಕ್ಷಕ ದಳವನ್ನು ಶಾಸನಬದ್ಧ ದಳವನ್ನಾಗಿ ಪರಿವರ್ತಿಸಿತು. ಇತರ ರಾಜ್ಯಸರ್ಕಾರಗಳು ಕ್ರಮೇಣ ಆ ಮಾರ್ಗವನ್ನು ಅನುಸರಿಸಿದುವು. ಮೊದಲು ಪೋಲೀಸರ ಜೊತೆ ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಇದರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿತ್ತು. ಬರಬರುತ್ತ ಗೃಹರಕ್ಷದಳದ ಸೇವೆಯನ್ನು ರಾಷ್ಟ್ರದ ಎಲ್ಲ ರೀತಿಯ ಪರಿಸ್ಥಿತಿಗಳಲ್ಲೂ ಪೋಲಿಸರ ಮತ್ತು ರಾಷ್ಟ್ರ ರಕ್ಷಣಾ ಪಡೆಗಳ ಜೊತೆ ಉಪಯೋಗಿಸಿಕೊಳ್ಳಲಾಗುತ್ತಿದೆ.



ಲಾಂಛನ

ಗೃಹರಕ್ಷಕ ದಳ ಕೇಂದ್ರಸರ್ಕಾರದ ಗೃಹ ಮಂತ್ರಾಲಯ ವಿಭಾಗಕ್ಕೆ ಸೇರಿದೆ. ನಾಗರಿಕ ರಕ್ಷಣಾ ಪ್ರಧಾನ ಕಾರ್ಯನಿರ್ವಹಣ ಅಧಿಕಾರಿಗಳು (ಡೈರೆಕ್ಟರ್–ಜನರಲ್, ಸಿವಿಲ್ ಡಿಫೆನ್ಸ್) ಕೇಂದ್ರದಿಂದ ಇಡೀ ರಾಷ್ಟ್ರದ ಗೃಹರಕ್ಷಕ ದಳವನ್ನು ನಿಯಂತ್ರಿಸುತ್ತಾರೆ. ಪ್ರತಿ ರಾಜ್ಯದ ರಾಜಧಾನಿಯಲ್ಲಿ ರಾಜ್ಯ ಗೃಹರಕ್ಷಕ ದಳದ ಕೇಂದ್ರ ಕಚೇರಿ ಇದ್ದು ಒಬ್ಬ ಐ.ಪಿ.ಎಸ್. ಗ್ರೇಡಿನ ಕಮಾಂಡೆಂಟ್ ಜನರಲ್ ಅದರ ಮುಖ್ಯಸ್ಥರಾಗಿರುತ್ತಾರೆ. ಇವರು ಇಡೀ ರಾಜ್ಯದ ಗೃಹರಕ್ಷಕ ದಳದ ತರಬೇತಿ, ಆಡಳಿತ ಮುಂತಾದ ಕಾರ್ಯವನ್ನು ನಿರ್ವಹಿಸುತ್ತಾರೆ. ರಾಜ್ಯಗಳ ಪ್ರಮುಖ ಜಿಲ್ಲೆಗಳಲ್ಲಿ ಜಿಲ್ಲಾ ಕಮಾಂಡೆಂಟರವರು ಇದ್ದು, ಡೆಪ್ಯುಟಿ ಕಮಾಂಡೆಂಟ್, ಅಡ್ಜುಟೆಂಟ್ ಸ್ಟಾಫ್ ಆಫೀಸರ್ಸ್ ಇವರುಗಳ ನೆರವಿನಿಂದ ಜಿಲ್ಲಾ ಗೃಹರಕ್ಷಕ ದಳದ ತರಬೇತಿ, ನಿಯಂತ್ರಣ ಮತ್ತು ಆಡಳಿತವನ್ನು ನೋಡಿಕೊಳ್ಳುತ್ತಾರೆ. ಇವರಲ್ಲದೆ ಡಿವಿಷನಲ್ ಕಂಪನಿ ಮತ್ತು ಪ್ಲಟೂನ್ ಕಮಾಂಡರ್ಸ್, ಸಾರ್ಜೆಂಟ್ ಮೇಜರ್, ಪ್ಲಟೂನ್ ಸಾರ್ಜೆಂಟ್ಸ್ ಮತ್ತು ಸೆಕ್ಷನ್ ಲೀಡರ್ಸ್ ಎಂಬ ಕಿರಿಯ ಗೃಹರಕ್ಷಕ ಅಧಿಕಾರಿಗಳು ಸಹ ಇರುತ್ತಾರೆ. ಇವರೆಲ್ಲರೂ ಗೃಹರಕ್ಷಕ ದಳಕ್ಕೆ ಸೇರಿ ತರಬೇತು ಪಡೆದು ಮುಂದೆ ಆಯ್ಕೆಯಾಗಿ ಬಂದವರು. ಇವರಿಗೆ ಗೊತ್ತಾದ ಸರ್ಕಾರಿ ಸಂಬಳವಿಲ್ಲ. ನಿಗದಿಯಾದ ಇತರ ಭತ್ಯಗಳು ಮಾತ್ರ ದೊರೆಯುತ್ತವೆ. ಸೇನಾದಳಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದಂಥವರಿಗೂ ಮಧ್ಯದಲ್ಲೇ ಸೇನೆಯಿಂದ ನಿವೃತ್ತಗೊಂಡ ಸೈನಿಕರಿಗೂ ಗೃಹರಕ್ಷಕ ದಳದಲ್ಲಿ ವಿಶೇಷ ಸ್ಥಾನಮಾನ ಕೊಡಲಾಗುವುದು.

ಅರ್ಹತೆಗಳು : ಆಯಾ ಜಿಲ್ಲಾವಾಸಿಗಳಾದ ಭಾರತೀಯ ನಾಗರಿಕರು ಈ ದಳವನ್ನು ಸೇರಬಹುದು. ಅಂಥವರ ವಯಸ್ಸು 20–50ರ ಅಂತರದಲ್ಲಿರಬೇಕು. ಯಾವ ರೀತಿಯಿಂದಲೂ ನ್ಯಾಯಾಲಯದಿಂದ ಅವರು ಶಿಕ್ಷೆಗೆ ಒಳಗಾಗಿರಬಾರದು. ಸಮಾಜಕಂಟಕ ವ್ಯಕ್ತಿಗಳಾಗಿರಬಾರದು. ಅಂಟು ರೋಗ–ರುಜಿನಗಳೂ ಅಂಗ ನ್ಯೂನತೆಯೂ ಇರಬಾರದು. ನಿರ್ದಿಷ್ಟ ದೇಹದ ಅಳತೆಯಿಂದ ಕೂಡಿ ದೃಢಕಾಯ ರಾಗಿರಬೇಕು. ಓದು ಬರೆಹ ತಿಳಿದಿರಬೇಕು. ಒಮ್ಮೆ ಸೇರಿದ ಬಳಿಕ ಆ ವ್ಯಕ್ತಿಗೆ ವಯಸ್ಸು 55 ತುಂಬುವ ವರೆಗೂ ಆತನ ಸೇವೆಯನ್ನು ಬಳಸಿಕೊಳ್ಳಲಾಗುವುದು. ಮತ್ತು ಮುಂದುವರಿಸಬೇಕಾದರೆ ವ್ಯಕ್ತಿಯ ಘನತೆ, ದೇಹ ದೃಢತೆ, ಆತನ ಸೇವೆ ಮುಂತಾದವನ್ನು ಪರಿಗಣಿಸಲಾಗುವುದು. ಸರ್ಕಾರ ವಿಧಿಸಿರುವ ನಿಯಮಾನುಸಾರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇಂಥವರಿಗೆ ಸಮವಸ್ತ್ರ, ಭುಜಕೀರ್ತಿ ಮುಂತಾದವುಗಳನ್ನು ಉಚಿತವಾಗಿ ಒದಗಿಸಿ ಯುಕ್ತ ಶಿಕ್ಷಣವನ್ನು ನೀಡಿ ತರಬೇತು ಮಾಡುತ್ತಾರೆ. ಭಾರತಾದ್ಯಂತ ಸಮವಸ್ತ್ರ ಒಂದೇ ರೀತಿ ಇರುವುದರಿಂದ ಹಾಗೂ ಒಂದೇ ರೀತಿಯ ಶಿಕ್ಷಣ ನೀಡುವುದರಿಂದ ಗೃಹರಕ್ಷಕ ದಳ ನಿಜಕ್ಕೂ ಇತರ ರಾಷ್ಟ್ರೀಯ ಬಲಗಳಾದ ರಕ್ಷಣಾಬಲಗಳು ಮತ್ತು ಪ್ರಾದೇಶಿಕ ಸೇನೆಗಳಂತೆ ಅಖಿಲ ಭಾರತೀಯವಾಗಿ ಇರುವುದು.

ತರಬೇತಿ : ಎಲ್ಲ ಗೃಹರಕ್ಷಕ ಸದಸ್ಯರಿಗೆ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ತರಬೇತು ನೀಡಲಾಗುವುದು. ವಾರಕ್ಕೆ 3 ರಿಂದ 4 ದಿವಸಗಳು ಬೆಳಗ್ಗೆ ನಿಯಮಿತ ಪೆರೇಡ್ ಇರುತ್ತದೆ. ದೈಹಿಕ ಆರೋಗ್ಯ, ದೃಢತೆ ಮತ್ತು ಶ್ರಮದಾಯಕ ಕೆಲಸಕ್ಕೆ ಸಹಾಯಕವಾಗುವ ರೀತಿ ಈ ಶಿಕ್ಷಣ ಉಂಟು. ಇದರ ಜೊತೆಗೆ ಕೆಲವು ವಿಶಿಷ್ಟವಾದ ಉಪಯುಕ್ತ ವಿಷಯಗಳಲ್ಲಿ ಎಂದರೆ ಪ್ರಥಮ ಚಿಕಿತ್ಸೆ, ಅಗ್ನಿಶಮನ ಮತ್ತು ರಕ್ಷಣೆ, ಲಾಠಿ, ಬಂದೂಕು ಇವನ್ನು ಉಪಯೋಗಿಸುವ ವಿಧಾನ ಮುಂತಾದವನ್ನು ಪರಿಣತರಿಂದ ಹೇಳಿಕೊಡಲಾಗುವುದು. ಶಸ್ತ್ರಸಹಿತ ಕವಾಯತಿ, ಜನರ ಗುಂಪಿನ ಹತೋಟಿ ಮತ್ತು ಹದ್ದುಮೀರಿದ ಗುಂಪನ್ನು ಶಾಂತಿರಕ್ಷಣೆಗಾಗಿ ಚದುರಿಸುವುದು ಮುಂತಾದವನ್ನು



ರಕ್ಷಣಾ ವಿಧಾನ

ಸಹ ಕಲಿಸುತ್ತಾರೆ. ಜಿಲ್ಲಾಮಟ್ಟದ ಈ ತರಬೇತಿಗಳಲ್ಲಿ ಉತ್ತೀರ್ಣರಾದ ಕೆಲವರನ್ನು ರಾಜ್ಯಮಟ್ಟದ ತರಬೇತಿಗಾಗಿ ಆಯ್ಕೆ ಮಾಡಿ ರಾಜ್ಯ ಗೃಹರಕ್ಷಕ ದಳದ ತರಬೇತಿ ಕೇಂದ್ರಕ್ಕೆ ಕಳಿಸಲಾಗುವುದು. ಅಲ್ಲಿ ಅವರಿಗೆ ನೀಡುವ ಶಿಕ್ಷಣ ವಿಷಯಗಳೆಂದರೆ ಅಗ್ನಿಶಮನ, ಪ್ರಥಮ ಚಿಕಿತ್ಸೆ, ಶಸ್ತ್ರದ ಉಪಯೋಗ ಇತ್ಯಾದಿ. ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿದವರ ಸೇವೆಯನ್ನು ಆಯಾ ಜಿಲ್ಲಾ ಗೃಹರಕ್ಷಕ ದಳ ತರಬೇತಿ ಕೇಂದ್ರಗಳು ಉಪಯೋಗಿಸಿಕೊಳ್ಳುವುವು. ಇಂಥವರಿಗೆ ಮುಂದೆ ವಾರ್ಷಿಕ ಬೇಸಗೆ ತರಬೇತಿ ಶಿಬಿರಗಳನ್ನು ಕೂಡ ನಡೆಸುವುದುಂಟು. ಒಬ್ಬ ನುರಿತ ಗೃಹರಕ್ಷಕ ಮೊದಲಾಗಿ ಒಬ್ಬ ಆದರ್ಶ ಪ್ರಜೆ; ಎರಡನೆಯದಾಗಿ ಆತ ಇತರರನ್ನು ಸರಿದಾರಿಗೆ ಎಳೆದು ತರಲು ಶಿಕ್ಷಣವನ್ನು ಪಡೆದಿರುವ ತಂತ್ರಜ್ಞ. ಇಂಥವರ ದಳ ರಾಷ್ಟ್ರದ ಆಂತರಿಕ ರಕ್ಷಣಾ ಸೇವೆಯಲ್ಲಿ ವಹಿಸುವ ಪಾತ್ರ ಮಹತ್ತ್ವವಾದದ್ದು. ಸಾಮಾನ್ಯವಾಗಿ ಈ ದೇಶಸೇವೆ ಒಪ್ಪೊತ್ತಿನದಾದರೂ-ಎಂದರೆ ಗೃಹರಕ್ಷಕರು ಬೇರೆ ಬೇರೆ ಸ್ವಂತ ಉದ್ಯೋಗಗಳಲ್ಲಿ ರುವವರು ನಿಯಮಿತ ವೇಳೆಯಲ್ಲಿ ಗೃಹರಕ್ಷಕ ದಳದ ಶಿಕ್ಷಣಕ್ಕೆ, ಸೇವೆಗೆ ಬರುವವರು-ಗಂಡಾಂತರ ಪರಿಸ್ಥಿತಿಗಳಲ್ಲಿ ಪೂರ್ಣಾವಧಿ ಸೇವೆ ಸಲ್ಲಿಸಲು ಸಹ ಗೃಹರಕ್ಷಕರು ಬದ್ಧರು.

ಕೇಂದ್ರ ಮತ್ತು ರಾಜ್ಯಗಳ ಮಹತ್ವಪೂರ್ಣ ದಿನಗಳ ಪೆರೇಡುಗಳಲ್ಲಿ ಗೃಹರಕ್ಷಕ ದಳ ಭಾಗವಹಿಸುತ್ತದೆ. ಪೋಲಿಸ್ ಸೈನಿಕರ ಜೊತೆಗೂಡಿ ಪ್ರವಾಹಗಳ ಹಾವಳಿಗೆ ಸಿಕ್ಕಿದ ಜನರ ಪ್ರಾಣ ಆಸ್ತಿ ಇವುಗಳ ರಕ್ಷಣಾ ಕಾರ್ಯದಲ್ಲಿ ನೆರವಾಗುತ್ತದೆ. ರಾಜ್ಯ ಮತ್ತು ಕೇಂದ್ರ ಚುನಾವಣೆಗಳಲ್ಲಿ ಇದು ಸೇವೆ ಸಲ್ಲಿಸುತ್ತದೆ. ರಸ್ತೆಯಲ್ಲಿ ಜನ ಹಾಗೂ ವಾಹನ ನಿಯಂತ್ರಣ ಮಾಡಲಿಕ್ಕೂ ಗಲಭೆ ದೊಂಬಿ ಮುಂತಾದವನ್ನು ಹತ್ತಿಕ್ಕಿ ಶಾಂತಿಪಾಲಿಸಲಿಕ್ಕೂ ಇದರ ಉಪಯೋಗ ಉಂಟು. ಗೃಹರಕ್ಷಕ ದಳದ ಸೇವೆಯನ್ನು ಇಂದು ಪೋಲಿಸರ ಬದಲಾಗಿ ಅಲ್ಲದೇ ಅವರ ಸಂಖ್ಯೆ ಸಾಲದೆ ಬಂದಾಗ ಕೂಡ ಉಪಯೋಗಿಸಿಕೊಳ್ಳುವುದಿದೆ. (ಬಿ.ಎಸ್.ಎಚ್.)

**ಗೃಹವಿಜ್ಞಾನ :** ಕೌಟುಂಬಿಕ ಜೀವನಕ್ಕೆ ಸಂಬಂಧಪಟ್ಟಂತೆ ಗೃಹಿಣಿಯಾದವಳು ಗೃಹವನ್ನು ಯಾವ ರೀತಿ ಓರಣವಾಗಿಟ್ಟುಕೊಳ್ಳಬೇಕೆಂಬುದನ್ನು ಕುರಿತು ಇರುವ ವಿಜ್ಞಾನ (ಹೋಮ್ ಸೈನ್ಸ್). ಈ ವಿಜ್ಞಾನವನ್ನೀಗ ವೈಜ್ಞಾನಿಕವಾಗಿ ಪರಿಶೀಲಿಸಿ, ಕ್ರಮ ಬದ್ಧಗೊಳಿಸಿ ಶಾಲಾ ಕಾಲೇಜುಗಳಲ್ಲಿ ಮಹಿಳೆಯರಿಗೆ ಕಲಿಸಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ, ಕುಟುಂಬದ ಸದಸ್ಯರು ಸೇವಿಸುವ ಆಹಾರ ಯಾವ ಬಗೆಯದ್ದಾಗಿರಬೇಕು, ಯಾವ ಆಹಾರ ಎಷ್ಟು ಪರಿಮಾಣದಲ್ಲಿರಬೇಕು, ಸೇವಿಸುವ ಆಹಾರ ಪುಷ್ಟಿಕರವಾದದ್ದೇ ಅಲ್ಲವೆ ಮುಂತಾದ ವಿಚಾರಗಳನ್ನೊಳಗೊಂಡ ಪಾಕಶಾಸ್ತ್ರಕ್ಕೆ ಹೆಚ್ಚಿನ ಮಹತ್ವವಿದ್ದರೂ ಕುಟುಂಬ ಸದಸ್ಯರ ಇತರ ಅಗತ್ಯಗಳಾದ ಉಡುಪು, ಆಯವ್ಯಯ ಮೊದಲಾದ ವಿಷಯಗಳಿಗೂ ಗಮನ ನೀಡಲಾಗುವುದು. ಮನೆಯಲ್ಲಿ ಬೆಳೆಯುವ ಮಕ್ಕಳ ಬೌದ್ಧಿಕ ಮತ್ತು ಮಾನಸಿಕ ಬೆಳೆವಣಿಗೆಗೆ ಗೃಹವಿಜ್ಞಾನದ ಅನ್ವಯ ಬಹುಮಟ್ಟಿಗೆ ಸಹಕಾರಿ ಯಾಗುತ್ತದೆ. ಮಕ್ಕಳ ಪಾಲನೆ, ಪೋಷಣೆಗಳಿಗೆ ಗೃಹವಿಜ್ಞಾನದಲ್ಲಿ ಹೆಚ್ಚಿನ ಪ್ರಾಶಸ್ತ್ಯವಿದೆ.

ಅಮೆರಿಕದಲ್ಲಿ : 18ನೆಯ ಶತಮಾನದಲ್ಲಿ ಅಮೆರಿಕ ಸಂಯುಕ್ತಸಂಸ್ಥಾನಗಳ ಬಾಸ್ಟನ್ ಪಬ್ಲಿಕ್ ಶಾಲೆಯಲ್ಲಿ ಗೃಹವಿಜ್ಞಾನ ತರಗತಿಗಳನ್ನು ತೆರೆದು ಗೃಹವನ್ನು ಓರಣವಾಗಿಟ್ಟು ಕೊಳ್ಳುವುದರ ಬಗ್ಗೆ ಮಾಹಿತಿ ನೀಡಲಾಗುತ್ತಿತ್ತು. 1798ರ ವೇಳೆಗೆ ಶಾಲೆಯ ಉಪಾಧ್ಯಾಯಿನಿ ಯರು ಎರಡು ಮತ್ತು ಮೂರನೆಯ ತರಗತಿಯ ಹೆಣ್ಣುಮಕ್ಕಳಿಗೆ ಹೊಲಿಗೆ ಮತ್ತು ಕಸೂತಿಯನ್ನು ಕಲಿಸಲಾರಂಭಿಸಿದರು. 85 ವರ್ಷಗಳ ಅನಂತರ ಶಾಲೆಯ ಒಂದು ಭಾಗವನ್ನು ಪಾಕಶಾಲೆಯನ್ನಾಗಿ ಪರಿವರ್ತಿಸಿ ಪಾಕಶಾಸ್ತ್ರದ ವಿಷಯಗಳನ್ನು ಬೋಧಿಸ ತೊಡಗಿದರು. ಈ ಶಿಕ್ಷಣ ತೃಪ್ತಿಕರವಾಗಿ ಕಂಡುಬಂದದ್ದರಿಂದ ಶಾಲೆಯಲ್ಲಿ ಪಾಕಶಾಸ್ತ್ರಾಧ್ಯಯನಕ್ಕೆ ಒಂದು ಸ್ಥಿರವ್ಯವಸ್ಥೆಯೇ ಏರ್ಪಾಡಾಯಿತಲ್ಲದೆ ಮುಂದೆ ಪಾಕಶಾಸ್ತ್ರ ಗೃಹವಿಜ್ಞಾನದ ಒಂದು ಮುಖ್ಯ ವಿಷಯವಾಗಲು ಅವಕಾಶವಾಯಿತು.

1869ನೆಯ ಇಸವಿಯಲ್ಲಿ ಅಯೋವ ಸ್ಟೇಟ್ ಕಾಲೇಜಿನ ವಿದ್ಯಾರ್ಥಿನಿಲಯದ ಮೇಲ್ವಿಚಾರಿಕೆಯೊಬ್ಬಳು ಮೌಂಟ್ ಹೋಲ್‌ಯೋಕ್ ಪ್ಲಾನ್ ಎಂಬ ಯೋಜನೆಯನ್ನು ಜಾರಿಗೆ ತಂದಳು. ಇದರ ಪ್ರಕಾರ ಆ ಕಾಲೇಜಿನಲ್ಲಿ ಓದುತ್ತಿರುವ ಎಲ್ಲ ಹೆಣ್ಣುಮಕ್ಕಳೂ ದಿನಕ್ಕೆ ಎರಡು ಗಂಟೆಯ ಕಾಲ ಅಡುಗೆ ಮಾಡುವುದು, ಊಟ ಬಡಿಸುವುದು, ಪಾತ್ರೆ ತೊಳೆಯುವುದು ಮುಂತಾದ ಗೃಹಕೆಲಸಗಳನ್ನು ಒಬ್ಬ ಉಪಾಧ್ಯಾಯಿನಿಯ ಮೇಲ್ವಿಚಾರಣೆಯಲ್ಲಿ ಮಾಡಬೇಕಾಗಿತ್ತು. ಇದು ಕಾರ್ಯಗತವಾದ ಮೂರು ವರ್ಷಗಳಲ್ಲಿ ಅಂದರೆ, 1872 ರಲ್ಲಿ ಶಾಲಾ ಪಠ್ಯಕ್ರಮದಲ್ಲಿ ಗೃಹವಿಜ್ಞಾನವನ್ನು ಒಂದು ವಿಷಯವನ್ನಾಗಿ ಸೇರಿಸಲಾಯಿತು. ಜೂನಿಯರ್ ಕಾಲೇಜಿನ ವಿದ್ಯಾರ್ಥಿನಿಯರಿಗೆ ಗೃಹಾಡಳಿತ, ಗೃಹನಿರ್ವಹಣೆ, ಗೃಹದ ಆರ್ಥಿಕತೆ ಮುಂತಾದ ವಿಷಯಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಐದು ವರ್ಷಗಳ ಅನಂತರ ಅಡುಗೆಯ ವಿಷಯದಲ್ಲಿ ತರಬೇತಿ ಶಿಕ್ಷಣವನ್ನೂ ಜಾರಿಗೆ ತರಲಾಯಿತು. ಪಾಕಶಾಸ್ತ್ರದಲ್ಲಿ ನೀಡುತ್ತಿದ್ದ ಶಿಕ್ಷಣ ವಿದ್ಯಾರ್ಥಿನಿಯರನ್ನಲ್ಲದೆ ಇತರರನ್ನೂ ತನ್ನ ಕಡೆ ಸೆಳೆಯಿತು. ಅಂತೆಯೇ ವಿದ್ಯಾರ್ಥಿನಿಯರಿಗಾಗಿ ಮೀಸಲಾದ ಈ ಶಾಲೆಯಲ್ಲಿ ಬೇರೆಯವರಿಗೂ ಶಿಕ್ಷಣ ನೀಡಲು ಒಂದು ಯೋಜನೆ ತಯಾರಾಯಿತು. ಹೊಲಿಗೆ ಮತ್ತು ಬಟ್ಟೆ ಚಲುವೆ ಮಾಡುವ ವಿಷಯಗಳ ಬಗ್ಗೆ ಜನಗಳ ಆಸಕ್ತಿ ಅಷ್ಟಾಗಿ ಇರಲಿಲ್ಲವಾದ ಕಾರಣ ಬಹುಬೇಗ ಆ ವಿಷಯಗಳ ಮೇಲಿನ ಬೋಧನೆ ರದ್ದಾಯಿತು.

ಹೊಲಿಗೆ ತರಗತಿಯನ್ನು ನಡೆಸುತ್ತಿದ್ದ ಕ್ಯಾನ್ಸಸ್‌ನ ಕೃಷಿ ಕಾಲೇಜು ಗೃಹವಿಜ್ಞಾನವನ್ನೂ ಬೋಧಿಸಲು ಪ್ರಾರಂಭಮಾಡಿತು (1873). ಆಹಾರದ ಪ್ರಾಮುಖ್ಯ ಮತ್ತು ಅಡುಗೆಯ ಶಾಸ್ತ್ರೀಯ ಕ್ರಮವಿಧಿಗಳ ಬಗ್ಗೆ ಅಲ್ಲಿ ಆಗಾಗ ಪರಿಣತರಿಂದ ಉಪನ್ಯಾಸಗಳನ್ನು ನಡೆಸಲಾ ಗುತ್ತಿತ್ತು. ಅಡುಗೆಗೆ ಸಂಬಂಧಿಸಿದಂತೆ ಪ್ರಾಯೋಗಿಕ ಶಿಕ್ಷಣ ಪ್ರಾರಂಭವಾದ್ದು 1877ರಲ್ಲಿ.

ಇಲಿನಾಯ್ ವಿಶ್ವವಿದ್ಯಾಲಯ 1874ರಲ್ಲಿ ಒಂದು ಗೃಹವಿಜ್ಞಾನ ಮತ್ತು ಕಲಾಶಾಲೆಯನ್ನು ತೆರೆಯಿತು. ತಾಯಿಯಾಗಿ ಗೃಹಿಣಿ ನಿರ್ವಹಿಸಬೇಕಾದ ಕರ್ತವ್ಯ ಮತ್ತು ಗೃಹನಿರ್ವಹಣೆಗಳ ಬಗೆಗೆ ಆ ಶಾಲೆಯಲ್ಲಿ ಕಲಿಸಲಾಗುತ್ತಿತ್ತಲ್ಲದೆ ರಸಾಯನ ವಿಜ್ಞಾನ, ಜೀವವಿಜ್ಞಾನ, ಮಾನವವಿಜ್ಞಾನ, ಭೌತವಿಜ್ಞಾನ, ಕಲೆ, ಭಾಷಾವಿಜ್ಞಾನ, ಮನಃವಿಜ್ಞಾನ, ಶರೀರವಿಜ್ಞಾನ ಮುಂತಾದ ವಿಷಯಗಳ ಬೋಧನೆಯೂ ನಡೆಯುತ್ತಿತ್ತು. ಇವುಗಳ ಜೊತೆಗೆ ಗೃಹಶಿಲ್ಪಶಾಸ್ತ್ರ, ಗೃಹನೈರ್ಮಲ್ಯ, ಆಹಾರವಸ್ತುಗಳ ಆಯ್ಕೆ ಮತ್ತು ಆಹಾರವನ್ನು ತಯಾರುಮಾಡುವ ವಿಧಾನಗಳು, ರೋಗಿಗೆ ಬೇಕಾದ ಆಹಾರ ತಯಾರಿಕೆ, ಆಹಾರದ ಯುಕ್ತ ಉಪಯೋಗ ಮುಂತಾದ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಯಿತು (1900). ಅದೇ ವರ್ಷ ಹೋಮ್ ಎಕನಾಮಿಕ್ಸ್ ಕ್ಲಬ್ ಎಂಬ ಸಂಘ ರೂಪಿತಗೊಂಡಿತಲ್ಲದೆ ಒಂದು ಪ್ರಾಯೋಗಿಕ ವಸತಿಗೃಹವೂ ಪ್ರಾರಂಭವಾಯಿತು.

ವಿಶ್ವವಿದ್ಯಾಲಯದ ಮಟ್ಟದಲ್ಲಿ ಗೃಹವಿಜ್ಞಾನವನ್ನು ಅಧ್ಯಯನ ವಿಷಯವನ್ನಾಗಿ ಮಾಡಿದ ತರುಣದಲ್ಲಿಯೇ ಜೂಲಿಯೆಟ್ ಕಾರ್ಸನ್ ಎಂಬ ಮಹಿಳೆಯು ಮಹಿಳಾ ಉಚಿತ ತರಬೇತಿ ಯೋಜನೆಯ ಅಂಗವಾಗಿ, ವಯಸ್ಕರಿಗೆ ನ್ಯೂಯಾರ್ಕ್ ನಗರದಲ್ಲಿ ಪಾಕಶಾಸ್ತ್ರದಲ್ಲಿ ತರಬೇತಿ ಕೊಡಲು ಪ್ರಾರಂಭಿಸಿದಳು (1874). ಅನಂತರ ನ್ಯೂಯಾರ್ಕ್ ಕುಕಿಂಗ್ ಸ್ಕೂಲ್ ಎಂಬ ಪ್ರಾಯೋಗಿಕ ಅಡುಗೆಶಾಲೆಯನ್ನು ತನ್ನ ಮನೆಯಲ್ಲಿಯೇ ತೆರೆದಳು. ಉದ್ಯೋಗಸ್ಥ ತಂದೆತಾಯಿಯರಿಗೆ ಮತ್ತು ನೆಮ್ಮದಿಯಿಂದ ಜೀವನ ನಡೆಸಬಲ್ಲವರ ಮಕ್ಕಳಿಗೆ ಶಿಕ್ಷಣ, ಹೆಂಗಸರು ಮತ್ತು ಗಂಡಸರು ಪ್ರಧಾನ ಅಡುಗೆಯವರಾಗಿ ದೊಡ್ಡ ಭೋಜನಶಾಲೆಗಳಲ್ಲಿ ಮತ್ತು ಉಪಾಹಾರಗೃಹಗಳಲ್ಲಿ ಉದ್ಯೋಗ ದೊರಕಿಸಿಕೊಳ್ಳಲು ಬೇಕಾದ ತರಬೇತಿ – ಇವಕ್ಕೆ ಆ ಶಾಲೆಯಲ್ಲಿ ಅವಕಾಶವಿತ್ತಲ್ಲದೆ ಪಾಕಶಾಸ್ತ್ರದ ಮೂಲ ಶಿಕ್ಷಣವನ್ನು ತಾವು ಕಲಿತು ಇತರರಿಗೆ ಕಲಿಸಿಕೊಡಲು ಆಸಕ್ತಿ ಇರುವಂಥವರಿಗೂ ಪ್ರವೇಶದ ಅವಕಾಶವಿತ್ತು.

ಅಡುಗೆಯಲ್ಲಿ ಉಪಯೋಗಿಸಲಾಗುವ ತರಕಾರಿಗಳನ್ನು ಸಾಧ್ಯವಾದಮಟ್ಟಿಗೂ ಮನೆಯ ಹಿತ್ತಲಲ್ಲೇ ಬೆಳೆಸಿ, ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದರೊಂದಿಗೆ ಆರೋಗ್ಯ ದೃಷ್ಟಿಯಿಂದ ಮನೆ ಸುತ್ತಮುತ್ತಲ ವಾತಾವರಣವನ್ನು ಹಿತವಾಗಿಸುವಂಥ ಕೈತೋಟದ (ಕಿಚನ್ ಗಾರ್ಡನ್) ಅಗತ್ಯವನ್ನು ಐಮಿಲಿ ಹನ್‌ಬೆಂಗ್‌ಟನ್ ಎಂಬುವಳು ತೋರಿಸಿದಳು. ಅವಳ ಪ್ರಯತ್ನದಿಂದ ಕಿಚನ್ ಗಾರ್ಡನ್ ಅಸೋಸಿಯೇಷನ್ ಆಫ್ ನ್ಯೂಯಾರ್ಕ್, ಅನಂತರ ಇಂಡಸ್ಟ್ರಿಯಲ್ ಅಸೋಸಿಯೇಷನ್ – ಈ ಸಂಘಗಳು ಸ್ಥಾಪನೆಯಾದುವು. ಟೀಚರ್ಸ್ ಕಾಲೇಜ್ ಆಫ್ ಕೊಲಂಬಿಯದ ಮೇಲೆ ಕಿಚನ್ ಗಾರ್ಡನ್ ಚಳವಳಿಯಿಂದಾದ ಪರಿಣಾಮ ಅಪಾರ. ನ್ಯೂ ಇಂಗ್ಲೆಂಡ್ ಕಿಚನ್ ಸಂಸ್ಥೆಯಲ್ಲಿ ತಯಾರಾದ ಆಹಾರ ಪದಾರ್ಥಗಳು ಬಾಸ್ಟನ್ ಪಬ್ಲಿಕ್ ಶಾಲೆಯ ಮಕ್ಕಳಿಗೆ ದೊರಕುವಂತಾದದ್ದು ಈ ಚಳವಳಿಯ ಪ್ರಭಾವದಿಂದಲೇ.

ಹದಿನೆಂಟನೆಯ ಶತಮಾನದ ಕೊನೆಯ ದಶಕ ಮತ್ತು ಹತ್ತೊಂಬತ್ತನೆಯ ಪ್ರಾರಂಭದಲ್ಲಿ ಅಮೆರಿಕದ ಜನಜೀವನದಲ್ಲಿ ಅನೇಕ ಹೊಸ ಮಾರ್ಪಾಡುಗಳುಂಟಾದುವು. ಸ್ತ್ರೀಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಮಹಿಳೆಯರು ಪ್ರತ್ಯೇಕ ಮಹಿಳಾಸಂಘಗಳನ್ನು ರಚಿಸಿಕೊಂಡು ಸಮಾಜದಲ್ಲಿ ತಮ್ಮ ಸ್ಥಾನಮಾನಗಳನ್ನು ಕುರಿತಂತೆ ಹೋರಾಟ ನಡೆಸಿದರು. ಆಗ ಪ್ರಾರಂಭಗೊಂಡ ಸಂಘಗಳಲ್ಲಿ ಗೃಹಾಡಳಿತ, ಗೃಹಾಲಂಕರಣ ಮುಂತಾದ ವಿಷಯಗಳನ್ನು ಕುರಿತು ವಿಚಾರವಿನಿಮಯಗಳು ನಡೆದವು. ಅದರಿಂದಾಗಿ ಗೃಹವಿಜ್ಞಾನ ವಿಷಯದಲ್ಲಿ ಆಸಕ್ತಿ ಇರುವಂಥ ಹನ್ನೊಂದು ಮಂದಿ, ನ್ಯೂಯಾರ್ಕ್ ಸ್ಟೇಟ್ ಲೇಕ್ ಪ್ಲಾಸಿಡ್ ಕ್ಲಬ್ ಎಂಬ ಸಂಘದಲ್ಲಿ ಗೃಹವಿಜ್ಞಾನ ಸಮ್ಮೇಳನವೊಂದನ್ನು ನಡೆಸಲು ತೀರ್ಮಾನಿಸಿದರು. ಸಮ್ಮೇಳನದಲ್ಲಿ ಆಧುನಿಕ ಸಮಾಜದಲ್ಲಿ ಗೃಹವಿಜ್ಞಾನದ ಪಾತ್ರವನ್ನು ಕುರಿತಂತೆ ಅನೇಕ ಉಪಯುಕ್ತ ಸಲಹೆಗಳು ಬಂದವು. ಲೇಕ್ ಪ್ಲಾಸಿಡ್ ಗೃಹವಿಜ್ಞಾನ ಸಮ್ಮೇಳನದ ಫಲವಾಗಿ ಗೃಹವಿಜ್ಞಾನದ ಕ್ರಮಬದ್ಧ ಅಧ್ಯಯನ ಪ್ರಾರಂಭವಾಯಿತು. ಸಮ್ಮೇಳನದ ಪ್ರಥಮ ಅಧ್ಯಕ್ಷೆಯಾಗಿದ್ದ ಎಲೆನ್ ರಿಚರ್ಡ್ಸ್ ಎಂಬುವಳು ಸೂಚಿಸಿದ ಹೋಂ ಎಕನಾಮಿಕ್ಸ್ ಎಂಬ ಶಬ್ದ ಸರ್ವಜನಪ್ರಿಯವಾಗಿ ಮನೆಯ ಸದಸ್ಯರ ಕ್ಷೇಮಾಭ್ಯುದಯಕ್ಕೆ ಮತ್ತು ಗೃಹಾಡಳಿತಕ್ಕೆ ಸಂಬಂಧಿಸಿದ ಗೃಹವಿಜ್ಞಾನದ ಅಭ್ಯಾಸಕ್ಕೆ ಪೋಷಕವಾಯಿತು. 1903ರಲ್ಲಿ ಸೂಚಿತವಾದ ಹೋಂ ಎಕನಾಮಿಕ್ಸ್ ಎಂಬ ವಿಷಯವನ್ನು ಅಮೆರಿಕದ ಸಂಯುಕ್ತ ಸಂಸ್ಥಾನದ ಎಲ್ಲ ಮುಖ್ಯ ವಿಶ್ವವಿದ್ಯಾಲಯಗಳಲ್ಲೂ ಸ್ನಾತಕೋತ್ತರ ತರಗತಿಗಳಲ್ಲೂ ಈಗ ಬೋಧಿಸಲಾಗುತ್ತಿದೆ.

ಮೆಲ್ವಿಲ್ ಡ್ಯೂಯಿ ದಂಪತಿಗಳು ಅಮೆರಿಕದ ಪುಸ್ತಕ ಭಂಡಾರಗಳಲ್ಲಿ ಕೆಲಸಮಾಡಿ ಗಳಿಸಿದ್ದ ಅನುಭವಗಳನ್ನು ಲೇಕ್ ಪ್ಲಾಸಿಡ್ ಗೃಹವಿಜ್ಞಾನ ಸಮ್ಮೇಳನದಲ್ಲಿ ತಿಳಿಸಿದ್ದರು. ಅವರು ಗೃಹಅರ್ಥಶಾಸ್ತ್ರದ ನಾನಾ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಸಂಗ್ರಹಿಸಿ ಅವನ್ನು ವರ್ಗೀಕರಣ ಮಾಡುವ ವಿಧಾನವೊಂದನ್ನು ಬೆಳೆಸಿದರು. 1850 ರಿಂದ ಇಂಗ್ಲಿಷ್‌ನಲ್ಲಿ ಸಿದ್ಧವಾದ 1500 ಪುಸ್ತಕಗಳ ಪಟ್ಟಿಯೊಂದನ್ನು ಶ್ರೀಮತಿ ಡ್ಯೂಯಿ ತಯಾರಿಸಿದಳು. ಶಿಶುಸಂರಕ್ಷಣೆ, ಅಡುಗೆ ಮಾಡುವ ವಿಧಾನ, ನೀತಿಶಾಸ್ತ್ರ, ಸಮಾಜಮರ್ಯಾದೆ, ಬೇಸಾಯ, ತೋಟಗಾರಿಕೆ, ಆಹಾರ, ಗೃಹಕೈಗಾರಿಕೆ, ಗೃಹಜೀವನ, ಕುಟುಂಬ ಕಲೆ, ಗೃಹಕಾರ್ಯನಿರ್ವಹಣೆ, ಆರೋಗ್ಯವಿಜ್ಞಾನ, ಶರೀರವಿಜ್ಞಾನ, ಭೌತವಿಜ್ಞಾನ, ರಾಸಾಯನವಿಜ್ಞಾನ, ಶುಚಿತ್ವ, ಆಶ್ರಯ ಮತ್ತು ಸಮಾಜಶಾಸ್ತ್ರ – ಹೀಗೆ ಆ ಪುಸ್ತಕಗಳ ವರ್ಗೀಕರಣ ಸಾಗಿತ್ತು. ಇವೇ ಮುಂದೆ ಗೃಹವಿಜ್ಞಾನಕ್ಕೆ ಸಂಬಂಧಿಸಿದ ಅಭ್ಯಾಸ ವಿಷಯಗಳಾದವು.

ಸಾರ್ವಜನಿಕ ವಿದ್ಯಾಶಾಲೆಗಳಲ್ಲಿ ಗೃಹ ಅರ್ಥಶಾಸ್ತ್ರದ ಅವಶ್ಯಕತೆ, ಅದರ ಗುರಿ ಮತ್ತು ವ್ಯಾಪ್ತಿಗಳನ್ನು ಕುರಿತಂತೆ ಮತ್ತು ಶಾಲೆಗಳಲ್ಲಿ ಅದನ್ನು ಬೋಧಿಸುವ ವಿಧಾನ, ತಗಲುವ ವೆಚ್ಚಗಳ ವಿಷಯವಾಗಿ ಲೇಕ್ ಪ್ಲಾಸಿಡ್ ಸಮ್ಮೇಳನದಲ್ಲಿ ದೀರ್ಘಚರ್ಚೆ ನಡೆಯಿತು. ಯಾವ ತರಗತಿಗಳಿಗೆ ಗೃಹ ಅರ್ಥಶಾಸ್ತ್ರದ ವಿಷಯದ ಬೋಧನೆ ಅಗತ್ಯ ಎಂಬುದರ ಬಗ್ಗೆಯೂ ಚರ್ಚೆ ನಡೆಯಿತು. ಈ ವಿಷಯವನ್ನು ಬೋಧಿಸುವುದರಲ್ಲಿ ಪ್ರೌಢಶಾಲೆಗಳಲ್ಲಿ ಇರುವ ಅನುಕೂಲಗಳನ್ನು ಪರಾಮರ್ಶಿಸಲಾಯಿತು. ಲೇಕ್ ಪ್ಲಾಸಿಡ್ ಸಮ್ಮೇಳನ ಮಾಡಿದ ಕೆಲವು ಶಿಫಾರಸ್ಸುಗಳು ಹೀಗಿವೆ : 1. ವಿದ್ಯಾರ್ಥಿಗಳಲ್ಲಿ ಪರೀಕ್ಷಿಸುವ ಮನೋಭಾವ ಬೆಳೆಸುವುದು ಗೃಹಅರ್ಥಶಾಸ್ತ್ರದ ವಿಷಯಗಳನ್ನು ಬೋಧಿಸುವುದರ ಗುರಿ. 2. ಕಾಲೇಜುಗಳಲ್ಲಿ ಗೃಹಅರ್ಥಶಾಸ್ತ್ರದ ವಿದ್ಯಾಭ್ಯಾಸ ಕ್ರಮದಲ್ಲಿ ಆಹಾರ ತಯಾರಿಕೆ, ಬಟ್ಟೆ ಹೊಲಿಯುವಿಕೆ ಮತ್ತು ನೇಯ್ಗೆ ಮುಂತಾದ ವಿಷಯದಲ್ಲಿ ಪ್ರಾಯೋಗಿಕ ಶಿಕ್ಷಣ ಕೊಡುವುದು. 3. ಕಾಲೇಜಿನ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಗೃಹ ಅರ್ಥಶಾಸ್ತ್ರದ ಸಾಮಾನ್ಯ ಶಿಕ್ಷಣ ಕೊಡುವುದು. 4. ಯಾವ ಕಾಲೇಜಿನಲ್ಲಿ ಗೃಹಅರ್ಥಶಾಸ್ತ್ರಕ್ಕೆ ಪ್ರತ್ಯೇಕ ಶಾಖೆಗಳಿಲ್ಲವೋ ಆ ಶಾಲೆಗಳಲ್ಲಿ ಗೃಹ ಮತ್ತು ಗೃಹಜೀವನಕ್ಕೆ ಸಂಬಂಧಪಟ್ಟ ವಿಷಯಗಳನ್ನು ರಸಾಯನವಿಜ್ಞಾನ, ಅರ್ಥಶಾಸ್ತ್ರ, ಸಮಾಜವಿಜ್ಞಾನ ಮತ್ತು ಕಲೆ ಈ ಶಾಖೆಗಳ ಮೂಲಕ ಬೋಧಿಸಲು ಅನುಕೂಲ ಮಾಡಿಕೊಡುವುದು.

ಲೇಕ್ ಪ್ಲಾಸಿಡ್ ಸಮ್ಮೇಳನ ಶಿಫಾರಸ್ಸುಗಳನ್ನು ಅಂಗೀಕರಿಸಿ ಕೆಲವು ಶಾಲೆಗಳು ಮತ್ತು ಕಾಲೇಜುಗಳು ಗೃಹ ವಿಜ್ಞಾನಕ್ಕೆ ಸಂಬಂಧಿಸಿದಂತೆ ಗೃಹ ಅರ್ಥಶಾಸ್ತ್ರದಲ್ಲಿ ಶಿಕ್ಷಣವನ್ನು ಕೊಟ್ಟವು. ತರಬೇತಿ ತರಗತಿಗಳ ಅವಧಿ ಒಂದರಿಂದ ನಾಲ್ಕು ವರ್ಷಗಳವರೆಗೂ ಬೋಧನೆಯ ಶಿಕ್ಷಣದ ಅವಧಿ ಹತ್ತು ವಾರಗಳಿಂದ ಎರಡು ವರ್ಷಗಳವರೆಗೂ ಇತ್ತು.

ವಯಸ್ಕರಿಗೂ ಗೃಹ ಅರ್ಥಶಾಸ್ತ್ರದ ಪರಿಚಯವನ್ನು ಮಾಡಿಕೊಡಬೇಕೆಂಬುದು ಲೇಕ್ ಪ್ಲಾಸಿಡ್ ಸಮ್ಮೇಳನದ ಉದ್ದೇಶವಾಗಿತ್ತು. ಅದರಂತೆ ಸಂಚಾರಿ ಗ್ರಂಥಾಲಯಗಳಿಂದ ನ್ಯೂಯಾರ್ಕ್ ರಾಜ್ಯದ ಮನೆಗಳಿಗೆ ಪುಸ್ತಕಗಳು ಎರವಲಾಗಿ ಬರಹತ್ತಿದವು. ಬಾಸ್ಟನ್ ಶಾಲೆಯಲ್ಲಿ ಗೃಹ ಅರ್ಥಶಾಸ್ತ್ರವನ್ನು ಮಕ್ಕಳಿಗೆ ಬೋಧಿಸಲಾಯಿತಲ್ಲದೆ ಒಂದು ಸಂಘವೂ ಸ್ಥಾಪನೆಯಾಯಿತು. ಆ ಸಂಘ ಸಣ್ಣ ವಯಸ್ಸಿನ ಮಕ್ಕಳಿಗೆ ಸೂಕ್ಷ್ಮಪ್ರಮಾಣದ ಉಪಕರಣಗಳಿಂದ ಸಾಮಾನ್ಯ ಆಹಾರವನ್ನು ತಯಾರಿಸುವುದು, ಊಟ ಬಡಿಸುವ ಉಪಕರಣಗಳನ್ನು ಅಚ್ಚುಗಟ್ಟಾಗಿ ಇಡುವುದು, ಊಟ ಬಡಿಸುವುದು, ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುವುದು, ಕೆಲಸದ ಅನಂತರ ಉಪಕರಣಗಳನ್ನು ಶುಚಿಮಾಡುವುದು, ಗೃಹ ಕಾರ್ಯನಿರ್ವಹಣೆ, ಗೃಹವನ್ನು ಪೀಠೋಪಕರಣಗಳಿಂದ ಸಜ್ಜುಗೊಳಿಸುವುದು, ಅಲಂಕರಿಸುವುದು – ಮುಂತಾದವನ್ನು ಹೇಳಿಕೊಡುವ ಆವಶ್ಯಕತೆಯನ್ನು ಎತ್ತಿ ತೋರಿಸಿತು. ಅಲ್ಲದೆ ಮಕ್ಕಳು ಶುಚಿಯಾಗಿರಲು ಬೇಕಾದ ಎಲ್ಲ ಕ್ರಮಗಳ ಬಗ್ಗೆಯೂ ಅರಿವು ಕೊಡುವ ಕಿಂಡರ್‌ಗಾರ್ಟನ್ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತಂದಿತು.

ಮನೆಯ ಒಳಾಂಗಣ ಮತ್ತು ಹೊರಾಂಗಣವನ್ನು ಚೊಕ್ಕಟವಾಗಿಟ್ಟುಕೊಳ್ಳುವುದರ ಬಗ್ಗೆ ಅನುಸರಿಸಬೇಕಾದ ವಿಧಾನಗಳು, ಒಗೆದ ಬಟ್ಟೆಗಳನ್ನು ಜೋಪಾನವಾಗಿಡುವುದು ಮುಂತಾದ ವಿಷಯಗಳ ಮೇಲೆ ಆಗಾಗ ಪ್ರದರ್ಶನಗಳು ಏರ್ಪಾಡಾಗುತ್ತಿದ್ದುವು.

ಹೀಗೆ ಅಲ್ಪ ಪರಿಮಾಣದಲ್ಲಿ ರೂಪುಗೊಂಡ ಗೃಹವಿಜ್ಞಾನ ಕ್ರಮೇಣ ಹೆಚ್ಚು ವ್ಯಾಪಕವಾಗಿ ಬೆಳೆದು ಬಹು ವಿಷಯ ಪರಿಪ್ಲುತವೂ ಶಾಸ್ತ್ರೀಯವೂ ಆಗಿ ಮಾರ್ಪಟ್ಟಿತು.

ಭಾರತದಲ್ಲಿ : ಕುಟುಂಬದಲ್ಲಿರುವ ಹೆಣ್ಣುಮಕ್ಕಳು ತಾವು ಯಾವ ರೀತಿಯಲ್ಲಿ ಮನೆಯನ್ನು ಶುಭ್ರವಾಗಿಟ್ಟುಕೊಂಡು, ಚಿಕ್ಕಮಕ್ಕಳ ವಿದ್ಯಾಭ್ಯಾಸ, ಅವರ ಆಹಾರ ಮುಂತಾದ ವಿಚಾರಗಳಿಗೆ ಗಮನ ಕೊಡಬೇಕು ಎಂಬುದರ ಬಗ್ಗೆ ಅರಿವು ಕೊಡುವಂಥ ಮಹಿಳಾ ಸಮಾಜಗಳು ಈಗ ಭಾರತದಲ್ಲಿ ಹೇರಳವಾಗಿವೆ. ಹೊಲಿಗೆ, ಕಸೂತಿ, ಪಾಕಶಾಸ್ತ್ರ, ಗೃಹಾಲಂಕರಣ, ಮಕ್ಕಳ ಪೋಷಣೆ ಮುಂತಾದ ವಿಷಯಗಳಲ್ಲಿ ಇವು ತರಬೇತಿ ನೀಡುತ್ತವೆ. ಈಚೆಗೆ ಗೃಹವಿಜ್ಞಾನ ಬೋಧನೆ ಭಾರತದ ಶಾಲಾ ಕಾಲೇಜುಗಳ ಪಠ್ಯಕ್ರಮದಲ್ಲಿ ಸೇರಿಹೋಗಿ, ಈ ವಿಷಯದಲ್ಲಿ ಪ್ರೌಢ, ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳು ನಡೆಯುತ್ತಿವೆ.

ಭಾರತದಲ್ಲಿ ನೀಡಲಾಗುತ್ತಿರುವ ಗೃಹವಿಜ್ಞಾನದ ಶಿಕ್ಷಣದಲ್ಲಿ ಆಹಾರ ಮತ್ತು ಪುಷ್ಟಿ, ಬಟ್ಟೆ ಮತ್ತು ಉಡುಪು, ಮನೆಗೆಲಸದ ನಿರ್ವಹಣೆ, ಕುಟುಂಬದ ಸದಸ್ಯರ ಆರೋಗ್ಯ, ಚಿಕ್ಕಮಕ್ಕಳ ಬೆಳವಣಿಗೆ ಮತ್ತು ಮಾನವಸಂಬಂಧ ವಿಷಯಗಳು ಮುಖ್ಯವಾಗಿ ಸೇರಿವೆ. ಇವುಗಳ ಸೂಕ್ಷ್ಮ ಪರಿಚಯವನ್ನು ಇಲ್ಲಿ ಕೊಟ್ಟಿದೆ.

ಆಹಾರ ಮತ್ತು ಪುಷ್ಟಿ : ರಾಷ್ಟ್ರೀಯ ಆಹಾರ ಸಮಸ್ಯೆ, ಆಹಾರ ಸಮಸ್ಯೆಯಿಂದ ರಾಷ್ಟ್ರದ ಮೇಲೆ ಆಗುವ ಪರಿಣಾಮಗಳು, ಆಹಾರ ವಿಷಯವಾಗಿ ವಿಜ್ಞಾನದಿಂದ ಕಂಡುಹಿಡಿಯಲ್ಪಟ್ಟ ವಾಸ್ತವಾಂಶ, ದೇಹದ ಬೆಳವಣಿಗೆಗೆ ಮತ್ತು ದೇಹದ ಭಾಗಗಳ ಕಾರ್ಯಚಟುವಟಿಕೆಗೆ ಬೇಕಾದ ಪೌಷ್ಟಿಕ ಆಹಾರ, ಬೆಳವಣಿಗೆಯ ನಾನಾ ಹಂತಗಳಲ್ಲಿ ದೇಹಕ್ಕೆ ಬೇಕಾಗುವ ಆಹಾರ, ಪೌಷ್ಟಿಕ ಆಹಾರದ ಕೊರತೆಯಿಂದುಂಟಾಗುವ ರೋಗಗಳು ಮತ್ತು ಅವನ್ನು ತಡೆಗಟ್ಟುವ ರೀತಿ, ಸರಿಯಾದ ತಯಾರಿಕೆಯಿಂದ ಆಹಾರದಲ್ಲಿರುವ ಆಹಾರಾಂಶಗಳ ಗುಣ, ರುಚಿ ಮತ್ತು ಸುವಾಸನೆಗಳನ್ನು ಕಾಪಾಡುವುದು, ಕಡಿಮೆ ವೆಚ್ಚದಲ್ಲಿ ಒಳ್ಳೆಯ ಆಹಾರ ಪದಾರ್ಥಗಳನ್ನು ಕೊಳ್ಳುವುದು, ಆಹಾರ ಕೆಡದಂತೆ ರಕ್ಷಿಸುವುದು, ಹಿತಮಿತವಾದ ಆಹಾರ ಸೇವನೆ – ಮುಂತಾದ ವಿಷಯಗಳ ಅಧ್ಯಯನಕ್ಕೆ ಈ ವಿಭಾಗದಲ್ಲಿ ಅವಕಾಶವಿದೆ.

ಬಟ್ಟೆ ಮತ್ತು ಉಡುಪು : ಉಡುಪಿನ ತಯಾರಿಕೆ ಮತ್ತು ಬಟ್ಟೆಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುವ ವಿಧಾನ, ಉಡುಪುಗಳಿಗೆ ತಗಲುವ ವೆಚ್ಚ, ಬಟ್ಟೆಗಳ ಮೇಲೆ ವಿವಿಧ ರಸಾಯನಿಕ ವಸ್ತುಗಳು ಹೇಗೆ ವರ್ತಿಸುತ್ತವೆಂಬ ವಿಷಯ, ವಿವಿಧ ನೇಯ್ಗೆಗಳು, ಬಟ್ಟೆಯ ಗುಣ, ಗಾಢತೆ, ಕುಗ್ಗುವಿಕೆ, ಬಾಳಿಕೆ, ರೇಷ್ಮೆ, ವುಲ್ಲನ್,

ಹತ್ತಿ, ಲಿನನ್ ಮುಂತಾದವುಗಳಿಂದ ತಯಾರಾದ ಉಡುಪಿನ ಸ್ವಭಾವ, ಕೃತಕ ಬಟ್ಟೆಗಳಾದ ರೇಯಾನ್, ನೈಲಾನ್ ಮುಂತಾದವುಗಳ ಸ್ವಭಾವ – ಇವನ್ನು ಕುರಿತ ಅಧ್ಯಯನಕ್ಕೆ ಇಲ್ಲಿ ಅವಕಾಶವಿದೆ. ಬಟ್ಟೆಯನ್ನು ಕೊಳ್ಳುವಾಗ ಮತ್ತು ಉಡುಪುಗಳನ್ನು ತಯಾರು ಮಾಡುವಾಗ ಸಂಸಾರದ ಸಂಪಾದನೆ, ತೊಡುವವರ ವಯಸ್ಸು, ಕೆಲಸ ಮತ್ತು ಸಮಯಕ್ಕೆ ತಕ್ಕ ಕೊಡುಗೆ, ವಿವಿಧ ಬಣ್ಣಗಳು, ಚಿತ್ರಗಳು, ಉಡುಪುಗಳನ್ನು ಸ್ವತಃ ತಯಾರಿಸುವುದರಲ್ಲಿ ಇರುವ ಅನುಕೂಲಗಳು, ಉಡುಪಿನಿಂದ ರಾಷ್ಟ್ರೀಯ ಗುಣಗಳನ್ನು ಎತ್ತಿತೋರುವ ಚಾರಿತ್ರಿಕ ಹಿನ್ನೆಲೆ, ಬಟ್ಟೆಗಳನ್ನು ಮಡಿ ಮಾಡುವ ವಿಧಾನ, ಹರಿದಿರುವ ಉಡುಪುಗಳನ್ನು ರಿಪೇರಿ ಮಾಡುವ ರೀತಿ, ಉಡುಪುಗಳನ್ನು ಜೋಪಾನ ಮಾಡುವ ಬಗೆ – ಮುಂತಾದವುಗಳ ಶಾಸ್ತ್ರೀಯ ಅಭ್ಯಾಸ ಇಲ್ಲಿ ಸಾಗುತ್ತದೆ.

ಗೃಹ ಮತ್ತು ಗೃಹಾಡಳಿತ : ಗೃಹಸ್ಥನಾದವನ ಅಗತ್ಯಗಳೇನು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಅನುಗುಣವಾದ ರೀತಿಯಲ್ಲಿ ಗೃಹವನ್ನು ಅಣಿಗೊಳಿಸಿ ಅವನ ಬೌದ್ಧಿಕ ಹಾಗೂ ಮಾನಸಿಕ ಶಾಂತಿಯನ್ನು ಕಾಪಾಡಿಕೊಂಡು ಬರಲು ಪೋಷಕವಾಗುವಂಥ ಗೃಹಕೃತ್ಯಗಳನ್ನು ಹೇಗೆ ನಡೆಸಬೇಕು ಎಂಬ ವಿಚಾರದಲ್ಲಿ ಶಿಕ್ಷಣವೀಯಲಾಗುತ್ತದೆ. ಮನೆಯೊಡೆಯನ ಸಂಪಾದನೆ, ಜೀವನ ನಿರ್ವಹಣೆಯ ಖರ್ಚು – ಇವೆರಡನ್ನೂ ಸರಿದೂಗಿಸುವ ಜಾಣ್ಮೆ, ಸಂಪಾದಿಸುವ ಹಣದಲ್ಲಿ ಮಕ್ಕಳ ಭವಿಷ್ಯಕ್ಕೆ ಹಣವನ್ನು ಕೂಡಿಟ್ಟು ಚೊಕ್ಕ ಸಂಸಾರ ನಡೆಸುವ ರೀತಿ, ಗೃಹಕೃತ್ಯದ ಕೆಲಸಗಳನ್ನು ಸುಗಮ ಮಾಡಿಕೊಳ್ಳುವಿಕೆ, ಆಧುನಿಕ ಗೃಹೋಪಕರಣಗಳ ಬಳಕೆ – ಈ ವಿಚಾರಗಳು ಇಲ್ಲಿ ಬರುತ್ತವೆ.

ಆರೋಗ್ಯ : ಕುಟುಂಬದ ಸದಸ್ಯರ ಆರೋಗ್ಯವನ್ನು ಕಾಪಾಡಿಕೊಂಡು ಬರುವ ವಿಚಾರದಲ್ಲಿ ಗೃಹನೈರ್ಮಲ್ಯ, ದೇಹಾರೋಗ್ಯ, ರೋಗಬರದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು, ದೊರೆಯುವ ಉಚಿತ ವೈದ್ಯಕೀಯ ಸೇವೆಯನ್ನು ಹಿಂಜರಿಯದೆ ಪಡೆದುಕೊಳ್ಳುವುದು – ಮುಂತಾದವನ್ನು ಇಲ್ಲಿ ತಿಳಿಸಿಕೊಡಲಾಗುತ್ತದೆ.

ಚಿಕ್ಕ ಮಕ್ಕಳ ಬೆಳವಣಿಗೆ : ಮಕ್ಕಳ ದೈಹಿಕ ಹಾಗೂ ಏಳಿಗೆಗೆ ಯಾವ ಅಂಶಗಳು ಪೋಷಕವಾಗುತ್ತವೆ ಎಂಬುದನ್ನು ಇಲ್ಲಿ ಹೇಳಿಕೊಡಲಾಗುತ್ತದೆ. ಬೆಳೆವ ಮಕ್ಕಳಲ್ಲಿ ಮೂಡುವ ವಿಚಿತ್ರ ಸಂದೇಹಗಳು, ಅವಕ್ಕೆ ಒದಗಿಸಬೇಕಾದ ಪರಿಹಾರಗಳು ಇವೆಲ್ಲದರ ಬಗ್ಗೆಯೂ ವಿವರ ನೀಡಲಾಗುತ್ತದೆ. ಸಣ್ಣ ಮಕ್ಕಳ ಅಗತ್ಯಗಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಅವರಲ್ಲಿ ಆಗುವ ಬದಲಾವಣೆಗಳು, ಆಹಾರ, ಉಡುಗೆತೊಡಿಗೆಗಳು, ವಿದ್ಯಾಭ್ಯಾಸ, ಆರೋಗ್ಯ, ಆಟಪಾಟಗಳು – ಈ ವಿಷಯವಾಗಿ ತಿಳಿದುಕೊಳ್ಳಲು ಇಲ್ಲಿ ಅನುಕೂಲವಿದೆ.

ಮಾನವ ಸಂಬಂಧ : ಮನುಷ್ಯ ಸಂಘಜೀವಿಯಾದ ಕಾರಣ ತನ್ನ ಕಷ್ಟಸುಖಗಳನ್ನು ತನ್ನ ಮಿತ್ರರೊಡನೆ ಹೇಳಿಕೊಂಡು ಮನಸ್ಸಿನ ದುಗುಡವನ್ನು ಲಘು ಮಾಡಿಕೊಳ್ಳ ಬಯಸುತ್ತಾನೆ. ಆದ್ದರಿಂದ ಪರಿಸ್ಥಿತಿಗೆ ತಕ್ಕಂತೆ ಅವನಲ್ಲಿ ಆಗುವ ಮನೋವೃತ್ತೀಯ ಬದಲಾವಣೆಗಳನ್ನು ಗಮನಿಸಿ, ಅವಕ್ಕೆ ಸೂಕ್ತ ಅಗತ್ಯತೆಗಳನ್ನು ಒದಗಿಸಿ ಅವನ ಚಿತ್ತ ಧೃತಿಗೆಡದಂತೆ ನೋಡಿಕೊಳ್ಳುವುದು ಗೃಹಿಣಿಯ ಕರ್ತವ್ಯವಾಗುತ್ತದೆ. ನಾಲ್ಕು ಜನ ಯಾವ ರೀತಿ ಸಮಾಜದಲ್ಲಿ ಬಾಳ್ವೆ ನಡೆಸುತ್ತಿದ್ದಾರೆ ಎಂಬುದನ್ನು ಮನಗಂಡು, ಸಮಾಜದ ಕಟ್ಟುಪಾಡುಗಳಿಗೆ ಒಳಗಾಗಿ, ಕುಟುಂಬವನ್ನು ಯಾವ ರೀತಿ ಸಾಗಿಸಬೇಕು ಎಂಬುದನ್ನು ಈ ವಿಭಾಗದಲ್ಲಿ ತಿಳಿಸಲಾಗುತ್ತದೆ. ಮಾನವ–ಮಾನವ ಸಂಬಂಧದ ತಾತ್ತ್ವಿಕ ನಿರೂಪಣೆಯನ್ನು ಇಲ್ಲಿ ವಿಶದಪಡಿಸಲಾಗುತ್ತದೆ. ಜೀವನಸಾಮರಸ್ಯ ಮತ್ತು ಏಕತೆಯ ಬಗ್ಗೆಯೂ ಅರಿವು ಮೂಡಿಸಲಾಗುತ್ತದೆ.

ಭಾರತದಲ್ಲಿ ಇತ್ತೀಚೆಗೆ ಬಾಲವಾಡಿಗಳಲ್ಲೂ ಶಿಶುವಿಹಾರಗಳಲ್ಲೂ ಕಿಂಡರ್ ಗಾರ್ಟನ್ ಶಾಲೆಗಳಲ್ಲೂ ಗೃಹವಿಜ್ಞಾನವನ್ನು ಮಕ್ಕಳಿಗೆ ಕಲಿಸಲಾಗುತ್ತಿದೆ. ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲೂ ಗೃಹವಿಜ್ಞಾನಕ್ಕೆ ಸಂಬಂಧಪಟ್ಟಂತೆ ಪಾಠ ಪ್ರವಚನಗಳು ನಡೆಯುತ್ತಿವೆ. ಗೃಹವಿಜ್ಞಾನವನ್ನು ಪ್ರತ್ಯೇಕ ಬೋಧನ ವಿಷಯವನ್ನಾಗಿ ಮಾಡಿದ ಕೀರ್ತಿ ಹಿಂದಿನ ಮದರಾಸು ರಾಜ್ಯಕ್ಕೆ ಸಲ್ಲುತ್ತದೆ. ಭಾರತ ಸರ್ಕಾರ 1956ರಲ್ಲಿ ಮೂರು ವರ್ಷಗಳ ಪಠ್ಯಕ್ರಮವನ್ನು ತಯಾರಿಸಿ ಅದರಲ್ಲಿ ಶಿಕ್ಷಣವನ್ನೀಯಲು ಮಾಡಿದ ಆದೇಶದಿಂದಾಗಿ ಬಹುತೇಕ ರಾಜ್ಯದ ಶಿಕ್ಷಣ ಇಲಾಖೆಗಳ ವತಿಯಲ್ಲಿ ಗೃಹವಿಜ್ಞಾನದ ಶಾಲೆಗಳನ್ನೂ ಕಾಲೇಜುಗಳನ್ನೂ ಈಗ ತೆರೆಯಲಾಗಿದೆ. ಗೃಹವಿಜ್ಞಾನದ ಜೊತೆಗೆ ಕಲೆ, ಸಮಾಜಶಾಸ್ತ್ರ ಮುಂತಾದ ಸಾಮಾನ್ಯ ವಿಷಯಗಳನ್ನೂ ಬೋಧಿಸಲಾಗುತ್ತದೆ. ಇಂಥದೊಂದು ಸಂಸ್ಥೆ ಕೊಯಮತ್ತೂರಿನ ಅವಿನಾಶ ಲಿಂಗಮ್ ಹೋಮ್ ಸೈನ್ಸ್ ಕಾಲೇಜು.

ಗೃಹವಿಜ್ಞಾನ ವಿಷಯದ ವ್ಯಾಸಂಗಕ್ರಮ ಆಯಾ ಕಾಲೇಜು ಮತ್ತು ವಿಶ್ವ ವಿದ್ಯಾಲಯದ ಇಚ್ಛೆಗೆ ತಕ್ಕಂತೆ ರೂಪುಗೊಂಡಿದೆ. ಕ್ರಮ ಬೇರೆಯಾದರೂ ಮುಖ್ಯವಾಗಿ ಮೂರು ವಿಭಾಗಗಳನ್ನು ಗಮನಿಸಬಹುದು: 1. ವಿಜ್ಞಾನ ವಿಷಯಗಳು, 2. ಲಲಿತ ವಿದ್ಯೆಗಳು, 3. ಕುಶಲಕಲೆಗಳು.

ಭಾರತದಲ್ಲಿ ಸದ್ಯಕ್ಕೆ ಉಪಾಧ್ಯಾಯ ತರಬೇತಿ ಕಾಲೇಜುಗಳಲ್ಲಿ, ಸ್ನಾತಕೋತ್ತರ ಮಟ್ಟದಲ್ಲಿ ಉಪಾಧ್ಯಾಯರ ಶಿಕ್ಷಣವನ್ನು ಕೊಡುವುದರ ಜೊತೆಗೆ ಗೃಹವಿಜ್ಞಾನದಲ್ಲಿ ಶಿಕ್ಷಣ ಕೊಟ್ಟು ಆ ವಿಭಾಗದಲ್ಲಿ ಪದವಿ ಪರೀಕ್ಷೆಯನ್ನು ಕಟ್ಟಲು ಅವಕಾಶ ಕಲ್ಪಿಸಲಾಗಿದೆ. ಇಂಥ ಶಿಕ್ಷಣವನ್ನು ಪಡೆದ ಉಪಾಧ್ಯಾಯರು ಪ್ರೌಢ ಶಾಲೆಗಳಲ್ಲಿ ಗೃಹವಿಜ್ಞಾನ ಪಾಠ ನಡೆಸಲು ಅರ್ಹರಾಗುತ್ತಾರೆ.

ಕೇವಲ ಪಟ್ಟಣ ಮತ್ತು ನಗರಗಳಲ್ಲಿ ಮಾತ್ರವಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲೂ ಗೃಹ ವಿಜ್ಞಾನ ಶಿಕ್ಷಣ ದೊರೆಯಲು ಭಾರತ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಭಾರತ ಮುಖ್ಯವಾಗಿ ಬೇಸಾಯಾಧರಿತ ದೇಶವಾದ್ದರಿಂದ ನಾಡಿನಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ವತಿಯಲ್ಲಿ ಗೃಹವಿಜ್ಞಾನ ತರಬೇತಿ ಕೇಂದ್ರಗಳು ಸ್ಥಾಪನೆಗೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಭಾರತದ ಬಹುಪಾಲು ವಿಶ್ವವಿದ್ಯಾನಿಲಯಗಳಲ್ಲಿ ಗೃಹವಿಜ್ಞಾನ ಅಧ್ಯಯನ ವಿಭಾಗಗಳನ್ನು ತೆರೆಯಲಾಗಿದೆ. ಗೃಹವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನ, ಬೋಧನೆ, ಸಂಶೋಧನೆಗಳು ನಡೆಯುತ್ತಿವೆ. ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಪದವಿಗಳನ್ನು ನೀಡಲಾಗುತ್ತಿದೆ.

ಭಾರತದ ಗೃಹವಿಜ್ಞಾನ ಮಂಡಲಿ : 1951ರ ಆಗಸ್ಟ್ ತಿಂಗಳಲ್ಲಿ ಗೃಹವಿಜ್ಞಾನ ಉಪಾಧ್ಯಾಯಿನಿಯರ ಸಮ್ಮೇಳನವೊಂದನ್ನು ಬರೋಡ ವಿಶ್ವವಿದ್ಯಾಲಯ ನಡೆಸಿತು. ಶ್ರೀಮತಿ ಫ್ಲೆಮ್ಮೀ ಕಿಚಲ್ ಮತ್ತು ಶ್ರೀಮತಿ ಮೆಹತಾ (ಆಗಿನ ಬರೋಡ ವಿಶ್ವವಿದ್ಯಾಲಯದ ಕುಲಪತಿಗಳು) ಇಬ್ಬರೂ ಮುತುವರ್ಜಿ ವಹಿಸಿ ಅಖಿಲ ಭಾರತ ವ್ಯಾಪ್ತಿಯ ಗೃಹವಿಜ್ಞಾನ ಮಂಡಲಿಯ ಸ್ಥಾಪನೆಗೆ ಅಸ್ತಿಭಾರ ಹಾಕಿದರು.

ಮೊದಲನೆಯ ಅಖಿಲಭಾರತ ಗೃಹವಿಜ್ಞಾನ ಸಮ್ಮೇಳನ 1952ರ ಸೆಪ್ಟೆಂಬರ್ ತಿಂಗಳಿನಲ್ಲಿ ಮದ್ರಾಸಿನಲ್ಲಿ ನಡೆಯಿತು. ನೂರ ಐವತ್ತು ವಿದ್ಯಾರ್ಥಿನಿಯರು, ಉಪಾಧ್ಯಾಯಿನಿಯರು, ವಿಸ್ತರಣಾ ಕೆಲಸಗಾರರು, ಗೃಹವಿಜ್ಞಾನದಲ್ಲಿ ಆಸಕ್ತಿ ಇರುವ ಇತರ ಕೆಲವರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಗೃಹವಿಜ್ಞಾನ ವಿಷಯವನ್ನು ಮುಂದುವರಿಸಲು ಮತ್ತು ವಿಕಾಸಗೊಳಿಸಲು ಅನುಕೂಲವಾಗುವಂಥ ಕೆಲವು ಸೂತ್ರಗಳನ್ನು ಇಲ್ಲಿ ರಚಿಸಲಾಯಿತು.

1954ರ ಸೆಪ್ಟೆಂಬರ್ ತಿಂಗಳಿನಲ್ಲಿ ದೆಹಲಿಯ ಲೇಡಿ ಇರ್ವಿನ್ ಕಾಲೇಜಿನಲ್ಲಿ ಎರಡನೆಯ ಸಮ್ಮೇಳನ ನಡೆಯಿತು. ಈ ಸಮ್ಮೇಳನದ ಹೊತ್ತಿಗೆ ಅಖಿಲಭಾರತ ಗೃಹವಿಜ್ಞಾನ ಸಂಸ್ಥೆ ನೋಂದಣಿಯಾದ ಸಂಸ್ಥೆಯಾಗಿ ರೂಪುಗೊಂಡಿದ್ದ ಅಲ್ಲದೆ ಅಂತಾರಾಷ್ಟ್ರೀಯ ಗೃಹವಿಜ್ಞಾನ ಸಂಯುಕ್ತ ಸಂಘದ ಅಂಗ ಸಂಸ್ಥೆಯಾಗಿ ದಾಖಲಾಗಿತ್ತು.

ಅಲಹಬಾದಿನಲ್ಲಿ ಸೇರಿದ (1956) ಮೂರನೆಯ ಸಮ್ಮೇಳನದಲ್ಲಿ ಮೊದಲನೆಯ ನಿರ್ಣಯವಾಗಿ ಪ್ರಯೋಗಶಾಲೆಗಳ ವಿನ್ಯಾಸ ಹಾಗೂ ಪಠ್ಯಕ್ರಮದ ಸಿದ್ಧತೆಗಳ ಬಗ್ಗೆ ಸಲಹೆ ನೀಡಲು ವಿವಿಧ ರಾಜ್ಯಗಳಿಗೆ ಸೇರಿದ ಹತ್ತು ಜನ ಗೃಹವಿಜ್ಞಾನ ಪರಿಣತರ ಒಂದು ಸಮಿತಿಯನ್ನು ರಚಿಸಲಾಯಿತು.

ಇದೇ ಸಮಯದಲ್ಲಿ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಜೊತೆಗೆ ಭಾರತ ಗೃಹವಿಜ್ಞಾನ ಮಂಡಲಿಯ ಸಂಬಂಧ ಇನ್ನೂ ಹೆಚ್ಚಿತು. ಇದರಿಂದಾಗಿ ಟೆನಿಸಿ ವಿಶ್ವವಿದ್ಯಾಲಯ ಆರು ಜನ ಗೃಹವಿಜ್ಞಾನ ಪರಿಣತರನ್ನು ಭಾರತದ ಆರು ಕಾಲೇಜುಗಳಿಗೆ ಕಳುಹಿಸಿತಲ್ಲದೆ ಸಹಸ್ರರೂಪಾಯಿ ಬೆಲೆಬಾಳುವ ಪುಸ್ತಕಗಳು, ಪ್ರಾಯೋಗಿಕ ಶಾಲಾಸಾಮಗ್ರಿಗಳು ಮುಂತಾದವನ್ನು ಉಚಿತವಾಗಿ ಕೊಟ್ಟಿತು. ಈ ಆರು ಕಾಲೇಜುಗಳಿಂದ ಹಲವು ಉಪಾಧ್ಯಾಯಿನಿಯರು ತಮ್ಮ ತಮ್ಮ ಐಚ್ಛಿಕ ವಿಷಯಗಳಲ್ಲಿ ಹೆಚ್ಚಿನ ತರಬೇತಿ ಪಡೆಯಲು ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಹೋದರು.

ಫೋರ್ಡ್ ಫೌಂಡೇಷನ್ನಿನ ಕೊಡುಗೆ : ಫೋರ್ಡ್ ಪ್ರತಿಷ್ಠಾನದ ಸಹಾಯ ದೊರೆಯಿತಾಗಿ ಭಾರತದಲ್ಲಿ ಸ್ನಾತಕೋತ್ತರ ಪದವಿಯ ಶಿಕ್ಷಣ ಕೊಡಲು ಮತ್ತು ಸಂಶೋಧನೆಯಲ್ಲಿ ಮಾರ್ಗದರ್ಶನ ನೀಡಲು ಬರೋಡ ವಿಶ್ವವಿದ್ಯಾಲಯವನ್ನು ಆರಿಸಿಕೊಳ್ಳಲಾಯಿತು. ಅಯೋವ ಸ್ಟೇಟ್ ಕಾಲೇಜಿನಿಂದ ಪ್ರಾಧ್ಯಾಪಕರುಗಳನ್ನು ಇಲ್ಲಿಗೆ ಬರಮಾಡಿಕೊಳ್ಳುವುದಲ್ಲದೇ ಭಾರತದ ವಿವಿಧ ವಿಶ್ವವಿದ್ಯಾಲಯಗಳಿಂದ ಪದವಿ ಪಡೆದ ವಿದ್ಯಾರ್ಥಿನಿಯರಿಗೆ ಸ್ನಾತಕೋತ್ತರ ತರಗತಿಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ವಿದ್ಯಾರ್ಥಿವೇತನವನ್ನೂ ಮತ್ತು ಸಂಶೋಧನ ಸಹಾಯಧನವನ್ನೂ ಕೊಡಬೇಕೆಂದು ನಿರ್ಣಯಿಸಲಾಯಿತು.

ಮೊದಲಿಗೆ ಕರ್ನಾಟಕಕ್ಕೆ ಸೇರಿದ ಆರು ಕಾಲೇಜುಗಳಲ್ಲಿ ಪ್ರಿ–ಯೂನಿವರ್ಸಿಟಿ, ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಗೃಹವಿಜ್ಞಾನವನ್ನು ಬೋಧಿಸಲಾಗುತಿತ್ತು. ಈಗ ಅನೇಕ ಕಾಲೇಜುಗಳಲ್ಲಿ ಗೃಹವಿಜ್ಞಾನವನ್ನು ಬೋಧಿಸಲಾಗುತ್ತಿದೆ.

1970ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೃಹವಿಜ್ಞಾನದಲ್ಲಿ (ಆಹಾರ ಮತ್ತು ಪೌಷ್ಟಿಕತೆ) ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಿತು. (ಐ.ಕೆ.)

**ಗೃಹಾಲೇಖ್ಯ :** ಮಾನವನ ಜೀವನದ ವ್ಯವಹಾರಗಳಿಗೆ ಬೇಕಾಗುವ ಅನೇಕ ವಿಧವಾದ ಗೃಹಗಳ ರಚನಕ್ರಮ (ಹೌಸ್ ಡಿಸೈನ್). ವೈವಿಧ್ಯಯುತವಾದ ಈಗಿನ ವ್ಯವಹಾರಗಳಿಗೋಸ್ಕರ ಬಳಸಲಾಗುತ್ತಿರುವ ಗೃಹಗಳನ್ನು ವಿಶಾಲವಾಗಿ ವಾಸಗೃಹಗಳು, ಸಾರ್ವಜನಿಕ ಗೃಹಗಳು, ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಗೃಹಗಳು ಮತ್ತು ವಿಶೇಷ ರೀತಿಯ ಗೃಹಗಳು ಎಂಬುದಾಗಿ ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ವಸತಿಗೃಹಗಳು ಜನರ ವಾಸಕ್ಕೋಸ್ಕರ ನಿರ್ಮಿತವಾದವು. ಖಾಸಗಿ ವಾಸದ ಮನೆಗಳು, ಊಟ ವಸತಿಗೃಹಗಳು, ಸರ್ಕಾರಿ ಬಿಡದಿಗಳು ಮುಂತಾದವೆಲ್ಲವೂ ವಾಸಗೃಹಗಳ ಪಂಗಡಕ್ಕೆ ಸೇರುವುವು. ಕೋರ್ಟು ಕಚೇರಿಗಳು, ವಿದ್ಯಾಲಯಗಳು, ಸಾರಿಗೆ ನಿಲ್ದಾಣಗಳು, ಸಾರ್ವಜನಿಕ ಪುಸ್ತಕ ಭಂಡಾರಗಳು, ಆಸ್ಪತ್ರೆಗಳು, ಮನರಂಜನಗೃಹಗಳು, ಉಪಾಹಾರ ಮಂದಿರಗಳು, ಕ್ರೀಡಾಗೃಹಗಳು ಮುಂತಾದ ಅನೇಕ ರೀತಿಯ ಲೋಕೋಪಯೋಗಿ ಗೃಹಗಳು ಎರಡನೆಯ ಬಗೆಯವು. ಕಾರ್ಖಾನೆಗಳು, ವಾಣಿಜ್ಯ ಸರಕುಗಳ ಉತ್ಪತ್ತಿ ಕಾರ್ಯಾಗಾರಗಳು, ವ್ಯಾಪಾರೋದ್ಯಮ ಸೌಧಗಳು ಮುಂತಾದವು ಮೂರನೆಯ ಪಂಗಡಕ್ಕೆ ಸೇರುವುವು. ನಾಲ್ಕನೆಯವು ದೇವಗೃಹಗಳು, ಅರಮನೆಗಳು, ಮತೀಯ ಸೌಧಗಳು, ಸ್ಮಾರಕ ಗೃಹಗಳು ಇತ್ಯಾದಿ. ಈ ಎಲ್ಲ ರೀತಿಯ ಗೃಹಗಳನ್ನು ಆಲೇಖ್ಯದ ದೃಷ್ಟಿಯಿಂದ ಏಳು ಭಾಗಗಳಾಗಿ ವಿಂಗಡಿಸಬಹುದು : 1. ನಿವೇಶನ 2. ಪಾಯ, 3. ನಕಾಶೆ 4. ಮೇಲ್ಕಟ್ಟಡ, 5. ಛಾವಣಿ 6. ದ್ವಾರಗಳು, 7. ವಾಸ್ತುಶಿಲ್ಪ. ಈ ಲೇಖನದಲ್ಲಿ ವಾಸಗೃಹದ ಆಲೇಖ್ಯದ ವಿಶ್ಲೇಷಣೆ ಮಾತ್ರ ಕೊಟ್ಟಿದೆ. ಉಳಿದ ಗೃಹಪ್ರರೂಪಗಳ ವಿವರಗಳಿಗೆ **ನೋಡಿ–ಕಟ್ಟಡ**.

**1. ನಿವೇಶನ :** ವಾಸಗೃಹಗಳ ನಿವೇಶನ ಜನ ಮತ್ತು ವಾಹನಗಳ ಸಂದಣಿಯಿಂದ ದೂರವಾಗಿದ್ದು ದೂಳು, ಅತಿಶಬ್ದ ಮತ್ತು ಇತರ ವಿಧವಾದ ಗಲಭೆಗಳಿಗೆ ಅವಕಾಶವಿಲ್ಲದೆ ಇರುವ ಸ್ಥಳದಲ್ಲಿ ಇರಬೇಕು. ಅದು ಎತ್ತರವಾದ ಪ್ರದೇಶದಲ್ಲಿದ್ದು ಯಥೇಚ್ಛವಾದ ಗಾಳಿಬೆಳಕು





ಗೃಹವೊಂದರ ತಳವಿನ್ಯಾಸ: 1. ಮುಂಬಾಗಿಲು, 2. ಹಜಾರ, 3. ಕೋಣೆ, 4. ನಡುಮನೆ, 5. ಒಳಶೌಚಗೃಹ, 6. ಕೋಣೆ, 7. ಮೊಗಸಾಲೆ, 8. ಅಡುಗೆಮನೆ, 9. ಉಗ್ರಾಣ, 10. ಬಚ್ಚಲು, 11. ಕಕ್ಕಸು, 12. ಹಿಂಬಾಗಿಲು

ಗಳಿಗೆ ಪೂರ್ಣ ಅವಕಾಶವಿದ್ದರೆ ಉತ್ತಮ. ಕಾಡು, ಜೌಗು ಮತ್ತು ಗಣಿ ಪ್ರದೇಶಗಳಿಂದ ದೂರವಾಗಿರಬೇಕು. ಈ ನಿವೇಶನದಿಂದ ಮಳೆಯ ನೀರು, ಬಚ್ಚಲ ನೀರು ಮತ್ತು ಒಳಚರಂಡಿ ನೀರು ನಿರುಪಾಧಿಕವಾಗಿ ಹರಿಯುವುದಕ್ಕೆ ಅನುಕೂಲತೆ ಇರಬೇಕು. ಅತಿವೃಷ್ಟಿ, ಬಿರುಗಾಳಿ, ಪ್ರವಾಹ ಮುಂತಾದ ಅತಿರೇಕಗಳಿಂದ ಈ ನಿವೇಶನ ಪೀಡಿತವಾಗಿರಬಾರದು. ಅಲ್ಲದೆ ಗೃಹದ ಸುತ್ತಲಿರುವ ನೆಲ ಗಿಡಮರಗಳ ಬೆಳವಣಿಗೆಗೆ ಯೋಗ್ಯವಾಗಿರಬೇಕು.

**2. ಅಡಿಪಾಯ :** ಸಾಧಾರಣವಾದ ವಸತಿಗೃಹಗಳ ಅಡಿಪಾಯದ ವಿನ್ಯಾಸ ಸಾಮಾನ್ಯವಾದ ಮಣ್ಣಿನಲ್ಲಿ ಅಷ್ಟೇನೂ ಕ್ಲಿಷ್ಟಕರವಾಗಿರುವುದಿಲ್ಲ. ಇಂಥ ಗೃಹಗಳಿಗೆ ಕಲ್ಲು ಅಥವಾ ಕಾಂಕ್ರೀಟ್ ಬಳಸಿ ಆಳವಿಲ್ಲದ ಹರಡು ಅಡಿಪಾಯ ಉಪಯೋಗಿಸಬಹುದು. ಭರ್ತಿ ಹಾಕಿದ ಮಣ್ಣು ಅಥವಾ ಬಲಹೀನವಾದ ಮಣ್ಣು ಸಿಕ್ಕಿದ ಎಡೆಗಳಲ್ಲಿ ಮ್ಯಾಟ್ ಅಥವಾ ರ್‍ಯಾಫ್ಟ್ ಎಂಬ ತೆಪ್ಪದ ಅಡಿಪಾಯವನ್ನು ಬಳಸಬೇಕಾಗುತ್ತದೆ. ಸಾಮಾನ್ಯವಾಗಿ 5 ಅಥವಾ 7 ವರಸೆಗಳಲ್ಲಿ ಕಲ್ಲುಕಟ್ಟಿ ಅಡಿಪಾಯ ಹಾಕಲಾಗುವುದು.

**3. ನಕಾಶೆ :** ವಾಸಿಸುವ ಜನಗಳ ಸಂಖ್ಯೆ, ದರ್ಜೆ, ಬೇಕಾಗುವ ಅನುಕೂಲತೆ ಮುಂತಾದವನ್ನು ವಸತಿಗೃಹಗಳ ನಕಾಶೆ ಅನುಸರಿಸುತ್ತದೆ. ಅತಿ ದೊಡ್ಡ ಕೊಠಡಿಗಳು, ಮೊಗಸಾಲೆಗಳು ಮುಂತಾದವು ಬೇಕಾಗುವುದಿಲ್ಲ. ಸಂಸಾರಕ್ಕೆ ಅವಶ್ಯಕವಾದ ಮಲಗುವ ಕೋಣೆಗಳು, ಅಡುಗೆಮನೆ, ಶೌಚಗೃಹ, ಹಜಾರ ಇವು ವಾಸಗೃಹಗಳ ನಕಾಶೆಯಲ್ಲಿ ಸಾಮಾನ್ಯವಾಗಿ ಇರಬೇಕಾದ ಅಂಶಗಳು.



ತಳವಿನ್ಯಾಸಾಧಾರಿತ ಗೃಹದ ಮುಂಭಾಗ

**4. ಮೇಲ್ಕಟ್ಟಡ :** ವಾಸಗೃಹಗಳ ಮೇಲ್ಕಟ್ಟಡ ಸಾಮಾನ್ಯವಾಗಿ ಒಂದು ಅಥವಾ ಎರಡು ಅಂತಸ್ತುಗಳಿಗಿಂತ ಹೆಚ್ಚಾಗಿರುವುದಿಲ್ಲ. ಈಗ ಭಾರಿ ನಗರ ಪ್ರದೇಶಗಳಲ್ಲಿ ಅನೇಕ ಅಂಕಣಗಳುಳ್ಳ ಮತ್ತು ಪ್ರತಿ ಅಂತಸ್ತಿನಲ್ಲಿಯೂ ಸಂಸಾರಕ್ಕೆ ಯೋಗ್ಯವಾದ ಅನೇಕ ಉಪಗೃಹಗಳಿರುವ ಬೃಹತ್ ವಾಸಗೃಹಗಳು ರಚಿತವಾಗುತ್ತಿವೆ (ಫ್ಲ್ಯಾಟ್ಸ್). ಸಾಮಾನ್ಯ ಗೃಹಗಳಿಗೆ ಇಟ್ಟಿಗೆಯನ್ನು ಬಳಸುವುದು ವಾಡಿಕೆ. ಆದರೆ ಈ ವಠಾರಗಳಿಗೆ ಉಕ್ಕು ಪ್ರಬಲಿತ ಕಾಂಕ್ರೀಟುಗಳಿಂದ ಆದ ಕಂಬಗಳು ಮತ್ತು ಅಡ್ಡ ತೊಲೆಗಳನ್ನುಳ್ಳ ಹಂದರವನ್ನು ನಿರ್ಮಿಸಿ ತೆಳುವಾದ ಗೋಡೆಗಳನ್ನು ನಿರ್ಮಿಸುತ್ತಾರೆ. ಅಡ್ಡಗೋಡೆಗಳಿಗೆ ಮಣ್ಣು, ಕಲ್ಲು ಅಥವಾ ಮರವನ್ನು ಉಪಯೋಗಿಸುವ ವಿಧಾನ ಕ್ಷಯಿಸಿ ಈಗ ಕೇವಲ ಹಳ್ಳಿಗಳಲ್ಲಿ ಮಾತ್ರ ಇವು ಕಂಡುಬರುತ್ತವೆ.

**5. ಮೇಲ್ಛಾವಣಿ :** ವಾಸಗೃಹಗಳ ಛಾವಣಿಯ ರೀತಿ ಆಯಾ ಕಟ್ಟಡಗಳಲ್ಲಿನ ಅಂತಸ್ತುಗಳ ಸಂಖ್ಯೆ, ಪ್ರದೇಶದ ಹವೆ, ಕಟ್ಟಡದ ಉಪಯೋಗ ಮತ್ತು ಅದು ಇರುವ ಭೂವಲಯ ಇವನ್ನು ಅವಲಂಬಿಸಿರುತ್ತದೆ. ಛಾವಣಿಗಳೆಲ್ಲವೂ ಬಹು ಸಾಮಾನ್ಯವಾಗಿ



ತಳವಿನ್ಯಾಸ ಮತ್ತು ಆಲೇಖ್ಯವನ್ನನುಸರಿಸಿ ನಿರ್ಮಿಸಿದ ಒಂದು ಗೃಹ

ಚಪ್ಪಟೆಯಾಗಿರುತ್ತವೆ. ಮಳೆ ಅಧಿಕವಾಗಿ ಬೀಳುವ ಅಥವಾ ಮಂಜು ಬೀಳುವ ಪ್ರದೇಶಗಳಲ್ಲಿ ಇಳಿಜಾರು ಚಾವಣಿಗಳನ್ನು ಉಪಯೋಗಿಸಿ ನೀರು ಅಥವಾ ಮಂಜು ಸುಲಭವಾಗಿಯೂ ಜಾಗ್ರತೆಯಾಗಿಯೂ ಹರಿದುಹೋಗುವಂತೆ ಏರ್ಪಡಿಸಬೇಕಾಗುತ್ತದೆ. ಅನೇಕ ಅಂತಸ್ತುಗಳಿರುವ ವಾಸಗೃಹದ ಅತ್ಯಂತ ಮೇಲ್ಮಟ್ಟದ ಛಾವಣಿಯನ್ನು ಸದರಿ ಕಟ್ಟಡದ ಜನರ ದೈನಂದಿನ ಉಪಯೋಗ, ಅಂದರೆ ಬಟ್ಟೆ ಒಣಗಿಸುವುದು, ಕ್ರೀಡೆ ಅಥವಾ ಪಾರ್ಕು ಮುಂತಾದ ಸೌಲಭ್ಯಗಳಿಗೆ ಅನುಕೂಲವಾಗುವಂತೆ ರಚಿಸಬೇಕಾಗುತ್ತದೆ.

**6. ದ್ವಾರಗಳು :** ವಾಸಗೃಹಗಳ ದ್ವಾರಗಳು ಗಾಳಿ ಬೆಳಕು ಮತ್ತು ಜನರು ಸಾಮಾನ್ಯವಾಗಿ ಬಳಸುವ ಗೃಹಾಲಂಕರಣ ವಸ್ತುಗಳ ಪ್ರವೇಶಕ್ಕೆ ಅಡ್ಡಿಯಿಲ್ಲದಷ್ಟು ವಿಶಾಲವಾಗಿದ್ದು, ಕಳ್ಳಕಾಕರ ಪ್ರಯತ್ನಗಳನ್ನು ಎದುರಿಸಿ ನಿಲ್ಲುವಷ್ಟು ಬಲಯುತವಾಗಿರ ಬೇಕಾಗುತ್ತದೆ. ಬಿರುಗಾಳಿ, ಮಳೆ, ಹಿಮ ಮುಂತಾದವುಗಳ ಉಪದ್ರವವಿರುವೆಡೆಗಳಲ್ಲಿ ದ್ವಾರಗಳ ಗಾತ್ರ, ನೆಲ ಮತ್ತು ಸಾಮಗ್ರಿಗಳು ಈ ಉಪದ್ರವಗಳ ಬಾಧಕವಿಲ್ಲದಂತೆ ಇರಬೇಕು. ಗೃಹಗಳ ಸಂಯೋಜನೆ ಮತ್ತು ಅಂದದ ದೃಷ್ಟಿಯಿಂದ ದ್ವಾರಗಳ ಗಾತ್ರ, ಸಂಖ್ಯೆ ಮತ್ತು ಆಕಾರಗಳು ಯೋಗ್ಯವಾಗಿ ಇರಬೇಕು.

**7. ವಾಸ್ತುಶಿಲ್ಪ :** ವಾಸಗೃಹಗಳ ವಾಸ್ತುಶಿಲ್ಪ ನಿರ್ದಿಷ್ಟವಾಗಿರುವುದಿಲ್ಲ. ಹಿಂದೆ ಖಾಸಗಿ ಗೃಹಗಳು, ಮಾಲೀಕರ ದರ್ಜೆ ಮತ್ತು ಅಭೀಷ್ಟಗಳಿಗೆ ತಕ್ಕಂತೆ ಬಲು ಹೆಚ್ಚಿನ ಅಲಂಕಾರ, ಕೆತ್ತನೆ ಕೆಲಸಗಳು, ಬಣ್ಣಗಳಿಂದ ಕೂಡಿರುತ್ತಿದ್ದುವು. ಈಚೆಗೆ ವಾಸ್ತುಶಿಲ್ಪದ ರೀತಿಯೇ ಬದಲಾವಣೆಯಾಗಿ ಸರಳವಾದ ಸಂಯೋಜನೆ, ರೇಖಾಲಂಕಾರ ಮತ್ತು ವರ್ಣವಿನ್ಯಾಸಗಳಿಗೆ ಹೆಚ್ಚು ಗಮನ ಕೊಡಲಾಗುತ್ತಿದೆ. (ಕೆ.ಎಸ್.ಕೆ.)

**ಗೃಹವಾಸ್ತು (ಹಸ್ತಪ್ರತಿಗಳಲ್ಲಿ) :** ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಾಸ್ತುಶಾಸ್ತ್ರದ ಹಸ್ತಪ್ರತಿಗಳು ಕಂಡುಬಂದಿದ್ದು ಕನ್ನಡದಲ್ಲಿ ಅದೊಂದು ಪ್ರತ್ಯೇಕ ಶಾಸ್ತ್ರವಾಗಿ ಬೆಳೆದು ಬಂದಿರುವುದಕ್ಕೆ ಸಾಕ್ಷಿಯಾಗಿದೆ. ಚಾವುಂಡರಾಯನ (ಪ್ರ.ಶ.ಸು. 1150) 'ಲೋಕೋಪಕಾರ' ಎಂಬ ಗ್ರಂಥದ ಹಸ್ತಪ್ರತಿಗಳಲ್ಲಿ ವಾಸ್ತುಶಾಸ್ತ್ರಕ್ಕೂ ಸ್ಥಾನ ಕಲ್ಪಿಸಲಾಗಿದೆ. ಇದರಲ್ಲಿ ನಿವೇಶನದ ಆಯ್ಕೆ, ಮನೆಯ ಉದ್ದಗಲಗಳು, ನಕ್ಷತ್ರಗಳ ಪ್ರಭಾವ, ಉಪಯೋಗಿಸಬಾರದಂತಹ ಮರಮುಟ್ಟುಗಳು ಮುಂತಾದ ವಿಚಾರಗಳನ್ನು ಹೇಳಲಾಗಿದೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕುಮಾರವಾಸ್ತು ಸಟೀಕು, ಗೃಹವಾಸ್ತು ಪುಸ್ತಕ, ಜಲವಾಸ್ತು, ಜಲಶಿಲ್ಪ, ಧನವಾಸ್ತುನಿರ್ಣಯ, ವಾಸ್ತುಪ್ರಕಟಣ ಟೀಕು, ವಾಸ್ತುಶಾಸ್ತ್ರ, ವಾಸ್ತುಶಾಸ್ತ್ರ ಸಟೀಕು, ವಾಸ್ತುಪ್ರಕರಣ ಟೀಕು ಎಂಬ ಶೀರ್ಷಿಕೆಯ ಹಸ್ತಪ್ರತಿಗಳಿವೆ. ವಾಸ್ತುಶಾಸ್ತ್ರ ಪ್ರಕಾರದಂತೆ ನಿರ್ಮಿಸಿದ ಮನೆಗಳಿಂದ ವಾಸಿಸುವವರಿಗೆ ಸುಖ ಸಂತೋಷಗಳು ಉಂಟಾಗುತ್ತವೆ ಎಂಬ ಆಶಯವನ್ನು ಈ ಹಸ್ತಪ್ರತಿಗಳು ವ್ಯಕ್ತಪಡಿಸುತ್ತವೆ.

ಕನ್ನಡದಲ್ಲಿ ಸನತ್ಕುಮಾರ ವಾಸ್ತುಶಾಸ್ತ್ರ ಹಸ್ತಪ್ರತಿಗಳು ಜನಪ್ರಿಯವಾಗಿವೆ. ಇದರಲ್ಲಿ ಗೃಹನಿರ್ಮಾಣ ಮಾಡುವಾಗ ವಾಸ್ತುಪುರುಷನ ಯಾವ ಭಾಗದಲ್ಲಿ ಕಂಬ ನಿಲ್ಲಿಸ ಬೇಕೆಂಬುದನ್ನು ವಿವರಿಸಲಾಗಿದೆ. ಈ ರೀತಿ ಮಾನವ ದೇಹದ ಸದೃಢಕೆಯಾಗಬೇಕೆಂಬು ದನ್ನು ಸೂಚಿಸಲಾಗಿದೆ.

ಆಯ ನೋಡಿ ಮನೆ ಕಟ್ಟಬೇಕೆಂಬುದು ಸನತ್ಕುಮಾರ ವಾಸ್ತುಶಾಸ್ತ್ರ ಹಸ್ತಪ್ರತಿಗಳ ಅಭಿಮತ. ಈ ಪ್ರಕಾರ ಆಯದ ಮಾಪನ ಹೀಗಿದೆ – ಮನೆಯ ಒಡೆಯನ ಹಸ್ತಪ್ರಮಾಣದಲ್ಲಿ ಎಷ್ಟು ಅಗಲ ಎಷ್ಟು ಉದ್ದ ಬರುತ್ತದೆಯೋ ಆ ಪ್ರಮಾಣದಲ್ಲಿ ಅಳತೆ ತೆಗೆದುಕೊಂಡು ಗುಣಿಸಿದಾಗ ಬರುವ ಲಬ್ಧವೇ 'ಪಾದ'. ಈ ಪಾದವನ್ನು 8ರಿಂದ ಗುಣಿಸಿ 12ರಿಂದ ಭಾಗಿಸಿದರೆ ಉಳಿಯುವ ಶೇಷವೇ ಆಯ.

ಮನೆಗೆ ಮರ ಕಡಿಯಬೇಕಾದರೆ ಮೊದಲು ಮರಕ್ಕೆ ಹಾಲು ಜೇನುತುಪ್ಪ ಎರೆದು ಸಕಲ ದೇವತೆಗಳನ್ನು ನೆನೆದು ಮರದ ಕ್ಷಮೆ ಕೇಳಬೇಕು, ಮರ ಕತ್ತರಿಸಲು ಬಳಸುವ ಕೊಡಲಿ ಮತ್ತು ಬಾಚಿಗೆ ನೀರು ಜೇನುತುಪ್ಪ ಲೇಪಿಸಬೇಕು, ಇದರಿಂದ ಮರ ಹದನಾಗಿ ಕತ್ತರಿಸಲು ಬರುತ್ತದೆ ಹಾಗೂ ಮರ ಹುಳಿಯುವುದಿಲ್ಲ ಎಂದು ಸನತ್ಕುಮಾರ ವಾಸ್ತುಶಾಸ್ತ್ರದಲ್ಲಿ ವರ್ಣಿಸಿದೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ 'ವಾಸ್ತುಶಾಸ್ತ್ರದ ಪುಸ್ತಕ' ಎಂಬ ಹಸ್ತಪ್ರತಿಯಲ್ಲಿ ಸೂರ್ಯ ಯಾವ ರಾಶಿಯಲ್ಲಿದ್ದಾಗ ಮನೆ ಕಟ್ಟಬೇಕು, ಯಾವ ನಕ್ಷತ್ರದವರು ಯಾವ ಯಾವ ಮರಗಳನ್ನು ಕತ್ತರಿಸಬಾರದು, ಕತ್ತರಿಸಿದ ಮರ ಬೀಳುವ ಭಂಗಿ, ಹೇಗೆ ಬಿದ್ದರೆ ಅಂಥ ಮರದ ತುಂಡನ್ನು ಮನೆಗೆ ಬಳಸಬಾರದು ಎಂದು ಮರಮುಟ್ಟುಗಳ ಬಗೆಗೆ ವಿಚಾರ ಮಾಡಿದೆ. ದೇವಸ್ಥಾನ, ಕೆರೆಯ ತಡಿ, ಬಾವಿಯ ತಡಿ, ಸುಡುಗಾಡಿನಲ್ಲಿರುವ ಮರವನ್ನು ಕಡಿಯಬಾರದು. ಹಾಳು ಮನೆಯ ಮರ ಮತ್ತು ಒಬ್ಬರು ಕಡಿದುಬಿಟ್ಟ ಮರ ಬಳಸಬಾರದು ಎಂದೂ ಸೂಚಿಸಲಾಗಿದೆ. ಮರದ ಬಣ್ಣ ನೋಡಿ ಆ ಮರದಲ್ಲಿ ವಾಸಿಸಿದ್ದ ಪ್ರಾಣಿಗಳ ಹೆಸರು ಹೇಳುವ ನೈಪುಣ್ಯತೆ ಈ ಶಾಸ್ತ್ರಕಾರರಲ್ಲಿ ಕಂಡುಬರುತ್ತದೆ. ಮರ ಕೃಷ್ಣವರ್ಣ ಇದ್ದರೆ ಹಾವು, ವಿವರ್ಣವಾಗಿದ್ದರೆ ಚೇಳು ಮತ್ತು ಕಪ್ಪೆ, ಗೂಢವರ್ಣವಾಗಿದ್ದರೆ ಕಲ್ಲು ಇದ್ದುದನ್ನು ಭಾವಿಸಬಲ್ಲರು. ಇಂಥ ಮರಗಳು ಮನೆಗೆ ಯೋಗ್ಯವಲ್ಲ ಎಂಬ ಅಂಶ ಉಕ್ತವಾಗಿದೆ.

ಮನೆಯ ನಿವೇಶನ ಆಯ್ಕೆ ಮಾಡುವಾಗ ಹಾಲುಮರ ಇದ್ದ ಕಡೆ, ದೇವಾಲಯದ ಸಮೀಪ, ನೆರಳು ಬರುವ ಜಾಗ, ಜವುಳು ನೆಲ, ನೀರು ಹರಿವ ಸ್ಥಳ, ಶ್ಮಶಾನ, ಊರ ಹೆಬ್ಬಾಗಿಲು, ದನದ ಹಟ್ಟಿ, ಮರಳುನೆಲ, ಕೆಸರು ಹುಟ್ಟುವ ಎಡೆಗಳಲ್ಲಿ ಮನೆ ನಿರ್ಮಿಸಬಾರದೆಂಬುದು ಹೇಳಿದೆ. (ವೈ.ಸಿ.ಬಿ.)

**ಗೃಹ್ಯಸೂತ್ರಗಳು :** ಗೃಹ್ಯ ಮತ್ತು ವೇದೋಕ್ತ ಕರ್ಮಗಳನ್ನು ತಿಳಿಸುವ ಶಾಸ್ತ್ರಗ್ರಂಥಗಳು. ಇವು ಭಾರತೀಯ ಸಾಮಾಜಿಕ ಜೀವನರಚನೆಗೆ ತಳಹದಿಯಾಗಿವೆ. ಇವುಗಳ ಕಾಲವನ್ನು ನಿರ್ಣಯಿಸುವುದು ದುಸ್ಸಾಧ್ಯವಾಗಿದ್ದರೂ ಇವು ಸಂಹಿತೆ, ಬ್ರಾಹ್ಮಣ ಮತ್ತು ಶ್ರೌತಸೂತ್ರಗಳಿಗಿಂತ ಈಚಿನವೆಂದು ನಿರ್ಧರಿಸಲಾಗಿದೆ. ಇವುಗಳಿಗೆ ವೇದಗಳೇ ಆಧಾರವಾಗಿವೆ ಎನ್ನಬಹುದು. ಋಗ್ವೇದ ಕಾಲವನ್ನು ಪ್ರ.ಶ.ಪೂ. 2500 ಎಂದು ಇಟ್ಟುಕೊಂಡರೆ ಗೃಹ್ಯಸೂತ್ರಗಳ ಕಾಲವನ್ನು ಪ್ರ.ಶ.ಪೂ. ಸುಮಾರು 2000 ಎಂದು ನಿರ್ಣಯಿಸಬಹುದಾದರೂ ಎಲ್ಲ ಗೃಹ್ಯಸೂತ್ರಗಳೂ ಸಮಕಾಲೀನವಾದುವುಗಳೆಂದು ಭಾವಿಸಲಾಗುವುದಿಲ್ಲ.

ಇವುಗಳಲ್ಲಿ ಮುಖ್ಯವಾದುವು ಈ ರೀತಿ ಇವೆ : ಸಾಂಖ್ಯಾಯನ, ಆಶ್ವಲಾಯನ, ಸಾಂಖ್ಯಾನ್ಯ, ಕೌಶೀತಕಿ–ಇವು ಋಗ್ವೇದಕ್ಕೆ ಸೇರಿದುವು. ಗೋಭಿಲ, ಖಾದೀರ, ಜೈಮಿನಿ– ಇವು ಸಾಮವೇದಕ್ಕೆ ಸೇರಿದುವು. ಆಪಸ್ತಂಬ, ಹಿರಣ್ಯಕೇಶಿ, ಭಾರದ್ವಾಜ, ಬೌಧಾಯನ, ಮಾನವ, ಕಾಠಕ, ವೈಖಾನಸ–ಇವು ಕೃಷ್ಣ ಯಜುರ್ವೇದಕ್ಕೆ ಸೇರಿದುವು. ಕಾತ್ಯಾಯನ ಗೃಹ್ಯಸೂತ್ರ ಶುಕ್ಲ ಯಜುರ್ವೇದಕ್ಕೂ ಕೌಶಿಕ ಗೃಹ್ಯಸೂತ್ರ ಅಥರ್ವ ವೇದಕ್ಕೂ ಸೇರಿವೆ.

ಗೃಹ್ಯಸೂತ್ರಗಳಲ್ಲಿ ಸಾಮಾಜಿಕ ಪ್ರಗತಿಗೆ ಸಂಬಂಧಿಸಿರುವ ವಿಷಯಗಳ ಸವಿಸ್ತಾರ ನಿರೂಪಣೆ ಇದೆ. ಚತುರ್ವರ್ಣಗಳು, ವಿವಾಹ, ಸ್ತ್ರೀಯರ ಸ್ಥಾನಮಾನಗಳು, ಕುಟುಂಬ ನಿರ್ವಹಣೆ, ಕೃಷಿ, ವಾಣಿಜ್ಯ, ವೃತ್ತಿಗಳು, ಕಲೆ ಮತ್ತು ಕೈಕೆಲಸ, ವ್ಯಾಸಂಗ, ವಾಸ್ತುಶಿಲ್ಪ, ದಿನಚರಿ ಮತ್ತು ಕ್ರೀಡೆಗಳು ಹಾಗೂ ನೈತಿಕ ಪದ್ಧತಿಗಳು, ಸಂಪ್ರದಾಯಗಳು, ಪಿತೃಗಳಿಗೆ ಮಾಡುವ ಉತ್ತರಕ್ರಿಯೆಗಳು–ಈ ಎಲ್ಲವನ್ನೂ ಈ ಸೂತ್ರಗಳಲ್ಲಿ ವಿಶದವಾಗಿ ನಿಯಮಿಸಲಾಗಿದೆ. ರಾಜನೀತಿಯನ್ನೂ ನಿಬಂಧಿಸಲಾಗಿದೆ. ಇಷ್ಟಲ್ಲದೆ ಈ ಸೂತ್ರಗಳು ಖಗೋಳಶಾಸ್ತ್ರ, ಜ್ಯೋತಿಶ್ಶಾಸ್ತ್ರಗಳ ಮತ್ತು ಆರೋಗ್ಯಶಾಸ್ತ್ರದ ನಿಯಮ ನಿಬಂಧನೆಗಳನ್ನೂ ಒಳಗೊಂಡಿವೆ. ಅದರಿಂದಾಗಿ ಪ್ರಾಚೀನ ಹಿಂದೂ ಸಮಾಜದ ಚಿತ್ರವನ್ನು ಇವು ಸ್ಪಷ್ಟವಾಗಿ ರೂಪಿಸುತ್ತವೆ.

ವರ್ಣಗಳು: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ವರ್ಣಗಳು ನಾಲ್ಕು. ಇವು ಭಿನ್ನಭಿನ್ನವಾದ ಸಾಮಾಜಿಕ ಜೀವನವನ್ನು ಸೂಚಿಸುವಂಥವು. ಒಂದೊಂದು ವರ್ಣಕ್ಕೂ ಪ್ರತ್ಯೇಕ ನಿಬಂಧನೆಗಳುಂಟು. ಚೂಡಾಕರ್ಮ, ಉಪನಯನ, ವಿವಾಹ ಮುಂತಾದ ಸಂಸ್ಕಾರಗಳಿಗೆ ವರ್ಣಭೇದದ ಪ್ರಕಾರ ಬೇರೆ ಬೇರೆ ವಯಸ್ಸುಗಳನ್ನು, ಕಾಲಕ್ರಮಗಳನ್ನು ನಿಬಂಧಿಸಲಾಗಿದೆ. ಆ ಸಂಸ್ಕಾರ ಕಾಲಗಳಲ್ಲಿ ಧರಿಸಬೇಕಾದ ಉಡಿಗೆತೊಡಿಗೆಗಳು ಉಚ್ಚರಿಸುವ ಮಂತ್ರಗಳು ಬೇರೆಬೇರೆಯಾಗಿವೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನು ದ್ವಿಜರೆಂದೂ ಶೂದ್ರವರ್ಣದವರನ್ನು ಉಪನಯನವಿಲ್ಲದವರೆಂದೂ ಹೇಳಲಾಗಿದೆ. ಇಲ್ಲಿ ಸಂಕರವಾದ ವರ್ಣಗಳ ನಿರೂಪಣೆಯೂ ಇದೆ. ಗೃಹ್ಯಸೂತ್ರಗಳಲ್ಲಿ ವರ್ಣಗಳನ್ನು ಮೇಲುಕೀಳೆಂದಾಗಲೀ, ಅಸ್ಪೃಶ್ಯರೆಂದು ಕೆಲವರನ್ನು ಸಮಾಜ ಬಹಿಷ್ಕರಿಸಬೇಕೆಂದಾಗಲೀ ಹೇಳಿಲ್ಲ.

ವಿವಾಹ ಪದ್ಧತಿ: ಧರ್ಮಸೂತ್ರಗಳಲ್ಲಿಯೂ ಮನು ಮತ್ತು ಯಾಜ್ಞವಲ್ಕ್ಯ ಸ್ಮೃತಿಗಳಲ್ಲಿಯೂ ನಿರೂಪಿಸಲಾಗಿರುವ ಎಂಟು ವಿವಾಹ ಪದ್ಧತಿಗಳನ್ನು ಆಶ್ವಲಾಯನ ಗೃಹ್ಯಸೂತ್ರ ನಿರೂಪಿಸುತ್ತದೆ. ಬ್ರಾಹ್ಮ, ದೈವ, ಪ್ರಾಜಾಪತ್ಯ, ಆರ್ಷ, ಅಸುರ, ಗಾಂಧರ್ವ, ಪೈಶಾಚ, ರಾಕ್ಷಸ ಎಂಬ ಎಂಟು ಬಗೆಯ ವಿವಾಹ ಪದ್ಧತಿಗಳಲ್ಲಿ ಮೊದಲನೆಯ ನಾಲ್ಕು ಪದ್ಧತಿಗಳನ್ನು ಸಮಾಜ ಪುರಸ್ಕರಿಸುತ್ತಿತ್ತು. ಇವು ಆರ್ಯರ ಸಾಮಾಜಿಕ ಪ್ರಗತಿಯನ್ನು ಸೂಚಿಸುತ್ತವೆ. ಉಳಿದ ನಾಲ್ಕು ಪದ್ಧತಿಗಳು ಆರ್ಯರಲ್ಲದವರಲ್ಲಿ ಆಚರಣೆಯಲ್ಲಿದ್ದ ಪದ್ಧತಿಗಳು. ಕ್ರಮೇಣ ಆರ್ಯರು ರಾಕ್ಷಸ ಮತ್ತು ಗಾಂಧರ್ವ ಪದ್ಧತಿಗಳನ್ನು ಕ್ಷತ್ರಿಯರಿಗೆ ಮಾತ್ರ ಸಮ್ಮತವೆಂದು ಅನುಮೋದಿಸಿದರು. ಸಮಾಜ ಸಮ್ಮತವಾದ ವಿವಾಹ ಪದ್ಧತಿಗಳಲ್ಲಿ ವಧೂವರರನ್ನು ಹಿರಿಯರು ಪರೀಕ್ಷಿಸುವ ಅಂಗ ಮೊದಲನೆಯದು. ವಧುವಿಗೆ ಕೆಲವು ಲಕ್ಷಣಗಳಿರಬೇಕೆಂದು ನಿಬಂಧಿಸಲಾಗಿದೆ. ಅಂತೆಯೇ ವರನಿಗೂ ಕೆಲವು ಯೋಗ್ಯಲಕ್ಷಣಗಳಿರ ಬೇಕು. ಇವು ಮುಖ್ಯವಾಗಿ ದೃಢಕಾಯ, ಯೌವನ, ಬೌದ್ಧಿಕ ವಿಕಾಸ ಮತ್ತು ಮಂಗಳ ಸೂಚಕ ಚಿಹ್ನೆಗಳು. ಎಲ್ಲಕ್ಕೂ ಶ್ರೇಷ್ಠವಾದುದು ಸೌಶೀಲ್ಯ. ಕೆಲವು ಗೃಹ್ಯಸೂತ್ರಗಳಲ್ಲಿ ಬಾಲ್ಯವಿವಾಹ ಪದ್ಧತಿಗೆ ಪ್ರಾಶಸ್ತ್ಯ ಕೊಡಲಾಗಿದೆ. ಆದರೆ ಗರ್ಭಾದಾನ ಸಂಸ್ಕಾರವನ್ನು ವಿವಾಹದ ಕೊನೆಯ ಅಂಗವಾಗಿ ಸೇರಿಸಿರುವುದರಿಂದ ಕನ್ಯೆಗೆ ಸುಮಾರು ಹದಿಮೂರಕ್ಕೆ ಮೀರಿದ ವಯಸ್ಸನ್ನು ನಿಬಂಧಿಸಲಾಗಿತ್ತೆಂದು ಹೇಳಬಹುದು. ಪಾರಸ್ಕರ ಗೃಹ್ಯಸೂತ್ರ ಬ್ರಾಹ್ಮಣನಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳ ಕನ್ಯೆಯರನ್ನು ವಿವಾಹವಾಗುವ ಅರ್ಹತೆಯನ್ನು ಕೊಟ್ಟಿದೆ. ಅಂತೆಯೇ ಕ್ಷತ್ರಿಯ ತನ್ನ ಮತ್ತು ವೈಶ್ಯವರ್ಣಗಳ ಇಬ್ಬರನ್ನೂ ವೈಶ್ಯ ತನ್ನ ಮತ್ತು ಶೂದ್ರವರ್ಣಗಳ ಇಬ್ಬರನ್ನೂ ವಿವಾಹವಾಗಲು ಅನುಮತಿ ಇದೆ. ಆದರೆ ಏಕಪತ್ನೀವ್ರತಸ್ಥನಿಗೆ ಹೆಚ್ಚು ಗೌರವವಿತ್ತು. ಆರ್ಷ ವಿವಾಹ ಪದ್ಧತಿಯಲ್ಲಿ ಕನ್ಯಾಶುಲ್ಕದ ಸೂಚನೆಯೂ ಬ್ರಾಹ್ಮ, ದೈವ, ಪ್ರಾಜಾಪತ್ಯ ಪದ್ಧತಿಗಳಲ್ಲಿ ವರದಕ್ಷಿಣೆಯ ಸೂಚನೆಯೂ

ಇದೆ. ವಿವಾಹ ಕೇವಲ ದೈಹಿಕ ಸಂಬಂಧ ಮಾತ್ರವೇ ಆಗಿರದೆ, ಶಾಶ್ವತವಾದ ಧಾರ್ಮಿಕ ಸಂಬಂಧವೆಂಬುದನ್ನು ಕನ್ಯಾದಾನ, ಪಾಣಿಗ್ರಹಣ, ಸಪ್ತಪದಿ ಎಂಬ ವಿವಾಹ ಸಂಸ್ಕಾರಗಳ ಕಾಲದಲ್ಲಿ ವಧೂವರರು ಉಚ್ಚರಿಸುವ ಮಂತ್ರಗಳು ಸ್ಪಷ್ಟಪಡಿಸುತ್ತವೆ. ಸತ್ಪುತ್ರರನ್ನು ಪಡೆದು ಕುಲಗೌರವವನ್ನು ವೃದ್ಧಿಸುವುದೇ ವಿವಾಹದ ಮುಖ್ಯಧ್ಯೇಯವೆಂದು ಗೃಹ್ಯಸೂತ್ರಗಳು ಹೇಳಿವೆ. ಸ್ತ್ರೀಯರಿಗೆ ಉನ್ನತವಾದ ಸ್ಥಾನಮಾನಗಳನ್ನು ಕೊಡಲಾಗಿದ್ದರೂ ಪುತ್ರನನ್ನು ಪಡೆಯಬೇಕೆಂಬುದೇ ವಿವಾಹ, ಪುಂಸವನ, ಸೀಮಂತ ಕಾಲಗಳಲ್ಲಿ ಉಚ್ಚರಿಸಲಾಗುವ ಮಂತ್ರಗಳ ಉದ್ದೇಶವಾಗಿದೆ. ಆರ್ಯಸಮಾಜ ಕೃಷಿಪ್ರಧಾನವಾಗಿದ್ದುದರಿಂದ ಗಂಡು ಸಂತತಿಗೆ ಪ್ರಾಧಾನ್ಯವಿತ್ತು.

ಕೌಟುಂಬಿಕ ಜೀವನ: ಗೃಹಸ್ಥಾಶ್ರಮ ಸಾಮಾಜಿಕ ಜೀವನದಲ್ಲಿ ಅತ್ಯಂತ ಮಹತ್ತ್ವದ ಸ್ಥಾನವನ್ನು ಪಡೆದಿತ್ತು. ಗೃಹ್ಯಸೂತ್ರಗಳಲ್ಲಿ ಇದರ ಪ್ರಾಮುಖ್ಯವನ್ನು ವಿವರಿಸಲಾಗಿದೆ. ಗೃಹಸ್ಥ ದೇವಋಣ, ಪಿತೃಋಣಗಳನ್ನು ತೀರಿಸುವುದಲ್ಲದೆ ಮನುಷ್ಯ ಋಣವನ್ನು ನಾನಾ ರೀತಿಯಲ್ಲಿ ಸಲ್ಲಿಸಬೇಕು. ಅತಿಥಿಗಳನ್ನು ದೇವರಂತೆ ಕಾಣಬೇಕು. ಅವನ ಕುಟುಂಬ ಸತ್ಪುತ್ರರಿಂದಲೂ ಗೋಧಾನ್ಯಗಳಿಂದಲೂ ಸಮೃದ್ಧವಾಗಿದ್ದು, ಸ್ತ್ರೀಯರು ಗೃಹದೇವತೆಗಳಂತೆ ಅಲ್ಲಿ ಶೋಭಿಸುತ್ತಿರಬೇಕು. ಅವನು ಸಾಮಾಜಿಕ ಉನ್ನತಿಗೆ ಯಾವ ದೋಷವೂ ಬಾರದಂತೆ ಯಥೋಚಿತವಾಗಿ ನಡೆದುಕೊಳ್ಳಬೇಕು ಮತ್ತು ಸೇವಾನಿರತನಾಗಿರಬೇಕು. ಗೃಹ್ಯಸೂತ್ರಗಳ ನಿಬಂಧನೆಗಳು ಅವಿಭಕ್ತ ಕುಟುಂಬಕ್ಕೆ ಅನ್ವಯಿಸುವಂಥವು.

ಗೃಹ್ಯಸೂತ್ರಗಳು ಗೃಹನಿರ್ಮಾಣಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿವೆ. ಮುಖ್ಯ ದ್ವಾರ ಪೂರ್ವಾಭಿಮುಖ ಅಥವಾ ಉತ್ತರಾಭಿಮುಖವಾಗಿ ಇರಬೇಕು. ಪಶ್ಚಿಮಾಭಿಮುಖವಾಗಿರಕೂಡದು. ಭೂಮಿ ಸಮನಾಗಿರಬೇಕು. ಭದ್ರವಾಗಿರಬೇಕು. ಹೊರಗೆ ಸಂಚರಿಸುವವರಿಗೆ ಗೃಹಸ್ಥ ಮಾಡುವ ಹೋಮಾದಿಕಾರ್ಯಗಳಾಗಲೀ ಅವನ ಆಹಾರ ಸೇವನೆಯಾಗಲೀ ಕಾಣುವಂತಿರಬಾರದು. ಗೃಹಪ್ರವೇಶಕಾಲದಲ್ಲಿ ಮಾಡಬೇಕಾದ ವಾಸ್ತುಶಮನ ಎಂಬ ಹೋಮವನ್ನು ವಿವರವಾಗಿ ಹೇಳಲಾಗಿದೆ. ಗೃಹಸ್ಥನ ನೆಲೆಯಾದ ಗೃಹವನ್ನು ಅತ್ಯಂತ ಪ್ರೀತಿಯಿಂದ ಕಾಪಾಡಬೇಕೆಂದು ಗೃಹ್ಯಸೂತ್ರಗಳು ನಿಬಂಧಿಸಿವೆ.

ಶಿಕ್ಷಣ ಕ್ರಮ : ಗುರುಕುಲವಾಸದಲ್ಲಿ ವಿದ್ಯಾರ್ಜನೆ ಮಾಡಿ ನೈತಿಕಜೀವನವನ್ನು ನಡೆಸಿಕೊಂಡು ಹೋಗುವುದೇ ಬ್ರಹ್ಮಚರ್ಯಾಶ್ರಮದ ಮುಖ್ಯ ಧ್ಯೇಯವಾಗಿತ್ತು. ಇದರಲ್ಲಿ ಮಾನವನ ಶ್ರೇಯಸ್ಸಿಗೆ ಭದ್ರವಾದ ಅಡಿಪಾಯವನ್ನು ಹಾಕಲಾಗಿದೆ. ಗುರುಶಿಷ್ಯರ ಸಂಬಂಧ ನಿಕಟವಾಗಿರಬೇಕೆಂದು ಗುರುಕುಲವಾಸದ ಉದ್ದೇಶ. ಗುರುಕುಲವಾಸ ಉಪನಯನ ಸಂಸ್ಕಾರದ ಅನಂತರ ಪ್ರಾರಂಭವಾಗುತ್ತದೆ. ಉಪನಯನ ಸಂಸ್ಕಾರದ ಮಹತ್ತ್ವವನ್ನು ಈ ಸೂತ್ರಗಳು ವಿಶದಪಡಿಸಿವೆ. ವ್ಯಾಸಂಗದ ಅವಧಿಯನ್ನು ಹನ್ನೆರಡರಿಂದ ನಲವತ್ತೆಂಟು ವರ್ಷಗಳವರೆಗೆಂದು ನಿಯಮಿಸಲಾಗಿದೆ. ಅಂದರೆ ವೇದಾಧ್ಯಯನಕ್ಕೆ ದೀರ್ಘಕಾಲದ ಅವಧಿ ಆವಶ್ಯಕವಾಗಿತ್ತು. ಅಧ್ಯಯನದೊಂದಿಗೆ ಉಪವಾಸಾದಿ ವ್ರತಗಳನ್ನು ನಿಬಂಧಿಸಲಾಗಿದ್ದಿತು. ದೊಡ್ಡ ದೊಡ್ಡ ಸಭೆಗಳಲ್ಲಿ ಚರ್ಚಾಕೂಟಗಳನ್ನು ಏರ್ಪಡಿಸುವ ಪದ್ಧತಿಯೂ ಇತ್ತು. ಸ್ನಾತಕವಾಗಿ ಮನೆಗೆ ಹಿಂದಿರುಗಿದ ಮೇಲೆ ಗೃಹಸ್ಥಾಶ್ರಮಕ್ಕೆ ಪ್ರವೇಶ. ಸ್ನಾತಕನಾದ ಅನಂತರವೂ ಅವನು ವೇದಾಧ್ಯಯನ ಮತ್ತು ನೈತಿಕ ನಿಯಮಗಳನ್ನು ತ್ಯಜಿಸಕೂಡದೆಂದು ವಿಧಿಸಲಾಗಿದೆ.

ಶಿಕ್ಷಣದಲ್ಲಿ ವ್ಯಾಯಾಮ ಮತ್ತು ಅಂಗಸಾಧನೆಗೂ ಅವಕಾಶವನ್ನು ಕಲ್ಪಿಸಲಾಗಿದೆ. ಪ್ರಾಣಾಯಾಮವನ್ನು ಸಂಧ್ಯಾಕ್ರಮದಲ್ಲಿ ಸೇರಿಸಲಾಗಿದೆ.

ಗೃಹ್ಯಸೂತ್ರಗಳಲ್ಲಿ ಸಂಗೀತ ನಾಟ್ಯ ಮತ್ತು ಕ್ರೀಡೆಗಳು-ಇಂಥ ಮನರಂಜನ ಕಾರ್ಯಕ್ರಮಗಳ ನಿರೂಪಣೆಯೂ ಇದೆ.

ಇವುಗಳಲ್ಲಿ ಕಾಣುವ ಜೀವನದೃಷ್ಟಿ ಆಶಾದಾಯಕವಾದುದು, ಸುಭದ್ರವಾದುದು. ಆದರೆ ಹಿಂದೂ ಧರ್ಮಕ್ಕನುಸಾರವಾಗಿ ಮಾನವನ ಜೀವನ ಮುಖ್ಯವಾಗಿ ಆಧ್ಯಾತ್ಮಿಕ ರೀತಿಯದು. ಅವನ ಕರ್ಮಗಳು ಕೇವಲ ಲೌಕಿಕ ಹಿತಕ್ಕೋಸ್ಕರ ಮಾಡುವಂಥವಾಗಿರದೆ ಪ್ರೇಯಸ್ಸಿಗಿಂತಲೂ ಶ್ರೇಯಸ್ಸಿಗೆ ಹೆಚ್ಚು ಗಮನ ಕೊಡುವಂಥವುಗಳಾಗಿವೆ. ಪ್ರತಿಯೊಂದು ಕ್ರಿಯೆಯನ್ನು ಒಂದು ಆರಾಧನೆಯಂತೆ ಭಾವಿಸಲಾಗಿದೆ. ಮಂತ್ರಗಳ ಸಹಿತವೇ ಅವನು ನಿತ್ಯಕರ್ಮಗಳನ್ನು ಆಚರಿಸಬೇಕು. ಮಂತ್ರಬಲದಿಂದ ಶತ್ರುಗಳನ್ನು ಕೂಡ ಗೆಲ್ಲಬಹುದೆಂದು ಗೃಹ್ಯಸೂತ್ರಗಳು ಹೇಳಿವೆ. ಜೀವನದ ಹೋರಾಟದಲ್ಲಿ ಜಯಿಸಿ ಧನಕನಕ ವಸ್ತುಗಳನ್ನು ಸಮೃದ್ಧವಾಗಿ ಪಡೆದು ಸುಖಶಾಂತಿಗಳಿಂದ ಬಾಳಬೇಕೆಂದು ಪ್ರಾರ್ಥಿಸುವ ಮಂತ್ರಗಳಿವೆ. ಗೋಸಂಪತ್ತಿಗಾಗಿ ಪ್ರಾರ್ಥಿಸುವ ಮಂತ್ರಗಳೂ ಇವೆ.

ಧರ್ಮ, ಅರ್ಥ, ಕಾಮ ಎಂಬ ಪುರುಷಾರ್ಥಗಳು ಅಂತಿಮವಾಗಿ ಮೋಕ್ಷವೆಂಬ ಪರಮಗತಿಗೆ ಸಾಧನಗಳೇ ಹೊರತು ಅವುಗಳಿಗಾಗಿಯೇ ಅವು ಅಪೇಕ್ಷಿತವಲ್ಲ ಎಂದು ಗೃಹ್ಯಸೂತ್ರಗಳ ಎಲ್ಲ ನಿಬಂಧನೆಗಳ ಒಟ್ಟು ಸಾರಾಂಶವಾಗಿದೆ. **ನೋಡಿ-ಆಪಸ್ತಂಬ, ಆಶ್ವಲಾಯನ, ಗಾರ್ಹಸ್ಥ್ಯ.**

(ಎಸ್.ಎಸ್.ಆರ್.)

**ಗೆಂಟ್ಸ್, ಫ್ರೀಡ್ರಿಕ್ :** 1764-1832. ಜರ್ಮನ್ ರಾಜಕೀಯ ಪತ್ರಿಕೋದ್ಯಮಿ; ನೆಪೋಲಿಯನನ ಮತ್ತು ಫ್ರೆಂಚ್ ಕ್ರಾಂತಿ ತತ್ತ್ವಗಳ ವಿರುದ್ಧ ಬರೆದ ಲೇಖನಗಳಿಂದಾಗಿಯೂ ಆಸ್ಟ್ರಿಯದ ರಾಜಕಾರಣಿ ಮೆಟರ್ನಿಕನ ಆಪ್ತಸಲಹೆಗಾರನೆಂದಾಗಿಯೂ ಪ್ರಸಿದ್ಧನಾಗಿದ್ದವ. ಜನನ 1764ರ ಮೇ 2ರಂದು, ಬ್ರೆಸ್ಲೌದಲ್ಲಿ. 1779ರಲ್ಲಿ ಇವನ ತಂದೆ ಪ್ರಷ್ಯದ ಟಂಕಸಾಲೆಯ ಮಹಾನಿರ್ದೇಶಕನಾಗಿ ನೇಮಕವಾದ್ದರಿಂದ ತಂದೆತಾಯಿಯರೊಂದಿಗೆ ಗೆಂಟ್ಸನೂ ಬರ್ಲಿನಿಗೆ ಹೋದ. ಶಾಲೆಯಲ್ಲಿ ಅಭ್ಯಾಸ ಮುಗಿಸಿದ



ಮೇಲೆ ಕೋನಿಗ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ನ್ಯಾಯಶಾಸ್ತ್ರ ಅಭ್ಯಸಿಸಿದ. ಅಲ್ಲಿ ಇವನು ಇಮಾನ್ಯುಯೆಲ್ ಕ್ಯಾಂಟನಿಂದ ಪ್ರಭಾವಿತನಾದ. 1785ರಲ್ಲಿ ಇವನು ಬರ್ಲಿನ್‌ನಲ್ಲಿ ಪ್ರಷ್ಯನ್ ಸರ್ಕಾರದ ಸೇವೆಗೆ ಸೇರಿ 1793ರ ವೇಳೆಗೆ ಯುದ್ಧದ ಇಲಾಖೆಯಲ್ಲಿ ಸಲಹೆಗಾರನಾದ.

ಫ್ರೆಂಚ್ ಕ್ರಾಂತಿಯನ್ನು ಸಮರ್ಥಿಸಿ ಗ್ರಂಥ ಬರೆದವರಲ್ಲಿ ಗೆಂಟ್ಸನೂ ಒಬ್ಬ. ಆದರೆ ಕ್ರಮೇಣ ಇವನ ನಿಲುವು ಬದಲಾಯಿತು. ಕ್ಯಾಂಟನ ನ್ಯಾಯ ಸಿದ್ಧಾಂತಗಳು, ಇಂಗ್ಲಿಷ್ ನ್ಯಾಯಶಾಸ್ತ್ರ- ಇವು ಇವನ ಮನಸ್ಸನ್ನು ಪರಿವರ್ತಿಸಿದುವು. ಬರ್ಕನ ರಿಫ್ಲೆಕ್ಷನ್ಸ್ ಆನ್ ದಿ ರೆವಲ್ಯೂಷನ್ ಇನ್ ಫ್ರಾನ್ಸ್ (1793) ಎಂಬ ಕೃತಿಯನ್ನು ಇವನು ಅನುವಾದಿಸಿ ವ್ಯಾಖ್ಯಾನದೊಂದಿಗೆ ಪ್ರಕಟಿಸಿದ. ಇದರಿಂದ ಯುರೋಪಿನಲ್ಲಿ ಇವನ ಹೆಸರು ಪ್ರಸಿದ್ಧವಾಯಿತಲ್ಲದೆ ಇವನ ಜೀವನಗತಿ ಮಾರ್ಪಟ್ಟಿತು. ತದನಂತರ ಇವನು ರಾಜಕೀಯ ವಿಚಾರಗಳ ಬಗ್ಗೆಯೇ ಬರೆಯಲು ತೀರ್ಮಾನಿಸಿದ. ಕ್ರಾಂತಿಕಾರಿ ಸಿದ್ಧಾಂತಗಳ ವಿರುದ್ಧ ಹೋರಾಟ ಮುಂದುವರಿಸಿದ. ಕ್ರಮೇಣ ತನ್ನದೇ ಆದ, ಅತಿ ಸಂಪ್ರದಾಯಬದ್ಧವಾದ ರಾಷ್ಟ್ರ ಪರಿಕಲ್ಪನೆಯೊಂದನ್ನು ಸೂತ್ರೀಕರಿಸಿದ (1798-99). ಪ್ರಜಾಸಾರ್ವಭೌಮತ್ವ, ಮಾನವ ಹಕ್ಕುಗಳು, ರಾಜಕೀಯ ಸಮತೆ, ಸ್ವಾತಂತ್ರ್ಯ ಮುಂತಾದ ಪರಿಕಲ್ಪನೆಗಳನ್ನು ವಿರೋಧಿಸಿದ.

1794-97ರ ನಡುವೆ ಗೆಂಟ್ಸ್ ಅನೇಕ ಕ್ರಾಂತಿವಿರೋಧಿ ಕೃತಿಗಳನ್ನು ಭಾಷಾಂತರಿಸಿ ವ್ಯಾಖ್ಯಾನಗಳೊಂದಿಗೆ ಪ್ರಕಟಿಸಿದ. ಈತ ಆರಂಭಿಸಿದ ನೊಮೆಡಾಯಿಷೆ ಮೋನಾಟ್‌ಶ್ರಿಫ್ಟ್ ಎಂಬ ಪತ್ರಿಕೆ ಒಂದು ವರ್ಷದಲ್ಲಿ ಕೊನೆಗೊಂಡಿತು.

1799-1800ರ ರಲ್ಲಿ ಪ್ರಷ್ಯನ್ ಸರ್ಕಾರದ ಧನಸಹಾಯದಿಂದ ಎರಡು ವರ್ಷಕಾಲ ಪ್ರಕಟವಾದ ಹಿಸ್ಟೋರಿಶೆಸ್ ಜರ್ನಲ್‌ನ ಸಂಚಿಕೆಗಳಲ್ಲಿ ಗೆಂಟ್ಸ್ ಜರ್ಮನ್ ರಾಜಕೀಯ ಕುರಿತು ಬರೆದು ರಾಜಕೀಯ ಪತ್ರಿಕೋದ್ಯಮವನ್ನು ಪರಾಕಾಷ್ಠೆಗೆ ಒಯ್ದ.

ಕ್ರಾಂತಿಯ ಪ್ರೇರಣೆಗಳು, ಅದರ ವಿವಿಧ ಹಂತಗಳು, ಕ್ಷಿಪ್ರಾಕ್ರಮಣ ಮತ್ತು ಅದರ ಪರ್ಯವಸಾನ, ಅದರ ಸಾಮಾಜಿಕ ಮುಖಗಳು-ಇವನ್ನೆಲ್ಲ ವಿಶ್ಲೇಷಿಸುವುದರೊಂದಿಗೆ ಕ್ರಾಂತಿಯನ್ನು ಇವನು ಬಲವಾಗಿ ವಿರೋಧಿಸಿದ. ಕ್ರಾಂತಿವಾದಿ ಫ್ರಾನ್ಸಿನ ವಿರುದ್ಧವಾಗಿ ಯುದ್ಧ ಮಾಡುವುದು ಕೂಡ ಸರಿಯೆಂದು ಇವನು ವಾದಿಸಿದ. ಇವನ ಈ ನಿಲುವಿನಿಂದಾಗಿ ಅನೇಕ ವಾದವಿವಾದಗಳುಂಟಾದುವು. ಪ್ರಷ್ಯದ ತಟಸ್ಥ ನಿಲುವನ್ನು ಇವನು ಟೀಕಿಸಿದ. ಪ್ರಷ್ಯ-ಆಸ್ಟ್ರಿಯಗಳು ಪರಸ್ಪರವಾಗಿ ವಿರೋಧಿಸುವ ಬದಲು ಒಂದಾಗಿ ಫ್ರಾನ್ಸನ್ನೆದುರಿಸಬೇಕೆಂಬುದು ಇವನ ವಾದವಾಗಿತ್ತು. ಇಂಗ್ಲೆಂಡು ಯುರೋಪಿನ ಸ್ವಾತಂತ್ರ್ಯರಕ್ಷಕ ದೇಶವೆಂದು ಹೊಗಳಿದ. ಇವನ ಈ ಎಲ್ಲ ಭಾವನೆಗಳಿಂದಾಗಿ ಪ್ರಷ್ಯದಲ್ಲಿ ಇವನಿಗಿದ್ದ ಪ್ರಭಾವಯುತ ಸ್ಥಾನ ನಷ್ಟವಾಯಿತು. ತಾನಾಗಿ ಆರಿಸಿಕೊಂಡ ರಾಜಕೀಯ ಪತ್ರಿಕೋದ್ಯಮವನ್ನು ಇವನು ಬಿಡಲು ಸಿದ್ಧನಿರಲಿಲ್ಲ. ಆದುದರಿಂದ ಜೀವನದಲ್ಲಿ ಇವನು ಬಿಕ್ಕಟ್ಟನ್ನೆದುರಿಸಬೇಕಾಯಿತು. ವೈಮಾರಿನಲ್ಲಿ ನೆಲೆಸಲು ಈತ ಮಾಡಿದ ಯತ್ನ ವಿಫಲವಾಯಿತು. ಆಸ್ಟ್ರಿಯದಿಂದ ಇವನಿಗೆ ಒಂದು ಔಪಚಾರಿಕ ಸ್ಥಾನ ಲಭ್ಯವಾಯಿತು. ಇದರಿಂದ ಇವನಿಗೆ ಸಾಮಾಜಿಕ ಮರ್ಯಾದೆಯೂ ಆರ್ಥಿಕ ಭದ್ರತೆಯೂ ಲಭ್ಯವಾಯಿತು. ರಾಜಕೀಯ ಲೇಖಕನಾಗಿ ಸ್ವತಂತ್ರನಾಗಿ ಮುಂದುವರಿಯುವುದು ಸಾಧ್ಯವಾಯಿತು.


ಲಂಡನಿಗೊಮ್ಮೆ ಗೆಂಟ್ಸ್ ಭೇಟಿ ನೀಡಿದಾಗ (1802) ಅಲ್ಲಿ ಇವನಿಗೆ ಭವ್ಯ ಸ್ವಾಗತ ದೊರಕಿತು. ಇಂಗ್ಲೆಂಡು ಈತನಿಗೆ ಆರ್ಥಿಕ ನೆರವು ನೀಡಿತು. ವಿಯೆನ್ನಾದಲ್ಲಿ ಇವನು ತನ್ನ ಕೆಲಸ ಮುಂದುವರಿಸಿದ.

ಆಸ್ಟ್ರಿಯದ ವಿದೇಶಾಂಗ ನೀತಿಯನ್ನು ಪರಿವರ್ತಿಸಬೇಕೆಂಬ ಈತನ ಪ್ರಯತ್ನ ಯಶಸ್ವಿಯಾಗಲಿಲ್ಲ. ನೆಪೋಲಿಯನ್ ವಿರುದ್ಧವಾದ ಚಳವಳಿಯನ್ನು ಇವನು ಮುಂದುವರಿಸಿದ. ತನ್ನ ಕಾಲದ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಅನೇಕ ಲೇಖನಗಳನ್ನು ಬರೆದ. 1805ರಲ್ಲಿ ಆಸ್ಟ್ರಿಯಕ್ಕೆ ಸೋಲಾದಾಗ ಗೆಂಟ್ಸ್ ಬೊಹಿಮಿಯಕ್ಕೂ ಅಲ್ಲಿಂದ ಡ್ರೆಸ್ಡೆನ್‌ಗೂ ಹೋದ. 1806ರಲ್ಲಿ ಪ್ರಷ್ಯ ಕುಸಿಯಿತು. ಗೆಂಟ್ಸ್ ಡ್ರೆಸ್ಡೆನನ್ನೂ ಬಿಟ್ಟು ಪ್ರಾಗಿಗೋ ಟೆಪ್ಲಿಟ್ಜ್‌ಗೋ ಹೋದ. ನೆಪೋಲಿಯನನ ವಿರುದ್ಧವಾಗಿ ಅಭಿಪ್ರಾಯವನ್ನು ಸಂಘಟಿಸಲು ಯತ್ನಿಸಿದ. ಜರ್ಮನಿಯ ಮತ್ತು ಯುರೋಪಿನ ಪುನರ್‌ರಚನೆಯ ಬಗ್ಗೆ ಚಿಂತೆ ಹರಿಸಿದ. ಸ್ವಲ್ಪ ಕಾಲಾನಂತರ ಇವನು ವಿಯೆನ್ನಕ್ಕೆ ಹಿಂದಿರುಗಿದ. ಆಸ್ಟ್ರಿಯವನ್ನು ಮುಂದಿಟ್ಟುಕೊಂಡು ಜರ್ಮನಿಯನ್ನು ನೆಪೋಲಿಯನನ ವಿರುದ್ಧ ಎತ್ತಿ ನಿಲ್ಲಿಸುವ ಕ್ರಮಕ್ಕೆ ಗೆಂಟ್ಸ್ ನೆರವು ನೀಡಿದ. 1809ರಲ್ಲಿ ಆಸ್ಟ್ರಿಯದ ವಿಮೋಚನಾ ಹೋರಾಟ ವಿಫಲಗೊಂಡಿತು. ಗೆಂಟ್ಸ್ ನಿರಾಶೆಯಿಂದ ಇಂಗ್ಲೆಂಡಿಗೆ ಹೋಗಲು ಯತ್ನಿಸಿದ. ಅದೂ ಸಾಧ್ಯವಾಗಲಿಲ್ಲ.

ಕೊನೆಗೆ ನೆಪೋಲಿಯನನ ಪತನವಾಯಿತು. ಆದರೆ ಗೆಂಟ್ಸನಿಗೆ ಅಷ್ಟರಿಂದಲೇ ಸಮಾಧಾನವಾಗಲಿಲ್ಲ. ಯುರೋಪಿನಲ್ಲಿ ರಾಜಕೀಯ ಸುವ್ಯವಸ್ಥೆ ಏರ್ಪಡಬೇಕೆಂಬುದು ಇವನ ಇಚ್ಛೆಯಾಗಿತ್ತು. ಫ್ರಾನ್ಸನ್ನು ಎರಡನೆಯ ದರ್ಜೆಯ ರಾಷ್ಟ್ರವನ್ನಾಗಿ ಪರಿವರ್ತಿಸುವುದು ಇವನಿಗೆ ಒಪ್ಪಿಗೆಯಿರಲಿಲ್ಲ. ಇದರಿಂದ ಜರ್ಮನಿಗೆ ಇವನ ಮೇಲೆ ಕೋಪ ಬಂತು. ಗೆಂಟ್ಸ್ ಸಮಯಸಾಧಕನೆಂದು ಅದು ಇವನ ಹೆಸರಿಗೆ ಕಳಂಕ ಹಚ್ಚತೊಡಗಿತು. ಆದರೂ ವಿಯೆನ್ನ, ಆಕೆನ್, ಟ್ರಾಪೌ, ಲೇಬಾಕ್ ಮತ್ತು ವೆರೋನ ಕಾಂಗ್ರೆಸ್‌ಗಳ ಕಾರ್ಯದರ್ಶಿಯಾಗಿದ್ದ ಮೆಟರ್ನಿಕನ ಅನುಗ್ರಹದಿಂದಾಗಿ ಮತ್ತು ತನ್ನ ಸ್ವಂತ ವ್ಯಕ್ತಿತ್ವದಿಂದಾಗಿ ಗೆಂಟ್ಸ್ ಪ್ರಭಾವಶಾಲಿಯಾಗಿಯೇ ಉಳಿದ.

1815ರ ಅನಂತರದ ರಾಷ್ಟ್ರೀಯ ಮತ್ತು ಉದಾರವಾದಿ ಚಳವಳಿಗಳಿಗೆ ಇವನ ವಿರೋಧವಿತ್ತು. ಆದ್ದರಿಂದ ಇವನು ರಾಜಕೀಯ ಪ್ರತಿಗಾಮಿಯೆಂಬ ಆಪಾದನೆಗೆ ಗುರಿಯಾದ. ಅಖಿಲ ಯುರೋಪ್ ಒಕ್ಕೂಟಕ್ಕೆ ಇವು ವಿರೋಧಿಯೆಂಬುದು ಇವನ ಭಾವನೆ. ಜರ್ಮನಿಯ ಆರಂಭದ ಉದಾರವಾದಿ ಧೋರಣೆಯನ್ನು ಇವನು ಕ್ರಾಂತಿಕಾರಿಯೆಂದು ಭಾವಿಸಿದ್ದ. ಸೈನಿಕ ಪ್ರವೇಶನಗಳನ್ನು ಇವನು ವಿರೋಧಿಸಿದ. ಮೆಟರ್ನಿಕನ ನೆರವೂ ಇವನಿಗೆ ತಪ್ಪಿ ಹೋಯಿತು. 1832ರಲ್ಲಿ ಗೆಂಟ್ಸ್ ನಿಧನನಾದ. ಇವನ ಮರಣಾನಂತರವೂ ರಾಷ್ಟ್ರೀಯವಾದಿಗಳು ಮತ್ತು ಉದಾರವಾದಿಗಳು ಇವನನ್ನು ಟೀಕಿಸುವುದನ್ನು ನಿಲ್ಲಿಸಲಿಲ್ಲ. (ಎಚ್.ಎಂ.ಎನ್.ಆರ್.)

**ಗೆಂಡೆ ಮೀನು :** ಸೈಪ್ರಿನಿಫಾರ್ಮೀಸ್ ಗಣದ ಸೈಪ್ರಿನಿಡೀ ಕುಟುಂಬಕ್ಕೆ ಸೇರಿದ ಅನೇಕ ಜಾತಿಯ ಮೀನುಗಳಿಗೆ ಅನ್ವಯವಾಗುವ ಹೆಸರು. ಕಾರ್ಪ್ ಎಂಬುದು ಆಂಗ್ಲ ಭಾಷೆಯಲ್ಲಿ ಕರೆಯುವ ಸಾಮಾನ್ಯ ಹೆಸರು. ಗೆಂಡೆ ಮೀನುಗಳು ಸಿಹಿನೀರಿನಲ್ಲಿ ವಾಸ ಮಾಡುವಂಥವು. ಭಾರತದಲ್ಲಿ ಸ್ಥಳೀಯವಾಗಿ ದೊರಕುವ ಕೆಲವು ಪಂಟಿಯಸ್



ಅಥವಾ ಬಾರ್ಬಸ್ ಪ್ರಭೇದಗಳು, ಗಂಗಾನದಿ ಮೂಲದ ದೊಡ್ಡ ಗೆಂಡೆಗಳಾದ ಕಾಟ್ಲಾ, ರೋಹು, ಮೃಗಾಲ ಮೀನುಗಳು, ಅಲ್ಲದೆ ವಿದೇಶಿ ಮೂಲದ ಸಾಮಾನ್ಯ ಗೆಂಡೆ (ಸೈಪ್ರಿನಸ್ ಕಾರ್ಪಿಯೊ), ಬೆಳ್ಳಿಗೆಂಡೆ (ಹೈಪಾಫ್ತಾಲ್ಮಿಕ್ತಿಸ್ ಮಾಲಿಟ್ರಿಕ್ಸ್) ಮತ್ತು ಹುಲ್ಲು ಗೆಂಡೆ (ಟೀನೊಫಾರೊಂಗೊಡಾನ್ ಇಡೆಲ) ಮೀನುಗಳು ಹಾಗೂ ಕೃಷ್ಣಾ, ಗೋದಾವರಿ, ಕಾವೇರಿ ಮತ್ತಿತರ ನದಿ, ಜಲಾಶಯಗಳಲ್ಲಿ ಕಂಡುಬರುವ ಲೇಬಿಯೋ ಫಿಂಬ್ರಿಯೇಟಸ್, ಲೇಬಿಯೋ ಕೊಂಟಿಯಸ್, ಸಿರ್ಹೈನಸ್ ಸಿರ್ಹೋಸಾ ಮುಂತಾದ ಮೀನುಗಳಿಗೆ ಸಾಮಾನ್ಯವಾಗಿ ಕರೆಯುವ ಹೆಸರು ಗೆಂಡೆ ಮೀನುಗಳು. ಆದರೆ ಇವುಗಳನ್ನು ಅವುಗಳದೇ ಆದ ವಿಶಿಷ್ಟ ಹೆಸರುಗಳಿಂದಲೂ ಕರೆಯುವುದುಂಟು. ಭಾರತದ ದೊಡ್ಡ ಗೆಂಡೆಗಳನ್ನು ಮತ್ತು ವಿದೇಶಿ ಗೆಂಡೆಗಳನ್ನು ಹೊರತುಪಡಿಸಿ ಉಳಿದವು ಸಣ್ಣ ಹಾಗೂ ಮಧ್ಯಮ ಗಾತ್ರದವು. ಆದ್ದರಿಂದ ಇವುಗಳನ್ನು ಮೈನರ್ ಕಾರ್ಪ್ ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಗೆಂಡೆ ಮೀನುಗಳ ಬಣ್ಣ ಬಿಳಿ ಅಥವಾ ಬೂದು. ಕೆಲವಕ್ಕೆ ಸಣ್ಣ ಮೀಸೆಗಳಿವೆ (ಬಾರ್ಬಲ್ಸ್), ಇನ್ನು ಕೆಲವಕ್ಕೆ ಇಲ್ಲ. ಸಾಮಾನ್ಯವಾಗಿ ಹೊಟ್ಟೆ ಗುಂಡಗಿರುತ್ತದೆ. ಕಿವಿರು ಸೀಳುಗಳು ಅಗಲವಾಗಿರುತ್ತವೆ. ಪಾರ್ಶ್ವರೇಖೆ ಪೂರ್ಣವಾಗಿರುತ್ತದೆ.

ಗೆಂಡೆ ಮೀನುಗಳು ಸಸ್ಯಾಹಾರಿಗಳು. ನೀರಿನಲ್ಲಿ ಜೀವಿಸುವ ಪ್ಲವಕಗಳು, ಕೊಳೆಯುತ್ತಿರುವ ಸಸ್ಯ ಸಂಬಂಧೀ ವಸ್ತುಗಳೇ ಪ್ರಧಾನ ಆಹಾರ. ಇವಕ್ಕೆ ದವಡೆ ಹಲ್ಲಿಲ್ಲ. ಹುಲ್ಲು ಗೆಂಡೆ ಮೀನಿಗೆ ಗಂಟಲಿನಲ್ಲಿ ಹಲ್ಲುಗಳಿರುತ್ತವೆ. ಇದರಿಂದ ಅದು ಮೃದು ಜಲಸಸ್ಯಗಳನ್ನು ತಿನ್ನುತ್ತದೆ. ಕೆರೆ ಕುಂಟೆಗಳಲ್ಲಿ ಜಲಸಸ್ಯಗಳ ಜೈವಿಕ ನಿಯಂತ್ರಣಕ್ಕೆ ಇದು ಸೂಕ್ತ ಮೀನು. ಬಹುತೇಕ ಗೆಂಡೆ ಮೀನುಗಳು ತಿನ್ನಲು ಯೋಗ್ಯವಾದಂಥವು. ಒಳನಾಡು ಮೀನುಗಾರಿಕೆಯಲ್ಲಿ ಇವುಗಳ ಪಾತ್ರ ಹಿರಿದು. ಪ್ರಪಂಚಾದ್ಯಂತ 2003 ರಲ್ಲಿ ಸೈಪ್ರಿನಿಡೀ ಕುಟುಂಬಕ್ಕೆ ಸೇರಿದ ಸುಮಾರು 17.85 ದಶಲಕ್ಷಟನ್ ಮೀನುಗಳ ಉತ್ಪಾದನೆಯಾಗಿದೆಯೆಂದರೆ ಮೀನುಗಾರಿಕೆಯಲ್ಲಿ ಇದರ ಪ್ರಾಮುಖ್ಯ ಅರಿವಾಗುತ್ತದೆ. ದೊಡ್ಡಗೆಂಡೆ ಮೀನುಗಳು (ಕಾಟ್ಲಾ, ರೋಹು, ಮೃಗಾಲ) ಮತ್ತು ವಿದೇಶಿ ಗೆಂಡೆ ಮೀನು (ಸಾಮಾನ್ಯ ಗೆಂಡೆ, ಬೆಳ್ಳಿ ಗೆಂಡೆ, ಹುಲ್ಲುಗೆಂಡೆ) ಗಳನ್ನು ಒಂದೇ ಕೊಳದಲ್ಲಿ ಮಿಶ್ರ ಕೃಷಿ ಮಾಡಲು ಸಾಧ್ಯವಾದ್ದರಿಂದ ಹಾಗೂ ಈ ಮೀನುಗಳು ಶೀಘ್ರವಾಗಿ ಅಂದರೆ ವರ್ಷಕ್ಕೆ 1–2 ಕೆಜಿ ವರೆಗೆ ಬೆಳೆಯುವುದರಿಂದ ಮೀನುಕೃಷಿಗೆ ನೆಚ್ಚಿನ ತಳಿಗಳಾಗಿವೆ.

ವಿದೇಶಿ ಗೆಂಡೆಗಳು ಮೂಲತಃ ಚೀನ ಮತ್ತು ಮಧ್ಯ ಏಷ್ಯದ ಸಿಹಿನೀರಿನಲ್ಲಿ ಇದ್ದಂತಹವು. ಕಾಲಕ್ರಮೇಣ ಇವನ್ನು ಸಾಕಾಣೆಗಾಗಿ ಇತರ ದೇಶಗಳಿಗೂ ಕೊಂಡೊಯ್ಯಲಾಯಿತು. ಇವುಗಳಲ್ಲಿ ಸಾಮಾನ್ಯಗೆಂಡೆ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಕಾಣಸಿಗುತ್ತದೆ. ಇದು ಉಷ್ಣ ಪ್ರದೇಶಗಳಷ್ಟೆ ಅಲ್ಲದೆ ಸಮಶೀತೋಷ್ಣ ಮತ್ತು ಶೀತ ವಲಯಗಳಲ್ಲೂ ಹೊಂದಿಕೊಂಡು ಬದುಕಬಲ್ಲದ್ದಾಗಿದೆ. ಇದೇ ಮೀನಿನ ಅನೇಕ ತಳಿಗಳಿವೆ. ಉದಾ: ಮಿರರ್ ಕಾರ್ಪ್ (ಕನ್ನಡಿ ಮೀನು), ಸ್ಕೇಲ್ ಕಾರ್ಪ್, ಲೆದರ್ ಕಾರ್ಪ್.

ಗೆಂಡೆ ಮೀನುಗಳು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ದೊಡ್ಡ ಗೆಂಡೆಗಳು ಮೇ–ಆಗಸ್ಟ್ ತಿಂಗಳುಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಸಾಮಾನ್ಯ ಗೆಂಡೆ ವರ್ಷವೆಲ್ಲ ಮೊಟ್ಟೆಯಿಡುತ್ತದಾದರೂ ಜುಲೈ–ಆಗಸ್ಟ್ ಮತ್ತು ಫೆಬ್ರವರಿ–ಮಾರ್ಚಿ ಅವಧಿಯಲ್ಲಿ ಸಂತಾನೋತ್ಪತ್ತಿ ಅಧಿಕ. (ಬಿ.ಎಚ್.ಎಂ.; ಬಿ.ಎನ್.)

**ಗೆಕ್ಕೊ (ಹಲ್ಲಿ) :** ಸ್ಕ್ವಾಮೇಟ ಗಣದ ಗೆಕ್ಕೊನಿಡೆ ಕುಟುಂಬಕ್ಕೆ ಸೇರಿದ ಕೆಲವು ಸರೀಸೃಪಗಳಿಗಿರುವ ಸಾಮಾನ್ಯ ಹೆಸರು. ಉಷ್ಣವಲಯದಲ್ಲೆಲ್ಲಾ ಹರಡಿದೆ. ಭಾರತ, ದಕ್ಷಿಣ ಯುರೋಪ್, ಏಷ್ಯ, ಆಫ್ರಿಕ ಮತ್ತು ಅಮೆರಿಕಗಳಲ್ಲಿ 140ಕ್ಕೂ ಹೆಚ್ಚು ಪ್ರಭೇದಗಳು ಕಂಡುಬರುತ್ತವೆ. ಗೆಕೊ ಗೆಕೊ, ಫೆಲ್ಸುಮೊ ವಿನ್ಸೋನಿ, ಥಿಕಾಡ್ಯಾಕ್ಟೈಲಸ್ ರ್‍ಯಾಪಿಕಾಡಸ್, ಟರಂಟೊಲ ಮ್ಯಾನ್ರಿಟಾನಿಕ ಇವುಗಳಲ್ಲಿ ಕೆಲವು. ಅತಿ ಸಣ್ಣದಾದ ಹಲ್ಲಿಯ ಉದ್ದ 4 ಸೆಂಮೀ. ಟೋಕೆ ಹಲ್ಲಿ ಉಳಿದೆಲ್ಲವುದಕ್ಕಿಂತ ದೊಡ್ಡದು. ಸುಮಾರು 35 ಸೆಂಮೀ ಉದ್ದವಿದೆ.

ಮನೆಯ ಗೋಡೆ ಮೇಲೆಲ್ಲಾ ಹರಿದಾಡುವ ಸಾಮಾನ್ಯ ಹಲ್ಲಿಯ ವೈಜ್ಞಾನಿಕ ನಾಮ ಹೆಮಿಡ್ಯಾಕ್ಟೈಲಸ್ ಟರ್ಸಿಯಸ್. ಉದ್ದ ಸು. 10–12 ಸೆಂಮೀ. ತಲೆ ಗಿಡ್ಡ, ಮೂತಿ ಕೊಂಚ ಚೂಪು, ಬೆರಳುಗಳಲ್ಲಿ ನಖಗಳಿವೆ. ಅಷ್ಟೇ ಅಲ್ಲದೆ ಗೋಡೆಯ ಮೇಲೆ ಹರಿದಾಡಲು ಸಹಕರಿಸುವ ಅಂಟುತಟ್ಟೆಗಳೂ (ಅಡೆಸಿವ್ ಡಿಸ್ಕ್) ಇವೆ. ದೇಹದ ಮೇಲ್ಭಾಗ ಹಳದಿ ಮಿಶ್ರಿತ ಕಂದು. ಉದರ ಭಾಗ ಮಾಸಲು ಬಣ್ಣದ್ದು. ದೇಹ ಹುರುಪೆಗಳಿಂದ ಆವೃತವಾಗಿದೆ. ಬಾಲದ ಬುಡ ಕೊಂಚ ಉಬ್ಬಿಕೊಂಡಿದೆ. ಕಣ್ಣುಗಳು ಚಲಿಸುವ ರೆಪ್ಪೆಗಳಿಂದ ರಕ್ಷಿಸಲ್ಪಟ್ಟಿವೆ. ಕಶೇರುಕಮಣಿಗಳು ಆಂಫಿಸೀಲಸ್ ರೀತಿಯವು. ಇದು ಮಾಂಸಾಹಾರಿ. ಹುಳುಹುಪ್ಪಟೆಗಳು, ಕೀಟಗಳು, ಜೇಡಗಳು ಇತ್ಯಾದಿ ಇದರ ಆಹಾರ ಪ್ರಾಣಿಗಳು. ಶತ್ರುಗಳೆದುರಾದಾಗ ತನ್ನ ಬಾಲವನ್ನು ಕಡಿದುಕೊಳ್ಳುತ್ತದೆ (ಸ್ವಾಂಗೋಚ್ಛೇದನ–ಆಟೋಟೋಮಿ). ಶತ್ರುವಿನ ಗಮನವನ್ನು ತನ್ನಿಂದ ದೂರ ಸೆಳೆಯಲು ಈ ಪ್ರವೃತ್ತಿಯಿರಬೇಕು.

ಪೋಟೋ ಫ್ರೇಮಿನ ಹಿಂದೆಯೋ ಸಂಧಿಗಳಲ್ಲೋ ಸುಮಾರು 0.5–1 ಸೆಂಮೀ ವ್ಯಾಸದ ದುಂಡಾದ ಬಿಳಿಯ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯೊಡೆದು ಮರಿ ಹೊರಬರಲು ತಿಂಗಳುಗಳೇ ಬೇಕು. (ಎಸ್.ಕೆ.ಎಚ್.)

**ಗೆಜ಼ೆಟಿಯರ್ :** ಸ್ಥಳಗಳ, ಪ್ರದೇಶಗಳ, ದೇಶಗಳ ಹೆಸರುಗಳನ್ನೂ ಅವನ್ನು ಕುರಿತ ವಿವರಗಳನ್ನೂ ಒಳಗೊಂಡ ಕೋಶ (ಗೆಜ಼ೆಟಿಯರ್). ಗೆಜೆಟುಗಳಲ್ಲಿ ಅಥವಾ ವೃತ್ತಪತ್ರಿಕೆಗಳಲ್ಲಿ ಬರೆಯುವವನನ್ನು ಗೆಜ಼ೆಟಿಯರ್ ಎಂದು ಕರೆಯುವ ಪರಿಪಾಟಿ 18ನೆಯ ಶತಮಾನದಲ್ಲಿ ಇತ್ತು. ವೃತ್ತಪತ್ರಿಕೆಯನ್ನೂ ಈ ಹೆಸರಿನಿಂದ ಕರೆಯುತ್ತಿದ್ದದ್ದುಂಟು. ಸ್ಥಳಗಳ, ಪ್ರದೇಶಗಳ, ದೇಶಗಳ ವಿವರಣೆ, ಇತಿಹಾಸ, ಅಂಕಿ–ಅಂಶ ಮುಂತಾದವನ್ನು ಸುದೀರ್ಘವಾಗಿ ಒಳಗೊಂಡ ಕೋಶಸದೃಶ ಗ್ರಂಥಗಳನ್ನು ಭೌಗೋಳಿಕ ನಿಘಂಟು ಎಂದು ಕರೆಯುವುದುಂಟಾದರೂ ಮೇಲೆ ಹೇಳಿದ ಹೆಸರು ಹೆಚ್ಚು ವಾಡಿಕೆಯಲ್ಲಿದೆ. ವರ್ಣಾನುಕ್ರಮದಲ್ಲಿ ನದಿ, ಪರ್ವತ, ಗ್ರಾಮ, ನಗರ ಮುಂತಾದವುಗಳ ಬಗ್ಗೆ ಮಾಹಿತಿ ನೀಡುವ ಕೋಶವೆಂಬ ಈ ಶಬ್ದದ ಅರ್ಥ ಕ್ರಮೇಣ ವಿಸ್ತೃತವಾಗಿ, ಯಾವುದಾದರೊಂದು ದೇಶದ, ಪ್ರದೇಶದ, ವಿಭಾಗದ ರಾಜಕೀಯ, ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಔದ್ಯೋಗಿಕ ವಿಷಯಗಳ ಸಮಗ್ರ ವಿವರಗಳನ್ನು ತಿಳಿಸುವ ಗ್ರಂಥವೆಂದು ಇದು ಪ್ರಸಿದ್ಧಿ ಹೊಂದಿತು. ಯಾವುದಾದರೊಂದು ಪ್ರದೇಶದ ಭೌಗೋಳಿಕ ಸೂಚಿ ಎಂಬ ಅರ್ಥದಲ್ಲಿ ಈ ಶಬ್ದವನ್ನು 1704ರಲ್ಲಿ ಲಾರೆನ್ಸ್ ಎಕಾರ್ಡ್ ಎಂಬುವನು ಬಳಸಿದ. 6ನೆಯ ಶತಮಾನದ ಆರಂಭದಲ್ಲಿ ಬೈಜ಼ಾಂಟಿಯಮ್‌ನ ಸ್ಟೀವೆನ್ ಎಂಬಾತ ಈ ಬಗೆಯ ಕೃತಿಯನ್ನು ರಚಿಸಿದ್ದ. ಆದರೆ ದುರದೃಷ್ಟದಿಂದ ಈ ಗ್ರಂಥದ ಕೆಲವು ತುಣುಕುಗಳು ಮಾತ್ರ ದೊರೆತಿವೆ. ಈಗಿನ ಗೆಜೆಟಿಯರುಗಳಿಗೆ ಹೋಲಿಸಬಹುದಾದ ಒಂದು ಕೃತಿ ಹೊರಬಂದದ್ದು 16ನೆಯ ಶತಮಾನದಲ್ಲಿ. ಇದು ಚಾರ್ಲ್ಸ್ ಸ್ಟೀವೆನ್ಸನಿಂದ ರಚಿತವಾಗಿ ಜಿನೀವದಿಂದ ಪ್ರಕಟವಾದ ಡಿಕ್ಷನೇರಿಯಮ್ ಹಿಸ್ಟಾರಿಕೊ–ಜಿಯಾಗ್ರಫಿಕಮ್ (1565). ಇದರ ತರುವಾಯ ಫೆರ್ರೈನ ಲೆಕ್ಸಿಕನ್ ಜಿಯಾಗ್ರಫಿಕಮ್ (1627), ಬಾದ್ರಾದನ ಜಿಯಾಗ್ರಫಿಯಾ ಆರ್ಡಿನೆ ಲಿಟರೇರಮ್ ಡಿಸ್‌ಪೊಸಿಟಾ (1682), ಲೇ ಮಾರ್ಟಿನ್ಯೆರನ ಡಿಕ್ಷನೇರ್ ಜಿಯಾಗ್ರಫಿಕ್ ಹಿಸ್ಟಾರಿಕ್ ಎಟ್ ಕ್ರಿಟಿಕ್ (1726) ಮತ್ತು ಇವುಗಳ ಆಧಾರದ ಮೇಲೆ ರಚಿತವಾದ ಇತರ ಹಲವು ವಿಷಯ ಕೋಶಗಳು ಪ್ರಕಟಗೊಂಡವು. ಜರ್ಮನ್ ಭೂಗೋಳಶಾಸ್ತ್ರಜ್ಞ ಜಿ.ಎಚ್. ಹ್ಯಾಸೆಲನ ಜಿಯಾಗ್ರಫಿಶ್ಚ್–ಸ್ಟ್ಯಾಟಿಸ್ಟಿಕ್ ಹ್ಯಾಂಡ್‌ವೊರ್ಟರ್‌ಬಕ್ (1817) ಸಂಶೋಧನಾತ್ಮಕವಾದ, ಮುಂದಿನ ಗೆಜೆಟಿಯರುಗಳಿಗೆ ಮಾದರಿಯಾದ ಕೃತಿ. ಕೆಲವು ಮುಖ್ಯವಾದ ಇಂಗ್ಲಿಷ್ ಮತ್ತು ಅಮೆರಿಕನ್ ಗೆಜ಼ೆಟಿಯರುಗಳೆಂದರೆ ಕ್ರಟ್‌ವೆಲನ ಯೂನಿವರ್ಸಲ್ ಗೆಜ಼ೆಟಿಯರ್ಸ್ (1808), ದಿ ಎಡಿನ್‌ಬರ್ಗ್ ಗೆಜ಼ೆಟಿಯರ್ (1817–22), ಮ್ಯಾಕ್ ಕುಲಕ್‌ನ ಜಿಯಾಗ್ರಫಿಕಲ್ ಡಿಕ್ಷನರಿ (1851), ಬ್ಲಾಕಿಯ ಇಂಪೀರಿಯಲ್ ಗೆಜ಼ೆಟಿಯರ್ (1850), ಲಿಪಿನ್‌ಕಾಟ್‌ನ ಪ್ರೊನೌನ್ಸಿಂಗ್ ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ (1855, 1911 ಮತ್ತು 1922), ಮೆರಿಯಮ್ – ವೆಬ್‌ಸ್ಟರ್‌ನ ಜಿಯಾಗ್ರಫಿಕಲ್ ಡಿಕ್ಷನರಿ (1949). ಡಿಕ್ಷನೇರ್ ಜಿಯಾಗ್ರಾಫಿಕ್ ಯೂನಿವರ್ಸಲ್ (ಫ್ರೆಂಚ್), ರಿಟರ್‌ನ ಜಿಯಾಗ್ರಫಿಶ್ಚ್ ಸ್ಟ್ಯಾಟಿಸ್ಟಿಕ್ (ಜರ್ಮನ್), ಗ್ಯಾರೊಲೋನ ಡಿಜಿಯೊನರಿಯೋ ಜಿಯಾಗ್ರಫಿಕೋ ಯೂನಿವರ್ಸಲೆ (ಇಟಲಿ, 1898) ಮತ್ತು ಹಂಟರನ ಗೆಜ಼ೆಟಿಯರ್ ಆಫ್ ಇಂಡಿಯ– ಇವು ಕೆಲವು ಗಮನಾರ್ಹ ಗೆಜ಼ೆಟಿಯರುಗಳು. ಜಾನ್‌ಸ್ಟನ್‌ನ ಡಿಕ್ಷನರಿ ಆಫ್ ಜಿಯಾಗ್ರಫಿ (1850), ವಿವಿನ್ ದ ಸೇಂಟ್ ಮಾರ್ಟಿನ್‌ನ ನೋವೆ ಡಿಕ್ಷನ್ಯೆರೆ ಡೆ ಜಿಯಾಗ್ರಫಿಯೆ (1879–1900), ಲಾಂಗ್‌ಮನ್ಸ್ ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ (1895), ಕೆಂಡೆಯ ಜಿಯಾಗ್ರಾಫಿಶ್ಚ್ ವೊರ್ಟೆರ್‌ಬಕ್ (1921), ಎವಾಲ್ಡ್ ಎಚ್. ಎ. ಬಾನ್ಸೆಯ ಲೆಕ್ಸಿಕನ್ ಡರ್ ಜಿಯಾಗ್ರಫಿಯೆ (1923), ರೇನಾಲ್ಡ್‌ನ ಕಾಂಪ್ರೆಹೆನ್ಸಿವ್ ಅಟ್ಲಾಸ್ ಮತ್ತು ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ (1925) ಮುಂತಾದವು ಇತರ ಕೆಲವು ಪ್ರಸಿದ್ಧ ಗೆಜ಼ೆಟಿಯರುಗಳು. ಇವುಗಳಲ್ಲಿ ಅನೇಕ ಗೆಜ಼ೆಟಿಯರುಗಳು ಹೊಸ ಆವೃತ್ತಿಗಳನ್ನು ಕಂಡಿವೆ. ಲಾಂಗ್‌ಮನ್ಸ್‌ನ ಗೆಜ಼ೆಟಿಯರ್ ಆಫ್ ದಿ ವರ್ಲ್ಡ್ ಎಂಬ ಕೃತಿಯನ್ನು ಲಂಡನಿನ ಟೈಮ್ಸ್ ಪತ್ರಿಕೆ ಪಡೆದು ದಿ ಟೈಮ್ಸ್ ಗೆಜ಼ೆಟಿಯರ್ ಎಂದು ಪುನಃ ಪ್ರಕಟಿಸಿತು. ಇಟಲಿಯ ನ್ಯೂಮನ್, ರಷ್ಯದ ಸಮ್ಯೆನಾವ್ ಮತ್ತು ಭಾರತದಲ್ಲಿ ಹಂಟರ್ ಪ್ರಖ್ಯಾತ ಗೆಜ಼ೆಟಿಯರ್ ಲೇಖಕರಾಗಿದ್ದರು. ಎಡ್ವರ್ಡ್ ಥಾರ್ನ್‌ಟನ್ನನ ಗೆಜ಼ೆಟಿಯರ್ (1844) ಮತ್ತು ವಾಲ್ಟರ್ ಹ್ಯಾಮಿಲ್ಟನನ ಈಸ್ಟ್ ಇಂಡಿಯ ಗೆಜ಼ೆಟಿಯರ್ (1895) ಅವರ ಪ್ರಯತ್ನಗಳಿಂದ ಪ್ರಕಟವಾದುವು.

**ಭಾರತದಲ್ಲಿ** : ಒಂದು ದೃಷ್ಟಿಯಿಂದ ಗೆಜ಼ೆಟಿಯರಿನಂಥ ಸಾಹಿತ್ಯದ ರಚನೆ ಪ್ರಾದೇಶಿಕ ವರ್ಣನೆಗಳನ್ನೊಳಗೊಂಡ ಅನೇಕ ಪುರಾಣಗಳ ಕಾಲದಿಂದಲೇ ಪ್ರಾರಂಭವಾಯಿತೆನ್ನಬಹುದು. ಒಂದು ದೇಶದ ಭೌಗೋಳಿಕ ಲಕ್ಷಣಗಳು, ಅಲ್ಲಿಯ ಜನರ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಜೀವನ ಇವನ್ನು ಕುರಿತು ಪ್ರವಾಸಿಗಳು ನೀಡುವ ವೃತ್ತಾಂತಗಳು ಸಾಹಿತ್ಯದ ಒಂದು ಬಗೆಯೆಂದು ಸಾಕಷ್ಟು ಪ್ರಾಚೀನ ಕಾಲದಲ್ಲಿ ಪರಿಚಿತವಾಗಿವೆ. ಇವನ್ನು ಕೂಡ ಕೆಲವೊಮ್ಮೆ ಗೆಜ಼ೆಟಿಯರ್ ವರ್ಗಕ್ಕೆ ಸೇರಿಸಲಾಗಿದೆ. ಪ್ರ.ಶ.ಪೂ. 6ನೆಯ ಶತಮಾನದಲ್ಲಿ ಸ್ಕೈಲಾಕ್ಸ್, ಇನ್ನೂರು ವರ್ಷಗಳ ಅನಂತರ ಮೆಗಾಸ್ತನೀಸ್–ಇವರು ಭಾರತದ ಬಗ್ಗೆ ವೃತ್ತಾಂತಗಳನ್ನು ವರದಿಮಾಡಿದರು. ಕೌಟಿಲ್ಯನ ಅರ್ಥಶಾಸ್ತ್ರ ಮೌರ್ಯಕಾಲೀನ ಭಾರತದ ಬಗ್ಗೆ ಭೌಗೋಳಿಕ ಮತ್ತಿತರ ವಿಷಯಗಳ ಅಂಕಿ–ಅಂಶ ಸಹಿತವಾದ ಅಮೂಲ್ಯ ವಿವರಗಳನ್ನೊದಗಿಸುತ್ತದೆ. ಆಲ್ಬೆರೂನಿಯ ಇಂಡಿಕಾ ಸೂಕ್ಷ್ಮ ಅವಲೋಕನ ಮತ್ತು ವೈಜ್ಞಾನಿಕ ವಿಶ್ಲೇಷಣೆಗಳಿಗೆ ಉದಾಹರಿಸಬಹುದಾದ ಕೃತಿ. ಅಬುಲ್ ಫಜಲನ ಐನೇ ಅಕ್ಬರಿ ವ್ಯವಸ್ಥಿತ ಸಂಶೋಧನೆ ಹಾಗೂ ಅಸಾಧಾರಣ ಪ್ರಯತ್ನಗಳ ಫಲ; ಅಕ್ಬರನ ರಾಜ್ಯ ಪದ್ಧತಿ, ಆಗಿನ ಕಾಲದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ, ಸೈನ್ಯ ಪರಿವೀಕ್ಷಣೆ ಮುಂತಾದ ವಿವರಗಳನ್ನು ನೀಡುವ ಗ್ರಂಥ. ಮೊಗಲ್ ಹಾಗೂ ಮರಾಠಾ ರಾಜ್ಯಗಳಲ್ಲಿ ಅಲ್ಲಲ್ಲಿಯ ಮುಖ್ಯ ಸ್ಥಳಗಳಲ್ಲಿ ಅಖ್‌ಬಾರನ್‌ವೀಸ್ ಎಂಬ ಅಧಿಕಾರಿಗಳನ್ನು ನೇಮಿಸಲಾಗಿತ್ತು. ಅವರು ತಮ್ಮ ಮೇಲಧಿಕಾರಿಗಳಿಗೆ ಆಗಾಗ್ಗೆ ವಿಶೇಷ ವಿವರಣೆಗಳನ್ನುಳ್ಳ ಪತ್ರಿಕೆಗಳನ್ನು ಕಳುಹಿಸುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳಿಗೆ ತಮ್ಮ ಆಡಳಿತದಲ್ಲಿದ್ದ ಪ್ರದೇಶಗಳ ಪರಿಚಯ ಮಾಡಿಕೊಡಲು ಗೆಜ಼ೆಟಿಯರ್ ರಚನೆ ಆವಶ್ಯಕವಾಯಿತು. ಭೂಗೋಳ, ಇತಿಹಾಸ, ನಿಸರ್ಗಸಂಪತ್ತು, ಉದ್ಯೋಗ, ವ್ಯಾಪಾರ, ಪಶುಪಕ್ಷಿ, ಅರಣ್ಯ, ನದೀನಾಲೆಗಳು, ಜನ, ಜಾತಿ, ಸಮೂಹ, ರೀತಿ ನೀತಿಗಳು, ಧರ್ಮ ಮತ್ತು ಧರ್ಮಭೇದಗಳು, ಸಾಂಸ್ಕೃತಿಕ ಜೀವನ, ಭಾಷಾವಿವರ, ಸಾಹಿತ್ಯ ಇತ್ಯಾದಿಗಳ ಪರಿಚಯ ಮಾಡಿಕೊಡುವ ಉದ್ದೇಶದಿಂದ ಗೆಜೆಟಿಯರ್ ರಚನೆ ಆರಂಭವಾಯಿತು. ಈಸ್ಟ್ ಇಂಡಿಯ ಕಂಪನಿಯ ಕಾಲದಲ್ಲೆ 1843ರಲ್ಲಿ ಮುಂಬಯಿ ಇಲಾಖೆಯಲ್ಲಿ ಅಲ್ಲಿಯ ಜಿಲ್ಲೆಗಳ ಬಗ್ಗೆ ಅಂಕಿ–ಅಂಶ ಸಹಿತವಾದ ವಿವರಗಳನ್ನು ಕೊಡುವ ಕೆಲಸ ಆರಂಭವಾಯಿತು. 1857ರಲ್ಲಿ ರಿಚರ್ಡ್ ಟೆಂಪಲ್ ಎಂಬಾತ ಮಧ್ಯ ಭಾರತದ ಜಿಲ್ಲಾ ಗೆಜ಼ೆಟಿಯರುಗಳನ್ನು ರಚಿಸುವ ಕಾರ್ಯವನ್ನು ಕೈಗೊಂಡ. ಮುಂಬಯಿಯ ಜಿಲ್ಲಾ ಗೆಜ಼ೆಟಿಯರ್ ನಿರ್ಮಾಣ 1874ರಲ್ಲಿ ಆರಂಭವಾಗಿ 1884ರಲ್ಲಿ ಪೂರ್ಣಗೊಂಡಿತು. ಮುಂದೆ 27 ವರ್ಷ ಇವುಗಳ ಮುದ್ರಣಕಾರ್ಯ ನಡೆಯಿತು. 1869ರಲ್ಲಿ ವಿಲಿಯಮ್ ಹಂಟರ್ ಇಂಪೀರಿಯಲ್ ಗೆಜ಼ೆಟಿಯರ್ ಆಫ್ ಇಂಡಿಯವನ್ನು ತಯಾರಿಸುವ ಬೃಹತ್ ಯೋಜನೆಯೊಂದನ್ನು ಸರ್ಕಾರಕ್ಕೆ ಸಲ್ಲಿಸಿದ. ಈ ಯೋಜನೆಗೆ 1871ರಲ್ಲಿ ಮಾನ್ಯತೆ ದೊರೆಯಿತು. 1881ರಲ್ಲಿ ಇದರ ಒಂಬತ್ತು ಸಂಪುಟಗಳು ಪ್ರಕಟವಾದುವು. ಇದರ ಪರಿಷ್ಕೃತ ಆವೃತ್ತಿ 14 ಸಂಪುಟಗಳಲ್ಲಿ 1885–87ರಲ್ಲಿ ಹೊರಬಂತು. ಇವುಗಳಲ್ಲಿ ದಿ ಇಂಡಿಯನ್ ಎಂಪೈರ್ ಎಂಬ ಸಂಪುಟವೂ ಸೇರಿದೆ. ಇಂಪೀರಿಯಲ್ ಗೆಜ಼ೆಟಿಯರನ್ನು ಭಾರತೀಯ ಜೀವನ ಮತ್ತು ಸಂಸ್ಕೃತಿಗಳ ಎಲ್ಲ ಅಂಶಗಳನ್ನೊಳಗೊಂಡ ವ್ಯಾಪಕ ಅಧ್ಯಯನಕ್ಕೆ ಅರ್ಹವಾದ, ಅಧಿಕೃತವಾದ ಗೆಜ಼ೆಟಿಯರ್ ಎಂದು ಪರಿಗಣಿಸಲಾಯಿತು. ಲಾರ್ಡ್ ಕರ್ಜನ್ ಇಂಪೀರಿಯಲ್ ಗೆಜ಼ೆಟಿಯರ್‌ಗಳ ಪುನರ್ ಮುದ್ರಣಕ್ಕೆ ಆಜ್ಞೆ ನೀಡಿದ. ಹೊಸ ವಿಷಯಗಳನ್ನು ಸೇರಿಸಿ 1904–1909ರಲ್ಲಿ 26 ಸಂಪುಟಗಳಲ್ಲಿ ಇವನ್ನು ಪ್ರಕಟಿಸಲಾಯಿತು. ಮೊದಲ 4 ಸಂಪುಟಗಳು ಹಂಟರನ ಇಂಡಿಯನ್ ಎಂಪೈರ್‌ನ ಪರಿಷ್ಕೃತ ಪಾಠ. ಮುಂದಿನ 20 ಸಂಪುಟಗಳು ಅಕಾರಾದಿಯಲ್ಲಿವೆ. ಕೊನೆಯ ಎರಡು ಸಂಪುಟಗಳು ಸೂಚಿ ಹಾಗೂ ಭೂಪಟಗಳನ್ನೊಳಗೊಂಡಿವೆ. ಸ್ವಾತಂತ್ರ್ಯಾನಂತರ ಇಂಪೀರಿಯಲ್ ಗೆಜ಼ೆಟಿಯರಿನ ಎರಡನೆಯ ಆವೃತ್ತಿಯ ಪುನರ್ಮುದ್ರಣ ಹೊರಬಿದ್ದಿದೆ. ಇದನ್ನು ಪುನರ್‌ಮುದ್ರಣವೆನ್ನುವುದಕ್ಕಿಂತ ಸರ್ವವಿಧದಲ್ಲೂ ಪರಿಷ್ಕೃತವಾದ ಹೊಸ ಆವೃತ್ತಿಯೆಂದೇ ಪರಿಗಣಿಸಬಹುದಾಗಿದೆ. ದಿ ಇಂಡಿಯನ್ ಎಂಪೈರ್ ಎಂಬ ಹಿಂದಿನ ಒಂದು ಸಂಪುಟ ಈಗ ವಿವರಣಾತ್ಮಕ, ಐತಿಹಾಸಿಕ, ಆರ್ಥಿಕ, ಆಡಳಿತ ಸಂಬಂಧಿ ಎಂದು ನಾಲ್ಕು ಸಂಪುಟಗಳಾಗಿ ಬೆಳೆದಿದೆ.

1867ರಲ್ಲಿ ಭಾರತದ ಸ್ಟೇಟ್ ಸೆಕ್ರೆಟರಿಯ ಆಜ್ಞೆಯ ಪ್ರಕಾರ ಎಲ್ಲ ಪ್ರಾಂತ್ಯಗಳ ಗೆಜ಼ೆಟಿಯರುಗಳನ್ನು ಸಿದ್ಧಪಡಿಸುವ ಸೂಚನೆ ಬಂದದ್ದರಿಂದ 1874ರಲ್ಲಿ ಜೇಮ್ಸ್ ಕ್ಯಾಂಪ್‌ಬೆಲನ ನೇತೃತ್ವದಲ್ಲಿ ಈ ಕಾರ್ಯ ಆರಂಭವಾಗಿ 1884ರ ವರೆಗೆ ನಡೆಯಿತು. 1877–1904ರ ನಡುವೆ ಬಾಂಬೆ ಗೆಜ಼ೆಟಿಯರಿನ 33 ಸಂಪುಟಗಳು ಪ್ರಕಾಶಗೊಂಡುವು. ಇವುಗಳಲ್ಲಿ 18 ಜಿಲ್ಲೆಗಳ ಜೊತೆಗೆ ಬರೋಡ, ಕೊಲ್ಲಾಪುರ ಮುಂತಾದ ಸಂಸ್ಥಾನಗಳೂ ಸಮಾವೇಶವಾಗಿವೆ. ಇದಕ್ಕೂ ಮೊದಲು, ಕೊಲ್ಲಾಪುರದಲ್ಲಿ ರಾಜಪ್ರತಿನಿಧಿಯಾಗಿದ್ದ ಮೇಜರ್ ಗ್ರಹಾಮ್ ಕೊಲ್ಲಾಪುರ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಎಂಬ ಗೆಜ಼ೆಟಿಯರನ್ನು ಸಿದ್ಧಪಡಿಸಿ ಪ್ರಕಟಿಸಿದ (1843–44). ಬಹಳ ಸೊಗಸಾಗಿರುವ, ಇತರ ಗೆಜ಼ೆಟಿಯರುಗಳಿಗೆ ಮಾದರಿಯಾಗಿರುವ ಇದು ರಾಜಕಾರ್ಯನಿರ್ವಾಹಕರಿಗೆ ಬೇಕಾದ ಮಾಹಿತಿಗಳನ್ನೊದಗಿಸುತ್ತದೆ. ಬಾಂಬೆ ಗೆಜ಼ೆಟಿಯರ್ ಮಾದರಿಯನ್ನನುಸರಿಸಿ ಬೆಂಗಾಲ್ ಗೆಜ಼ೆಟಿಯರ್

ಮತ್ತು ಇಂಪೀರಿಯಲ್ ಗೆಜೆಟಿಯರ್‌ಗಳು ಸಿದ್ಧವಾದುವು. ಹಾಗೆಯೇ ಮದ್ರಾಸ್ ಗೆಜೆಟಿಯರ್ ಹಾಗೂ ಮೈಸೂರ್ ಗೆಜೆಟಿಯರ್‌ಗಳು ಪ್ರಕಟವಾದುವು.

ಏಕೀಕರಣದ ತರುವಾಯ ಕರ್ನಾಟಕದ ವ್ಯಾಪ್ತಿಗೆ ಹಲವಾರು ರಾಜ್ಯಗಳಿಂದ ಭೂ ಪ್ರದೇಶಗಳು ವಿಲೀನಗೊಂಡವು. ಆ ವೇಳೆಗಾಗಲೇ ಆಯಾ ಪ್ರದೇಶಗಳಲ್ಲಿ ಗೆಜೆಟಿಯರ್‌ಗಳು ಪ್ರಕಟಗೊಂಡಿದ್ದವು. 1870ರಲ್ಲಿ ಕೊಡಗು ಪ್ರಾಂತ್ಯದ ಗೆಜೆಟಿಯರನ್ನು ರೆವರೆಂಡ್ ಜಿ. ರಿಚರ್ ಅವರೂ; 1883–84ರಲ್ಲಿ ಬಿಜಾಪುರ, ಧಾರವಾಡ, ಬೆಳಗಾವಿ ಹಾಗೂ ಕೆನರ (ಉತ್ತರ ಕನ್ನಡ) ಗೆಜೆಟಿಯರ್‌ಗಳನ್ನು ಜೇಮ್ಸ್ ಎಂ. ಕ್ಯಾಂಪ್‌ಬೆಲ್ ಅವರೂ; ದಕ್ಷಿಣ ಕನ್ನಡ ಜಿಲ್ಲೆಯ ಮ್ಯಾನ್ಯುಯಲ್‌ನ ಮೊದಲ ಸಂಪುಟವನ್ನು 1894ರಲ್ಲಿ ಜಾನ್ ಸ್ಟರ್ಕ್ ಹಾಗೂ ಎರಡನೆಯ ಸಂಪುಟವನ್ನು 1895ರಲ್ಲಿ ಹೆರಾಲ್ಡ್ ಎ. ಸ್ಟುವರ್ಟ್ ಅವರೂ; ಬಳ್ಳಾರಿ ಜಿಲ್ಲೆಯ ಮ್ಯಾನ್ಯುಯಲ್ ಅನ್ನು 1872ರಲ್ಲಿ ಜಾನ್ ಕೆಲ್‌ಸೆಲ್ ಹಾಗೂ ಅದರ ಪರಿಷ್ಕೃತ ಆವೃತ್ತಿಯನ್ನು 1904ರಲ್ಲಿ ವಿಲಿಯಂ ಫ್ರಾನ್ಸಿಸ್ ಅವರೂ ಪ್ರಕಟಿಸಿದರು. ಅಲ್ಲದೆ ಈ ಎಲ್ಲ ಗೆಜೆಟಿಯರ್‌ಗಳಿಗೂ ಬೇರೆ ಬೇರೆ ಸಂದರ್ಭಗಳಲ್ಲಿ ಪುರವಣಿಗಳನ್ನು ಹೊರತರಲಾಯಿತು. ಕಳೆದ ಶತಮಾನದ ಆದಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಬೀದರ್, ಗುಲ್ಬರ್ಗ ಹಾಗೂ ರಾಯಚೂರು ಗೆಜೆಟಿಯರ್‌ಗಳು ಪ್ರಕಟವಾದಂತೆ ತಿಳಿದುಬರುತ್ತದೆ. ಆದರೆ ಅವುಗಳ ಪುರವಣಿಗಳು ಸ್ವಾತಂತ್ರ್ಯಾನಂತರ ಪ್ರಕಟವಾಗಿದ್ದು ಲಭ್ಯವಿವೆ. ಹಿಂದೆ ಕ್ಯಾಂಪ್‌ಬೆಲ್ ಪ್ರಕಟಿಸಿದ್ದ ಮುಂಬಯಿ ಕರ್ನಾಟಕ ಪ್ರಾಂತ್ಯದ ನಾಲ್ಕು ಗೆಜೆಟಿಯರ್‌ಗಳನ್ನು 1893ರಲ್ಲಿ ವೆಂಕಟರಂಗೋಕಟ್ಟಿಯವರು ಕನ್ನಡಕ್ಕೆ ಸಂಕ್ಷಿಪ್ತಾನುವಾದ ಮಾಡಿ ಒಂದು ಸಂಪುಟದಲ್ಲಿ ಪ್ರಕಟಿಸಿದರು.

ಮೈಸೂರಿನ ಗೆಜೆಟಿಯರನ್ನು ಸಿದ್ಧಪಡಿಸಬೇಕೆಂಬ ವಿಚಾರ ಬಂದಿದ್ದು 1867ರಲ್ಲಿ. ಆದರೆ, ಕಾರಣಾಂತರದಿಂದ ಮೈಸೂರು ಮತ್ತು ಕೋಲಾರ ಜಿಲ್ಲೆಗಳಿಗೆ ಸಂಬಂಧಿಸಿದ ಎರಡು ಸಂಪುಟಗಳು ಮಾತ್ರ ಹೊರಬಂದವು. ಈ ಸಂಪುಟಗಳನ್ನು ಕ್ರಮವಾಗಿ ಎಚ್.ವೆಲ್ಲೆಸ್ಲಿ ಹಾಗೂ ಬಿ. ಕೃಷ್ಣಯ್ಯಂಗಾರ್ ಸಂಪಾದಿಸಿದ್ದರು. ಅಂದಿನ ವಿದ್ಯಾಧಿಕಾರಿಗಳಾಗಿದ್ದ ಬಿ.ಎಲ್. ರೈಸ್ ಅವರಿಗೆ ಗೆಜೆಟಿಯರ್ ತಯಾರಿಸುವ ಕಾರ್ಯವಹಿಸಲಾಗಿ ಅದರಂತೆ 1876–77ರಲ್ಲಿ ಮೂರು ಸಂಪುಟಗಳಲ್ಲಿ ಮೈಸೂರು ಹಾಗೂ ಕೊಡಗು ರಾಜ್ಯ ಗೆಜೆಟಿಯರ್‌ಗಳನ್ನು ಇವರು ಹೊರತಂದರು. ಮೈಸೂರು ಸಂಸ್ಥಾನವನ್ನು ಕುರಿತಾದ 2 ಸಂಪುಟಗಳಲ್ಲಿ ಮೊದಲನೆಯದು ಸಂಸ್ಥಾನದ ಬಗ್ಗೆಯೂ ಎರಡನೆಯದು ಅಂದಿನ ಎಂಟು ಜಿಲ್ಲೆಗಳ ಬಗ್ಗೆಯೂ ಮಾಹಿತಿ ನೀಡುತ್ತವೆ. 1897ರಲ್ಲಿ ರೈಸರೇ ಈ ಎರಡು ಗೆಜೆಟಿಯರ್ ಸಂಪುಟಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಈ ಆವೃತ್ತಿ ಸಮಕಾಲೀನ ಐತಿಹಾಸಿಕ ಸಂಶೋಧನೆಗಳನ್ನು ಸಹ ಒಳಗೊಂಡಿತ್ತು. 1877ರಲ್ಲಿ ಹಂಟರ್‌ನ ಸಂಪಾದಕತ್ವದಲ್ಲಿ ಭಾರತಕ್ಕೆ ಸಂಬಂಧಿಸಿದಂತೆ ಇಂಪೀರಿಯಲ್ ಗೆಜೆಟಿಯರಿನ ಸಂಪುಟಗಳು ಹೊರಬಂದವು. ಅವುಗಳಲ್ಲಿ ಅಂದಿನ ಮೈಸೂರು ಹಾಗೂ ಕೊಡಗು ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ರೈಸ್ ಅವರೇ ಪೂರೈಸಿಕೊಟ್ಟಿದ್ದು ಅನಂತರ 1909ರ ಸುಮಾರಿನಲ್ಲಿ ಅವುಗಳನ್ನು ಸಂಗ್ರಹಿಸಿ ಪ್ರೊವಿಂಡೆಯಲ್ ಗೆಜೆಟಿಯರ್ ಮಾಲಿಕೆಯಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದರು.

1911ರ ಜನಗಣತಿಯ ಸಂಬಂಧದಲ್ಲಿ ಮೈಸೂರ್ ಗೆಜೆಟಿಯರಿನ ಹೊಸ ಆವೃತ್ತಿಯನ್ನು ಸಿದ್ಧಪಡಿಸಬೇಕೆಂದು ಅಂದಿನ ಮೈಸೂರು ಸರ್ಕಾರ ನಿರ್ಣಯಿಸಿ, 1914ರಲ್ಲಿ ಈ ಕಾರ್ಯವನ್ನು ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿದ್ದ ಆರ್. ನರಸಿಂಹಾಚಾರ್ಯರಿಗೆ ವಹಿಸಿತು. ಅವರ ಅನಂತರ ವಿ.ಆರ್. ತ್ಯಾಗರಾಜಅಯ್ಯರ್ ಈ ಕಾರ್ಯವನ್ನು ವಹಿಸಿಕೊಂಡರು. 1924ರಲ್ಲಿ ಸಿ. ಹಯವದನ ರಾಯರನ್ನು ಇದರ ಸಂಪಾದಕರನ್ನಾಗಿ ನೇಮಿಸಲಾಯಿತು. ಮೈಸೂರ್ ಗೆಜೆಟಿಯರಿನ ಹೊಸ ಆವೃತ್ತಿ ಏಳು ಸಂಪುಟಗಳಲ್ಲಿ 1926–27ರಲ್ಲಿ ಹೊರಬಂತು. ಹಿಂದಿನ ಮೊದಲ ಸಂಪುಟ ಈಗ ವಿವರಣಾತ್ಮಕ, ಐತಿಹಾಸಿಕ, ಆರ್ಥಿಕ, ಆಡಳಿತ ಎಂದು ನಾಲ್ಕು ಸಂಪುಟಗಳಾಗಿ ಬೆಳೆಯಿತು. ಎರಡು ಸಂಪುಟಗಳು ಮೈಸೂರು ಸಂಸ್ಥಾನದ ಅಂದಿನ ಜಿಲ್ಲೆಗಳಿಗೆ ಸಂಬಂಧಿಸಿದ್ದು.

ಸ್ವಾತಂತ್ರ್ಯಾನಂತರ ಅನೇಕ ಸಂಸ್ಥಾನಗಳ ವಿಲೀನೀಕರಣ, ರಾಜ್ಯ ಪುನರ್ವಿಂಗಡಣೆ ಇತ್ಯಾದಿಗಳಿಂದಾಗಿ ಹೊಸ ಗೆಜೆಟಿಯರುಗಳ ರಚನೆಯ ಆವಶ್ಯಕತೆಯುಂಟಾಯಿತು. ಇದಕ್ಕಾಗಿ ಕೇಂದ್ರ ಸರ್ಕಾರ ಭಾರತೀಯ ಗೆಜೆಟಿಯರ್‌ಗಳ ಇಲಾಖೆಯೊಂದನ್ನು ಆಯೋಜಿಸಿತು. ಎಲ್ಲ ರಾಜ್ಯಗಳು ಪ್ರತ್ಯೇಕವಾಗಿ ಇಲ್ಲವೆ ರಾಜ್ಯ ಪುರಾತತ್ತ್ವ, ರಾಜ್ಯ ಪತ್ರಾಗಾರ ಅಥವಾ ರಾಜ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗಳಲ್ಲಿ ಆಯಾ ರಾಜ್ಯದ ಜಿಲ್ಲಾವಾರು ಗೆಜೆಟಿಯರ್‌ಗಳನ್ನು ಸಿದ್ಧಪಡಿಸಲು ವಿಭಾಗವೊಂದನ್ನು ತೆರೆಯಲಾಯಿತು. ರಾಜ್ಯಪ್ರತಿನಿಧಿಗಳ ಗೋಷ್ಠಿಯೊಂದನ್ನು 1955ರಲ್ಲಿ ಕರೆಯಲಾಯಿತು. ಮುಂಬಯಿ ರಾಜ್ಯದಲ್ಲಿ ಆ ಮೊದಲೇ (1949) ಈ ಕಾರ್ಯ ಆರಂಭವಾಗಿತ್ತು. ಬ್ರಿಟಿಷರ ಕಾಲದ ಗೆಜೆಟಿಯರುಗಳು ಅವರ ಅಧಿಕಾರಿಗಳಿಗೆ ಉಪಯುಕ್ತವಾಗುವಂತೆ ರಚಿತವಾಗಿದ್ದುವು. ಆದರೆ ಹೊಸ ಗೆಜೆಟಿಯರುಗಳ ತಯಾರಕರು ಯಾವುದೇ ಬಗೆಯ ಪೂರ್ವಗ್ರಹಪೀಡಿತರಾಗದೆ ವಸ್ತುನಿಷ್ಠವಾಗಿ ವಿಷಯಗಳನ್ನು ನಿರೂಪಿಸುವ, ವಾದಗ್ರಸ್ತ ವಿಷಯಗಳ ಚರ್ಚೆಗೆ ಇಳಿಯದೆ ಅವಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ವಾಚಕರಿಗೆ ಒದಗಿಸುವ ನಿಯಮವನ್ನು ಪಾಲಿಸಿಕೊಂಡು ಬಂದರು. ಅಂದಿನ ಮತ್ತು ಈಗಿನ ಆವಶ್ಯಕತೆಗಳನ್ನು ಲಕ್ಷಿಸಿ ಹೊಸ ಹೊಸ ವಿಷಯಗಳನ್ನು ಸೇರಿಸುವ ನಿಯಮಾವಳಿಯನ್ನು ಹಾಕಿಕೊಳ್ಳಲಾಯಿತು. ಜಿಲ್ಲಾ ಗೆಜೆಟಿಯರುಗಳಲ್ಲಿ ಆಯಾ ಜಿಲ್ಲೆಗಳ ವಾಸ್ತವಿಕ ಚಿತ್ರ ಮೂಡಿಬರುವಂತೆ, ಅವನ್ನು ರೂಪಿಸಲು ನಿಶ್ಚಯಿಸಲಾಯಿತು. ವಿವಿಧ ರಾಜ್ಯಗಳಲ್ಲಿ ರೂಢಿಯಲ್ಲಿರುವ ವಿಷಯಗಳು ಪರಸ್ಪರ ಪರಿಚಯವಾಗುವಂತೆ, ಅವುಗಳ ಬಗ್ಗೆ ಇರುವ ತಪ್ಪು ತಿಳಿವಳಿಕೆಗಳು ದೂರವಾಗುವಂತೆ ರಾಷ್ಟ್ರೀಯ ಏಕತಾಭಾವ ಜನತೆಯಲ್ಲಿ ಮೂಡಿ ಬರುವಂತೆ ಭಾರತೀಯ ಗೆಜೆಟಿಯರುಗಳನ್ನು ರಚಿಸಬೇಕೆಂಬ ಸೂಚನೆಗಳನ್ನು ಸ್ವೀಕರಿಸಲಾಯಿತು ಹಾಗೂ ಅಧ್ಯಾಯಗಳ ರಚನೆಯಲ್ಲಿ ಎಲ್ಲ ರಾಜ್ಯಗಳು ಏಕರೂಪತೆ ಕಾಯ್ದುಕೊಳ್ಳುವಂತೆ ಸೂಚಿಸಲಾಯಿತು.

ಜಿಲ್ಲಾ ಗೆಜೆಟಿಯರುಗಳ ರಚನೆಯಲ್ಲಿ ಹತ್ತೊಂಬತ್ತು ಅಧ್ಯಾಯಗಳನ್ನು ಕೊಡಲು ನಿಶ್ಚಯಿಸಲಾಯಿತು. ಅವುಗಳ ವಿವರ ಹೀಗಿದೆ : 1 ಸಾಮಾನ್ಯ ಭೂವಿವರಣೆಗೆ ನದಿಗಳು, ನೀರಾವರಿ, ಖನಿಜ, ಪಶುಪಕ್ಷಿ, ವನಸ್ಪತಿ ಮತ್ತು ವಾಯುಗುಣ, 2. ಇತಿಹಾಸ, 3. ಜನ, ಜೀವನ, ಭಾಷೆಗಳು, ಇತ್ಯಾದಿ 4. ಕೃಷಿ ಮತ್ತು ನೀರಾವರಿ, ಅರಣ್ಯ ಇತ್ಯಾದಿ 5.ಕೈಗಾರಿಕೆಗಳು, 6. ಬ್ಯಾಂಕಿಂಗ್, ವಾಣಿಜ್ಯ, 7. ಸಾರಿಗೆ, ಸಂಪರ್ಕ, 8. ಇತರ ಉದ್ಯೋಗಗಳು, 9. ಆರ್ಥಿಕ ಪ್ರವೃತ್ತಿಗಳು, 10. ಸಾಮಾನ್ಯ ಆಡಳಿತ, 11. ಕಂದಾಯ ಆಡಳಿತ, 12. ಕಾನೂನು ಮತ್ತು ಶಿಸ್ತು, ನ್ಯಾಯಪಾಲನೆ, 13. ಇತರ ಇಲಾಖೆಗಳು, 14. ಸ್ಥಳೀಯ ಆಡಳಿತ, 15. ಶಿಕ್ಷಣ ಮತ್ತು ಸಂಸ್ಕೃತಿ, 16. ವೈದ್ಯ, ಸಾರ್ವಜನಿಕ ಆರೋಗ್ಯ, 17. ಸಾರ್ವಜನಿಕ ಸೌಲಭ್ಯಗಳು, 18. ಸಾರ್ವಜನಿಕ ಮತ್ತು ಸ್ವಯಂಸೇವಕ ಸಾಮಾಜಿಕ ಸಂಸ್ಥೆಗಳು, ಇತ್ಯಾದಿ, 19. ಐತಿಹಾಸಿಕ ಹಾಗೂ ಪ್ರೇಕ್ಷಣೀಯ ಸ್ಥಳಗಳು, ವ್ಯಾಪಾರ ಕೇಂದ್ರಗಳು, ಇತ್ಯಾದಿ. ಹೀಗೆ ಜಿಲ್ಲಾ ಗೆಜೆಟಿಯರುಗಳು ಪ್ರತಿಯೊಂದು ಜಿಲ್ಲೆಯೊಳಗಿರುವ ಹಳ್ಳಿ ಮತ್ತು ಊರುಗಳ ಐತಿಹಾಸಿಕ ಹಿನ್ನೆಲೆ ಹಾಗೂ ಸಮಕಾಲೀನ ವಿವರಗಳನ್ನು ನೀಡುತ್ತವೆ.

ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಗೆಜೆಟಿಯರ್ ಇಲಾಖೆ ಆರಂಭಗೊಂಡಿದ್ದು ಇತ್ತೀಚೆಗೆ ತಾಲ್ಲೂಕು ಗೆಜೆಟಿಯರ್‌ಗಳನ್ನು ಪ್ರಕಟಿಸಲು ಕ್ರಮಕೈಗೊಂಡಿದ್ದು ಮೊದಲಿಗೆ ಮೈಸೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಕುರಿತು ಗೆಜೆಟಿಯರ್‌ಗಳನ್ನು ಹೊರತರಲಾಗಿದೆ. ಪ್ರಸ್ತುತ ಇದು ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯದ ಒಂದು ವಿಭಾಗವಾಗಿ ಕಾರ್ಯ ನಿರ್ವಹಿಸುತ್ತಿದೆ. 1958ರಲ್ಲಿ ಇಲಾಖೆ ಆರಂಭವಾಗುವ ವೇಳೆಗೆ ಧಾರವಾಡ ಜಿಲ್ಲಾ ಗೆಜೆಟಿಯರನ್ನು ಮಹಾರಾಷ್ಟ್ರ ಸರ್ಕಾರವೇ ಪ್ರಕಟಿಸಿತ್ತು. ಅನಂತರ 1990ರ ವೇಳೆಗೆ ರಾಜ್ಯದ ಅಂದಿನ ಇಪ್ಪತ್ತೊಂದು ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಆಂಗ್ಲ ಭಾಷೆಯಲ್ಲಿ ಗೆಜೆಟಿಯರ್ ಸಂಪುಟಗಳನ್ನು ಹೊರತರಲಾಯಿತು. ಅಲ್ಲದೆ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ 1982–83ರಲ್ಲಿ ಎರಡು ಭಾಗಗಳಲ್ಲಿ ಆಂಗ್ಲ ಭಾಷೆಯಲ್ಲಿಯೂ, ಅದರ ಕನ್ನಡಾನುವಾದವನ್ನು ಮೂರು ಸಂಪುಟಗಳಲ್ಲಿ 1984–86ರ ಅಭಿವೃದ್ಧಿಯಲ್ಲಿಯೂ ಪ್ರಕಟಿಸಲಾಯಿತು. 1994ರಲ್ಲಿ ಆಂಗ್ಲ ಭಾಷೆಯಲ್ಲಿ ಹಾಗೂ 1996ರಲ್ಲಿ ಕನ್ನಡದಲ್ಲಿ ರಾಜ್ಯ ಗೆಜೆಟಿಯರ್‌ಗಳ ಪುರವಣಿಗಳನ್ನು ಮುದ್ರಿಸಲಾಯಿತು. ಈ ಮೊದಲೇ ಕೇಂದ್ರ ಗೆಜೆಟಿಯರ್ ಇಲಾಖೆ ಸ್ಥಗಿತಗೊಂಡಿದ್ದು ರಾಜ್ಯಸರ್ಕಾರವೇ ಕನ್ನಡ ಭಾಷೆಯಲ್ಲಿ ಪರಿಷ್ಕೃತ ಗೆಜೆಟಿಯರ್‌ಗಳನ್ನು ಹೊರತರಲು ಉದ್ದೇಶಿಸಿತು. ಅದರಂತೆ ಕೊಡಗು, ಧಾರವಾಡ, ಗುಲ್ಬರ್ಗ, ಬಿಜಾಪುರ, ಮಂಡ್ಯ ಹಾಗೂ ಕೋಲಾರ ಜಿಲ್ಲಾ ಗೆಜೆಟಿಯರ್‌ಗಳನ್ನು 1992–2005ರ ಅವಧಿಯಲ್ಲಿ ಹೊರತರಲಾಯಿತು. ಇವುಗಳ ಆಂಗ್ಲ ಆವೃತ್ತಿಯನ್ನು ಹೊರತರುವ ಯೋಜನೆ ಕಾರ್ಯರೂಪದಲ್ಲಿದ್ದು, 1993–2004ರ ಅವಧಿಯಲ್ಲಿ ಕೊಡಗು, ಧಾರವಾಡ ಹಾಗೂ ಗುಲ್ಬರ್ಗ ಜಿಲ್ಲೆಯ ಅನುವಾದಿತ ಆವೃತ್ತಿ ಪ್ರಕಟವಾಗಿದೆ. ಪರಿಷ್ಕೃತ ಗೆಜೆಟಿಯರುಗಳಲ್ಲಿ ಕೆಲವು ಅಧ್ಯಾಯಗಳನ್ನು ಪುನರ್‌ರೂಪಿಸಲಾಗಿದೆ.

ಈ ಮಧ್ಯೆ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತರಿಗೆ ಉಪಯೋಗವಾಗುವಂತೆ ರಾಜ್ಯ ಗೆಜೆಟಿಯರ್‌ಗಳ ರೂಪದಲ್ಲಿಯೇ ಕರ್ನಾಟಕ ಕೈಪಿಡಿಗಳನ್ನು ಪ್ರಕಟಿಸಲಾಗಿದೆ. 1996ರಲ್ಲಿ ಹ್ಯಾಂಡ್ ಬುಕ್ ಆಫ್ ಕರ್ನಾಟಕ ಎಂಬ ಆಂಗ್ಲ ಆವೃತ್ತಿ ಹೊರಬಂದಿದ್ದು 2001 ಹಾಗೂ 2005ರಲ್ಲಿ ಇದನ್ನು ಆಯಾ ವರ್ಷಗಳ ವರೆಗಿನ ಮಾಹಿತಿಯೊಂದಿಗೆ ಎರಡು ಬಾರಿ ಪುನರ್‌ಮುದ್ರಿಸಲಾಯಿತು. 1996ರಲ್ಲಿಯೇ ಕರ್ನಾಟಕ ಕೈಪಿಡಿಯ ಕನ್ನಡ ಅವತರಣಿಕೆಯಲ್ಲಿ ಪ್ರಕಟಿಸಲಾಯಿತು.

ಗೆಜ಼ೆಟಿಯರ್ ಇಲಾಖೆಯ ಇನ್ನೊಂದು ಯೋಜನೆಯೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಕಟಗೊಂಡು ಈಗ ಅಲಭ್ಯವಾಗಿರುವ ಗೆಜ಼ೆಟಿಯರ್‌ಗಳ ಪುನರ್‌ಮುದ್ರಣ ಕಾರ್ಯ. ಇದರಡಿಯಲ್ಲಿ ಕ್ಯಾಂಪ್‌ಬೆಲ್‌ರವರ ಬಿಜಾಪುರ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಗೆಜ಼ೆಟಿಯರ್‌ಗಳು, ಸ್ಟರ್ರಕ್ ಹಾಗೂ ಸ್ಟುವರ್ಟ್ ಅವರ ದಕ್ಷಿಣ ಕನ್ನಡ ಜಿಲ್ಲಾ ಮ್ಯಾನ್ಯುಯಲ್‌ಗಳು, ಕೆಲ್‌ಸೆಲ್ ಹಾಗೂ ಫ್ರಾನ್ಸಿಸ್ ಅವರ ಬಳ್ಳಾರಿ ಜಿಲ್ಲಾ ಗೆಜ಼ೆಟಿಯರ್‌ಗಳು ಹಾಗೂ ಬಿ. ಎಲ್. ರೈಸ್ ಅವರ ಮೈಸೂರು ಹಾಗೂ ಕೊಡಗಿಗೆ ಸಂಬಂಧಿಸಿದ ಮೂರು ಸಂಪುಟಗಳ ಗೆಜ಼ೆಟಿಯರ್‌ಗಳು ಪುನರ್‌ಮುದ್ರಣಗೊಂಡಿವೆ.

ಗೆಜ಼ೆಟಿಯರ್ ಇಲಾಖೆಯ ಇನ್ನೊಂದು ಮಹತ್ತ್ವದ ಕಾರ್ಯವೆಂದರೆ ಪ್ರಕಟವಾದ ಎಲ್ಲ ಗೆಜ಼ೆಟಿಯರ್‌ಗಳನ್ನು ಸಿ.ಡಿ. ಅವತರಣಿಕೆಯಲ್ಲಿ ರೂಪುಗೊಳಿಸಿ ವೆಬ್‌ಸೈಟ್‌ನಲ್ಲಿ ಅಳವಡಿಸಿ, ಆಸಕ್ತರಿಗೆ ಉಚಿತವಾಗಿ ಪಡೆಯಲು (ಡೌನ್‌ಲೋಡ್ ಹಾಗೂ ಮುದ್ರಣ ಸೌಲಭ್ಯ) ಅವಕಾಶ ಕಲ್ಪಿಸಿರುವುದು. 2003ರಲ್ಲಿ ಇಂಪೀರಿಯಲ್ ಗೆಜ಼ೆಟಿಯರ್ ಸೇರಿದಂತೆ ಸುಮಾರು ಎಂಬತ್ತು ಗೆಜ಼ೆಟಿಯರ್‌ಗಳನ್ನು ಒಂಬತ್ತು ಸಿ.ಡಿ. ಗಳಲ್ಲಿ ಅಡಕಗೊಳಿಸಿ ಹೊರತರಲಾಯಿತು. 2005ರಲ್ಲಿ ಮತ್ತೆ ಸಿ.ಡಿ.ಗಳ ಪುನರ್ ಆವೃತ್ತಿಯನ್ನು ಹೊರತರಲಾಯಿತು. ಕಿಯೋಕ್ಸ್ ಸ್ಪರ್ಷ ಪರದೆಯಲ್ಲಿಯೂ ಸಿ.ಡಿ. ಗಳನ್ನು ಅಳವಡಿಸಿದ್ದು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ಧಾರವಾಡ ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗದಲ್ಲಿ ಕಿಯೋಕ್ಸ್ ಯಂತ್ರೋಪಕರಣಗಳನ್ನು ಇರಿಸಲಾಗಿದೆ. 2001ರಲ್ಲಿ ಕರ್ನಾಟಕ ರಾಜ್ಯ ಗೆಜ಼ೆಟಿಯರ್ ಇಲಾಖೆಯ ವತಿಯಿಂದ ಅಖಿಲ ಭಾರತ ಮಟ್ಟದಲ್ಲಿ ಎಲ್ಲ ರಾಜ್ಯಗಳ ಗೆಜ಼ೆಟಿಯರ್ ಮುಖ್ಯ ಸಂಪಾದಕರುಗಳನ್ನು ಆಹ್ವಾನಿಸಿ ಸಮ್ಮೇಳನವೊಂದನ್ನು ಆಯೋಜಿಸಲಾಗಿತ್ತು. (ಎಚ್.ಎಂ.ಎನ್.ಆರ್., ಬಿ.ವಿ.ವಿವೈ.)

**ಗೆಜೆಟ್ಟು :** ಪ್ರಚಲಿತ ಸಂಗತಿಗಳ ಗೋಷ್ವಾರೆಯನ್ನೊಳಗೊಂಡ ಸುದ್ದಿ ಹಾಳೆಗಳನ್ನು ಅಥವಾ ವೃತ್ತಪತ್ರಿಕೆಗಳನ್ನು ಗಜ಼ೆಟ್ ಎಂದು ಕರೆಯುತ್ತಿದ್ದರು. ಇವು ಆಧುನಿಕ ವೃತ್ತಪತ್ರಿಕೆಗಳ ಪೂರ್ವಜ ರೂಪಗಳೆನ್ನಬಹುದು. ಈ ಶಬ್ದಕ್ಕೆ ಮೂಲ ಗಾಝಾ (ವೃತ್ತ ಭಂಡಾರ) ಎಂಬ ಗ್ರೀಕ್ ಪದ. ಇಂಗ್ಲಿಷಿಗೆ ಗಜ಼ೆಟ್ ಎಂಬ ಶಬ್ದ ಫ್ರೆಂಚ್‌ನಿಂದ ಬಂತು; ಅದಕ್ಕೆ ಇಟಾಲಿಯನ್ ಭಾಷೆಯ ಗಜ಼ೆಟಾ ಮೂಲ. ಫ್ರೆಂಚ್ ಭಾಷೆಯಲ್ಲಿ ಗಜ಼ೆಟಾ ಎಂಬ ಹೆಸರನ್ನೇ ಈಗಲೂ ಬಳಸಲಾಗುತ್ತಿದೆ. ವೆನಿಸ್‌ನಲ್ಲಿ ಗಜ಼ೆಟಾ ಒಂದು ಚಿಕ್ಕ ನಾಣ್ಯದ ಹೆಸರಾಗಿತ್ತು. 1566ರಲ್ಲಿ ವೆನಿಸ್ ಸರ್ಕಾರ ಪ್ರಕಟಿಸಿ, ಈ ಮೊತ್ತಕ್ಕೆ ಮಾರುತ್ತಿದ್ದ ಸೂಚೀಪತ್ರಕ್ಕೆ ಇದೇ ಹೆಸರು ಬಂತು. 16ನೆಯ ಶತಮಾನದ ನಡುಗಾಲದಲ್ಲಿ ವೆನಿಸಿನಲ್ಲಿ ಪ್ರಕಟವಾಗಲಾರಂಭಿಸಿದ ಲೋಕಾಭಿರಾಮದ ಸುದ್ದಿ ಹಾಳೆಗಳಿಗೆ ಈ ಹೆಸರಿತ್ತು. ಇದೇ ಬಗೆಯ ಪತ್ರಗಳು ಫ್ರಾನ್ಸ್ ಇಂಗ್ಲೆಂಡುಗಳಲ್ಲೂ ತಲೆದೋರಿದುವು. ಒಂದನೆಯ ಎಲಿಜ಼ಬೆತಳ ಸಿಂಹಾಸನಾರೋಹಣವಾದ ಮೇಲೆ ಇಂಥ ಸುದ್ದಿಹಾಳೆಗಳು ಹೆಚ್ಚಿದುವು. ಹರಟೆ, ಸುದ್ದಿ ತುಣುಕು, ಅನಧಿಕೃತ ವೃತ್ತಾಂತ ನಿರೂಪಣೆ, ದೇಶವಿದೇಶ ಪರ್ಯಟನೆ, ಕೊಲೆಯೇ ಮುಂತಾದ ಘಟನೆಗಳು, ವದಂತಿಗಳು, ಜಾಹೀರಾತುಗಳು ಮುಂತಾದವನ್ನೊಳಗೊಂಡ ಆಕರ್ಷಕ ಪತ್ರಗಳು ಹೊರ ಬೀಳಲಾರಂಭಿಸಿದುವು. 17ನೆಯ ಶತಮಾನದಿಂದೀಚೆಗೆ ಗಜ಼ೆಟ್ ಎಂಬ ಶಬ್ದ ಅಧಿಕೃತ ಸರ್ಕಾರಿ ಪ್ರಕಟಣೆಗಳಿಗೆ ಅಧಿಕಾಧಿಕವಾಗಿ ಅನ್ವಯವಾಗತೊಡಗಿತು. ಆಕ್ಸ್‌ಫರ್ಡ್ ಗಜ಼ೆಟ್, ಲಂಡನ್ ಗಜ಼ೆಟ್, ಡಬ್ಲಿನ್ ಗಜ಼ೆಟ್ ಉದಾಹರಣೆಗಳು. ಸರ್ಕಾರಿ ವಿಷಯಗಳನ್ನು, ನೇಮಕ ವಿವರಗಳನ್ನು, ಅಧಿಕೃತ ಪರಿನಿಯತ ಪತ್ರಗಳನ್ನು ಒಳಗೊಂಡ ಪತ್ರಿಕೆ ಎಂಬುದು ಸಾಮಾನ್ಯವಾಗಿ ಇದರ ಈಗಿನ ಅರ್ಥ. ಆದರೆ ವೃತ್ತಪತ್ರಿಕೆಗಳ ಹೆಸರುಗಳ ಕೊನೆಯಲ್ಲೂ ಕ್ವಚಿತ್ತಾಗಿ ಈ ಶಬ್ದವನ್ನು ಬಳಸುವುದುಂಟು. ದಿ ಪಾಲ್ ಮಾಲ್ ಗಜ಼ೆಟ್, ದಿ ಸೇಂಟ್ ಜೇಮ್ಸ್ ಗಜ಼ೆಟ್, ದಿ ವೆಸ್ಟ್‌ಮಿನ್‌ಸ್ಟರ್ ಗಜ಼ೆಟ್ ಮುಂತಾದವು 20ನೆಯ ಶತಮಾನದ ಆದಿಭಾಗದಲ್ಲಿ ಲಂಡನಿನಿಂದ ಪ್ರಕಟವಾದ ವೃತ್ತಪತ್ರಿಕೆಗಳು. ಬ್ರಿಟನ್‌ನಲ್ಲಿ ಈಗಲೂ ಪ್ರಕಟವಾಗುತ್ತಿರುವ ಹಲವು ವೃತ್ತಪತ್ರಿಕೆಗಳ ಹೆಸರುಗಳಲ್ಲಿ ಗಜ಼ೆಟ್ ಎಂಬ ಶಬ್ದ ಉಳಿದುಬಂದಿದೆ. ಅಮೆರಿಕದ ದಿ ಪೆನ್‌ಸಿಲ್ವೇನಿಯ ಗಜ಼ೆಟ್ ಎಂಬ ಪತ್ರಿಕೆ ಅತ್ಯಂತ ಪ್ರಭಾವಶಾಲಿಯಾಗಿತ್ತು. ಗಜ಼ೆಟ್ ಎಂಬ ಉತ್ತರಪದವನ್ನೊಳಗೊಂಡ ಹಲವು ವೃತ್ತಪತ್ರಿಕೆಗಳು ಅಮೆರಿಕದಲ್ಲಿ ಪ್ರಕಟವಾಗುತ್ತಿದ್ದುವು. ಸಂಯುಕ್ತ ಸಂಸ್ಥಾನಗಳ ಗಜ಼ೆಟ್ ಮತ್ತು ದಿ ನ್ಯಾಷನಲ್ ಗಜ಼ೆಟ್ ಇನ್ನೆರಡು ಉದಾಹರಣೆಗಳು. 18ನೆಯ ಶತಮಾನದ ಉತ್ತರಾರ್ಧದಲ್ಲಿ ಆರಂಭವಾದ ಬೆಂಗಾಲ್ ಗಜ಼ೆಟ್, ಇಂಡಿಯ ಗಜ಼ೆಟ್ ಇವು ಭಾರತದ ಆದಿಪತ್ರಿಕೆಗಳು. ಭಾರತದಲ್ಲಿ ಸ್ಥಾಪಿತವಾದ ಬ್ರಿಟಿಷ್ ಆಳ್ವಿಕೆಯಲ್ಲಿ ಸರ್ಕಾರಗಳ ಅಧಿಪತ್ರಗಳಾಗಿ ಗೆಜೆಟ್ಟುಗಳು ಪ್ರಕಟವಾಗತೊಡಗಿದುವು. ಈಗ ಎಲ್ಲ ರಾಜ್ಯ ಸರ್ಕಾರಗಳೂ ಗೆಜ಼ೆಟ್ಟುಗಳನ್ನು ಪ್ರಕಟಿಸುತ್ತಿವೆ. ಮೈಸೂರು ಸರ್ಕಾರದ ಗೆಜೆಟ್ಟು "ದಿ ಮೈಸೂರ್ ಗಜ಼ೆಟ್ "(ನಂತರ ದಿ ಕರ್ನಾಟಕ ಗೆಜ಼ೆಟ್ – ಕನ್ನಡದಲ್ಲಿ 'ಕರ್ನಾಟಕ ರಾಜ್ಯಪತ್ರ') ಎಂಬ ಹೆಸರಿನಲ್ಲಿ ಸು. 1866 ರಿಂದ ಪ್ರಕಟವಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಗೆಜ಼ೆಟ್ 1965ರ ಫೆಬ್ರುವರಿ 15 ರಿಂದ, ಕನ್ನಡದ ಗೆಜ಼ೆಟ್ 1968ರ ನವೆಂಬರ್ 1 ರಿಂದ ಪ್ರಕಟವಾಗುತ್ತಿವೆ.

(ಎಚ್.ಎಂ.ಎನ್.ಆರ್.)

**ಗೆಜ಼ೆಲ್ :** ಉತ್ತರ ಹಾಗೂ ಪೂರ್ವ ಆಫ್ರಿಕ, ಅರೇಬಿಯ, ಇಸ್ರೇಲ್, ಸಿರಿಯ, ಮಧ್ಯ ಏಷ್ಯ, ಭಾರತದ ಮೈದಾನ ಪ್ರದೇಶಗಳಲ್ಲೆಲ್ಲ ಕಾಣಬರುವ ಒಂದು ಚೆಲುವಾದ ಜಿಂಕೆ. ಆರ್ಟಿಯೊಡಕ್ಟಿಲ ಗಣದ ಬೋವಿಡೀ ಕುಟುಂಬಕ್ಕೆ ಸೇರಿದೆ. ಗಜ಼ೆಲ ಎಂಬುದು



ಇದರ ವೈಜ್ಞಾನಿಕ ಹೆಸರು. ಇದರಲ್ಲಿ ಸುಮಾರು 12 ಪ್ರಭೇದಗಳಿವೆ. ಗೆಜ಼ೆಲಿನ ವಾಸ ಸಾಧಾರಣವಾಗಿ ಮರಗಳಿಲ್ಲದ ಬಯಲು ಪ್ರದೇಶಗಳಲ್ಲಿ. ಬಿರುಬಿಸಿಲಿನಲ್ಲಿ ಬೇಯುವ ಮರುಭೂಮಿಗಳು ಇದರ ಅಚ್ಚುಮೆಚ್ಚಿನ ನೆಲೆಗಳು.

ಗೆಜ಼ೆಲುಗಳು ಮಧ್ಯಮಗಾತ್ರದ ಚಿಗರಿಗಳು. ವಿವಿಧ ಪ್ರಭೇದಗಳ ಉದ್ದ 1–1.2 ಮೀ. ಭುಜದ ಬಳಿಯ ಎತ್ತರ 51–89 ಸೆಂಮೀ. ತೂಕ 14–75 ಕಿಗ್ರಾಂವರೆಗೆ ವ್ಯತ್ಯಾಸವಾಗುತ್ತದೆ. ಇವಕ್ಕೆ 12–14 ಸೆಂಮೀ ಉದ್ದದ ಬಾಲವಿದೆ. ದೇಹದ ಬಣ್ಣ ಗಾಢ ಕಂದಿನಿಂದ ಬೂದಿ, ಬಿಳಿಯವರೆಗೆ ವೈವಿಧ್ಯಪೂರ್ಣವಾಗಿದೆ. ಹೊಟ್ಟೆಯ ಭಾಗ ತಿಳಿಬಣ್ಣದ್ದು. ಕೆಲವು ಪ್ರಭೇದಗಳಲ್ಲಿ ಬೆನ್ನು ಮತ್ತು ಹೊಟ್ಟೆಯ ಭಾಗಗಳ ಬಣ್ಣಗಳು ಮಿಳಿತವಾಗುವಲ್ಲಿ ಗಾಢವರ್ಣದ ಒಂದು ಪಟ್ಟೆಯಿರುವುದುಂಟು. ಬಾಲದ ಬುಡ ಮತ್ತು ತೊಡೆಗಳ ಹಿಂಭಾಗಗಳು ಬೆಳ್ಳಗಿರುತ್ತವೆ. ಬಹುಪಾಲು ಪ್ರಭೇದಗಳಲ್ಲಿ ಗಂಡು ಮತ್ತು ಹೆಣ್ಣುಗಳೆರಡರಲ್ಲೂ ಒಂದೊಂದು ಜೊತೆ ಕೊಂಬುಗಳಿರುತ್ತವೆ. ಸಬ್‌ಗಟುರೋಸ ಎಂಬ ಪ್ರಭೇದದಲ್ಲಿ ಕೊಂಬುಗಳು ಗಂಡಿನಲ್ಲಿ ಮಾತ್ರ ಇರುತ್ತವೆ. ಕೊಂಬುಗಳ ಆಕಾರ ಲೈರ್ ವಾದ್ಯದಂತೆ: ಸರಾಸರಿ ಉದ್ದ 25–35 ಸೆಂಮೀ. ಕೆಲವು ಸಲ ಕೊಂಬುಗಳು ತಲೆಯ ಆಚೀಚೆ ಹರಡಿರುವುದು ಇಲ್ಲವೆ ಹಿಂದಕ್ಕೆ ಬಾಗಿರುವುದು ಉಂಟು. ಕೊಂಬುಗಳು ಹೇಗೇ ಇರಲಿ, ಇವುಗಳ ತುದಿ ಮಾತ್ರ ಮೇಲಕ್ಕೆ ಬಾಗಿರುತ್ತದೆ.

ಗೆಜ಼ೆಲುಗಳು ಸಾಮಾನ್ಯವಾಗಿ ಗುಂಪುಗಳಲ್ಲಿ ವಾಸಿಸುತ್ತವೆ. ಒಂದೊಂದು ಗುಂಪಿನಲ್ಲಿ 5–10 ಪ್ರಾಣಿಗಳಿರುತ್ತವೆ. ಕೆಲವು ಸಲ ನೂರಾರು ಪ್ರಾಣಿಗಳಿರುವುದೂ ಉಂಟು. ಗಿಡಮರಗಳ ಎಳೆಚಿಗುರು, ಹುಲ್ಲಿನ ಎಸಳುಗಳು ಇವುಗಳ ಮುಖ್ಯ ಆಹಾರ. ಗೆಜ಼ೆಲುಗಳು ತಮ್ಮ ಓಟದ ಸಾಮರ್ಥ್ಯಕ್ಕೆ ಹೆಸರಾಗಿವೆ. ಬಹುಶ: ಬೇಟೆಯ ಚಿರತೆ, ಗ್ರೇ ಹೌಂಡ್ ನಾಯಿ ಮತ್ತು ವಿಶೇಷ ಶಿಕ್ಷಣ ಕೊಟ್ಟು ಬೆಳೆಸಿದ ಗಿಡುಗಗಳನ್ನು ಬಿಟ್ಟರೆ ಗೆಜ಼ೆಲುಗಳೇ ಅತ್ಯಂತ ವೇಗವಾಗಿ ಓಡಬಲ್ಲ ಪ್ರಾಣಿಗಳು. ಪೂರ್ವ ಆಫ್ರಿಕದ ಥಾಮ್ಸನ್ಸ್ ಗೆಜ಼ೆಲ್ ಎಂಬುದು ಗಂಟೆಗೆ 65 ಕಿಮೀ ವೇಗದಲ್ಲಿ ಓಡಬಲ್ಲದು.

ಇವುಗಳ ಸಂತಾನೋತ್ಪತ್ತಿಯ ಕಾಲ ಏಪ್ರಿಲ್–ಜೂನ್‌ಗಳ ಅವಧಿ. ಹುಟ್ಟಿದ ಒಂದು ವಾರದಲ್ಲೆ ಮರಿಗಳಿಗೆ ಸಾಕಷ್ಟು ಬಲ ಬಂದು ಅವು ಸ್ವತಂತ್ರ ಜೀವನ ನಡೆಸತೊಡಗುತ್ತವೆ. ಗೆಜ಼ೆಲುಗಳ ಆಯಸ್ಸು ಸುಮಾರು 10–12 ವರ್ಷಗಳು.

ಅರೇಬಿಯ ಮತ್ತು ಏಷ್ಯದ ಕೆಲವು ಭಾಗಗಳಲ್ಲಿ ಗೆಜ಼ೆಲುಗಳನ್ನು ಮಾಂಸಕ್ಕಾಗಿ ಬೇಟೆಯಾಡುತ್ತಾರೆ. ಬೇಟೆಯಲ್ಲಿ ನಾಯಿ ಮತ್ತು ಗಿಡುಗಗಳನ್ನು ಬಳಸಲಾಗುತ್ತದೆ. ಕೆಲವು ಪ್ರಭೇದಗಳ ಮಾಂಸ ಮಾತ್ರ ಬಲುರುಚಿ. *

**ಗೆಟಿಸ್‌ಬರ್ಗ್ ಕದನ :** ಅಮೆರಿಕನ್ ಅಂತರ್ಯುದ್ಧದಲ್ಲಿ ನಿರ್ಧಾರಕ ಘಟ್ಟವೆಂದು ಪರಿಗಣಿತವಾಗಿರುವ, ಅತ್ಯಧಿಕ ಜೀವಹಾನಿಯನ್ನು ದಾಖಲಿಸಿದ ಒಂದು ಕದನ (1863). ಅಮೆರಿಕ ಸಂಯುಕ್ತಸಂಸ್ಥಾನದ ದಕ್ಷಿಣ ಪೆನ್ಸಿಲ್ವೇನಿಯದಲ್ಲಿರುವ ಗೆಟಿಸ್‌ಬರ್ಗಿನಲ್ಲಿ, ಉತ್ತರದ ರಾಜ್ಯಗಳ (ಒಕ್ಕೂಟ) ಮತ್ತು ಪ್ರತ್ಯೇಕಗೊಂಡಿದ್ದ ದಕ್ಷಿಣದ ರಾಜ್ಯಗಳ (ಪ್ರಸಂಧಿ) ನಡುವೆ ಈ ಕದನ 1863ರ ಜುಲೈ 1–3 ರವರೆಗೆ ನಡೆಯಿತು. ಇದೇ ವರ್ಷ ಮೇ ತಿಂಗಳಲ್ಲಿ ವರ್ಜೀನಿಯದ ಚಾನ್ಸೆಲರ್ಸ್‌ವಿಲ್‌ನಲ್ಲಿ ಒಕ್ಕೂಟ ಪಡೆಗಳಿಗೂ ಪ್ರಸಂಧಿ ಪಡೆಗಳಿಗೂ ನಡೆದ ಕದನದಲ್ಲಿ ಯಶಸ್ಸು ಕಂಡ ಪ್ರಸಂಧಿ ಸೇನೆಯ ಅಧಿಪತಿ

ಜನರಲ್ ಲೀ ಮತ್ತೊಮ್ಮೆ ಆಕ್ರಮಣವೆಸಗುವ ಉದ್ದೇಶದಿಂದ ತನ್ನ ಸೈನ್ಯವನ್ನು ಸಾಂದ್ರೀಕರಿಸುತ್ತಿದ್ದ. ಲಾಂಗ್‌ಸ್ಟ್ರೀಟ್, ಎವೆಲ್ ಮತ್ತು ಹಿಲ್‌ಗಳ ನಾಯಕತ್ವದಲ್ಲಿದ್ದ ಪಡೆಗಳನ್ನು ಜೂನ್ ತಿಂಗಳಲ್ಲಿ ಮುನ್ನುಗ್ಗಿಸಿದ. ಒಕ್ಕೂಟ ಪಡೆಗಳ ಅಧಿಪತಿ ಜೋಸೆಫ್ ಹೂಕರ್ ಇವರನ್ನು ಅನುಸರಿಸಿ ಸಾಗಿದ. ಲೀಯ ಸೈನ್ಯಕ್ಕೂ ವಾಷಿಂಗ್‌ಟನ್ನಿಗೂ ನಡುವೆ ತನ್ನ ಸೈನ್ಯ ಇರುವಂತೆ ಹೂಕರ್ ಎಚ್ಚರ ವಹಿಸಿದ. ಜೂನ್ 27ರಂದು ಅಧ್ಯಕ್ಷ ಲಿಂಕನ್ ಹೂಕರನನ್ನು ತೆಗೆದು ಅವನ ಸ್ಥಾನದಲ್ಲಿ ಜಾರ್ಜ್ ಜಿ. ಮೀಡನನ್ನು ಅಧಿಪತಿಯಾಗಿ ನೇಮಿಸಿದ. ಲೀಯ ಕಡೆಯ ಅಶ್ವಪಡೆ ಬೇರೆ ಆಕ್ರಮಣಕಾರ್ಯವೊಂದರಲ್ಲಿ ನಿರತವಾಗಿದ್ದುದರಿಂದ ಸಮಯಕ್ಕೆ ಸರಿಯಾಗಿ ಬರಲಿಲ್ಲ. ಆದ್ದರಿಂದ ತನ್ನ ಶತ್ರುಗಳ ಸ್ಥಾನವನ್ನು ಲೀಗೆ ಅರಿಯಲಾಗಲಿಲ್ಲ. ಇವನ ಪಡೆಗಳು ಗೆಟಿಸ್‌ಬರ್ಗ್ ಬಳಿಗೆ ಧಾವಿಸಿದವು. ಪ್ರಸಂಧಿ ಪಡೆಗಳೂ ಒಕ್ಕೂಟ ಪಡೆಗಳೂ ಗೆಟಿಸ್‌ಬರ್ಗಿನ ಹೊರಗೆ ಜುಲೈ 1ರಂದು ಪರಸ್ಪರ ಎದುರಾಗಿ ಯುದ್ಧಕ್ಕಿಳಿದವು. ಅಧಿಕ ಸಂಖ್ಯೆಯಲ್ಲಿದ್ದ ಲೀ ಪಡೆಯನ್ನು ತಡೆಗಟ್ಟುವ ಯತ್ನದಲ್ಲಿ ಒಕ್ಕೂಟ ಪಡೆಯ ನಾಯಕ ಜನರಲ್ ರೇನಾಲ್ಡ್ಸ್ ಸಾವಿಗೆ ಈಡಾದ. ಜುಲೈ 2 ರ ಮಧ್ಯಾಹ್ನ ಮತ್ತೆ ಕದನ ಮುಂದುವರೆಯಿತು. ಲೀಯ ಪಡೆಗಳು ಒಕ್ಕೂಟ ಪಡೆಗಳನ್ನು ರೌಂಡ್ ಟಾಪ್ ಮತ್ತು ಲಿಟ್ಲ್‌ರೌಂಡ್ ಟಾಪ್ ಎಂಬ ಎರಡು ಗುಡ್ಡಗಳ ಮೇಲಿಂದ ಕದಲಿಸಲು ಯತ್ನಿಸಿದವು: ಒಕ್ಕೂಟ ಪಡೆಗಳಿಂದ ಕಲ್ಪ್ಸ್ ಹಿಲ್ ಎಂಬ ಗುಡ್ಡವನ್ನು ವಶಕ್ಕೆ ತೆಗೆದುಕೊಂಡವು. ಆದರೆ ಮರುದಿನ ವಿಜಯದ ಕೈ ಬದಲಾಯಿಸಿತು. ಒಕ್ಕೂಟ ಪಡೆಗಳು ಕಲ್ಪ್ಸ್ ಹಿಲ್ಲನ್ನು ಮತ್ತೆ ತಮ್ಮ ವಶಕ್ಕೆ ತೆಗೆದುಕೊಂಡವು. ಅಂದು ಮಧ್ಯಾಹ್ನ ಲೀಯ ಸೇನೆ ಒಕ್ಕೂಟ ಸೇನೆಯ ಮೇಲೆ ಮದ್ದುಗುಂಡುಗಳ ಮಳೆಗರೆಯಿತು. ಒಕ್ಕೂಟ ಸೇನೆ ಇದಕ್ಕೆ ಸಮನಾಗಿ ಹೋರಾಡಿತು. ಲೀಯ ಮದ್ದುದಾಸ್ತಾನು ಮುಗಿದುಹೋದ್ದರಿಂದ ಅಶ್ವಪಡೆಗೆ ಮುನ್ನುಗ್ಗಲು ಆಜ್ಞಾಪಿಸಬೇಕಾಯಿತು. ಜನರಲ್ ಪಿಕೆಟ್ ತನ್ನ 15,000 ಯೋಧರೊಂದಿಗೆ ಫಿರಂಗಿ ಗುಂಡುಗಳ ಸುರಿಮಳೆಯ ನಡುವೆಯೇ ನುಗ್ಗಿದ. ಆದರೆ ಅವನಿಗೆ ಸಾಕಷ್ಟು ಬೆಂಬಲ ಇಲ್ಲದ್ದರಿಂದ ಹಿಂದೆ ಸರಿಯಬೇಕಾಯಿತು. ಪ್ರಸಂಧಿ ಸೇನೆ ಜರ್ಝರಿತವಾಗಿ ಹಿಂದಕ್ಕೆ ಸರಿದು, ಮತ್ತೆ ಮುನ್ನುಗ್ಗಲು ಸಮಯ ಕಾಯುತ್ತಿತ್ತು. ಆದರೆ ಅದು ಸಾಧ್ಯವಾಗಲೇ ಇಲ್ಲ. ಮರುದಿನ ಎರಡೂ ಕಡೆಯ ಸೈನ್ಯಗಳು ಇದಿರುಬದಿರಾಗಿ ನಿಂತೇ ಇದ್ದುವು. ಕದನ ಮುಂದುವರಿಯಲಿಲ್ಲ. ಜುಲೈ 5 ರಂದು ಲೀ ಸೈನ್ಯ ಹಿಂದಕ್ಕೆ ಪೊಟೊಮ್ಯಾಕ್ ಕಡೆಗೆ ಸರಿಯಲಾರಂಭಿಸಿತು. ಲೀಯ ಸೈನ್ಯದ ದುರ್ಬಲ ಸ್ಥಿತಿಯ ಉಪಯೋಗ ಪಡೆದುಕೊಂಡು ಅದರ ಮೇಲೆ ಮೀಡ್‌ನ ಪಡೆಗಳೇ ಆಕ್ರಮಣ ನಡೆಸಬೇಕಾಗಿತ್ತೆಂದೂ ಅವನು ಹಾಗೆ ಮಾಡದೆ ಹೋದದ್ದು ತಪ್ಪೆಂದೂ ಮೀಡ್ ಟೀಕೆಗೆ ಒಳಗಾದ. ಗೆಟಿಸ್‌ಬರ್ಗಿನ ಮೂರು ದಿನಗಳ ಕದನದಲ್ಲಿ ಪ್ರಸಂಧಿ ಪಕ್ಷದ ಕಡೆ 28,000 ಸೈನಿಕರೂ ಒಕ್ಕೂಟ ಪಕ್ಷದ ಕಡೆ 23,000 ಸೈನಿಕರೂ ಸತ್ತರು. ಪ್ರಸಂಧಿ ಪಕ್ಷದವರಿಗೆ ಗೆಟಿಸ್‌ಬರ್ಗ್‌ನ ಕದನದಲ್ಲಿ ಸೋಲಾದ ದಿನವೇ ಅವರಿಗೆ ಮಿಸಿಸಿಪಿ ನದಿಯ ದಂಡೆಯ ಮೇಲೆ ವಿಕ್ಸ್‌ಬರ್ಗ್‌ನಲ್ಲಿ ನಡೆದ ಕದನದಲ್ಲೂ ಸೋಲುಂಟಾಯಿತು. ಪ್ರಸಂಧಿಯ ಅಂತ್ಯ ಆಗ ಆರಂಭವಾಯಿತೆನ್ನಬಹುದು. (ಆರ್.ಜಿ.ಎಸ್.)

ಆ ಕದನದಲ್ಲಿ ಸತ್ತ ಸೈನಿಕರ ರಾಷ್ಟ್ರೀಯ ಸ್ಮಾರಕವಾಗಿ ಗೆಟಿಸ್‌ಬರ್ಗ್ ರಣರಂಗವನ್ನು ರಾಷ್ಟ್ರಕ್ಕೆ ಅರ್ಪಿಸುವ ಸಮಾರಂಭದಲ್ಲಿ (1863 ನವೆಂಬರ್ 19) ಭಾಗವಹಿಸಿದ ಅಬ್ರಹಾಂ ಲಿಂಕನ್ ಮಾಡಿದ ಪುಟ್ಟ ಭಾಷಣ (ಗೆಟಿಸ್‌ಬರ್ಗ್ ಅಡ್ರೆಸ್) ಅತ್ಯುತ್ತಮ ಸಾಹಿತ್ಯವೆಂದೂ ಪ್ರಜಾಪ್ರಭುತ್ವದ ಶ್ರೇಷ್ಠತೆಯ ಅತ್ಯಂತ ಸಮರ್ಥ ಪ್ರತಿಪಾದನೆಯೆಂದೂ ಪ್ರಸಿದ್ಧವಾಗಿದೆ. ಅಮೆರಿಕದ ಪ್ರಖ್ಯಾತ ವಾಗ್ಮಿಯಾಗಿದ್ದ ಎಡ್ವರ್ಡ್ ಎವರೆಟ್ಟನ ಎರಡು ಗಂಟೆಗಳ ಭಾಷಣದ ಅನಂತರ ಮಾಡಿದ ಆ ಭಾಷಣ ಆಗ ಶ್ರೋತೃಗಳ ಗಮನ ಸೆಳೆಯಲಿಲ್ಲ. ಲಿಂಕನನಿಗೂ ಸಮಾಧಾನವೆನಿಸಿರಲಿಲ್ಲ. ಆದರೆ ಅಚ್ಚಾದಾಗ ಅದರ ಪ್ರಭಾವ ಎಷ್ಟೆಂಬುದು ಎಲ್ಲರಿಗೂ ಗೊತ್ತಾಯಿತು. ಎವರೆಟ್ಟನೂ ಅದನ್ನು ಹೊಗಳಿದ. ಲಿಂಕನ್ ಭಾಷಣಮಾಡಿದ ಸ್ಥಳದಲ್ಲಿ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ. *

**ಗೆಟ್ರೂಡ್ ಬೆಲ್ :** 1868–1926. ಬ್ರಿಟಿಷ್ ಪುರಾತತ್ತ್ವಜ್ಞೆ, ಅನ್ವೇಷಕಿ, ಲೇಖಕಿ ಮತ್ತು ಅಧಿಕಾರಿ. ಇವಳ ಪೂರ್ಣ ಹೆಸರು ಗೆಟ್ರೂಡ್ ಮಾರ್ಗರೇಟ್ ಲೊಥಿಯನ್ ಬೆಲ್. ಇಂಗ್ಲೆಂಡಿನ ಪಟ್ಟಣ ಡೂರ್‌ಹ್ಯಾಂನ ವಾಷಿಂಗ್‌ಟನ್ ಹಾಲ್‌ನಲ್ಲಿ 1868ರ ಜುಲೈ 14ರಂದು ಜನಿಸಿದಳು. ಸರ್ ಹ್ಯೂಗ್‌ಬೆಲ್ ಮತ್ತು ಮೇರಿಶೀಲ್ಡ್‌ಬೆಲ್ ದಂಪತಿಗಳ ಮಗಳು. ಇವಳು 3 ವರ್ಷದವಳಾಗಿದ್ದಾಗ ತಾಯಿ ನಿಧನವಾದಳು.

ಇವಳು ಲಂಡನ್ನಿನ ಕ್ವೀನ್ಸ್ ಕಾಲೇಜಿನಲ್ಲಿ ಪ್ರಥಮ ವಿದ್ಯಾಭ್ಯಾಸವನ್ನು, ನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಲೇಡಿ ಮಾರ್ಗರೇಟ್ ಹಾಲ್‌ನಲ್ಲಿ ಮಾಡಿದಳು. ಇವಳಿಗೆ ಆಗ 17 ವರ್ಷ. ಆಧುನಿಕ ಇತಿಹಾಸದಲ್ಲಿ ಪರಿಣಿತಳಾಗಿ 2 ವರ್ಷದಲ್ಲಿಯೇ ಆನರ್ಸ್ ಪದವಿ ಪಡೆದಳು. ಇವಳು ವಿದ್ಯಾಭ್ಯಾಸ ಮಾಡುವಾಗ ಪ್ರವಾಸ ಮತ್ತು ಪರ್ವತಾರೋಹಣದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಳು. ಮರುಭೂಮಿಯಲ್ಲಿ ಪ್ರವಾಸ ಮಾಡುವುದರಲ್ಲಿಯೂ ಮತ್ತು ಪುರಾತತ್ತ್ವದಲ್ಲಿಯೂ ಆಸಕ್ತಿ ಮತ್ತು ಉತ್ಸಾಹವನ್ನು ಹೊಂದಿದ್ದಳು. 1905ರಲ್ಲಿ ಈಗ ಟರ್ಕಿಯಲ್ಲಿರುವ ಪ್ರಾಚೀನ ನೆಲೆ ಇಫೇಸಸ್ ಡೇವಿಡ್ ಜಾರ್ಜ್‌ಹೂಗರ್ಥ್ ಎಂಬ ಬ್ರಿಟಿಷ್ ಪುರಾತತ್ತ್ವಜ್ಞ ನಡೆಸುತ್ತಿದ್ದ ಉತ್ಖನನದಲ್ಲಿ ಭಾಗವಹಿಸಿದ್ದಳು. ಇವಳು ಅರೇಬಿಕ್, ಪರ್ಷಿಯನ್, ಟರ್ಕಿಷ್, ಫ್ರೆಂಚ್, ಜರ್ಮನಿ ಮತ್ತು ಇಟಲಿ ಭಾಷೆಗಳನ್ನು ತಿಳಿದು ನಿರರ್ಗಳವಾಗಿ ಮಾತನಾಡುತ್ತಿದ್ದಳು. ಇದರಿಂದ ಪ್ರವಾಸ ಮಾಡುವಾಗ ಕಷ್ಟವಾಗಲಿಲ್ಲ. ಅಲ್ಲಿ ಸ್ಥಳೀಯರೊಡನೆ ಬೆರೆಯಲು ಸಹಾಯವಾಯಿತು.

1907ರಲ್ಲಿ ಮಾರ್ಚ್ ತಿಂಗಳಿನಲ್ಲಿ ಆಟೋಮನ್ ಸಾಮ್ರಾಜ್ಯಕ್ಕೆ ಪ್ರಯಾಣ ಮಾಡಿ ಅಲ್ಲಿ ಅನಟೋಲಿಯದ ಬಿರ್‌ಬಿಂಕಿಲಿಸೆನಲ್ಲಿರುವ ಸ್ಮಾರಕ ನೆಲೆಗಳನ್ನು ಉತ್ಖನನ ಮಾಡುತ್ತಿದ್ದ ಬೈಬಲ್‌ನ ಹೊಸ ಒಡಂಬಡಿಕೆಯ ವಿದ್ವಾಂಸ ಮತ್ತು ಪುರಾತತ್ತ್ವಜ್ಞ ಸರ್ ವಿಲಿಯಂ, ಎಂ. ರಾಮ್‌ಸ್ಸೆ ಜೊತೆಯಲ್ಲಿ ಉತ್ಖನನ ನಡೆಸಿದಳು. ಉತ್ಖನನದ ಕಾಲಾನುಕ್ರಮಣಿಕೆಯನ್ನು 'ದಿ ತೌಸಂಡ್ ಅಂಡ್ ದಿ ಒನ್ ಚರ್ಚಸ್' ಎಂದು



ಪ್ರಕಟಿಸಿದಳು. ಈ ಸ್ಮಾರಕಗಳಲ್ಲಿ ಅನೇಕವು ಈಗ ಉಳಿದಿಲ್ಲ. 1909ರ ಜನವರಿಯಲ್ಲಿ ಮೆಸಪೊಟೇಮಿಯಕ್ಕೆ ಪ್ರಯಾಣ ಬೆಳೆಸಿ ಅಲ್ಲಿ ಹಿಟ್ಟೈಟರ ನಗರ ಕರ್‌ಕೆಮಿಷ್‌ನಲ್ಲಿ ಉಳ್ಳಿದ್ ಅವಶೇಷಗಳ ನಕ್ಷೆಯನ್ನು ರಚಿಸಿ ವಿವರಣೆಯನ್ನು ದಾಖಲಿಸಿದಳು. ಕರ್‌ಕೆಮಿಷ್‌ನಲ್ಲಿ ಇಬ್ಬರು ಪುರಾತತ್ತ್ವಜ್ಞರಾದ ಟಿ.ಇ. ಲಾರೆನ್ಸ್ ಮತ್ತು ಡೇವಿಡ್ ಜಾರ್ಜ್ ಹ್ಯೂಗರ್ಥ್ ನಡೆಸುತ್ತಿದ್ದ ಉತ್ಖನನದಲ್ಲಿ ಭಾಗವಹಿಸಿದ್ದಳು.


1914ರಲ್ಲಿ ಮೊದಲ ಮಹಾಯುದ್ಧ ಪ್ರಾರಂಭವಾದಾಗ ರೆಡ್‌ಕ್ರಾಸ್‌ನಲ್ಲಿ ಸ್ವಯಂಸೇವಕಿಯಾಗಿ ಫ್ರಾನ್ಸ್‌ನಲ್ಲಿ ಸೇವೆ ಸಲ್ಲಿಸಿದಳು. ಇವಳು ಅವಿವಾಹಿತಳು. ಆದರೆ ಬ್ರಿಟಿಷ್ ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿವಾಹಿತ ಮೇಜರ್ ಚಾರ್ಲ್ಸ್ ಡೌಗಟಿಯೊಡನೆ ಸಂಬಂಧವಿತ್ತು. ಅವನು 1915ರಲ್ಲಿ ಗ್ಯಾಲಿಪೋಲಿಯ ಕದನದಲ್ಲಿ ನಿಧನವಾದ. ಅನಂತರ ಇವಳು ಸಂಪೂರ್ಣವಾಗಿ ತನ್ನ ಕೆಲಸದಲ್ಲಿ ಮಗ್ನಳಾದಳು. ಇವಳನ್ನು 1915ರ ನವೆಂಬರ್‌ನಲ್ಲಿ ಆಗ ತಾನೆ ಕೈರೊನಲ್ಲಿ ಪ್ರಾರಂಭವಾಗುತ್ತಿದ್ದ ಅರಬ್ ಬ್ಯೂರೋನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಜನರಲ್ ಗಿಲ್‌ಬರ್ಟ್ ಕ್ಲೈಟನ್‌ಗೆ ಸಹಾಯ ಮಾಡಲು ಕಳುಹಿಸಿದರು. ಅವನು ಇವಳನ್ನು 1916ರ ಮಾರ್ಚ್ 3ರಂದು ಬಾಸ್ರ ನಗರಕ್ಕೆ ಕಳುಹಿಸಿದ. ಆ ಸಮಯದಲ್ಲಿ ಇವಳ ಭಾಷಾಜ್ಞಾನ ಬೇಹುಗಾರಿಕೆ ಕೆಲಸಕ್ಕೆ ಸಹಕಾರಿಯಾಯಿತು. ಅಲ್ಲಿ ಬಾಗ್ದಾದ್ ಕಡೆಗೆ ಸಾಗುವ ಸೈನ್ಯ ಸುರಕ್ಷಿತವಾಗಿ ತಲುಪಲು ಸಹಾಯ ಮಾಡಬೇಕಾಗಿತ್ತು. ಇವಳು ಆ ಪ್ರದೇಶದ ನಕ್ಷೆಯನ್ನು ರಚಿಸಿ ಸೈನ್ಯ ಸುರಕ್ಷತೆಯಿಂದ ತಲುಪಲು ಸಹಾಯ ಮಾಡಿದಳು. ಬ್ರಿಟಿಷ್ ಸೈನ್ಯದಲ್ಲಿ ಇವಳೊಬ್ಬಳೇ ಮಹಿಳಾಧಿಕಾರಿ.

ಒಂದನೆಯ ಮಹಾಯುದ್ಧಾನಂತರ ಇರಾಕ್‌ನಲ್ಲಿ ಹಸ್‌ಮೇಟ್ ರಾಜ್ಯ ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸಿದಳು. 1918ರಲ್ಲಿ ಬಾಗ್ದಾದ್‌ನಲ್ಲಿ ಇರಾಕ್ ಆರ್ಕಿಯಲಾಜಿಕಲ್ ಮ್ಯೂಸಿಯಂ ಸ್ಥಾಪಿಸಲು ಇರಾಕ್ ದೊರೆ ಫೈಸಲ್ ಸಹಾಯ ಮಾಡಿದ. ಆ ಮ್ಯೂಸಿಯಂಗೆ ತಾನು ಸಂಗ್ರಹಿಸಿದ್ದ ಮತ್ತು ಲಿಯೊನಾರ್ಡ್ ವೂಲಿ, ಉರ್ ಮತ್ತು ಇತರ ಮುಖ್ಯ ನೆಲೆಗಳಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ನೀಡಿದಳು. ಬಾಗ್ದಾದ್‌ನಲ್ಲಿ ಬ್ರಿಟಿಷ್ ಸ್ಕೂಲ್ ಆಫ್ ಆರ್ಕಿಯಾಲಜಿಯನ್ನು ಸ್ಥಾಪಿಸಿದಳು. ಇರಾಕ್ ನೂತನ ಸರ್ಕಾರ ಇವಳನ್ನು ಡೈರೆಕ್ಟರ್ ಆಫ್ ಆಂಟಿಕ್ವಿಟೀಸ್ ಆಗಿ ನೇಮಿಸಿತು.

ಒಂದನೆಯ ಮಹಾಯುದ್ಧದ ಅನಂತರ ರಾಜಕೀಯದಿಂದ ದೂರ ಸರಿದು ಪುರಾತತ್ತ್ವದ ಕಾರ್ಯದಲ್ಲಿ ಮಗ್ನಳಾದಳು. ಬ್ರಿಟಿಷ್ ಮತ್ತು ಅರಬ್ ಸೈನ್ಯದವರ ಸಹವಾಸದಿಂದ ಅತಿಯಾದ ಧೂಮಪಾನ ಮತ್ತು ಮದ್ಯಪಾನದಿಂದ ಶ್ವಾಸಕೋಶದ ನಾಳದ ಊತದಿಂದ ನರಳುತ್ತಿದ್ದಳು. ಇವಳು ತನ್ನ ಭವಿಷ್ಯದ ಮತ್ತು ಕ್ಷೀಣಿಸುತ್ತಿರುವ ದೇಹಸ್ಥಿತಿಯಿಂದ ಆತಂಕಕ್ಕೆ ಒಳಗಾದಳು. ಇವಳ ತಮ್ಮ ಟೈಫಾಯಿಡ್ ರೋಗದಿಂದ

ನಿಧನವಾದ ಸುದ್ದಿ ತಿಳಿದು ಮನಸ್ಸಿನ ಖಿನ್ನತೆಯಿಂದ 1926 ಜುಲೈ 12ರಂದು ಅಧಿಕವಾಗಿ ನಿದ್ರೆ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಳು. ಇವಳು ನಡೆಸಿದ ಪುರಾತತ್ತ್ವ ಸರ್ವೇಕ್ಷಣೆ ಸಾಕಷ್ಟು ವೈಜ್ಞಾನಿಕ ಮಹತ್ತ್ವ ಉಳ್ಳವಾಗಿವೆ. ಇವಳ ಮೆಸಪೊಟೇಮಿಯದ ಸರ್ವೇಕ್ಷಣೆ ವರದಿಗಳು ಆಧುನಿಕ ಪುರಾತತ್ತ್ವ ಸಂಶೋಧನೆಗೆ ರಕ್ಷಣೆಯ ಭದ್ರ ಬುನಾದಿ ಹಾಕಿದೆ. (ಎನ್.ಎಲ್.)

**ಗೆಡ್ಡೆ :** ಕಾಂಡದ ಒಂದು ಬಗೆಯ ಮಾರ್ಪಾಟು: ನೆಲದೊಳಗೇ ಹುದುಗಿ ಬೆಳೆಯುತ್ತದೆ. ಆಹಾರ ಸಂಗ್ರಹಣೆ ಇದರ ಮುಖ್ಯಕಾರ್ಯ. ಇದರಿಂದಾಗಿ ಇದು ಸಾಮಾನ್ಯವಾಗಿ ದಪ್ಪವಾಗಿಯೂ ರಸಭರಿತವಾಗಿಯೂ ಇರುತ್ತದೆ. ಸಸ್ಯಗಳ ಸಂತಾನಾಭಿವೃದ್ಧಿಯಲ್ಲೂ ಇದು ಪಾಲುಗೊಳ್ಳುತ್ತದೆ. ಗೆಡ್ಡೆಯ ಬಾಹ್ಯ ರೂಪ ಕಾಂಡದ ರಚನೆಗಿಂತ ಎಷ್ಟು ಭಿನ್ನವಾಗಿರುತ್ತದೆಂದರೆ ಇದನ್ನು ಕಾಂಡ ಎಂದು ಹೇಳಲು ಇದರ ಒಳರಚನೆಯನ್ನು ಪರೀಕ್ಷಿಸ ಬೇಕಾಗುತ್ತದೆ. ಗೆಡ್ಡೆಯಲ್ಲಿ ಹಲವಾರು ರೂಪಗಳಿವೆ. ಇವುಗಳಲ್ಲಿ ಮುಖ್ಯವಾದವು ಪ್ರಕಂದ (ರೈಜೋಮ್), ಟ್ಯೂಬರ್, ಬಲ್ಬ್ ಮತ್ತು ಕಂದುಗಳು (ಕಾರ್ಮ್).



ಆಲೂಗೆಡ್ಡೆ

ಪ್ರಕಂದ : ನೆಲದ ಒಳಗಡೆ ಭೂಮಿಗೆ ಸಮಾಂತರವಾಗಿ ಬೆಳೆ ಯುವ ಗೆಡ್ಡೆಯಿದು. ಇದರ ಮೇಲೆ ಗೆಣ್ಣು ಮತ್ತು ಅಂತರ್ಗೆಣ್ಣುಗಳಿವೆ. ಗೆಣ್ಣುಗಳ ಸುತ್ತ ಸಣ್ಣ ಸಣ್ಣ ಹುರುಪೆ ರೂಪದ ಎಲೆಗಳಿವೆ. ಎಲೆಗಳ ಕಂಕುಳುಗಳಲ್ಲಿ ಕಂಡುಬರುವ ಕಂಕುಳು ಮೊಗ್ಗುಗಳು ಬೆಳೆದು ಹೊಸ ಕಾಂಡವನ್ನು ಉತ್ಪತ್ತಿ ಮಾಡಬಹುದು. ಉದಾಹರಣೆ: ಅರಿಸಿನ, ಶುಂಠಿ ಇತ್ಯಾದಿ.




ಶುಂಠಿ

ಟ್ಯೂಬರ್ : ಇದು ಕೂಡ ಭೂಮಿಗೆ ಸಮಾಂತರವಾಗಿ ನೆಲದ ಒಳಗೆ ಬೆಳೆಯುವ ಗೆಡ್ಡೆ. ಆಲೂಗೆಡ್ಡೆ ಉತ್ತಮ ಉದಾಹರಣೆ. ಆಲೂಗೆಡ್ಡೆ ಗಿಡ ಬೆಳೆಯುತ್ತಿರುವಾಗ ಗಿಡದ ತಳಭಾಗದ ಕಾಂಡದ ಕೆಲವು ಕವಲುಗಳು ತುದಿಯಲ್ಲಿ ಸ್ವಲ್ಪ ಉಬ್ಬಿರುತ್ತವೆ. ಇವೇ ಮುಂದೆ ಟ್ಯೂಬರುಗಳಾಗುತ್ತವೆ. ಗೆಡ್ಡೆಯ ಮೇಲ್ಭಾಗದಲ್ಲಿ ಹಲವಾರು ಕಂಕುಳು ಮೊಗ್ಗುಗಳಿರುತ್ತವೆ. ಇವಕ್ಕೆ ಕಣ್ಣುಗಳು ಎನ್ನುತ್ತಾರೆ. ಇವು ಗೆಡ್ಡೆಯ ಮೇಲೆ ವರ್ತುಲಾಕಾರವಾಗಿ ಜೋಡಣೆಗೊಂಡಿದ್ದು, ಸಹಜ ಕಾಂಡದ ಮೇಲಿನ ಎಲೆಗಳ ಜೋಡಣೆಯನ್ನು ಹೋಲುತ್ತವೆ. ಪ್ರತಿಯೊಂದು ಕಣ್ಣಿನಲ್ಲೂ ಸಣ್ಣ ಸಣ್ಣ ಎಲೆಗಳು ಮತ್ತು ಅವುಗಳ ಹತ್ತಿರ ಪಾರ್ಶ್ವಮೊಗ್ಗುಗಳು ಇರುತ್ತವೆ. ಆಲೂಗೆಡ್ಡೆಯನ್ನು ನೆಡುವಾಗ ಕೊನೆಯ ಪಕ್ಷ ಒಂದೊಂದು ಕಣ್ಣಿರುವ ಚೂರುಗಳಾಗಿ ಕತ್ತರಿಸಿ ನೆಡುತ್ತಾರೆ. ಈ ಚೂರುಗಳಿಂದ ಒಂದು ಅಥವಾ ಹೆಚ್ಚು ಕಾಂಡಗಳು ಹೊರಡುತ್ತವೆ. ಪೂರ್ತಿಯಾಗಿ ಒಂದು ಗೆಡ್ಡೆಯನ್ನೇ ನೆಟ್ಟಾಗ ತುದಿಮೊಗ್ಗಿನಿಂದ ಮಾತ್ರ ಕಾಂಡ ಹೊರಡುತ್ತದೆ.

ಆಲೂಗೆಡ್ಡೆಯ ಒಳರಚನೆಯಲ್ಲಿ ಮೆಡ್ಯುಲ, ಪ್ರೋಕೇಂಬಿಯಮ್ ಮತ್ತು ಕಾರ್ಟೆಕ್ಸ್ ಎಂಬ ಮೂರು ಭಾಗಗಳನ್ನು ಗುರುತಿಸಬಹುದು. ಎಳೆಯ ಆಲೂಗೆಡ್ಡೆಯಲ್ಲಿ ಕಾಂಡದ ಒಳರಚನೆಯಿದ್ದರೂ ಇದು ಬಲಿಯುತ್ತ ಹೋದಂತೆ ಎಂಡೋಡರ್ಮಿಸ್ ಪದರ ಕಾಣೆಸದಾಗುತ್ತದೆ. ಗೆಡ್ಡೆಯ ಎಪಿಡರ್ಮಿಸಿನ ಆಯುಷ್ಯವೂ ಬಹಳ ಕಡಿಮೆ. ಗೆಡ್ಡೆ ದೊಡ್ಡದಾದಂತೆಲ್ಲ ಎಪಿಡರ್ಮಿಸಿನ ಕೋಶಗಳು ಕೆಳಭಾಗದಲ್ಲಿ ಫೆಲೋಜನ್ ಎಂಬ ಪದರವನ್ನು ಉತ್ಪತ್ತಿ ಮಾಡುತ್ತವೆ. ಫೆಲೋಜನ್ ಪದರದಿಂದ 10–15 ಕೋಶಗಳಷ್ಟು ದಪ್ಪದಾದ ಪೆರಿಡರ್ಮ್ ಅಂಗಾಂಶ ಹುಟ್ಟುತ್ತದೆ. ಹೀಗೆ ಫೆಲೋಜನ್ ಪದರ ಗೆಡ್ಡೆಯ ಆಯುಷ್ಯ ಪೂರ್ತಿ ಬದುಕಿದ್ದು, ಗೆಡ್ಡೆ ಬೆಳೆದಂತೆಲ್ಲ ಹೊರಗಡೆ ಹರಿದು ಹೋಗುವ ಕೋಶಗಳ ಬದಲಿಗೆ ಹೊಸ ಪೆರಿಡರ್ಮ್ ಕೋಶಗಳನ್ನು ಉತ್ಪತ್ತಿಮಾಡಿ ಗೆಡ್ಡೆ ಬೆಳೆಯಲು ಸಹಾಯಕವಾಗುತ್ತದೆ.

ಬಲ್ಬ್ : ರಸಭರಿತ ಎಲೆಗಳಿಂದ ಆವೃತವಾಗಿರುವ ಒಂದು ಕುಳ್ಳುಕಾಂಡ. ಇದು ಕಾಂಡದ ಮೇಲಿರುವ ಎಲೆಗಳಂತೆ ರಸಭರಿತ ಎಲೆಗಳಲ್ಲಿ ಕೂಡ ಕಂಕುಳು ಮೊಗ್ಗುಗಳು ಇರುತ್ತವೆ. ಈ ಬಗೆಯ ಗೆಡ್ಡೆ ಏಕದಳ ಸಸ್ಯಗಳಲ್ಲಿ ಮಾತ್ರ ಕಾಣಬರುತ್ತದೆ. ಉದಾಹರಣೆ: ಈರುಳ್ಳಿ, ಬೆಳ್ಳುಳ್ಳಿ, ಲಿಲಿ, ಟ್ಯೂಲಿಪ್ ಮುಂತಾದವು.



ಸುವರ್ಣ ಗೆಡ್ಡೆ

ಈರುಳ್ಳಿ ಗೆಡ್ಡೆಯ ಒಳರಚನೆಯನ್ನು ಗಮನಿಸಿದರೆ ಕಾಂಡ ಬಲು ಚಿಕ್ಕದಾಗಿದ್ದು ಅದರ ಸುತ್ತ ಎಲೆಗಳು ವರ್ತುಲಾಕಾರವಾಗಿ ಜೋಡಣೆಗೊಂಡಿರುವುದನ್ನು ಕಾಣಬಹುದು. ಕಾಂಡದ ಕೆಳಭಾಗದಲ್ಲಿ ಕೆಲವು ಆಗಂತುಕ ಬೇರುಗಳು ಇವೆ. ಗೆಡ್ಡೆ ಬಲಿತಂತೆಲ್ಲ ಹೊರಗಿನ ಎಲೆಗಳು ಒಣಗಿ ಒಳಗಿನ ರಸಭರಿತ ಎಲೆಗಳನ್ನು ಸಂರಕ್ಷಿಸುತ್ತವೆ.

ಕಂದು : ಇದು ಪ್ರಕಂದವನ್ನು ಹೋಲುವ ಗೆಡ್ಡೆ. ಪ್ರಕಂದ ಸಮಾಂತರವಾಗಿ ಬೆಳೆದರೆ ಇದು ಮೇಲ್ಮುಖವಾಗಿ ಬೆಳೆಯುತ್ತದೆ. ಇದರ ಒಳ ರಚನೆಯನ್ನು ಪರೀಕ್ಷಿಸಿದರೆ ಕಾರ್ಟಿಕಲ್ ಪದರದಲ್ಲಿ ನಾಳಕೂರ್ಚಗಳು ಹರಡಿರುವುದನ್ನು ಗಮನಿಸಬಹುದು. ಆಗಂತುಕ ಬೇರುಗಳು ಕಂದಿನ ತಳಭಾಗದಲ್ಲಿರುತ್ತವೆ. ಹೊರಗಡೆ ಪೊರೆಯಂತಿರುವ ಎಲೆಗಳಿವೆ. ಎಲೆಗಳು ಕಂದಿನ ಮೇಲೆ ವರ್ತುಲಾಕಾರವಾಗಿ ಜೋಡಣೆಗೊಂಡಿರುತ್ತವೆ. ಬಲ್ಬಿಗೂ ಕಂದಿಗೂ ಒಂದು ಮುಖ್ಯ ವ್ಯತ್ಯಾಸವೆಂದರೆ, ಕಂದುಗಳಲ್ಲಿ ಕಾಂಡದ ಭಾಗ ಹೆಚ್ಚು, ಎಲೆಗಳ ಸಂಖ್ಯೆ ಕಡಿಮೆ ಮತ್ತು ಅಂತರ್ಗೆಣ್ಣುಗಳ ಉದ್ದ ಹೆಚ್ಚು. ಆರ್ಕಿಡೇಸೀ ಕುಟುಂಬದ ಸಸ್ಯಗಳಲ್ಲಿ ಕಂದನ್ನು ಕಾಣಬಹುದು.



ಈರುಳ್ಳಿಯ ಉದ್ದ ಸೀಳಿಕೆ. ಬಾಣದ ಗುರುತು ಕಾಂಡ (ಗೆಡ್ಡೆ) ಭಾಗವನ್ನು ಸೂಚಿಸುತ್ತದೆ

ಎಲ್ಲ ರೀತಿಯ ಗೆಡ್ಡೆಗಳೂ ಆಹಾರವನ್ನು ಶೇಖರಿಸುವುದರಿಂದ ಇವನ್ನು ಆಹಾರವಾಗಿ ಉಪಯೋಗಿಸುವರು. ಉದಾ: ಆಲೂಗಡ್ಡೆ. ಕಾಯಜ ಪ್ರಜನನದ (ವೆಜಿಟೇಟಿವ್ ರಿಪ್ರೊಡಕ್ಷನ್) ಮುಖ್ಯ ಸಾಧನಗಳಾಗಿಯೂ ಇವನ್ನು ಬಳಸಬಹುದು. (ಎಸ್.ಆರ್.ಜಿ.)

**ಗೆಡ್ಡೆಕೋಸು :** ವಿಶೇಷವಾಗಿ ಬಳಕೆಯಲ್ಲಿರುವ ಒಂದು ಜನಪ್ರಿಯ ತರಕಾರಿ ಸಸ್ಯ. ನವಿಲು ಕೋಸು ಪರ್ಯಾಯ ನಾಮ. ಬ್ರ್ಯಾಸಿಕೇಸೀ ಕುಟುಂಬಕ್ಕೆ ಸೇರಿದೆ. ಇದರ ಇಂಗ್ಲಿಷ್ ಹೆಸರು ನೋಲ್‌ಕೋಲ್; ವೈಜ್ಞಾನಿಕ ಹೆಸರು ಬ್ರ್ಯಾಸಿಕ ಓಲರೇಸಿಯ ವೆರೈಟಿ ಗಾಂಗೈಲಾಯಿಡಿಸ್ ಅಥವಾ ಬ್ರ್ಯಾಸಿಕ ಕಾಲರೇಪ. ಇದರಲ್ಲಿ ಸುಮಾರು ನೂರೈವತ್ತು ಬಗೆಗಳಿವೆ. ಇವುಗಳಲ್ಲಿ ಕೆಲವು ಬಗೆಗಳು ಏಕವಾರ್ಷಿಕಗಳಾದರೆ ಇನ್ನು ಕೆಲವು ದ್ವೈವಾರ್ಷಿಕಗಳು. ಕೆಲವನ್ನು ಎಣ್ಣೆಬೀಜಗಳಿಗಾಗಿಯೂ ಇನ್ನು ಕೆಲವನ್ನು ಕಾಯಿಪಲ್ಯಗಳಿಗಾಗಿಯೂ ಬೆಳೆಸುತ್ತಾರೆ. ಬ್ರ್ಯಾಸಿಕ ಓಲರೇಸಿಯ ಎಂಬ ಪ್ರಭೇದದಲ್ಲಿಯೇ ಹಲವಾರು ಬಗೆಗಳಿವೆ. ಉದಾಹರಣೆಗೆ ಎಲೆಕೋಸು ಮತ್ತು ಹೂಕೋಸು ಮುಂತಾದವು. ಇವು ತಮ್ಮ ಕಾಂಡ ಎಲೆ ಮತ್ತು ಹೂಗೊಂಚಲುಗಳ ಗುಣಲಕ್ಷಣಗಳಲ್ಲಿ ವ್ಯತ್ಯಾಸವನ್ನು ತೋರಿಸುತ್ತವೆ.

ಗೆಡ್ಡೆಕೋಸು ಪ್ರಧಾನವಾಗಿ ಉತ್ತರ ಸಮಶೀತೋಷ್ಣವಲಯದ ಬೆಳೆ. ಉತ್ತರ ಯುರೋಪಿನ ಕರಾವಳಿ ಪ್ರದೇಶಗಳು ಇದರ ತೌರು ಎಂದು ಅಭಿಪ್ರಾಯ ಪಡಲಾಗಿದೆ. ಆದರೆ ಚಳಿಗಾಲದ ಬೆಳೆಯಾಗಿ ಉಷ್ಣವಲಯದಲ್ಲೂ ಬೆಳೆಸಬಹುದು. ಭಾರತದಲ್ಲಿ

ಇದನ್ನು ಮುಂಬಯಿ, ಬರೋಡ, ಅಸ್ಸಾಂ, ಉತ್ತರ ಪ್ರದೇಶ ಮತ್ತು ಪಂಜಾಬುಗಳಲ್ಲಿ ಅಧಿಕವಾಗಿ ಬೆಳೆಸುತ್ತಾರೆ.

ಗೆಡ್ಡೆಕೋಸಿನ ಕೃಷಿಗೆ ತಂಪಾದ ಹಾಗೂ ತೇವಾಂಶವಿರುವ ಹವೆ ಅಗತ್ಯ. ಆದ್ದರಿಂದ ಭಾರತದಲ್ಲಿ ಇದನ್ನು ಚಳಿಗಾಲದ ಬೆಳೆಯನ್ನಾಗಿ ಬೆಳೆಸುವುದೇ ಹೆಚ್ಚು. ಅದರಲ್ಲೂ ಉತ್ತರ ಭಾರತದಲ್ಲಿ ಇದರ ಕೃಷಿ ಬಹಳವಾಗಿದೆ. ಬೆಟ್ಟಪ್ರದೇಶಗಳಲ್ಲಿ ಇದನ್ನು ವಸಂತ ಋತುವಿನಲ್ಲಿ ಅಥವಾ ಬೇಸಗೆ ಕಾಲದ ಆರಂಭದಲ್ಲಿ ಬೆಳೆಸಲಾಗುತ್ತದೆ. ಕೆಲವು ಕಡೆಗಳಲ್ಲಿ ವರ್ಷಕ್ಕೆ ಎರಡು ಬೆಳೆಗಳನ್ನೂ ತೆಗೆಯುವುದುಂಟು. ಮಣ್ಣಿನ ಲಕ್ಷಣದಲ್ಲಿ ಸ್ವಲ್ಪ ಬದಲಾವಣೆಯಾದರೂ ಇದು ಹೊಂದಿಕೊಂಡು ಬೆಳೆಯಬಲ್ಲುದು. ಮರಳು ಮಿಶ್ರಿತ ಜೇಡಿಮಣ್ಣಿದ್ದಲ್ಲಿ ಬೇಗನೆ ಬೆಳೆ ತೆಗೆಯಬಹುದಾದರೂ ಮೆಕ್ಕಲು ಮಣ್ಣು ಒಳ್ಳೆಯ ಫಸಲನ್ನು



ಕೊಡುತ್ತದೆ. ಆಮ್ಲೀಯ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯಲಾರದು. ಮಣ್ಣಿನಲ್ಲಿ ಇತರ ಸಾವಯವ ವಸ್ತುಗಳು ಬೆರೆತಿದ್ದರೆ ಉತ್ತಮ. ಆಗಾಗ್ಗೆ ಮಣ್ಣನ್ನು ಸಡಿಲಿಸಿ ಕಳೆ ಕೀಳುವುದು ಒಳ್ಳೆಯದು. ಗೆಡ್ಡೆಕೋಸಿನ ಬೆಳೆಗೆ ಅಧಿಕ ಗೊಬ್ಬರದ ಪೂರೈಕೆಯೂ ಅಗತ್ಯ. ಹಾಕಿದ ಗೊಬ್ಬರ ಮಣ್ಣಿನಲ್ಲಿ ಸರಿಯಾಗಿ ಬೆರೆಯುವಂತೆ ಮೂರು ನಾಲ್ಕು ಸಲವಾದರೂ ಚೆನ್ನಾಗಿ ಉಳಬೇಕು. ಅಮೋನಿಯಂ ಸಲ್ಫೇಟ್, ಸೂಪರ್ ಫಾಸ್ಫೇಟ್ ಮತ್ತು ಹಸಿರು ಗೊಬ್ಬರಗಳನ್ನು ಮಿಶ್ರ ಮಾಡಿ ಅಥವಾ ಬೇರೆ ಬೇರೆಯಾಗಿ ಉಪಯೋಗಿಸ ಬಹುದು. ಬೀಜ ಬಿತ್ತುವ ಪಾತಿಯಲ್ಲಿನ ಮಣ್ಣಿನ ಹೊರಪದರ ಗಡುಸಾಗಿರದೆ ಪುಡಿಯಾಗು ವಂತಿರಬೇಕು. ಬೀಜ ಬಿತ್ತುವ ಸ್ಥಳ ಅಶುಚಿಯಾಗಿದ್ದಲ್ಲಿ ಫಾರ್ಮಾಲ್ಡಿಹೈಡ್ ದ್ರಾವಣವನ್ನು ಅಥವಾ ಬಿಸಿನೀರನ್ನು ಚಿಮುಕಿಸಬೇಕು. ಗೆಡ್ಡೆಕೋಸಿಗೆ ನೀರಿನ ಸರಬರಾಜು ಯಥೇಚ್ಛವಾಗಿರಬೇಕು.

ಗೆಡ್ಡೆಕೋಸಿನ ಬೀಜಗಳನ್ನು ಬಯಲು ಪ್ರದೇಶಗಳಲ್ಲಿ ಆಗಸ್ಟ್‌ನಿಂದ ಅಕ್ಟೋಬರ್‌ವರೆಗೂ ಗುಡ್ಡ ಪ್ರದೇಶಗಳಲ್ಲಿ ಫೆಬ್ರವರಿಯಿಂದ ಮೇ ವರೆಗೂ ಬಿತ್ತುತ್ತಾರೆ. ಒಂದು ಹೆಕ್ಟೇರಿಗೆ 1–1.5 ಕೆಜಿ ಬೀಜ ಬೇಕಾಗುತ್ತದೆ. ಬೀಜಗಳನ್ನು ಸಾಲಾಗಿ ನೆಡಬೇಕು. ಸಾಂದ್ರವಾಗಿ ಬಿತ್ತಬಾರದು. ಒಂದು ಗಿಡ ಇನ್ನೊಂದು ಗಿಡದಿಂದ ಇಪ್ಪತ್ತು ಸೆಂಮೀ ಅಂತರದಲ್ಲಿರಬೇಕು. ಬೀಜ ಬಿತ್ತಿದ ಸುಮಾರು 40–60 ದಿವಸಗಳೊಳಗೆ ಬೆಳೆ ಕೊಯ್ಲಿಗೆ ಬರುತ್ತದೆ. ಗೆಡ್ಡೆಕೋಸಿಗೆ ಸಾರಜನಕದ ಆವಶ್ಯಕತೆ ಹೆಚ್ಚಾಗಿರುವುದರಿಂದ ದ್ವಿದಳಧಾನ್ಯಗಳನ್ನು ಬೆಳೆಸಿದ ಅನಂತರ ಬೀಜ ಬಿತ್ತುವುದು ಉತ್ತಮ.

ಈ ಸಸ್ಯದಲ್ಲಿ ರೂಪಾಂತರ ಹೊಂದಿರುವ ಕಾಂಡವೇ ಆಹಾರಕ್ಕಾಗಿ ಉಪಯೋಗಿಸಲ್ಪಡುವ ಭಾಗ. ಕಾಂಡ ಸರಿಯಾದ ಗಾತ್ರಕ್ಕೆ ಬೆಳೆದ ಅನಂತರ ಇದನ್ನು ಕೀಳಬಹುದು. ಆದರೆ ದೀರ್ಘಕಾಲ ಹಾಗೆಯೇ ಬಿಟ್ಟರೆ ಗೆಡ್ಡೆ ಬಲಿತು ಗಟ್ಟಿಯಾಗಿ ನಾರು ನಾರಾಗುತ್ತದೆ. ಗೆಡ್ಡೆಕೋಸಿನ ವಾರ್ಷಿಕ ಇಳುವರಿ ಹೆಕ್ಟೇರಿಗೆ 20–25 ಟನ್‌ಗಳು. ಗೆಡ್ಡೆಕೋಸನ್ನು $0^0$ ಸೆಂ. ಉಷ್ಣತೆಯಲ್ಲಿ ಮತ್ತು ಶೇ.90–95 ತೇವಾಂಶವಿರುವಲ್ಲಿ ಶೇಖರಿಸಿಡಬಹುದು.

ಗೆಡ್ಡೆಕೋಸಿನಲ್ಲಿ ಕಾಂಡ ಮಾರ್ಪಾಡಾಗಿ ಗೆಡ್ಡೆಯಂಥ ರಚನೆಯಾಗುತ್ತದೆ. ಎಲೆಗಳು ಕಾಂಡದ ಮೇಲ್ಭಾಗದಲ್ಲಿ ಗುಂಪುಕೂಡಿರುತ್ತವೆ. ಇವು ಸರಳ ಮಾದರಿಯವು. ಹೂಗಳು ದ್ವಿಲಿಂಗಿಗಳು ಹಾಗೂ ಹಳದಿಬಣ್ಣದವು. ಗೊನೆಯಾಕಾರದ ಹೂಗೊಂಚಲುಗಳಲ್ಲಿ ಜೋಡಣೆಗೊಂಡಿವೆ. ಪುಷ್ಪಪತ್ರ ಮತ್ತು ಪುಷ್ಪದಳಗಳ ಸಂಖ್ಯೆ ನಾಲ್ಕು, ಕೇಸರಗಳು ಆರು. ಇವುಗಳಲ್ಲಿ ಎರಡು ಚಿಕ್ಕವಾಗಿಯೂ ನಾಲ್ಕು ದೊಡ್ಡವಾಗಿಯೂ ಇವೆ. ಅಂಡಾಶಯದಲ್ಲಿ ಎರಡು ಕಾರ್ಪೆಲುಗಳಿರುತ್ತವೆ. ಶಲಾಕೆ ಚಿಕ್ಕದು. ಶಲಾಕಾಗ್ರ ಗುಂಡಗಿದೆ. ಕಾಯಿಗಳು ಕ್ಯಾಪ್ಸೂಲ್ ಮಾದರಿಯವು. ಹೂಗಳಲ್ಲಿ ಸಾಮಾನ್ಯವಾಗಿ ಅನ್ಯ ಪರಾಗಸ್ಪರ್ಶ ನಡೆಯುತ್ತದೆ. ಅಲ್ಲದೆ ಇದೇ ಜಾತಿಯ ಬೇರೆ ಸಸ್ಯಗಳೊಡನೆ ಪರಕೀಯ ಪರಾಗಸ್ಪರ್ಶವೂ ನಡೆಯಬಹುದು. ಪರಾಗಕೋಶ ಮತ್ತು ಅಂಡಾಶಯಗಳು ಬೇರೆ ಬೇರೆ ಕಾಲಗಳಲ್ಲಿ ಪಕ್ವವಾಗುವುದರಿಂದ ಸ್ವಕೀಯ ಪರಾಗಸ್ಪರ್ಶ ಅಸಾಧ್ಯ. ಪರಾಗಸ್ಪರ್ಶ ಕ್ರಿಯೆ ಸಹಜವಾಗಿ ನಡೆದರೂ ಬೀಜಗಳ ಉತ್ಪತ್ತಿ ಬಲು ಕಡಿಮೆ. ಭಾರತದಲ್ಲಿ ಬೆಟ್ಟ ಪ್ರದೇಶಗಳಲ್ಲಿನ ಗೆಡ್ಡೆಕೋಸುಗಳು ಮಾತ್ರ ಬೀಜವನ್ನು ಉತ್ಪಾದಿಸುತ್ತವೆ.

ಗೆಡ್ಡೆಕೋಸಿನಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಒಂದು ನಸುಹಸಿರು ಬಣ್ಣದ್ದು. ಇದು ಗುಂಡಾಗಿಯೂ ನುಣುಪಾಗಿಯೂ ಇರುವ ಮಧ್ಯಮ ಗಾತ್ರದ ಕೋಸು. ಇದರ ವಾಣಿಜ್ಯನಾಮ ವೈಟ್ ವಿಯನ. ಇನ್ನೊಂದು ನೇರಳೆ ವರ್ಣದ್ದು. ಇದರ ಹೆಸರು ಪರ್ಪಲ್ ವಿಯನ. ಇದನ್ನು ತರಕಾರಿಯಂತೆ ಉಪಯೋಗಿಸುವುದಲ್ಲದೆ ಉಪ್ಪಿನಕಾಯಿ ಹಾಕುವುದಕ್ಕೂ ಬಳಸುತ್ತಾರೆ. ಗೆಡ್ಡೆಕೋಸಿನಲ್ಲಿ ಶೇ.92.7 ತೇವಾಂಶ ಶೇ.1.1 ನೈಟ್ರೋಜನ್, ಶೇ.0.2 ಕೊಬ್ಬು, ಶೇ.3.8 ಕಾರ್ಬೊಹೈಡ್ರೇಟ್, ಶೇ.0.7 ಲವಣ ಪದಾರ್ಥ, ಶೇ.1.5 ನಾರು; ಲವಣ ಪದಾರ್ಥಗಳಲ್ಲಿ ಮುಖ್ಯವಾದವು ಕ್ಯಾಲ್ಸಿಯಂ, ಮೆಗ್ನೀಸಿಯಂ, ಫಾಸ್ಫರಸ್, ಕಬ್ಬಿಣ, ತಾಮ್ರ, ಗಂಧಕ. ಗಂಧಕದ ಅಂಶ ವಿಶೇಷವಾಗಿರುವು ದರಿಂದ ಗೆಡ್ಡೆಕೋಸಿಗೆ ಒಂದು ವಿಧದ ತೀಕ್ಷ್ಣ ವಾಸನೆಯಿದೆ.

ಗೆಡ್ಡೆಕೋಸು ಹಲವು ರೀತಿಯ ವ್ಯಾಧಿಗಳಿಗೆ ಮತ್ತು ಹಾನಿಕರ ಕೀಟಗಳಿಗೆ ಬಲಿಯಾಗುತ್ತದೆ. ರೋಗಗಳಲ್ಲಿ ಮುಖ್ಯವಾದವು–1 ಡ್ಯಾಂಪಿಂಗ್ ಆಫ್; ಎಳೆಯ ಸಸ್ಯಗಳಲ್ಲಿ ಇದು ಬಲು ಸಾಮಾನ್ಯವಾದ ರೋಗ. ಇದನ್ನು ತಡೆಗಟ್ಟಲು ಫಾರ್ಮಾಲ್ಡಿಹೈಡ್ ಅಥವಾ ಇನ್ನಿತರ ಶಿಲೀಂಧ್ರನಾಶಕ ವಸ್ತುಗಳನ್ನು ಬೀಜ ಬಿತ್ತುವ ಜಾಗದಲ್ಲಿ ಚಿಮುಕಿಸಬೇಕು ಮತ್ತು ಬೀಜಗಳನ್ನು ಸಾಕಷ್ಟು ಅಂತರದಲ್ಲಿ ನೆಡಬೇಕು.

2 ಬ್ಲಾಕ್ ರಾಟ್ ; ಕ್ಸ್ಯಾಂತೊಮೊನಾಸ್ ಕಂಪೆಸ್ಟ್ರಿಸ್ ಎಂಬ ಬ್ಯಾಕ್ಟೀರಿಯ ಈ ರೋಗಕ್ಕೆ ಮೂಲ ಕಾರಣ. ಇದರಿಂದ ಎಲೆಗಳು ಹಳದಿಬಣ್ಣಕ್ಕೆ ತಿರುಗುವುದಲ್ಲದೆ ನರಗಳು ಕಪ್ಪಾಗುತ್ತವೆ. ಚಿಕ್ಕ ಚಿಕ್ಕ ಸಸಿಗಳಿಗೆ ಈ ರೋಗ ಬಂದರೆ ಅವು ಸತ್ತುಹೋಗುತ್ತವೆ. ಬೆಟ್ಟ ಪ್ರದೇಶಗಳಲ್ಲಿ ಈ ರೋಗ ಬಹು ಸಾಮಾನ್ಯ. ಇದು ಬೀಜಗಳ ಮೂಲಕ ಹರಡುವುದರಿಂದ ಇಂಥ ಬೀಜಗಳನ್ನು ಬಿತ್ತುವ ಮೊದಲು $50^0$ ಸೆಂ. ಉಷ್ಣತೆಯ ನೀರಿನಲ್ಲಿ 25–30 ಮಿನಿಟುಗಳ ತನಕ ಮುಳುಗಿಸಬೇಕು. ಬೆಳೆಗಳ ಪರ್ಯಾಯವೂ ಈ ರೋಗವನ್ನು ಹತೋಟಿಗೆ ತರುವ ಇನ್ನೊಂದು ಉಪಾಯ.

3. ಕ್ಲಬ್‌ರೂಟ್ : ಈ ರೋಗ ಆಮ್ಲೀಯ ಮಣ್ಣಿನಲ್ಲಿ ಬೆಳೆಯುವ ಸಸ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಪ್ಲಾಸ್ಮೊಡಿಯೋಫೊರ ಬ್ರ್ಯಾಸಿಕೆ ಎಂಬ ಶಿಲೀಂಧ್ರ ಕಾರಣ. ಇದು ಮಣ್ಣಿನಲ್ಲಿ ವಾಸವಾಗಿದ್ದು ಬೇರನ್ನು ಆಕ್ರಮಿಸಿಕೊಳ್ಳುತ್ತದೆ. ಬೇರಿನಿಂದ ಒಳಹೊಕ್ಕ ಮೇಲೆ ನೀರಿನ ಸಾಗಣೆಗೆ ಅಡ್ಡಿಯನ್ನು ಉಂಟುಮಾಡುವುದರಿಂದ ಸಸ್ಯದ ಬೆಳವಣಿಗೆಯನ್ನು ಕುಂಠಿಸುತ್ತದೆ. ತತ್ಪರಿಣಾಮವಾಗಿ ಎಲೆಗಳು ಬಾಡಿಹೋಗುತ್ತವೆ. ಬೆಳೆಯ ಪರ್ಯಾಯ ಕಾಲವನ್ನು ಹೆಚ್ಚಿಸುವುದರಿಂದ ಮತ್ತು ಮಣ್ಣನ್ನು ಕ್ಷಾರೀಯ ಸ್ಥಿತಿಗೆ ತರುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

4. ಬ್ಲ್ಯಾಕ್ ಲೆಗ್ : ಫೋಮ ಲಿಂಗಮ್ ಎಂಬ ಶಿಲೀಂಧ್ರದಿಂದ ಈ ರೋಗ ಬರುತ್ತದೆ. ರೋಗ ಅಂಟಿದಾಗ ಕಾಂಡದ ತಳಭಾಗ ಮತ್ತು ಬೇರುಗಳು ಸತ್ತುಹೋಗುವುದರಿಂದ ಗಿಡ ಬಾಡಿ ಬಿದ್ದುಹೋಗುತ್ತದೆ. ಎಳೆಯ ಸಸಿಗಳು ಇದಕ್ಕೆ ಬಹುಬೇಗನೆ ತುತ್ತಾಗುತ್ತವೆ. ಇದನ್ನು ಹತೋಟಿಗೆ ತರುವ ಮುಖ್ಯ ವಿಧಾನಗಳೆಂದರೆ ಬೆಳೆಗಳ ಪರ್ಯಾಯ ಕಾಲವನ್ನು ಹೆಚ್ಚಿಸುವುದು ಮತ್ತು ಬೀಜಗಳನ್ನು ಬಿತ್ತುವ ಮೊದಲು ಅವನ್ನು ಸುಮಾರು $122^0$· ಸೆಂ. ಉಷ್ಣತೆಯಿರುವ ನೀರಿನಲ್ಲಿ 25 ಮಿನಿಟುಗಳ ಕಾಲ ಮುಳುಗಿಸಿಟ್ಟಿದ್ದು ಅನಂತರ ಒಣಗಿಸುವುದು.

5. ಹಳದಿರೋಗ : ಫ್ಯೂಸೇರಿಯಂ ಕೊಂಗ್ಲುಟಿನೆನ್ಸ್ ಎಂಬ ಶಿಲೀಂಧ್ರ ಈ ರೋಗವನ್ನು ಉಂಟುಮಾಡುತ್ತದೆ. ಇದು ಸಸ್ಯ ದೇಹದಲ್ಲಿ ನೀರು ಮತ್ತು ಆಹಾರ ಸಾಗಣೆಗೆ ತೊಂದರೆಯನ್ನು ಉಂಟುಮಾಡುವುದರಿಂದ ಗಿಡದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಇಡೀ ಗಿಡ ಹಳದಿಬಣ್ಣಕ್ಕೆ ತಿರುಗಿ ಎಲೆಗಳು ಉದುರಲು ಪ್ರಾರಂಭವಾಗುವುದು ಈ ಜಾಡ್ಯದ ಮುಖ್ಯ ಚಿಹ್ನೆ. ರೋಗವನ್ನು ತಡೆಗಟ್ಟಲು ಬೀಜ ನೆಡುವ ಪಾತಿಗಳನ್ನು ಚೊಕ್ಕಟವಾಗಿರಿಸಬೇಕು. ನಿರೋಧ ಶಕ್ತಿಯುಳ್ಳ ಬಗೆಗಳನ್ನು ಮಾತ್ರ ಬೆಳೆಯುವುದು ರೋಗ ನಿವಾರಣೆಯ ಉತ್ತಮ ವಿಧಾನ.

ಹಾನಿಕಾರಕ ಕೀಟಗಳಲ್ಲಿ ಮುಖ್ಯವಾದವು ಇವು: ಹೈಲೆಮಿಯ ಬ್ರ್ಯಾಸಿಕೆ ಎಂಬ ಕೀಟ ಮೊದಲು ಎಳೆಯ ಬೇರುಗಳನ್ನು ಆಕ್ರಮಿಸಿಕೊಂಡು ಅನಂತರ ಪ್ರಮುಖ ಬೇರಿನೊಳಕ್ಕೆ ಹಾಗೂ ಕಾಂಡದೊಳಕ್ಕೆ ಕೊರೆದುಕೊಂಡು ಹೋಗುತ್ತದೆ. ತತ್ಫಲವಾಗಿ ಗಿಡ ಹಳದಿಬಣ್ಣಕ್ಕೆ ತಿರುಗಿ ಬಾಡುತ್ತ ಬರುತ್ತದೆ. ರಸಕರ್ಪೂರದ (ಕ್ಯಾಲೊಮೆಲ್)

ದ್ರಾವಣ, ಪಾದರಸದ ಕ್ಲೋರೈಡ್, ಆಲ್ಡ್ರಿನ್ ಮೊದಲಾದ ರಾಸಾಯನಿಕ ವಸ್ತುಗಳನ್ನು ಸಿಂಪಡಿಸುವುದರಿಂದ ಈ ಕೀಟಗಳನ್ನು ನಾಶಪಡಿಸಬಹುದು.

ಏಸಿಯ ರೇಪ ಎಂಬ ಕೀಟ ಗೆಡ್ಡೆಕೋಸಿನ ಎಲೆಗಳನ್ನು ತಿಂದು ಜೀವಿಸುತ್ತದೆ. ಡಿ ಡಿ ಟಿ ಮತ್ತು ಎಂಡ್ರೆಕ್ಸ್ ಎಂಬ ಕೀಟನಾಶಕ ವಸ್ತುಗಳನ್ನು ಚಿಮುಕಿಸುವುದರಿಂದ ಈ ಕೀಟವನ್ನು ನಾಶಪಡಿಸಬಹುದು.

ಏಫಿಡ ಬ್ರಾಸಿಕೆ ಎಂಬ ಕೀಟ ಇನ್ನೊಂದು ಮುಖ್ಯ ಪಿಡುಗು. ಎಲೆಗಳು ಸುರುಟಿಕೊಂಡು ಬೆಳವಣಿಗೆ ಕುಂಠಿತವಾಗುವುದು ಈ ರೋಗದ ಮುಖ್ಯ ಲಕ್ಷಣ. ಫಾಲಿಡಾಲನ್ನು ಚಿಮುಕಿಸುವುದರಿಂದ ಇದನ್ನು ನಿವಾರಿಸಬಹುದು.

ಮುರ್ಗನ್ತಿಯ ಹಿಸ್ಟ್ರಿಯಾನಿಕ ಎಂಬ ಇನ್ನೊಂದು ಕೀಟ ಗೆಡ್ಡೆಕೋಸಿಗೆ ತಗಲುತ್ತದೆ. ಇದರ ನಿವಾರಣೆ ಪ್ರಯಾಸದ ಕೆಲಸ. ಸಸಿಗಳು ಎಳೆಯವಾಗಿದ್ದಾಗಲೇ ಡಿ.ಡಿ.ಟಿ.ಯನ್ನು ಸಿಂಪಡಿಸುವುದರ ಮೂಲಕ ಕೀಟವನ್ನು ನಾಶಪಡಿಸಬಹುದು. ಆದರೆ ಗಿಡ ಬಲಿಯುತ್ತ ಬಂದಂತೆ ಈ ಕ್ರಮವನ್ನು ಅನುಸರಿಸುವುದು ಯೋಗ್ಯವಲ್ಲ. (ಎಸ್.ಡಿ.ಕೆ.)

**ಗೆಣಸಿನ ಕುಟುಂಬ :** ಸಿಂಪೆಟಲೀ ಗುಂಪಿಗೆ ಸೇರಿದ ಒಂದು ಕುಟುಂಬ (ಕನ್‍ವಾಲ್‍ವ್ಯುಲೇಸೀ). ಇದರಲ್ಲಿ ಸುಮಾರು 50 ಜಾತಿಗಳಿವೆ. ಸುಮಾರು 21 ಜಾತಿಗಳು ದಕ್ಷಿಣ ಭಾರತದ ವನ್ಯ ಪ್ರದೇಶಗಳಲ್ಲಿ ಬೆಳೆಯುತ್ತವೆ. ಇವುಗಳಲ್ಲಿ ಕೆಲವನ್ನು ಉದ್ಯಾನಗಳಲ್ಲಿ ಬೆಳೆಸುವುದುಂಟು. ಇವು ಸಾಮಾನ್ಯವಾಗಿ ಏಕವಾರ್ಷಿಕ ಇಲ್ಲವೆ ಬಹುವಾರ್ಷಿಕ ಸಸ್ಯಗಳು. ಈ ಕುಟುಂಬದ ಸಸ್ಯಗಳಲ್ಲಿ ಕಾಂಡ ಬಹಳ ದುರ್ಬಲವಾಗಿರುವುದರಿಂದ ಅವೆಲ್ಲ ಬಹುಮಟ್ಟಿಗೆ ಹಂಬುಗಳಾಗಿ ಅಥವಾ ಅಡರುಬಳ್ಳಿಗಳಾಗಿ ಬೆಳೆಯುತ್ತವೆ. ಒಮ್ಮೊಮ್ಮೆ ಮೂಲಿಕೆಗಳಾಗಿ ಬೆಳೆಯುವುದುಂಟು. ಕೆಲವು ವಿಜ್ಞಾನಿಗಳ ಅಭಿಪ್ರಾಯದಲ್ಲಿ ಅಡರುಬಳ್ಳಿಯಂತೆ ಬೆಳೆಯುವ ಸಸ್ಯಗಳು ಬಹುಮುಂದುವರಿದವು. ಕೆಲವು ಸಸ್ಯಗಳು ಬದನಿಕೆಗಳಾಗಿರುತ್ತವೆ. ಉದಾಹರಣೆಗೆ ಕಸ್‍ಕ್ಯುಟ ಎಂಬ ಸಸ್ಯ ತನ್ನ ಕಾಂಡದಿಂದ ಆಶ್ರಯದಾತ ಸಸ್ಯವನ್ನು ಬಳಸಿಕೊಂಡಿದ್ದು, ಹೀರುಬೇರುಗಳ ಸಹಾಯದಿಂದ ಆಶ್ರಯದಾತ ಸಸ್ಯದ ಕಾಂಡವನ್ನು ಪ್ರವೇಶಿಸಿ, ನಾಳಕೂರ್ಚಗಳೊಂದಿಗೆ ನೇರವಾದ ಸಂಪರ್ಕವನ್ನು ಇಟ್ಟುಕೊಂಡು ಸ್ವಂತ ಬೆಳವಣಿಗೆಗೆ ಬೇಕಾದ ಎಲ್ಲ ಪೋಷಕಾಂಶಗಳನ್ನೂ ಪಡೆಯುತ್ತದೆ. ಗೆಣಸಿನ ಕುಟುಂಬದ ಸಸ್ಯಗಳ ಎಲೆಗಳು ಸರಳರೀತಿಯವು: ಪರ್ಯಾಯವಾಗಿ ಜೋಡಣೆಗೊಂಡಿವೆ. ಹೂಗಳು ಹೆಚ್ಚಾಗಿ ಒಂಟಿಯಾಗಿದ್ದು ಅರೀಯ ಸಮಾಂಗತೆಯನ್ನು ಪ್ರದರ್ಶಿಸುತ್ತವೆ. ಇವು ವರ್ಣರಂಜಿತವಾಗಿವೆ. ಕೇಸರಗಳು ದಳಾರೂಹ ಮಾದರಿಯವು. ಅಂಡಾಶಯದ ಹೊರತು ಹೂವಿನ ಮಿಕ್ಕೆಲ್ಲ ಭಾಗಗಳು ಪಂಚಕಗಳಲ್ಲಿ (ಪೆಂಟಮೀರಸ್) ಇರುತ್ತವೆ. ಕಾಂಡದಲ್ಲಿ ಹಾಲ್ರೋರಯಿದೆ (ಲೇಟೆಕ್ಸ್). ನಾಳಕೂರ್ಚಗಳಲ್ಲಿ ಒಂದೊಂದರಲ್ಲೂ ಎರಡೂ ಕಡೆ ಆಹಾರವಾಹಕ ಅಂಗಾಂಶಗಳಿವೆ. ಇದರಿಂದಾಗಿ ಇವನ್ನು ಬೈಕೊಲ್ಯಾಟರಲ್ ಬಂಡಲ್ಸ್ ಎನ್ನಲಾಗುತ್ತದೆ.

ಕನ್‍ವಾಲ್‍ವ್ಯುಲಸ್ ಮತ್ತು ಐಪೋಮಿಯ ಎಂಬೆರಡು ಜಾತಿಗಳು ಈ ಕುಟುಂಬದಲ್ಲಿ ಅತ್ಯಂತ ದೊಡ್ಡವಾದವು. ಇವು ಮೂನ್ನೂರಕ್ಕೂ ಹೆಚ್ಚು ಪ್ರಭೇದಗಳನ್ನೊಳಗೊಂಡಿವೆ. ಇವುಗಳಲ್ಲಿ ಕಾಂಡಕ ವಿವಿಧ ರೂಪಾಂತರಗಳನ್ನು ಗಮನಿಸಬಹುದು. ಕೆಲವು ನೆಟ್ಟಗೆ ನಿಲ್ಲುವಂಥವಾದರೆ ಮತ್ತೆ ಕೆಲವು ಭೂಮಿಗೆ ಕಚ್ಚಿಕೊಂಡು ಬೆಳೆಯುವಂಥವು. ಇನ್ನು ಕೆಲವು ಕುಂಠಿತಗೊಂಡ ಶಾಕಗಳು. ಕೆಲವು ಏಕವಾರ್ಷಿಕಗಳಾಗಿದ್ದರೆ ಇನ್ನು ಕೆಲವು ಬಹುವಾರ್ಷಿಕ ಸಸ್ಯಗಳಾಗಿವೆ. ಕೆಲವು ಸಸ್ಯಗಳಲ್ಲಿ ಗುಪ್ತ ಕಾಂಡಗಳಿರುತ್ತವೆ. ಮರಳುಗಾಡಿನ ವಾತಾವರಣದಲ್ಲಿ ಬೆಳೆಯುವ ಸಸ್ಯಗಳಲ್ಲಿ ಗುಪ್ತಕಾಂಡ ಇರುವುದು ಒಂದು ಅನುಕೂಲ. ಕನ್‍ವಾಲ್‍ವ್ಯುಲಸ್ ಸ್ಕಾಮೋನಿಯ ಪ್ರಭೇದದಲ್ಲಿ ಗುಪ್ತಕಾಂಡ ದಪ್ಪವಾಗಿದ್ದು ಆಹಾರ ಶೇಖರಣಾಂಗವಾಗಿರುತ್ತದೆ. ಐಪೋಮಿಯ ಬಟಾಟಸ್ (ಗೆಣಸು) ಮತ್ತಿತರ ಪ್ರಭೇದಗಳಲ್ಲಿ ತಾಯಿ ಬೇರಿನ ಅಕ್ಕಪಕ್ಕದಲ್ಲಿರುವ ಬೇರುಗಳು ರಸಭರಿತವಾಗಿದ್ದು ಆಹಾರವನ್ನು ಶೇಖರಿಸಿಕೊಂಡು ಉಬ್ಬಿಕೊಂಡಿರುತ್ತವೆ. ಅರೇಬಿಯ ಮತ್ತು ಪೂರ್ವ ಮೆಡಿಟರೇನಿಯನ್ ಪ್ರದೇಶದ ಕೆಲವು ಭಾಗಗಳಲ್ಲಿ ಕನ್‍ವಾಲ್‍ವ್ಯುಲಸ್ ಜಾತಿಯ ಸಸ್ಯಗಳು ಮುಳ್ಳುಮಯ ಪೊದರುಗಳಾಗಿ ಬೆಳೆಯುತ್ತವೆ. ಐಪೋಮಿಯ ಪ್ರೆಸ್‍ಕ್ಯಾಪ್ರೀ ಎಂಬುದು ಸಮುದ್ರ ತೀರದಲ್ಲಿರುವ ಮರಳಿನಲ್ಲಿ ಇಲ್ಲವೆ ನದೀತೀರದಲ್ಲಿ ಬೆಳೆಯುತ್ತದೆ. ಈ ಸಸ್ಯ ಮರಳುಗುಡ್ಡೆ ಹಾರಿ ಹೋಗದಂತೆ ತಡೆಯುತ್ತದೆ. ಭಾರತದ ಎಲ್ಲೆಡೆಯೂ ಎವಾಲ್‍ವ್ಯುಲಸ್ ಆಲ್ಸಿನಾಯ್‍ಡಿಸ್ (ವಿಷ್ಣುಕ್ರಾಂತಿ) ಎಂಬ ಪ್ರಭೇದ ಕುಂಠಿತವಾದ ಶಾಕಸಸ್ಯವಾಗಿ ಬಯಲುಗಳಲ್ಲಿ ಬೆಳೆಯುತ್ತದೆ. ಹಿಲ್‍ಡೆಬ್ರಾಂಡಿಯ ಎಂಬ ಸಸ್ಯ ಮರುಭೂಮಿಯ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಂಡಿದೆ. ಇದರ ಕವಲುಗಳು ಪುಟ್ಟವಾಗಿದ್ದರೂ ಗಟ್ಟಿಯಾಗಿರುತ್ತವೆ. ಅವುಗಳ ತುದಿ ಮುಳ್ಳಾಗಿದ್ದು ಸಸ್ಯಕ್ಕೆ ಸ್ವರಕ್ಷಣೆಯ ಸಾಧನವೆನಿಸಿವೆ.

ಐಪೋಮಿಯ ಕ್ವಾಮೊಕ್ಲಿಟ್ ಪೆನ್ನೇಟ ಎಂಬ ಅಡರು ಬಳ್ಳಿಯನ್ನು ಮನೆಗಳಲ್ಲಿ ಅಂದಕ್ಕಾಗಿ ಬೆಳೆಸುತ್ತಾರೆ. ಕ್ರಿಸ್‍ಮಸ್ ಬಳ್ಳಿ ಎಂದೂ ಇದಕ್ಕೆ ಹೆಸರುಂಟು. ಇದು ಕರ್ನಾಟಕದ ಬಾಬಾಬುಡನ್‍ಗಿರಿಯಲ್ಲೂ ನೀಲಗಿರಿಯ ಕಾಡುಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದು ಚೆಲುವಾದ ಕೆಂಪುಬಣ್ಣದ ಹೂಗಳನ್ನು ಬಿಡುತ್ತದೆ. ಪೊರಾನ ಮಲಬಾರಿಕ ಎಂಬ ಅಡರು ಬಳ್ಳಿಯಲ್ಲಿ ಪುಷ್ಪಪತ್ರಗಳು ಕೊನೆಯವರೆಗೂ ಸ್ಥಿರವಾಗಿದ್ದು, ದಳಗಳು ಕ್ರಮೇಣ ಉದುರಿ ಹೋದರೂ ಒಣಗಿದ ಹೂವಿನಂತೆ ಕಾಣುತ್ತದೆ. ಒಣಗಿದ ಹೂಗಳನ್ನು ಅಂದಕ್ಕಾಗಿ ಮನೆಗಳಲ್ಲಿ ಹೂದಾನಿಗಳಲ್ಲಿಡುತ್ತಾರೆ.

ಕಾಲೋನಿಕ್ಟಿಯಾನ್ ಎಂಬ ಅಡರುಬಳ್ಳಿ ಕರ್ನಾಟಕದ ಕಾಡಿನಲ್ಲಿ ಕಾಣಬರುತ್ತದೆ. ಬಿಳಿಯ ಬಣ್ಣದ ಮತ್ತು ಮಧುರವಾದ ಪರಿಮಳವನ್ನು ಪಡೆದಿರುವ ಇದರ ಹೂಗಳು ರಾತ್ರಿಯಲ್ಲಿ ಅರಳುವುದರಿಂದ ಹಾಗೂ ಚಂದ್ರನ ಬೆಳಕಿರುವಾಗ ಅಧಿಕವಾಗಿ ಹೂಗಳನ್ನು ಬಿಡುತ್ತದೆ ಎಂಬ ಪ್ರತೀತಿ ಇರುವುದರಿಂದ ಇದನ್ನು ಚಂದ್ರಕಾಂತಿ ಅಥವಾ ಚಂದ್ರಪುಷ್ಪ (ಮೂನ್ ಫ್ಲವರ್) ಎಂದು ಹೇಳುತ್ತಾರೆ. ಇದರ ಬೀಜಗಳು ಹಳದಿಯಾಗಿರುತ್ತವೆ. ಇದರಲ್ಲಿ ಕೆಲವು ಪ್ರಭೇದಗಳನ್ನು ಉದ್ಯಾನಗಳಲ್ಲಿ ಅಂದಕ್ಕಾಗಿ ಬೆಳೆಸುವುದುಂಟು.

(ಎ.ಎನ್.ಎಸ್.)

**ಗೆಣಸು :** ಪ್ರಪಂಚದ ಉಷ್ಣ ಮತ್ತು ಉಪೋಷ್ಣವಲಯಗಳಲ್ಲಿನ ದೇಶಗಳಲ್ಲೆಲ್ಲ ಬಹುಪ್ರಾಚೀನ ಕಾಲದಿಂದಲೂ ಬೇಸಾಯದಲ್ಲಿರುವ ಒಂದು ಮುಖ್ಯ ಹಾಗೂ ಸುಪ್ರಸಿದ್ಧ ಆಹಾರಸಸ್ಯ (ಸ್ವೀಟ್ ಪೊಟೇಟೊ). ಕನ್‍ವಾಲ್‍ವ್ಯುಲೇಸೀ ಕುಟುಂಬಕ್ಕೆ ಸೇರಿದೆ. ಐಪೋಮಿಯ ಬಟಾಟಸ್ ಇದರ ಶಾಸ್ತ್ರೀಯ ಹೆಸರು. ಇದರ ತವರು ಅಮೆರಿಕದ ಉಷ್ಣವಲಯ. ಅಲ್ಲಿ ಇದಕ್ಕೆ ಕಮೋಟೆ ಅಥವಾ ಕುಮರ ಎಂಬ ಸ್ಥಳೀಯ ಹೆಸರುಗಳಿವೆ. ಹಿಂದೆ ಕಾಡುಗಿಡವಾಗಿ ಬೆಳೆಯುತ್ತಿದ್ದ ಗೆಣಸು ಇಂದು ಕೃಷಿ ಬೆಳೆಯಾಗಿ ಮಾತ್ರ ಕಂಡುಬರುತ್ತದೆ. ಆಫ್ರಿಕ, ಚೀನ, ಜಪಾನ್, ದಕ್ಷಿಣ ಅಮೆರಿಕ, ಉತ್ತರ ಅಮೆರಿಕದ ದಕ್ಷಿಣ ರಾಜ್ಯಗಳು. ಆಗ್ನೇಯ ಏಷ್ಯ, ಭಾರತ, ವೆಸ್ಟ್ ಇಂಡೀಸ್ ಮುಂತಾದೆಡೆಗಳಲ್ಲೆಲ್ಲ ಇದರ ಬೇಸಾಯ ಮಾಡಲಾಗುತ್ತಿದೆ.




**ಬಳ್ಳಿಯ ವಿವಿಧ ಭಾಗಗಳು: 1. ರೆಂಬೆ, 2a, 2b, 2c ವಿವಿಧ ಆಕಾರದ ಎಲೆಗಳು, 3. ಹೂ, 4. ಹೂವಿನ ಉದ್ದಸೀಳಿಕೆ, 5. ಟ್ಯೂಬರ್ (ಗೆಣಸು)**

ಗೆಣಸು ನೆಲದಮೇಲೆ ಹರಡಿಕೊಂಡು ಬೆಳೆಯುವ ಒಂದು ಬಳ್ಳಿ. ಸ್ವಭಾವತಃ ಇದು ಬಹುವಾರ್ಷಿಕ ಸಸ್ಯವಾದರೂ ಬೇಸಾಯ ಕ್ರಮದಲ್ಲಿ ಏಕವಾರ್ಷಿಕವೆಂಬಂತೆ ನೋಡಿಕೊಳ್ಳಲಾಗುತ್ತದೆ. ಗೆಣಸಿನ ಕಾಂಡ ತೆಳುವಾಗಿಯೂ ದುರ್ಬಲವಾಗಿಯೂ ಉಂಟು. ಗೆಣಸಿನ ಬೇರು ಸಮೂಹ ತೊಡಕು ಬೇರಿನ ರೀತಿಯದು. ಗಿಡದ ಬುಡ ಭಾಗದಿಂದ ಮಾತ್ರವಲ್ಲದೆ ಗೆಣ್ಣುಗಳಿಂದಲೂ ಆಗಂತಕ ಬೇರುಗಳು ಹುಟ್ಟುತ್ತವೆ. ಕೆಲವು ಆಗಂತುಕ ಬೇರುಗಳು ದ್ವಿತೀಯಕ ಬೆಳವಣಿಗೆಗೆ ಒಳಗಾಗಿ ದಪ್ಪನೆಯ ಮತ್ತು ವಿವಿಧ ಆಕಾರಗಳ ಗೆಡ್ಡೆಗಳಾಗಿ ರೂಪುಗೊಳ್ಳುತ್ತವೆ. ಇವೇ ಗೆಣಸಿನ ಗೆಡ್ಡೆಗಳು. ಇವು ಸಾಮಾನ್ಯವಾಗಿ ನೆಲದ ಮೇಲ್ಪದರದಲ್ಲಿ ಮಾತ್ರ ಮೂಡುತ್ತವೆ. ಸಾಧಾರಣವಾಗಿ

ಒಂದು ಗಿಡದಲ್ಲಿ 10–15 ಗೆಡ್ಡೆಗಳು ಹುಟ್ಟುತ್ತವೆ. ಎಲೆಗಳು ಸರಳ ರೀತಿಯವು; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ತಮ್ಮ ಆಕಾರದಲ್ಲಿ ಭಿನ್ನತೆಯನ್ನು ಪ್ರದರ್ಶಿಸುತ್ತವೆ. ಒಂದೇ ಗಿಡದಲ್ಲಿ ಎಳೆಯ ಎಲೆಗಳು ಒಂದು ಆಕಾರದವಾದರೆ ಬಲಿತ ಎಲೆಗಳು ಬೇರೊಂದು ಆಕಾರವಾಗಿರುವುದನ್ನು ಗಮನಿಸಬಹುದು. ಎಲೆಯಂಚು ಅಖಂಡವಾಗಿರಬಹುದು ಇಲ್ಲವೆ ಹಲವಾರು ರೀತಿಗಳಲ್ಲಿ ಛಿದ್ರವಾಗಿರಬಹುದು. ಎಲೆಗಳಿಗೆ ವೃಂತಪರ್ಣಗಳಿಲ್ಲ. ಹೂಗಳು ಒಂಟೊಂಟಿಯಾಗಿ ಇಲ್ಲವೆ ಮಧ್ಯಾರಂಭಿ ಮಾದರಿ ಗೊಂಚಲುಗಳಲ್ಲಿ ಎಲೆಗಳ ಕಂಕುಳುಗಳಲ್ಲಿ ಸಮಾವೇಶಗೊಂಡಿವೆ. ಹೂಗಳ ಆಕಾರ ಕೊಳವೆಯಂತೆ ಇಲ್ಲವೆ ಆಲಿಕೆಯಂತೆ: ಬಣ್ಣ ಬಿಳಿ ಇಲ್ಲವೆ ನೇರಳೆ. ಪ್ರತಿ ಹೂವಿನಲ್ಲಿ 5 ಪತ್ರಗಳಿಂದ ಕೂಡಿದ ಪುಷ್ಪಪಾತ್ರೆ, 5 ದಳಗಳು, 5ಕೇಸರಗಳು ಮತ್ತು2 ಕಾರ್ಪೆಲುಗಳಿಂದ ಕೂಡಿದ ಉಚ್ಚಸ್ಥಾನದ ಅಂಡಾಶ್ಯ ಇವೆ. ಫಲ ಸಂಪುಟ ಮಾದರಿಯದು; 2–4 ಕರಿಯ ಬಣ್ಣದ ಗಟ್ಟಿ ಬೀಜಗಳನ್ನೊಳಗೊಂಡಿದೆ. ಗೆಣಸು $35^{0}$ ಉತ್ತರ ಅಕ್ಷಾಂಶದಿಂದ ಮೇಲಿನ ಭೌಗೋಳಿಕ ಪ್ರದೇಶಗಳಲ್ಲಿ ಹೂ ಬಿಡುವುದು ಅತಿವಿರಳ. $30^{0}$ ಉತ್ತರ ಅಕ್ಷಾಂಶದಿಂದ ಮೇಲಿನ ಪ್ರದೇಶಗಳಲ್ಲಂತೂ ಬೀಜಗಳೇ ರೂಪುಗೊಳ್ಳುವುದಿಲ್ಲ. ಅಲ್ಲದೆ ಗೆಣಸು ಹೂ ಬಿಡಲು ದಿನವೊಂದಕ್ಕೆ 11 ಗಂಟೆಗಳಿಗಿಂತ ಹೆಚ್ಚಿನ ಅವಧಿಯ ಬೆಳಕು ಬೀಳಬಾರದು. ಈ ಅವಧಿಗಿಂತ ಹೆಚ್ಚಿನ ಕಾಲ ಬೆಳಕು ಬಿದ್ದರೆ ಹೂ ಬಿಡುವುದೇ ಇಲ್ಲ. ಇದರಿಂದಾಗಿ ಗೆಣಸನ್ನು ಹ್ರಸ್ವ ಪ್ರಕಾಶಾವಧಿಯ ಸಸ್ಯ (ಶಾರ್ಟ್–ಡೇ ಪ್ಲಾಂಟ್) ಎನ್ನಲಾಗುತ್ತದೆ. ಉಷ್ಣ ಪ್ರದೇಶಗಳಲ್ಲಿ ಬೀಜಗಳು ಸಹಜವಾಗಿ ಉತ್ಪತ್ತಿಯಾಗುತ್ತವೆ. ಬೀಜಗಳಿಗೆ ಬಲುಗಡುಸಾದ ಹೊದಿಕೆಯಿರುವುದರಿಂದ ಇವು ಮೊಳೆಯುವುದು ಬಹಳ ನಿಧಾನ. ಕೆಲವೊಮ್ಮೆ ಒಂದು ವರ್ಷದ ವರೆಗೂ ಬೀಜಗಳು ಮೊಳೆಯದೇ ಇರುತ್ತವೆ. ಬೀಜದ ಹೊದಿಕೆಯನ್ನು ಕೊಂಚ ಕತ್ತರಿಸಿ ತೆಗೆದರೆ ಮಾತ್ರ ಮೊಳೆಯುವಿಕೆಯನ್ನು ತ್ವರಿತಗೊಳಿಸಬಹುದು.

**ಗೆಣಸಿನ ಬಗೆಗಳು:** ಗೆಣಸಿನಲ್ಲಿ ನೂರಾರು ಬಗೆಗಳಿವೆ. ಅಮೆರಿಕದಲ್ಲಿ ಗೆಡ್ಡೆಯ ಗಡಸುತನದ ಆಧಾರದ ಮೇಲೆ ಮೃದು ಮತ್ತು ಗಟ್ಟಿ ಎಂದು ಎರಡು ಮುಖ್ಯ ಪಂಗಡಗಳಾಗಿ ವಿಭಾಗಿಸಲಾಗಿದೆ. ಗೆಣಸಿನ ಬಳ್ಳಿಯ ಬೆಳೆವಣಿಗೆಯ ಕ್ರಮವನ್ನು ಅನುಸರಿಸಿ ವಿಭಾಗಿಸುವುದೂ ಇದೆ. ಆದರೆ ಗೆಡ್ಡೆಗಳ ಬಣ್ಣದ ಆಧಾರದ ಮೇಲೆ ಹಲವಾರು ಬಗೆಗಳಾಗಿ ವಿಂಗಡಿಸುವುದೇ ವಾಡಿಕೆಯಲ್ಲಿರುವ ಕ್ರಮ. ಗೆಡ್ಡೆಗಳ ಬಣ್ಣ ಬಿಳಿಯಿಂದ ಹಿಡಿದು ಹೊಂಬಣ್ಣ, ಕಿತ್ತಳೆ, ಕೆಂಪುಮಿಶ್ರಿತ ಊದಾ ಬಣ್ಣದ ವರೆಗೂ ವ್ಯತ್ಯಾಸವಾಗುತ್ತದೆ. ಭಾರತದಲ್ಲಿ ಕೃಷಿಯಲ್ಲಿರುವ ಕೆಲವು ಮುಖ್ಯ ಬಗೆಗಳು ಈ ರೀತಿ ಇವೆ– **1. ಪೂಸಾ ಸಫೇದ್:** ಮೂಲತಃ ತೈವಾನಿನಿಂದ ಪಡೆಯಲಾದ ಬಗೆಯಿದು. ಬಿಳಿಯ ಬಣ್ಣದ ಗೆಡ್ಡೆಗಳನ್ನು ಉತ್ಪಾದಿಸುತ್ತದೆ. ಅಧಿಕ ಇಳುವರಿಗೂ ಗೆಡ್ಡೆಗಳ ಉತ್ಕೃಷ್ಟತೆಗೂ ಹೆಸರಾಗಿದೆ. 2. ಪೂಸಾ ಲಾಲ್: ಜಪಾನಿನಿಂದ ತಂದ ಗೆಣಸಿನಿಂದ ಅಡ್ಡತಳಿಯೆಬ್ಬಿಸಿ ಪಡೆದ ಬಗೆಯಿದು. ಇದರ ಗೆಡ್ಡೆಗಳ ಬಣ್ಣ ಕೆಂಪು. ಬಹಳಕಾಲ ಕೆಡದಂತೆ ಸಂಗ್ರಹಿಸಿಡಬಹುದು. 3 ಪೂಸಾ ಸುನೇರಿ: ಇದು ನಸುಕಿತ್ತಳೆ ಬಣ್ಣದ ಗೆಡ್ಡೆಗಳನ್ನು ಬಿಡುತ್ತದೆ. ಗೆಡ್ಡೆಗಳಲ್ಲಿ ಅಧಿಕ ಪರಿಮಾಣದಲ್ಲಿ ಕ್ಯಾರೋಟೀನ್ ಇದೆ. ಈ ಮೂರು ಮುಖ್ಯ ಬಗೆಗಳಲ್ಲದೆ ಭಾರತದ ವಿವಿಧ ರಾಜ್ಯಗಳಲ್ಲಿ ಇನ್ನೂ ಹಲವು ರೀತಿಯ ಗೆಣಸುಗಳಿವೆ. ಬಿಹಾರದಲ್ಲಿ V3, V9, SP ಲಲ್ಕಾಗಳೂ ಕರ್ನಾಟಕದಲ್ಲಿ V12 ಹೊಸೂರು ಕೆಂಪು ಮತ್ತು ಹೊಸೂರು ಹಸುರುಗಳೂ ಪಂಜಾಬಿನಲ್ಲಿ V2, V6, VS ಗಳೂ ಕೊಯಮತ್ತೂರಿನಲ್ಲಿ ಭದ್ರಕಾಳಿ, ವೆಲ್ಮನ್, V12 V6 ಗಳೂ, ಪಶ್ಚಿಮ ಬಂಗಾಳದಲ್ಲಿ ರೇಂಜರ್ ಮುಂತಾದವೂ ಮುಖ್ಯವೆನಿಸಿವೆ. ಪ್ರಪಂಚದ ಬೇರೆ ದೇಶಗಳಲ್ಲಿ ಬೇಸಾಯದಲ್ಲಿರುವ ಗೆಣಸಿನ ಬಗೆಗಳು ಇವು–ಹವಾಯ್: HS 107, ಅಮೆರಿಕ ಸಂಯುಕ್ತಸಂಸ್ಥಾನ: ರೆಡ್ ನ್ಯಾನ್ಸಿ, ಆರ್ಲಿಸ್, ನೆಮಗೋಲ್ಡ್ , ಆಲ್‌ಗೋಲ್ಡ್, ಗೋಲ್ಡ್‌ರಷ್ ಮತ್ತು ಸೆಂಟಿನಿಯಲ್, ವೆಸ್ಟ್‌ಇಂಡೀಸ್: ಬ್ಲ್ಯಾಕ್ ರಾಕ್ ಮತ್ತು ರೆಡ್ ನಟ್. (ಬಿ.ಪಿ.)

**ಗೆಣಸಿನ ಬೇಸಾಯ:** ಇದು ಪ್ರಮುಖವಾಗಿ ಉಷ್ಣವಲಯದ ಬೆಳೆ. ಇದನ್ನು $40^{0}$ ಉತ್ತರ ಅಕ್ಷಾಂಶದಿಂದ ಹಿಡಿದು $32^{0}$ ದಕ್ಷಿಣ ಅಕ್ಷಾಂಶದ ವರೆಗಿನ ಪ್ರದೇಶಗಳಲ್ಲಿ ಬೆಳೆಸಲಾಗುತ್ತಿದೆ. $70^{0}$ ಫ್ಯಾ. ಸರಾಸರಿ ಉಷ್ಣತೆ, 30"–50" ವಾರ್ಷಿಕ ಮಳೆ ಮತ್ತು ಯಥೇಚ್ಛ ಬಿಸಿಲು ಇರುವ ಪ್ರದೇಶಗಳಲ್ಲಿ ಇದರ ಬೆಳೆವಣಿಗೆ ಉತ್ಕೃಷ್ಟವಾಗಿರುತ್ತದೆ. ವಿಪರೀತ ಮಳೆಯನ್ನಾಗಲಿ, ಅತಿ ಶುಷ್ಕತೆಯನ್ನಾಗಲಿ ಸಹಿಸದು. ಹಾಗೆಯೇ ಕಡುಚಳಿ ಇದ್ದರೆ ಬಲುಬೇಗ ಹಾಳಾಗುವುದರಿಂದ ಇದರ ಬೆಳೆವಣಿಗೆಯವಧಿಯಲ್ಲಿ ಕೊನೆಯಪಕ್ಷ 4–6 ತಿಂಗಳುಗಳು ಕಾಲ ಚಳಿಯಿರಬಾರದು. ಗೆಣಸು ಹಲವಾರು ಬಗೆಯ ಮಣ್ಣುಗಳಲ್ಲಿ ಬೆಳೆಯಬಲ್ಲುದಾದರೂ ಮರಳುಮಿಶ್ರಿತ ಗೋಡು ಇದಕ್ಕೆ ಅತ್ಯುತ್ತಮ. ಭೂಮಿ ಸಾಕಷ್ಟು ಬೆಚ್ಚಗೂ ($20^{0}$–$30^{0}$ ಸೆಂ.ಮಿ.) ಸಡಿಲವಾಗಿಯೂ ಸರಾಗವಾಗಿ ನೀರು ಬಸಿದು ಹೋಗುವಂತೆಯೂ ಇರಬೇಕು. ಗೆಣಸಿನ ಬೆಳೆಗೆ ಗೊಬ್ಬರದ ಪೂರೈಕೆಯೂ ಸಾಕಷ್ಟಿರಬೇಕು. ಹೆಕ್ಟೇರಿಗೆ 25 ಟನ್ ಕೊಟ್ಟಿಗೆ ಗೊಬ್ಬರ, 60 ಕೆಜಿ. ನೈಟ್ರೊಜನ್, 60 ಕೆಜಿ ರಂಜಕ ಮತ್ತು 120 ಕೆಜಿ ಪೊಟ್ಯಾಷ್‌ಗಳನ್ನು ಹಾಕಿದರೆ ಒಳ್ಳೆಯದು. ಗೊಬ್ಬರದ ಪರಿಮಾಣ ವಿಪರೀತವಾದರೂ ಒಳ್ಳೆಯದಲ್ಲ. ಇದರಿಂದ ಬಳ್ಳಿಗಳಲ್ಲಿ ಗೆಡ್ಡೆಗಿಂತ ಎಲೆ, ಕಾಂಡಗಳ ಬೆಳೆವಣಿಗೆಯೇ ಹೆಚ್ಚಾಗಿಬಿಡುತ್ತದೆ.

ಗೆಣಸನ್ನು ಗೆಡ್ಡೆಗಳಿಂದ ಹೊರಡುವ ಮೊಳಕೆಯಿಂದಾಗಲೀ, ಕಾಂಡತುಂಡು ಗಳಿಂದಾಗಲೀ, ವೃದ್ಧಿಸಲಾಗುತ್ತದೆ. ಭಾರತವನ್ನೂ ಒಳಗೊಂಡಂತೆ ಉಷ್ಣವಲಯದ ಹಲವಾರು ದೇಶಗಳಲ್ಲಿ ಎರಡನೆಯ ವಿಧಾನ ರೂಢಿಯಲ್ಲಿದೆ. ಇಳುವರಿ ಉತ್ತಮವಾಗಿರ ಬೇಕಾದರೆ ಮೊಳಕೆಗಳಿಂದ ವೃದ್ಧಿಸುವುದೇ ಸೂಕ್ತ. ಒಳ್ಳೆಯ ಗುಣಲಕ್ಷಣಗಳಿರುವ ತಳಿಯ ಗೆಡ್ಡೆಗಳನ್ನು ಆಯ್ದುಕೊಂಡು ಚೆನ್ನಾಗಿ ಹದಗೊಳಿಸಿದ ಒಟ್ಲುಪಾತಿಗಳಲ್ಲಿ 30 ಸೆಂಮೀ ಅಂತರಕ್ಕೊಂದರಂತೆ 45 ಸೆಂಮೀ ಅಂತರದ ಸಾಲುಗಳಲ್ಲಿ ನೆಡಲಾಗುತ್ತದೆ. ಇವುಗಳಿಂದ ದೊರೆತ ಮೊಳಕೆಗಳನ್ನು ಮುಂದಿನ ಬೆಳೆವಣಿಗೆಗಾಗಿ ಬೇರೆಪಾತಿಗಳಿಗೆ ವರ್ಗಾಯಿಸಲಾಗುತ್ತದೆ. ಇಲ್ಲಿ ಇವು ಚೆನ್ನಾಗಿ, ಉದ್ದವಾಗಿ ಬೆಳೆದ ಮೇಲೆ, ನಾಲ್ಕು ಗೆಣ್ಣುಗಳನ್ನು ಒಳಗೊಂಡಿರುವ ತುಂಡುಗಳನ್ನಾಗಿ ಕತ್ತರಿಸಿ ಕೃಷಿಭೂಮಿಯಲ್ಲಿ ನೆಡಲಾಗುತ್ತದೆ. ಬಳ್ಳಿಯ ತುದಿಯ ಕಡೆಗಿರುವ ತುಂಡುಗಳೇ ಉತ್ತಮ. ಏಕೆಂದರೆ ಇವು ಹೆಚ್ಚು ಸಂಖ್ಯೆಯಲ್ಲಿ ಗೆಡ್ಡೆಗಳನ್ನು ಉತ್ಪಾದಿಸುತ್ತವೆ. ತುಂಡುಗಳನ್ನು ನೆಟ್ಟಮೇಲೆ ಆಗಿಂದಾಗ್ಗೆ ಮಣ್ಣನ್ನು 1.5–2 ಅಡಿ ಎತ್ತರಕ್ಕೆ ಏರಿಸುತ್ತಿರಬೇಕು. ಇದರಿಂದ ಗೆಡ್ಡೆಗಳು ಸುಲಭವಾಗಿ ಮಣ್ಣಿನೊಳಕ್ಕೆ ಇಳಿದು ರೂಪುಗೊಳ್ಳುತ್ತವೆ. ಗೆಡ್ಡೆಗಳನ್ನು ನೆಡುವ ಕಾಲ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ಉತ್ತರ ಭಾರತದಲ್ಲಿ ಈ ಕಾಲ ಜೂನ್–ಜುಲೈಗಳಾದರೆ ಮಧ್ಯಪ್ರದೇಶ ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಅಕ್ಟೋಬರ್–ನವೆಂಬರ್ ಮತ್ತು ನೀಲಗಿರಿ ಮುಂತಾದೆಡೆ ಏಪ್ರಿಲ್–ಮೇ. ಕಾಂಡತುಂಡುಗಳನ್ನು ನೆಟ್ಟ 10 ದಿವಸಗಳೊಳಗೆ ಗಿಡಗಳು ಬೇರುಬಿಟ್ಟು 3 ವಾರಗಳೊಳಗಾಗಿ ಹುಲುಸಾಗಿ ಬೆಳೆಯತೊಡಗುತ್ತವೆ. ಬಳ್ಳಿಗಳು ಚೆನ್ನಾಗಿ ಬೆಳೆದು ನೆಲದ ಮೇಲೆಲ್ಲ ಹರಡುವವರೆಗೂ ಕಳೆ ಕೀಳುತ್ತಿರಬೇಕು. ಆಗಿಂದಾಗ್ಗೆ ನೀರು ಹಾಯಿಸುತ್ತಿರಬೇಕು. ಗೆಡ್ಡೆಗಳನ್ನು ನೆಟ್ಟ 4–5 ತಿಂಗಳ ಅನಂತರ ಗೆಣಸು ಕೊಯ್ಲಿಗೆ ಬರುತ್ತದೆ. ಎಲೆಗಳು ಹಳದಿಬಣ್ಣಕ್ಕೆ ತಿರುಗುವುದು ಗೆಡ್ಡೆಗಳು ಬಲಿತಿರುವುದನ್ನು ಸೂಚಿಸುತ್ತದೆ. ಗೆಡ್ಡೆಗಳನ್ನು ಮೊಗೆಗುದ್ದಲಿಗಳಿಂದ ಅಗೆದು, ತೆಗೆದು ಶುಚಿಗೊಳಿಸಿ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ. ಉಷ್ಣವಲಯ ದೇಶಗಳಲ್ಲಿ ಇವನ್ನು ಹಾಗೆಯೇ ಸಂಗ್ರಹಿಸಿಡಬಹುದು. ಸಮಶೀತೋಷ್ಣವಲಯ ಪ್ರದೇಶಗಳಲ್ಲಿ ಸಂಗ್ರಹಿಸಿಡುವ ಮುನ್ನ ಗೆಡ್ಡೆಗಳನ್ನು ಸಂಸ್ಕರಿಸಲಾಗುತ್ತದೆ. ಕೆಲವು ಸಲ ಬಿಸಿಲಿನಲ್ಲಿ 10 ದಿವಸಗಳ ಕಾಲ ಒಣಗಿಸಬೇಕಾಗುತ್ತದೆ. ಅನಂತರ ಮರದ ಹೊಟ್ಟು, ಮರಳು, ಒಣಹುಲ್ಲು ಮುಂತಾದವುಗಳನ್ನು ಬಳಸಿ ಗೆಣಸನ್ನು ಸಂಗ್ರಹಿಸಿಡಲಾಗುತ್ತದೆ.

ಗೆಣಸಿನ ಇಳುವರಿ ಅದರ ತಳಿ ಮತ್ತು ಬೆಳೆಸುವ ಪ್ರದೇಶಗಳನ್ನವಲಂಬಿಸಿ ವ್ಯತ್ಯಾಸವಾಗುತ್ತದೆ. ಮಳೆಯ ಆಸರೆಯಲ್ಲಿ ಬೇಸಾಯ ಮಾಡಿದ ಗೆಣಸಿಗಿಂತ ನೀರಾವರಿ ಮಾಡಿ ಬೆಳೆಸಿದ ಗೆಣಸಿನ ಇಳುವರಿ ಹೆಚ್ಚು.

ಗೆಣಸಿಗೆ ಹಲವಾರು ರೀತಿಯ ಶಿಲೀಂಧ್ರ ರೋಗಗಳೂ ಕೀಟ ಪಿಡುಗುಗಳೂ ಬರುತ್ತವೆ. ಶಿಲೀಂಧ್ರ ರೋಗಗಳಲ್ಲಿ ಮುಖ್ಯವಾದವು ಕಾಂಡದ ಕೊಳೆಯುವಿಕೆ–ಇದು ಫ್ಯೂಸೇರಿಯಮ್ ಆಕ್ಸಿಸ್ಪೋರಮ್ ಎಂಬುದರಿಂದ ಉಂಟಾಗುತ್ತದೆ. ಕಪ್ಪುಕೊಳೆ ರೋಗ_ಇದು ಸೆರಟೋಸಿಸ್ಟಿಸ್ ಫಿಂಬ್ರಿಯೇಟ ಎಂಬ ಶಿಲೀಂಧ್ರದಿಂದ ಉಂಟಾಗುತ್ತದೆ. ಈ ರೋಗಗಳು ಭಾರತದಲ್ಲಿ ಅಷ್ಟು ಮುಖ್ಯವಲ್ಲದಿದ್ದರೂ ಉಳಿದ ದೇಶಗಳಲ್ಲಿ ಗಣನೀಯ ನಷ್ಟವನ್ನು ಉಂಟುಮಾಡುತ್ತವೆ. ಇವಲ್ಲದೆ ಆಫ್ರಿಕ, ವೆಸ್ಟ್‌ಇಂಡೀಸ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ವೈರಸಿನಿಂದ ಉಂಟಾಗುವ ಶಬಲ ರೋಗವೂ ರೈಜೋಪಸಿನಿಂದ ಉಂಟಾಗುವ ಕೊಳೆರೋಗವೂ ಮುಖ್ಯವೆನಿಸಿವೆ. ಕೀಟಪಿಡುಗುಗಳಲ್ಲಿ ಮುಖ್ಯವಾದವು ಸೈಲ್ಯಾಸ್ ಫಾರ್ಮಿಕೇರಿಯಸ್ ಎಂಬ ಸೊಂಡಿಲುಕೀಟ (ಸ್ವೀಟ್ ಪೊಟೇಟೊ ವೀವಿಲ್) ಮತ್ತು ಮೆಗಾಸ್ಟಿಸ್ ಗ್ರಾಂಡೇಲಿಸ್ ಎಂಬ ಪತಂಗದ ಕಂಬಳಿ ಹುಳುಗಳು. ಡಿಡಿಟಿ, ಲೆಡ್ ಆರ್ಸಿನೇಟ್ ಅಥವಾ ಬಿಎಚ್‌ಸಿ ಇವುಗಳ ಬಳಕೆಯಿಂದ ಇವನ್ನು ನಿಯಂತ್ರಿಸಬಹುದು.

ಗೆಣಸಿನ ಉಪಯೋಗಗಳು: ಗೆಣಸು ಪುಷ್ಟಿದಾಯಕ ಆಹಾರಗಳಲ್ಲೊಂದು. ಇದನ್ನು ಬೇಯಿಸಿ ಇಲ್ಲವೆ ಸುಟ್ಟು ತಿನ್ನುವುದಲ್ಲದೆ ಇದರಿಂದ ರೊಟ್ಟಿಗಳನ್ನು ತಯಾರಿಸುತ್ತಾರೆ. ಗೆಣಸಿನ ರಾಸಾಯನಿಕ ಸಂಯೋಜನೆ ಈ ರೀತಿ ಇದೆ. ತೇವಾಂಶ

ಶೇ.68.5, ಕಾರ್ಬೋಹೈಡ್ರೇಟ್ ಶೇ.28.2, ಕೊಬ್ಬು ಶೇ.0.3, ಪ್ರೋಟೀನು ಶೇ.1.2, ಲೋಹಾಂಶ ಶೇ.1.0, ನಾರಿನ ಅಂಶ ಶೇ.0.8, ಅಲ್ಲದೆ ಪ್ರತಿ 100 ಗ್ರಾಂ. ಗೆಣಸಿನಲ್ಲಿ 50 ಮಿಗ್ರಾಂ ರಂಜಕ, 9 ಮಿಗ್ರಾಂ ಸೋಡಿಯಂ, 20 ಮಿಗ್ರಾಂ ಕ್ಯಾಲ್ಸಿಯಂ, 2.8 ಮಿಗ್ರಾಂ ಕಬ್ಬಿಣ, 393 ಮಿಗ್ರಾಂ ಪೊಟ್ಯಾಸಿಯಂ, 24 ಮಿಗ್ರಾಂ ಸಿ ವಿಟಮಿನ್, ಹಾಗೂ ಲಘು ಪ್ರಮಾಣದಲ್ಲಿ ಬಿ ಹಾಗೂ ಎ ವಿಟಮಿನ್‌ಗಳು ಇವೆ. ಕಾರ್ಬೋಹೈಡ್ರೇಟ್ ಅಂಶದಲ್ಲಿ ಶೇ.16 ಪಿಷ್ಟವೂ ಶೇ.4 ಸಕ್ಕರೆಯೂ ಇರುವುದರಿಂದ ಗೆಣಸಿನಿಂದ ಆಲ್ಕೊಹಾಲನ್ನೂ ಪಡೆಯಬಹುದಾಗಿದೆ. ಅಲ್ಲದೆ ಗೆಣಸಿನಿಂದ ಒಂದು ರೀತಿಯ ರಸಪಾಕವನ್ನೂ ತಯಾರಿಸುತ್ತಾರೆ. ಈಗ ಗೆಣಸಿನಿಂದ ಚಿಪ್ಸ್ ಅನ್ನು ತಯಾರಿಸಲಾಗುತ್ತಿದೆ. ಗೆಣಸಿನ ಎಳೆಚಿಗುರನ್ನು ಆಫ್ರಿಕ, ಇಂಡೋನೇಷ್ಯ ಮತ್ತು ಫಿಲಿಪೀನ್ಸ್‌ಗಳಲ್ಲಿ ಹಸುರು ತರಕಾರಿಯಾಗಿ ಬಳಸುವುದಿದೆ. ಗೆಡ್ಡೆಗಳನ್ನು ಪಡೆದ ಮೇಲೆ ಉಳಿಯುವ ಎಲೆ, ಕಾಂಡ ಇತ್ಯಾದಿಗಳನ್ನು ದನಕರುಗಳಿಗೆ ಮೇವಾಗಿ ಉಪಯೋಗಿಸಬಹುದು. ಚೇಳುಕಡಿತದ ಉರಿಯನ್ನು ಕಡಿಮೆ ಮಾಡಲು ಎಲೆಗಳ ಬೆಚ್ಚಾರವನ್ನು ಉಪಯೋಗಿಸುವ ಕ್ರಮ ಕೆಲವೆಡೆ ಇದೆ. (ಬಿ.ಪಿ.)

**ಗೆದ್ದಲು :** ಪುರಾತನ ಕಾಲದಿಂದಲೂ ಗೆದ್ದಲು ಮಾನವನು ಬೆಳೆಯುವ ಆಹಾರ ಬೆಳೆಗಳು ಮತ್ತು ವಸ್ತು ಸಾಮಗ್ರಿಗಳನ್ನು ತಿಂದು ನಷ್ಟ ಮಾಡುತ್ತಿವೆ. ಗೆದ್ದಲನ್ನು ಸಂಸ್ಕೃತದಲ್ಲಿ **"ಕಾಷ್ಠ ಹರಿಕ"** ವೆಂದು ಕರೆಯುತ್ತಾರೆ. ಅಂದರೆ ಒಣಮರ ಅಥವಾ ಕಟ್ಟಿಗೆ ತಿನ್ನುವ ಹುಳುಗಳು ಎಂದರ್ಥ. ವಾಲ್ಮೀಕಿ ಮಹರ್ಷಿ ತಪಸ್ಸಿನಲ್ಲಿದ್ದಾಗ ಅವರ ಮೈಮೇಲೆ ಗೆದ್ದಲು ಹುತ್ತ ಕಟ್ಟಿದ್ದುದರಿಂದ ಅವರಿಗೆ ವಾಲ್ಮೀಕಿ ಎಂದು ಹೆಸರು ಬಂದಿತೆಂಬುದು ಸರ್ವವಿದಿತ.

ಪೂರ್ವಜ ಗೆದ್ದಲುಗಳು ಸುಮಾರು 200 ದಶಲಕ್ಷ ವರ್ಷಗಳ ಹಿಂದೆಯೇ ಉದ್ಭವಿಸಿದುವು. ಆದರೆ 17ನೆಯ ಶತಮಾನದಿಂದ ಇತ್ತೀಚೆಗೆ ಗೆದ್ದಲುಗಳು ಪ್ರಕೃತಿಯಲ್ಲಿ ಪ್ರಧಾನವಾಗಿ ಕಾಣಿಸಿಕೊಂಡಿವೆ.

ಗೆದ್ದಲು ಸಂಘಜೀವಿಗಳು. ಆಂಗ್ಲ ಭಾಷೆಯಲ್ಲಿ ಟರ್ಮೈಟ್ಸ್ ಎಂದು ಕರೆಯುತ್ತಾರೆ. ಇದರ ಮತ್ತೊಂದು ಸಾಮಾನ್ಯ ಹೆಸರು **"ವೈಟ್ ಆಂಟ್ಸ್"**. ಅಂದರೆ ಬಿಳಿ ಇರುವೆಗಳು. ಆದರೆ ಈ ಹೆಸರು ಗೆದ್ದಲುಗಳಿಗೆ ಅನ್ವಯಿಸುವುದಿಲ್ಲ. ಕಾರಣ ಇವು ಮಾಸಲು ಬಿಳುಪಿನಿಂದ ಹಳದಿ ಕಂದು ಬಣ್ಣದ ವರೆಗಿರುತ್ತವೆ ಮತ್ತು ಇರುವೆ ಗುಂಪಿಗೆ ಸೇರುವುದಿಲ್ಲ. ಗೂಡಿನಲ್ಲಿ ಬೆಳೆಯುತ್ತಿರುವ ಗೆದ್ದಲಿನ ಮರಿಗಳು ಮತ್ತು ಅಪ್ಸರೆಗಳು ಮಾತ್ರ ಬಿಳುಪಾಗಿರುತ್ತವೆ. ಕೀಟಗಳ ಸಾಮಾನ್ಯ ವಿಕಾಸದಲ್ಲಿ ಗೆದ್ದಲುಗಳ ಸ್ಥಾನ ಇರುವೆಗಳಿಗಿಂತ ಪೂರ್ವದ್ದು, ತಮ್ಮ ಜೀವನದ ಬೆಳೆವಣಿಗೆ ಹಂತಗಳಲ್ಲಿ ಅಪೂರ್ಣ ರೂಪಾಂತರವುಳ್ಳ ಆದಿಕಾಲದ **"ಐಸಾಪ್ಟೆರಾ"** (ಸಮಪಕ್ಷೀಯ) ಗಣಕ್ಕೆ ಸೇರಿವೆ. ಗೆದ್ದಲಿನ ಹತ್ತಿರದ ಸಂಬಂಧಿ ಜಿರಲೆಗಳು.


ಸಾಮಾನ್ಯವಾಗಿ ಗೆದ್ದಲಿಗೆ ಒಣಮರಗಳೆಂದರೆ ಅಚ್ಚುಮೆಚ್ಚು, ಅದರಿಂದ ಒಣಮರ, ಗಿಡ, ಬಳ್ಳಿ, ಒಣೆಲೆ, ಹುಲ್ಲು ಮುಂತಾದ ಆಹಾರದ ಮೇಲೆ ಮಣ್ಣಿನ ಪೊರೆಯಿಂದ ಮುಚ್ಚಿ ಹೆಚ್ಚಿನ ಸಂಖ್ಯೆಯಲ್ಲಿ ಮುತ್ತಿ ತಿನ್ನುವುದರಿಂದ ಎಲ್ಲಕ್ಕೂ ಗೆದ್ದಲು ಹಿಡಿದಿದೆ ಎನ್ನುವ ವಾಡಿಕೆ.

ಗೆದ್ದಲು ಜಿರಲೆಗಳಂತೆ ನಿಶಾಜೀವಿಗಳು. ಏಕೆಂದರೆ ಇವು ಸೂರ್ಯನ ಜಳವನ್ನು ತಡೆಯುವುದಿಲ್ಲ. ಮಳೆ ನೀರು ಇವುಗಳ ಮೇಲೆ ಬೀಳದಂತೆ ಗೂಡುಗಳಲ್ಲಿದ್ದು ರಕ್ಷಣೆ ಪಡೆಯುತ್ತವೆ. ಉಸಿರಾಟದಿಂದ ಹೊರ ಹೊಮ್ಮುವ ಗಾಳಿ ಇಂಗಾಲದ ಡೈ ಆಕ್ಸೈಡ್‌ನಿಂದ ಕೂಡಿರುತ್ತದೆ. ಇದರಿಂದಾಗಿ ಶರೀರ ಸೂಕ್ಷ್ಮವಾಗಿದ್ದು ಬಿಸಿಲಿಗೆ ಬಿಟ್ಟಾಗ ಬದುಕಲಾರವು. ಆದುದರಿಂದ ತಾವು ಓಡಾಡುವಲ್ಲಿ ಮಣ್ಣಿನ ಪೊರೆಯನ್ನು ಕಟ್ಟಿಕೊಂಡು ರಕ್ಷಣೆ ಪಡೆಯುತ್ತವೆ.

ಗೆದ್ದಲು ಉಷ್ಣ ಮತ್ತು ಸಮಶೀತೋಷ್ಣ ವಲಯದಲ್ಲಿ ಜೀವಿಸುವ ಕೀಟಗಳು. ಗೆದ್ದಲಿನ ಅನೇಕ ಪ್ರಭೇದಗಳು ಉಷ್ಣವಲಯದ ಮಳೆ ಆಶ್ರಿತ ಅರಣ್ಯಪ್ರದೇಶಗಳಲ್ಲಿ ವ್ಯಾಪಿಸಿವೆ. ಆಫ್ರಿಕಖಂಡದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಲಿನ ಪ್ರಭೇಧಗಳನ್ನು ಗುರ್ತಿಸಿದ್ದಾರೆ. ಇದೇ ಬಗೆಯ ವಿಸ್ತಾರವನ್ನು ದಕ್ಷಿಣ ಅಮೆರಿಕದ ಅಮೆಜ಼ಾನ್ ನದಿ ತೀರಪ್ರದೇಶದ ಕಾಡುಗಳಲ್ಲಿ ಕಾಣಬಹುದಾಗಿದೆ. ಆಸ್ಟ್ರೇಲಿಯ ಮತ್ತು ಏಷ್ಯಾಖಂಡಗಳಲ್ಲಿಯೂ ಹೆಚ್ಚಿನ ಪ್ರಬೇಧಗಳನ್ನು ಗುರುತಿಸಲಾಗಿದೆ. ಆಫ್ರಿಕ ಮತ್ತು ಏಷ್ಯದ ಉಷ್ಣವಲಯಗಳಲ್ಲಿ ಹುತ್ತಗಳನ್ನು ಕಟ್ಟುವ ಮತ್ತು ಶಿಲೀಂದ್ರವನ್ನು ಬೆಳೆಸುವ ಗೆದ್ದಲಿನ ಪ್ರಬೇಧಗಳಿವೆ.

ಈವರೆಗೆ 2,600ಕ್ಕೂ ಹೆಚ್ಚು ಗೆದ್ದಲಿನ ಪ್ರಬೇಧಗಳನ್ನು ಗುರುತಿಸಲಾಗಿದ್ದು, ಇವುಗಳನ್ನು 6 ಕುಟುಂಬಗಳಾಗಿ ವಿಂಗಡಿಸಲಾಗಿದೆ. 1. ಮ್ಯಾಸ್ಟೊಟ್ರರ್ಮೈಟಿಡಿ, 2. ಕ್ಯಾಲೊಟರ್ಮೈಟಿಡಿ, 3. ಟರ್ಮೊಪ್ಸಿಡಿ, 4. ಹೊಡೊಟರ್ಮೈಟಿಡಿ 5. ರೈನೊ ಟರ್ಮೈಟಿಡಿ 6. ಟರ್ಮೈಟಿಡಿ. ಗೆದ್ದಲಿನ ಸಾಮಾನ್ಯವಿಕಾಸದಲ್ಲಿ ಮೊದಲ ಐದು ಕುಟುಂಬಗಳನ್ನು ಆದಿಕಾಲದ, ಕೆಳದರ್ಜೆಯ ಸಣ್ಣ ಸಣ್ಣ ಗೂಡುಗಳಲ್ಲಿ ವಾಸಿಸುವ ಗೆದ್ದಲು ಕುಟುಂಬಗಳೆಂದು ಪರಿಗಣಿಸಲಾಗಿದೆ. ಇವುಗಳು ತಿಂದ ಸೆಲ್ಯುಲೋಸ್ ಆಹಾರವನ್ನು ಜೀರ್ಣಿಸಲು ಸಹಜೀವಿಗಳಾದ ಟ್ರೈಕೊಮೊನಾಡ್, ಆಕ್ಸಿಮೊನಾಡ್, ಹೈಪರ್‌ಮ್ಯಾಸ್ಟಿಗೊ ಟ್ರೈಕೊನಿಂಫ್ ಜಾತಿಯ 'ಪ್ರೊಟೊಜೋವ' ಗುಂಪಿನ ಕಶಾಂಗ ಏಕಾಣು ಜೀವಿಗಳು ಸಾಮಾನ್ಯವಾಗಿ ಕರುಳಿನಲ್ಲಿ ನೆಲೆಸಿರುತ್ತವೆ.

ಟರ್ಮೈಟಿಡಿ ಕುಟುಂಬಗಳ ಪ್ರಬೇಧಗಳು ಮೇಲ್ದರ್ಜೆಯ ಗೆದ್ದಲುಗಳಾಗಿದ್ದು ಎಲ್ಲಾ ಬಗೆಯ ಗಿಡ ಮರ ಸಾವಯವ ವಸ್ತುಗಳನ್ನು ತಿಂದು ಜೀವಿಸಿ ಬದುಕುವ ವೈವಿಧ್ಯತೆಯನ್ನು ಪಡೆದಿವೆ. ಗೂಡುಗಳನ್ನು ಭೂಮಿಯೊಳಗೆ ಮತ್ತು ಮರಗಳಲ್ಲಿ ಅನೇಕ ವಿನ್ಯಾಸಗಳಲ್ಲಿ ಕಟ್ಟುತ್ತವೆ. ಇವುಗಳು ತಿಂದ ಆಹಾರವನ್ನು ಜೀರ್ಣಿಸಲು ಸಹಜೀವಿಗಳಾಗಿ ಬ್ಯಾಕ್ಟೀರಿಯ ಶಿಲೀಂದ್ರ ಮತ್ತು ಸೈರೋಕೀಟ್ಸ್ ಸೂಕ್ಷ್ಮಾಣುಗಳನ್ನು ಅವಲಂಬಿಸಿರುತ್ತವೆ.



**ಗೆದ್ದಲಿನ ವಿವಿಧ ಬಗೆಗಳು: 1. ರೆಕ್ಕೆಯಿಲ್ಲದ ಫಲವಂತಿ ಬಗೆ, 2. ಸೈನಿಕ ಗೆದ್ದಲು, 3. ಕೆಲಸಗಾರ ಗೆದ್ದಲು, 4. ರೆಕ್ಕೆಯುಳ್ಳ ಫಲವಂತ ಬಗೆ, 5. ರೆಕ್ಕೆ ಕಳಚಿಕೊಂಡ ಫಲವಂತೆ ಬಗೆ**

ಗೆದ್ದಲುಗಳ ಆಹಾರ ಸೇವನೆಯಲ್ಲಿ ಎರಡು ವಿಧಗಳಿವೆ. 1. ಕೆಲಸಗಾರ ಗೆದ್ದಲೇ ಗಿಡಮರಗಳ ತೊಗಟೆಯನ್ನು ಕೆರೆದು ತಂದು ಸ್ವತಃ ತಿನ್ನುವುದೇ ಅಲ್ಲದೇ ಗೂಡಿನಲ್ಲಿರುವ ಇತರೇ ಕೆಲಸಗಾರ ಗೆದ್ದಲಿಗೆ ಒದಗಿಸುತ್ತವೆ. 2. ಮರಿಹುಳು, ಅಪ್ಸರೆಗಳು, ಸೈನಿಕಗೆದ್ದಲು ಮತ್ತು ಸಂತಾನೋತ್ಪಾದಕರುಗಳಿಗೆ ಆಹಾರವನ್ನು ಸ್ವತಃ ದೊರಕಿಸಿಕೊಂಡು ತಿನ್ನುವ ಚೈತನ್ಯವಿರುವುದಿಲ್ಲ. ಆದ್ದರಿಂದ ಕೆಲಸಗಾರ ಗೆದ್ದಲು ತಾನು ತಿಂದ ಆಹಾರವನ್ನು ಜಠರದಲ್ಲಿ ಅರೆದು ನಂತರ ದ್ರವರೂಪದಲ್ಲಿ ಇವುಗಳಿಗೆ ಒದಗಿಸುತ್ತವೆ. ಇದರಿಂದಾಗಿ ಕಶಾಣು ಏಕಾಣು ಜೀವಿಗಳು ಗೆದ್ದಲಿನ ಅನ್ನನಾಳವನ್ನು ಸೇರಿ ಸೆಲ್ಯುಲೋಸ್ ಆಹಾರವನ್ನು ಜೀರ್ಣಿಸಲು ನೆರವಾಗುತ್ತವೆ.

ಗೆದ್ದಲಿನ ಸಾಮಾಜಿಕ ಜೀವನ ವೈಶಿಷ್ಟ್ಯ ಪೂರ್ಣವಾದುದು. ಗೂಡುಗಳ ವಿನ್ಯಾಸ, ರೆಕ್ಕೆಹುಳುಗಳ ಹಾರಾಟ, ವಸಾಹತುಗಳ ಸ್ಥಾಪನೆ, ಸಂಘಜೀವನ, ಕೆಲಸದ ಹಂಚಿಕೆ, ಆಹಾರ ಶೇಖರಣೆ, ಜೀರ್ಣಕ್ರಿಯೆಗಾಗಿ ಸಹಜೀವಿಗಳ ಅವಲಂಬನೆ, ಶಿಲೀಂದ್ರ ತೋಟಗಳನ್ನು ಬೆಳೆಸುವಿಕೆ, ಸಹಕಾರ ಬಾಳ್ವೆ ಮತ್ತು ಶಿಸ್ತು ಮುಂತಾದ ಅಂಶಗಳನ್ನು ಸಾಮಾಜಿಕ ಕೀಟಗಳಲ್ಲಿ ಗೆದ್ದಲಿನ ವಸಾಹತುವಿನಲ್ಲಿ ಮಾತ್ರ ಸ್ಪಷ್ಟವಾಗಿ ಕಾಣಬಹುದು.

ಗೆದ್ದಲು ಸಂಘ ಜೀವಿ. ತನ್ನದೇ ಆದ ವಸಾಹತುವಿನಲ್ಲಿ ಮಾನವ ಸಮಾಜಕ್ಕಿಂತಲೂ ಅತ್ಯಂತ ಸುವ್ಯವಸ್ಥಿತವಾದ ಕುಟುಂಬ ಜೀವನ ನಡೆಸುವ ಕೀಟ. ಗಟ್ಟಿಮಣ್ಣಿನಿಂದ ನಿರ್ಮಿಸಿರುವ ಗೂಡುಗಳೇ ಇವುಗಳ ವಾಸಸ್ಥಾನ. ಗೆದ್ದಲಿನ ಗೂಡು ಅಭೇದ್ಯ ಕೋಟೆ.

ಗೆದ್ದಲಿನ ವಸಾಹತುವಿನಲ್ಲಿ ಪ್ರಧಾನವಾಗಿ ಎರಡು ಬಗೆಯ ಗೆದ್ದಲಿನ ಜಾತಿಗಳಿರುತ್ತವೆ. ರೆಕ್ಕೆಗಳಿರುವ ಸಂತಾನೋತ್ಪಾದಕರು (ಗಂಡು ಮತ್ತು ಹೆಣ್ಣು ಸಮಸಂಖ್ಯೆಯಲ್ಲಿ) ಮತ್ತು ರೆಕ್ಕೆಗಳಿಲ್ಲದ ಬರಡು ಗೆದ್ದಲುಗಳು (ಕೆಲಸಗಾರ ಮತ್ತು

ಸೈನಿಕರು). ಒಟ್ಟಾರೆ ಗೆದ್ದಲಿನ ವಸಾಹತುವಿನಲ್ಲಿ ರಾಜ, ರಾಣಿ, ಕೆಲಸಗಾರ ಮತ್ತು ಸೈನಿಕರೆಂದು ನಾಲ್ಕು ಪ್ರಕಾರಗಳನ್ನು ಸ್ಪಷ್ಟವಾಗಿ ನೋಡಬಹುದು. ಇವು ಭಿನ್ನ ಭಿನ್ನ ಕೆಲಸಗಳನ್ನು ನಿರ್ವಹಿಸುತ್ತವೆ. ಕಾರ್ಯಸ್ವರೂಪಕ್ಕನುಗುಣವಾಗಿ ಅವುಗಳ ಶರೀರ ರಚನೆಗೊಂಡಿದೆ. ಗೆದ್ದಲಿನ ವಸಾಹತುವಿನಲ್ಲಿ ಸಾಮಾನ್ಯವಾಗಿ ಒಂದೇ ರಾಜ ಮತ್ತು ರಾಣಿಗಳಿದ್ದು ಕೆಲಸಗಾರರು ಶೇ. 80 ರಷ್ಟು ಸಂಖ್ಯೆ ಇರುತ್ತವೆ. ವಸಾಹತುವಿನ ರಕ್ಷಣೆಗೆ ಬೇಕಾಗುವಷ್ಟು ಸುಮಾರು ಶೇ. 12–15ರಷ್ಟು ಸಂಖ್ಯೆ ಮಾತ್ರವಿರುತ್ತವೆ. ಪ್ರತಿಯೊಂದು ಗೆದ್ದಲೂ ವಸಾಹತುವಿನಲ್ಲಿ ತನ್ನ ಜವಾಬ್ದಾರಿಯನ್ನು ಅರಿತು ಶಿಸ್ತಿನಿಂದ ತನ್ನ ಕೆಲಸವನ್ನು ನಿರ್ವಹಿಸುತ್ತದೆ.

ಸಂತಾನೋತ್ಪಾದಕ ರೆಕ್ಕೆಯುಳ್ಳ ಗೆದ್ದಲುಗಳಲ್ಲಿ ಪ್ರಬಲವಾದ 2 ಸಂಯುಕ್ತ ಕಣ್ಣುಗಳಿಂದ ಕೂಡಿ ಎರಡು ಜೊತೆ ಸರಳ ಕಣ್ಣುಗಳಿರುತ್ತವೆ. ಮಾಸಲು ಹಳದಿಯಿಂದ ಕಂದು ಬಣ್ಣವಿರುತ್ತವೆ. ಎರಡು ಜೊತೆ ಸಾಮಾನ್ಯ ನರಗಳುಳ್ಳ ಶರೀರದಿಂದ ಬೇಗ ಕಳಚುವಂತಹ ಪಾರದರ್ಶಕ ರೆಕ್ಕೆಗಳಿವೆ. ಸಂತಾನೋತ್ಪಾದಕರು ರೆಕ್ಕೆಹುಳುಗಳಾಗಿ ವರ್ಷಕ್ಕೊಂದಾವರ್ತಿ ಮಳೆಗಾಲದ ಮುಸ್ಸಂಜೆಯಲ್ಲಿ ಗೂಡುಗಳಿಂದ ಹಿಂಡು ಹಿಂಡಾಗಿ ಹೊರಬಂದು ಬೆಳಕಿನಲ್ಲಿ ಹಾರಾಡಿ ಗಂಡು ಮತ್ತು ಹೆಣ್ಣು ಜೊತೆಗೂಡಿ ನಂತರ ರೆಕ್ಕೆಗಳನ್ನು ಕಳಚಿ ಸೂಕ್ತ ಸ್ಥಳವನ್ನು ಗುರ್ತಿಸಿ ಭೂಮಿಯಲ್ಲಿ ಸಣ್ಣಗೂಡನ್ನು ಕಟ್ಟಲು ಪ್ರಾರಂಭಿಸುತ್ತವೆ. ರೆಕ್ಕೆಹುಳುಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳಕಿನಲ್ಲಿ ಹಾರಾಡುವುದರಿಂದ ಇವುಗಳನ್ನು "ರೆಕ್ಕೆಹುಳು" ಅಥವ "ಈಚಲುಗಳು" ಎಂದು ಕರೆಯುವ ವಾಡಿಕೆ. ಇವುಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾರಾಡುವುದರಿಂದ ಅನೇಕ ಶತ್ರುಪ್ರಾಣಿಗಳಾದ ಕಪ್ಪೆ, ಓತಿಕ್ಯಾತ, ಪಕ್ಷಿಗಳು, ಕೀಟಗಳು ಆಕರ್ಷಿತವಾಗಿ ರೆಕ್ಕೆಹುಳುಗಳು ಹಾರಾಡಿ ಕೆಳಗೆ ಬಿದ್ದ ತಕ್ಷಣ ಹಿಡಿದು ತಿನ್ನುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ರೆಕ್ಕೆಹುಳುಗಳು ಅನೇಕ ಪ್ರಾಣಿಗಳಿಗೆ ಪ್ರಿಯವಾದ ಆಹಾರವಾಗುತ್ತವೆ.

ಗಂಡು ಹೆಣ್ಣುಗಳು ಜೊತೆಗೂಡಿ ಸಣ್ಣ ಗೂಡನ್ನು ತೋಡಿ ನಂತರ ಗಂಡು ಹೆಣ್ಣಿನೊಡನೆ ಸಂಭೋಗ ನಡೆಸಿದ ಕೆಲವು ದಿನಗಳಲ್ಲಿ ಮೊಟ್ಟೆ ಇಡಲು ಪ್ರಾರಂಭಿಸುತ್ತವೆ. ರಾಣಿ ಮೊದಮೊದಲು ಕೇವಲ 20–25 ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳಿಂದ ಮೊದಲ ಕುಟುಂಬದ ಬೆಳವಣಿಗೆಗಾಗಿ ಬರಡು ಗೆದ್ದಲು ಮಾತ್ರ ಹುಟ್ಟುತ್ತವೆ. ನಂತರ ರಾಣಿ ಗರ್ಭ ಧರಿಸಿ, ಅಂಡಾಶಯ ಬೆಳೆದು ಹೊಟ್ಟೆ ಅಸಂಖ್ಯಾತ ಮೊಟ್ಟೆಗಳಿಂದ ತುಂಬಿ ಜೀವಮಾನವೆಲ್ಲ ಮೊಟ್ಟೆ ಇಡುವುದೇ ಇದರ ಕೆಲಸವಾಗಿ ಗೆದ್ದಲನ್ನು ಉತ್ಪಾದಿಸುವ ಯಂತ್ರವಾಗುತ್ತದೆ. ರಾಣಿಗೆದ್ದಲು ಸುಮಾರು 9–10 ಸೆಂ.ಮೀ. ಉದ್ದವಿರುತ್ತದೆ. ಚಲಿಸಲಾಗುವುದಿಲ್ಲ. ಒಂದು ದಿವಸಕ್ಕೆ ಸುಮಾರು 15,000–20,000 ಮೊಟ್ಟೆಗಳನ್ನಿಡುತ್ತದೆ. ರಾಣಿಗೆದ್ದಲನ್ನು "ತಾಯಿ ಈಚಲು" ಅಥವಾ "ತುಪ್ಪದ ಹುಳು" ಎಂದು ಕರೆಯುತ್ತಾರೆ.

ರಾಜನಲ್ಲಿ ಜನನೇಂದ್ರಿಯ ಅಭಿವೃದ್ಧಿಯಾಗಿರುವುದರಿಂದ ರಾಣಿಯ ಸುತ್ತ ಓಡಾಡಿಕೊಂಡು, ರಾಣಿಯನ್ನು ಕ್ಷಣ ಮಾತ್ರವೂ ಬಿಟ್ಟಿರಲಾರ. ಆಗಾಗ ರಾಣಿಯೊಡನೆ ಸಂಭೋಗ ನಡೆಸಿ ಗರ್ಭವತಿ ಮಾಡುತ್ತಿರುತ್ತದೆ. ರಾಜನ ಗಾತ್ರದಲ್ಲಿ ಯಾವ ಬದಲಾವಣೆಯಾಗುವುದಿಲ್ಲ. ರಾಜ ಮತ್ತು ರಾಣಿ ಗಟ್ಟಿ ಜೋಡಣೆಯಿಂದ ನಿರ್ಮಿತವಾಗಿರುವ ವಿಶೇಷ ಕೊಠಡಿಯೇ ಅರಮನೆಯಾಗಿ ವಸಾಹತುವಿನ ಬೆಳವಣಿಗಾಗಿ ರಾಣಿಯು ಸ್ರವಿಸುವ ಮೋಹಕ ದ್ರವದ ಮೂಲಕ ಎಲ್ಲಾ ಜಾತಿಯ ಕಾರ್ಯಚಟುವಟಿಕೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದರ ಜೊತೆಗೆ ವಸಾಹತುವಿನಲ್ಲಿ ಬೆಳೆಯುವ ಮರಿಗಳು ನಂತರ ವಿವಿಧ ಜಾತಿಗಳಾಗಿ ವಿಂಗಡಿಸಲು ಸಹಾಯವಾಗುತ್ತದೆ. ಭಾರತದಲ್ಲಿರುವ ಹುತ್ತ ಕಟ್ಟುವ ಒಡೊಂಟೊ ಟರ್ಮಿಸ್ ಗೆದ್ದಲಿನ ಜಾತಿಗಳು ಸುಮಾರು 25 ರಿಂದ 30 ವರ್ಷಗಳು ಬದುಕಿರುತ್ತವೆಂದು ತಿಳಿದುಬಂದಿದೆ.


ಕೆಲಸಗಾರ ಗೆದ್ದಲು ಸಣ್ಣ 3 – 5 ಮಿ.ಮೀ. ಉದ್ದ, 2 – 3 ಮಿ.ಮೀ. ಅಗಲ, ಮಾಸಲು ಬಣ್ಣ ಕಂದು ಬಣ್ಣದ ತಲೆ ಸಂಯುಕ್ತ ಕಣ್ಣುಗಳಲ್ಲಿ, ಕುಡಿಮೀಸೆ ಮಣಿಯಂತೆ, ಸಸ್ಯಗಳನ್ನು ಕಚ್ಚಲು ಬಾಯಿ ಭಾಗಗಳು ಮಾರ್ಪಾಟಾಗಿವೆ. ಇವು ಬಂಜೆಗಳು, ವೃಷಣ ಮತ್ತು ಅಂಡಾಶಯಗಳಿರುವುದಿಲ್ಲ. ವಸಾಹತುವಿನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ. ಇವುಗಳಿಗೆ ಕೆಲಸದೊಂದೇ ಚಿಂತೆ.

ಸೈನಿಕಗೆದ್ದಲು ಗಾತ್ರದಲ್ಲಿ ಕೆಲಸಗಾರರಿಗೆ ಹೋಲಿಕೆ ಇದ್ದರೂ ತಲೆ ದಪ್ಪ, ಬಲಿಷ್ಠ ದವಡೆ ಹಲ್ಲುಗಳು ದೊಡ್ಡದಾಗಿ ಮೊನಚಾಗಿವೆ. ಬಂಜೆಗಳು, ವೃಷಣ ಮತ್ತು ಅಂಡಾಶಯ ಗಳಿರುವುದಿಲ್ಲ. ವಸಾಹತುವಿಗೆ ಯಾವುದಾದರೂ ಶತ್ರು ಪ್ರಾಣಿಗಳು ಪ್ರವೇಶಿಸಿದರೆ ತಕ್ಷಣ ಕುಡಿಮೀಸೆ ಮತ್ತು ತಲೆಯನ್ನು ಮೇಲಕ್ಕೆತ್ತಿ ಭಯಾನಕ ಭಂಗಿಯನ್ನು ತಾಳಿ ಗೂಡಿನೊಳಗೆ ಬರುವಂತಹ ಶತ್ರುಗಳನ್ನು ತಮ್ಮ ದವಡೆ ಹಲ್ಲುಗಳಿಂದ ಕಚ್ಚಿ ಹಿಡಿಯುತ್ತವೆ.

ನಾಸುಟಿ ಟರ್ಮೈಟಿಸಿ ಉಪಕುಟುಂಬದ ಗೆದ್ದಲಿನ ಪ್ರಭೇದಗಳಲ್ಲಿ ಸೈನಿಕರಲ್ಲಿ ಕವಡೆ ಹಲ್ಲುಗಳಿಗೆ ಬದಲು ತಲೆಯ ತುದಿ ಮುಂದಕ್ಕೆ ಚಾಚಿರುವ ಕೊಳವೆಯಂತಹ ಮೂತಿಯಿಂದ ಒಂದು ಬಗೆಯ ತೀಕ್ಷ್ಣವಾದ ದ್ರವವನ್ನು ಹೊರಸೂಸಿ ಶತೃಗಳನ್ನು ಹಿಮ್ಮೆಟ್ಟಿಸುತ್ತವೆ.

ಸೈನಿಕ ಗೆದ್ದಲಿಗೆ ತಮ್ಮ ವಸಾಹತುವಿನ ಕಾವಲಿನದೊಂದೇ ಚಿಂತೆ.

ಕೆಲಸಗಾರ ಗೆದ್ದಲು ಅತ್ಯಂತ ಶಿಸ್ತು ಮತ್ತು ಜವಾಬ್ದಾರಿಯಿಂದ ವಸಾಹತುವಿನ ಏಳಿಗೆಗಾಗಿ ದುಡಿಯುತ್ತವೆ. ಇವು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅನೇಕ ಕೆಲಸಗಳನ್ನು ಮೊಟ್ಟೆ ಮರಿಗಳನ್ನು ವಿಶೇಷವಾದ ಗೂಡುಗಳಲ್ಲಿಟ್ಟು ಸಾಕುವುದು ರಾಜ, ರಾಣಿ ಮತ್ತು ಮರಿಗಳಿಗೆ ಆಹಾರವನ್ನು ತಿನ್ನಿಸುವುದು. ಗೂಡುಗಳ ನಿರ್ಮಾಣ, ರಿಪೇರಿ ಮತ್ತು ಸ್ವಚ್ಛತೆ ಗೂಡುಗಳಲ್ಲಿ ಸಹಜೀವಿ ಶಿಲೀಂದ್ರ ತೋಟಗಳನ್ನು ಬೆಳೆಸುವುದು. ಗೂಡಿನಿಂದ ಸುರಂಗಗಳನ್ನು ತೋಡಿ ಆಹಾರವನ್ನು ಗುರ್ತಿಸಿ ನಂತರ ಸಾಗಿಸುವುದು. ಸಾಮಾನ್ಯವಾಗಿ ಆಹಾರವನ್ನು ಸತತವಾಗಿ ಸಾಗಿಸುವ ಸಲುವಾಗಿ ತೆಳುವಾದ ಮಣ್ಣಿನ ಪೊರೆಯನ್ನು ಆಹಾರದ ಮೇಲೆ ಕಟ್ಟಿ ನಂತರ ಸಾಗಿಸುತ್ತವೆ. ಮಳೆಗಾಲ ಕಳೆದ ನಂತರ ಮರಗಳ ಮೇಲೆ, ಹುಲ್ಲಿನ ಮೇಲೆ, ಗಿಡಗಳಲ್ಲಿ, ತರಗೆಲೆ, ಸಗಣಿ ಮುಂತಾದ ಸಾವಯವ ವಸ್ತುಗಳ ಮೇಲೆ ಗೆದ್ದಲಿನಿಂದ ಕೂಡಿರುವ ಮಣ್ಣಿನ ಪೊರೆಯನ್ನು ನೋಡಬಹುದು.



ಗೆದ್ದಲು–ಹುತ್ತ

ಗೂಡುಗಳನ್ನು ಕಟ್ಟುವಾಗ, ರಿಪೇರಿ ಮಾಡುವಾಗ ಆಹಾರವನ್ನು ಹುಡುಕಿ ಸಾಗಿಸುವಾಗ, ರೆಕ್ಕೆಹುಳು ಗೂಡಿನಿಂದ ಹೊರಗೆ ಬರುವಾಗ ಒಂದು ನಿರ್ದಿಷ್ಟ ಅಂತರದ ದೂರದಲ್ಲಿ ಸೈನಿಕರಂತೆ ಕಾವಲಿದ್ದು ಗೆದ್ದಲನ್ನು ಶತ್ರುಗಳಿಂದ ರಕ್ಷಿಸುತ್ತವೆ. ಗೂಡಿನ ಪ್ರತಿಭಾಗದಲ್ಲಿ ನಿಂತು ಪಹರೆ ತಿರುಗುತ್ತಾ ಶತ್ರುಗಳು ಗೂಡಿನೊಳಗೆ ನುಗ್ಗದಂತೆ ತಡೆಯುತ್ತವೆ.

ಅನೇಕ ವೈವಿಧ್ಯತೆಯನ್ನೊಳಗೊಂಡಿರುವ ಟರ್ಮೈಟಿಡಿ ಕುಟುಂಬದ ಮ್ಯಾಕ್ರೊಟರ್ಮೈಟಿನಿ ಮತ್ತು ನಾಸುಟಿ ಟರ್ಮೈಟಿನಿ ಉಪಕುಟುಂಬದ ಪ್ರಭೇದಗಳು ಅನೇಕ ವಿಶೇಷ ಬಗೆಯಲ್ಲಿ ತಮ್ಮದೇ ಆದ ವಿನ್ಯಾಸದಲ್ಲಿ ಗೂಡುಗಳನ್ನು ಕಟ್ಟುತ್ತವೆ. ಸಾಮಾನ್ಯವಾಗಿ ಅರಣ್ಯಪ್ರದೇಶಗಳಲ್ಲಿ ಬೃಹದಾಕಾರವಾಗಿ ಹುತ್ತಗಳನ್ನು ನಿರ್ಮಿಸುತ್ತವೆ. ಆಫ್ರಿಕಾ, ಆಸ್ಟ್ರೇಲಿಯ, ಉತ್ತರ ಅಮೆರಿಕಾ, ಭಾರತ ಪ್ರಾಂತ್ಯಗಳಲ್ಲಿ ಪ್ರವಾಸಿಗಳನ್ನು ವಿಶೇಷವಾಗಿ ಆಕರ್ಷಿಸುವಂತಹ ಹುತ್ತಗಳನ್ನು ಕಟ್ಟುತ್ತವೆ. ಗೂಡುಗಳ ಒಳಗೆ ಮತ್ತು ಹೊರಗೆ ಅತ್ಯುನ್ನತ ಮಟ್ಟದಲ್ಲಿ ಶಿಲ್ಪಕಲೆಯನ್ನು ಅಳವಡಿಸಿ ಹುತ್ತಗಳನ್ನು ನಿರ್ಮಿಸುತ್ತವೆ.

ಮ್ಯಾಕ್ರೊಟರ್ಮೈಟಿನಿ ಉಪಕುಟುಂಬದಲ್ಲಿರುವ ಒಡೊಂಟೊಟರ್ಮಿಸ ಮಿಕ್ರೊಟರ್ಮಿಸ ಮತ್ತು ಮ್ಯಾಕ್ರೊಟರ್ಮಿಸ ಜಾತಿಯ ಗೆದ್ದಲಿನ ಪ್ರಭೇಧಗಳು ಗೂಡುಗಳಲ್ಲಿ ಶಿಲೀಂದ್ರ ತೋಟಗಳನ್ನು ಸಹಜೀವಿಗಳಾಗಿ ಬೆಳೆಸುತ್ತವೆ. ಗೆದ್ದಲಿನ

ಹಿಕ್ಕೆಗಳನ್ನು ಗೂಡುಗಳಲ್ಲಿ ಸಂಗ್ರಹಿಸಿ ಅವುಗಳ ಮೇಲೆ ಶಿಲೀಂಧ್ರ ತಂತುಜಾಲವನ್ನು ಬೆಳೆಸಿ ತಮ್ಮ ಲಾಲಾರಸದಿಂದ ಸ್ಪಂಜಿನಂತಹ ಮೆತ್ತನೆಯ ಶಿಲೀಂಧ್ರ ತೋಟಗಳನ್ನು ನಿರ್ಮಿಸುತ್ತವೆ. ಇವುಗಳನ್ನೇ "ಗುಗ್ಗೆ"ಗಳೆಂದು ಕರೆಯುವ ವಾಡಿಕೆ. ಶಿಲೀಂಧ್ರ ತೋಟಗಳ ಮೇಲೆ ಬಿಳುಪಾದ ಶಿಲೀಂಧ್ರ ಬಿಜಾಣು ಸೂಕ್ಷ್ಮಜೀವಿಗಳು ಬೆಳೆಯುತ್ತವೆ. ಇದನ್ನು ಗೆದ್ದಲು ಆಹಾರವಾಗಿ ಉಪಯೋಗಿಸುತ್ತದೆ.

ಈ ಸಹಜೀವಿ ಶಿಲೀಂಧ್ರತೋಟಗಳಿಂದ ಗೆದ್ದಲು ಅನೇಕ ಅನುಕೂಲಗಳನ್ನು ಪಡೆಯುತ್ತದೆ.

1. ವಸಾಹತುವಿನ ಗೆದ್ದಲಿನ ಬೆಳವಣಿಗೆಗೆ ಬೇಕಾದ ಜೀವಸತ್ವಗಳು ಮತ್ತು ಪೋಷಕಾಂಶಗಳು ಶಿಲೀಂಧ್ರ ತೋಟಗಳಲ್ಲಿರುವುದರಿಂದ ಮರಿಗಳ ಆಹಾರವಾಗಿ ಉಪಯೋಗಿಸುತ್ತವೆ.

2. ಮೊಟ್ಟೆಗಳ ಕಾವಿಗೆ ಹಾಗೂ ಮರಿಗಳನ್ನು ಶಿಲೀಂಧ್ರ ತೋಟದ ಸಣ್ಣ ಸಣ್ಣ ಗುಣಗಳಲ್ಲಿಟ್ಟು ಸಾಕಲು ಸಹಾಯಕವಾಗಿವೆ.

3. ಶಿಲೀಂಧ್ರ ತೋಟಗಳು ಸ್ಪಂಜಿನಂತಿರುವುದರಿಮದ ಗೂಡಿನಲ್ಲಿ ತೇವಾಂಶವನ್ನು ಹಿಡಿದಿಟ್ಟುಗೊಂಡಿದ್ದು ಹೆಚ್ಚಿನ ಸಂಖ್ಯೆಯ ಉಸಿರಾಟದಿಂದಾಗಿ ಇಂಗಾಲದ ಡೈ ಆಕ್ಸೈಡ್ ನಿರ್ಮಾಣಗೊಂಡು ವಸಾಹತುವಿಗೆ ಬೇಕಾಗಿರುವ ಒಂದು ನಿರ್ದಿಷ್ಟ ಉಷ್ಣಾಂಶ ಮತ್ತು ಶೈತ್ಯಾಂಶದ ಹವಾನಿಯಂತ್ರಣದ ವ್ಯವಸ್ಥೆಯಾಗುತ್ತದೆ.

ಕೆಲವು ಶಿಲೀಂಧ್ರಗಳನ್ನು ಬೆಳೆಸದೇ ಇರುವ ಹುತ್ತಗಳನ್ನು ನಿರ್ಮಾಣ ಮಾಡುವ ಗೆದ್ದಲುಗಳು ಆಹಾರದ ಚೂರುಗಳನ್ನೇ ಗೂಡುಗಳಲ್ಲಿಟ್ಟು ಅನೇಕ ಅನುಕೂಲಗಳನ್ನು ಪಡೆಯುತ್ತವೆ. ನಾಸುಟಿಟರ್ಮೈಟಿನಿ ಉಪಕುಟುಂಬಕ್ಕೆ ಸೇರಿರುವ ಗೆದ್ದಲಿನ ಪ್ರಭೇಧಗಳೂ ಸಹ ಭೂಮಿಯೊಳಗೆ ಮತ್ತು ಮರಗಳ ಮೇಲೆ ವಿಶೇಷವಾದ ಗೂಡುಗಳನ್ನು ಕಟ್ಟುತ್ತವೆ. ಆಫ್ರಿಕಾದಲ್ಲಿ ಟ್ರೈನರ್ವಿ ಟರ್ಮಿಸ ಜಾತಿಯ ಪ್ರಭೇಧಗಳು ಸಣ್ಣ ಸಣ್ಣ ಹುತ್ತಗಳನ್ನು ನಿರ್ಮಿಸಿ ಗೂಡುಗಳಲ್ಲಿ ಹುಲ್ಲನ್ನು ಶೇಖರಿಸಿ ವಸಾಹತುವಿಗೆ ಬೇಕಾಗಿರುವ ಎಲ್ಲಾ ಅನುಕೂಲತೆಗಳನ್ನು ಪಡೆಯುತ್ತದೆ. ಭಾರತದಲ್ಲಿರುವ ನಾಸುಟಿಟರ್ಮಿಸ ಜಾತಿಯ ಪ್ರಬೇಧಗಳು ತಮ್ಮ ಹಿಕ್ಕೆಗಳನ್ನು ಸಂಗ್ರಹಿಸಿ ಲಾಲಾರಸವನ್ನು ಬೆರೆಸಿ ಎಲ್ಲಾ ಗೆದ್ದಲುಗಳಿಗೆ ಸ್ಥಳಾವಕಾಶವನ್ನು ಒದಗಿಸುವಂತಹ ಗೋಳಾಕಾರದ ಸಾಮಾನ್ಯ ಗಾತ್ರದ ಗೂಡುಗಳನ್ನು ಕಾಡುಮರಗಳ ಮೇಲೆ ಕಟ್ಟಿ ಕೊಳವೆಯಂತಹ ಸುರಂಗಮಾರ್ಗಗಳನ್ನು ಮಾಡಿ ಆಹಾರವನ್ನು ಸತತವಾಗಿ ಗೂಡಿಗೆ ಸಾಗಿಸುತ್ತವೆ.

ವಿಶ್ವದಲ್ಲಿ ವಿಸ್ತಾರವಾಗಿರುವ ಅನೇಕ ಗೆದ್ದಲಿನ ಜಾತಿಗಳಲ್ಲಿ ಭಾರತದ ಒಡೊಂಟೊ ಟರ್ಮಿಸ್, ಆಫ್ರಿಕಾದ ಮ್ಯಾಕ್ರೊಟರ್ಮಿಸ್, ಟ್ರೈನರ್ವಿಟರ್ಮಿಸ್, ಕ್ಯೂಬಿಟರ್ಮಿಸ್ ಮತ್ತು ಏಪಿಕೊಟರ್ಮಿಸ್, ಆಸ್ಟ್ರೇಲಿಯಾದ ಏಮಿಟರ್ಮಿಸ್ ನಾಸುಟಿ ಟರ್ಮಿಸ್ ಮತ್ತು ಕೋಪ್ಟೊ ಟರ್ಮಿಸ್ ಮತ್ತು ದಕ್ಷಿಣ ಅಮೆರಿಕಾದ ಅನೊಪ್ಲೊಟರ್ಮಿಸ್ ಮತ್ತು ಸೈನಟರ್ಮಿಸ್ ಮುಖ್ಯವಾದವು.

ಗೆದ್ದಲಿನ ಹಾನಿಯಿಂದ ಪ್ರತಿವರ್ಷ ಭಾರತದಲ್ಲಿ 280 ದಶಲಕ್ಷ ರೂಪಾಯಿಗಳು ನಷ್ಟವಾಗುತ್ತದೆಂದು ಹಿಂದಿನ ಶತಮಾನ ಆದಿಭಾಗದಲ್ಲಿಯೇ ಅಂದಾಜುಮಾಡಲಾಗಿತ್ತು. ಈ ಅಂದಾಜಿನ ನಷ್ಟದ 10 ಪಟ್ಟಾದರೂ ಇಂದು ಭಾರತದಲ್ಲಿ ನಷ್ಟವಾಗುತ್ತದೆಂದು ತಿಳಿಯಬಹುದು. ಇತರೇ ರಾಷ್ಟ್ರಗಳಿಂದಲೂ ಸಾವಿರಾರು ದಶಲಕ್ಷ ರೂಪಾಯಿಗಳ ನಷ್ಟವಾಗುತ್ತದೆಂದು ತಿಳಿಸಿದ್ದಾರೆ. ಭಾರತದಲ್ಲಿ ಗುರ್ತಿಸಿರುವ ಒಟ್ಟು 300 ಗೆದ್ದಲಿನ ಪ್ರಬೇಧಗಳಲ್ಲಿ 50 ಪ್ರಬೇಧಗಳನ್ನು ಬೆಳೆಗಳಲ್ಲಿ ಕಟ್ಟಡಗಳಲ್ಲಿ ನಷ್ಟಪಡಿಸುವ ಪೀಡೆಗಳೆಂದು ಗುರ್ತಿಸಿದ್ದಾರೆ.

ಸತತ ನೀರಾವರಿ ಬೆಳೆಗಳಲ್ಲಿ ಗೆದ್ದಲಿನ ಹಾವಳಿ ಇರುವುದಿಲ್ಲ. ಆದರೆ ಒಣಬೇಸಾಯದಲ್ಲಿ ಬೆಳೆಯುವ ಎಲ್ಲಾ ಬೆಳೆಗಳಲ್ಲಿ ಸಸಿಗಳಿಂದ ಬೆಳೆಯುವ ಎಲ್ಲಾ ಹಂತಗಳಲ್ಲಿ ಗೆದ್ದಲಿನ ಹಾವಳಿ ಇರುತ್ತದೆ. ಆಳವಾದ ಕಪ್ಪುಮಣ್ಣಿನಲ್ಲಿ ಗೆದ್ದಲಿನ ಹಾವಳಿ ಇರುವುದಿಲ್ಲ. ಕೆಂಪು, ಮರಳು ಮಿಶ್ರಿತ ಗೋಡು, ಜೆಂಬಿಟ್ಟಿಗೆ ಮಣ್ಣುಗಳಲ್ಲಿ ಗೆದ್ದಲಿನ ಹಾವಳಿ ಅಧಿಕವೆಂದು ಸಂಶೋಧನೆಯಿಂದ ತಿಳಿಯಲ್ಪಟ್ಟಿದೆ.

ಧಾನ್ಯ ಬೆಳೆಗಳಲ್ಲಿ ಗೋದಿ, ಬತ್ತ, ಮುಸುಕಿನ ಜೋಳ, ಬಾರ್ಲಿ, ಸಜ್ಜೆ ನವಣೆ ಮುಂತಾದುವು, ಎಲ್ಲಾ ಬಗೆಯ ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು, ತರಕಾರಿ, ಹಣ್ಣಿನ ಬೆಳೆಗಳು ಇವುಗಳಲ್ಲದೆ ಅನೇಕ ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ, ತೆಂಗು, ಅಡಿಕೆ, ರಬ್ಬರ್, ಟೀ, ಕಾಫಿ, ಕೊಕೊ, ಏಲಕ್ಕಿ ಮುಂತಾದುವು. ಎಲ್ಲಾ ಬಗೆಯ ಅರಣ್ಯ ಮರಗಳು, ಹುಲ್ಲಿನ ಜಾತಿಯ ಬೆಳೆಗಳು ಉಗ್ರಾಣದಲ್ಲಿ ಶೇಖರಿಸಿರುವ ಮರಮುಟ್ಟು, ಪುಸ್ತಕ, ಬಟ್ಟೆ, ಕಟ್ಟಡಗಳಲ್ಲಿನ ಮರದ ಸಾಮಾನುಗಳು, ಅಡ್ಡೆ ತರಾಯಿ, ಬಾಗಿಲು, ಕಿಟಕಿ, ಪೀಠೋಪಕರಣಗಳು, ಸಾವಯವ ಗೊಬ್ಬರ, ಸಗಣಿ, ತರಗೆಲೆ, ಬೇರಿನ ಕೊಳೆ, ಒಣಹುಲ್ಲು, ಗರಿ ಮುಂತಾದುವು ಗೆದ್ದಲಿನ ಹಾವಳಿಗೆ ತುತ್ತಾಗುತ್ತವೆ. (ಜಿ.ಪಿ.ಪಿ.)

**ಗೆರಾರ್ಡ್, ಕ್ರಿಮೋನಾದ :** ಸು. 1114–87. ಇಟಲಿಯ ಲೊಂಬಾರ್ಡಿಯಲ್ಲಿ ಹುಟ್ಟಿ, ಅರಬ್ಬೀ ಮತ್ತು ಗ್ರೀಕ್ ಗ್ರಂಥಗಳನ್ನು ಲ್ಯಾಟಿನಿಗೆ ತಂದ ಅನುವಾದಕ. ಟಾಲೆಮಿಯ ಅಲ್ಮಾಜೆಸ್ಟ್ ಗ್ರಂಥವನ್ನು ಓದಲೋಸ್ಕರ ಅರಬ್ಬೀ ನುಡಿ ಕಲಿಯಲೆಂದು ಟೋಲಿಡೋಗೆ ಹೋಗಿ ಅಲ್ಲೇ ನೆಲೆಸಿದ. ಸುಮಾರು 92 ಗ್ರಂಥಗಳನ್ನು ಈತ ಅನುವಾದಿಸಿರುವನೆಂದು ಹೇಳಿಕೆ. ಇವನು ಕೇವಲ ಅನುವಾದಕ ತಂಡದ ನಾಯಕನಾಗಿದ್ದ ಎನ್ನುವ ಶಂಕೆ ಸಹ ಉಂಟು. ಈ ಅನುವಾದಗಳಲ್ಲಿ 21 ವೈದ್ಯಶಾಸ್ತ್ರದವು. ಇವನು 1175ರಲ್ಲಿ ಬರೆದು ಮುಗಿಸಿದ ಅಲ್ಮಾಜೆಸ್ಟ್‌ನ ಅನುವಾದ 1515ರಲ್ಲಿ ಅಚ್ಚಾಗಿ ಗ್ರೀಕ್ ಮೂಲದ ಅನುವಾದಕ್ಕಿಂತ ಹೆಚ್ಚು ಜನಪ್ರಿಯವಾಯಿತು. ಟಾಲೆಮಿಯದೇ ಅಲ್ಲದೆ ಅರಿಸ್ಟಾಟಲ್, ಯೂಕ್ಲಿಡ್, ಗೇಲೆನರ ಅರಬ್ಬೀ ಅನುವಾದಗಳನ್ನೂ ಈತ ಲ್ಯಾಟಿನಿಗೆ ತಂದ. ಇವನು ಅನುವಾದಿಸಿದ ಮೂಲ ಅರಬ್ಬೀ ಗ್ರಂಥಗಳಲ್ಲಿ ಆವಿಸೆನ್ನನ ವೈದ್ಯಗ್ರಂಥಗಳು, ಗಣಿತ, ಖಗೋಳಶಾಸ್ತ್ರ, ಜ್ಯೋತಿಷಶಾಸ್ತ್ರ ರಸತಂತ್ರದ ಗ್ರಂಥಗಳೂ ಇದ್ದುವು. (ಡಿ.ಎಸ್.ಎಸ್.)

**ಗೆರಾರ್ಡ್ ಡೊಮಾಕ್ :** 1895–1964. ಜರ್ಮನಿಯ ಜೀವರಸಾಯನ ಮತ್ತು ಸೂಕ್ಷ್ಮವಿಜ್ಞಾನಿ. ಈಗ ಪೋಲೆಂಡಿನಲ್ಲಿರುವ ಬ್ರಾಂಡೆನ್ ಬರ್ಗಿನ ಲ್ಯಾಗೋನಲ್ಲಿ 1895ರ ಅಕ್ಟೋಬರ್ 30ರಂದು ಜನಿಸಿದ. ಸಲ್ಫೊನಮೈಡ್ ಔಷಧಗಳ ಪೈಕಿ ಮೊದಲನೆಯದಾದ ಪ್ರೋಂಟೋಸಿಲ್ಲಿನ ಸೂಕ್ಷ್ಮಜೀವಿ ವಿರುದ್ಧ (ಆ್ಯಂಟಿ ಬ್ಯಾಕ್ಟೀರಿಯಲ್) ಗುಣಗಳನ್ನು ಶೋಧಿಸಿದ್ದಕ್ಕಾಗಿ 1936ರಲ್ಲಿ ಈತನಿಗೆ ವೈದ್ಯ ಹಾಗೂ ಶರೀರಕ್ರಿಯಾವಿಜ್ಞಾನ ವಿಭಾಗದ ನೊಬೆಲ್ ಪಾರಿತೋಷಕ ಲಭಿಸಿತು. ಆದರೆ ಹಿಟ್ಲರ್ ಪ್ರಭಾವದಲ್ಲಿದ್ದ ಜರ್ಮನಿಯ ಈ ಪೌರನಿಗೆ ಅದನ್ನು ಸ್ವೀಕರಿಸಲು ಅನುಮತಿ ದೊರೆಯಲಿಲ್ಲ. ಹಿಟ್ಲರನ ಮರಣಾನಂತರ, 1947ರಲ್ಲಿ, ಡೊಮಾಕ್ ಸ್ವೀಡನ್ನಿಗೆ ತೆರಳಿ ನೊಬೆಲ್ ಪಾರಿತೋಷಕ ಪಡೆದ. ಆದರೆ, ಬಹುಮಾನದ ಹಣ ಮಾತ್ರ ದೊರೆಯಲಿಲ್ಲ.



ಡೊಮಾಕ್‌ನ ವಿದ್ಯಾರಂಭದ ವೇಳೆ ಒಂದನೆಯ ಮಹಾಯುದ್ಧ ನಡೆಯುತ್ತಿದ್ದುದರಿಂದ ಈತನ ಅಧ್ಯಯನಕ್ಕೆ ತೊಂದರೆ ಉಂಟಾಯಿತು. ಸಮರಾನಂತರ ವಿದ್ಯಾಭ್ಯಾಸವನ್ನು ಮುಂದುವರಿಸಿ ಆಮೇಲೆ 1921ರಲ್ಲಿ ವೈದ್ಯಶಾಸ್ತ್ರದಲ್ಲಿ ತರಬೇತಿ ಹೊಂದಿ ಪದವಿ ಪಡೆದ. 1924ರಲ್ಲಿ ಇವನು ಗ್ರೀಫ್ಸ್ ಪಾಲ್ಡ್ ವಿಶ್ವವಿದ್ಯಾಲಯದಲ್ಲಿ ಕೆಲಸಕ್ಕೆ ಸೇರಿದ. ಕೆಲವು ವರ್ಷಗಳ ಬಳಿಕ ಮುನ್ಸ್‌ಟರ್‌ನ ರೋಗವಿಜ್ಞಾನ ಸಂಸ್ಥೆಯಲ್ಲಿ ಹುದ್ದೆ ಸಿಕ್ಕಿತು. ಈ ಸಂಸ್ಥೆಯಲ್ಲಿಯೇ 1928ರಲ್ಲಿ ಸಾಮಾನ್ಯ ರೋಗವಿಜ್ಞಾನಶಾಸ್ತ್ರದ (ಜನರಲ್ ಪ್ಯಾಥಾಲಜಿ) ಮತ್ತು ರೋಗಶಾಸ್ತ್ರೀಯ ಅಂಗರಚನಾ ವಿಜ್ಞಾನದ (ಪ್ಯಾಥಲಾಜಿಕಲ್ ಅನಾಟಮಿ) ಪ್ರಾಧ್ಯಾಪಕನಾಗಿ ನೇಮಕಗೊಂಡ. ಉಪ್ಪೆರ್ಟಾಲ್–ಎಲ್ಬರ್‌ಫೆಲ್ಡ್‌ನಲ್ಲಿನ ಬೇಯರ್ ಕಂಪನಿಯ ಬಣ್ಣದ ಕೈಗಾರಿಕೆಯ ಪ್ರಯೋಗ ಶಾಲೆಯಲ್ಲಿ ಸಂಶೋಧನೆಯ ನಿರ್ದೇಶಕ ನಾಗಿರಲು ಆಹ್ವಾನ ಬಂದಾಗ (1927) ಒಪ್ಪಿಕೊಂಡ. ಇಲ್ಲಿ ಡೊಮಾಕನು ಸಹೋದ್ಯೋಗಿ ಗಳಾದ ಫ್ರಿಟ್ಜ್ ಮಿಶ್ಚ್ ಮತ್ತು ಜೋಸೆಫ್ ಕ್ಲಾರರ್ ಎಂಬವರ ಜೊತೆಯಲ್ಲಿ ಹೊಸ ಬಣ್ಣಗಳ ತಯಾರಿಕೆಗೆ ಕ್ರಮ ಬದ್ಧವಾಗಿ ಸಂಶೋಧನೆ ಮಾಡಿ ಹಲವಾರು ನೂತನ ಆಜೋಸಂಯುಕ್ತಗಳನ್ನು ಸಂಶ್ಲೇಷಿಸಿದ. ಇವುಗಳ ವೈದ್ಯಕೀಯ ಗುಣಗಳನ್ನು ಕೂಡ ಪರಿಶೀಲಿಸಲಾಯಿತು. ಈ ಅನ್ವೇಷಣೆಯಲ್ಲಿದ್ದಾಗಲೇ ಪ್ರೋಂಟೋಸಿಲ್ ರೆಡ್ ಎನ್ನುವ ಬಣ್ಣವೊಂದು (ಸಲ್ಫೊನೊಮೈಡ್ ಗುಂಪಿಗೆ ಸೇರಿದ್ದು) ಇಲಿಗಳಲ್ಲಿರುವ ಸೋಂಕುಗಳ ಮೇಲೆ ನಿರ್ದಿಷ್ಟವಾದ ಪರಿಣಾಮವನ್ನು ಉಂಟುಮಾಡುತ್ತದೆಂದು ಆತ ಕಂಡುಹಿಡಿದ. ಆಮೇಲೆ ಇದನ್ನು ವೈದ್ಯಕೀಯ ವೃತ್ತಿಯಲ್ಲಿಯೂ ಬಳಸಲಾಯಿತು. ಅದೇ ವೇಳೆ ಸ್ವತಃ ಡೊಮಾಕನ ಮಗಳು ಚುಚ್ಚುಮದ್ದಿನ ಪರಿಣಾಮವಾಗಿ ತೀವ್ರ ಸ್ಟ್ರೆಪ್ಟೋಕಾಕಸ್ ಸೋಂಕಿನಿಂದ ನರಳುತ್ತಿದ್ದಳು. ಡೊಮಾಕ್ ಈ ಹೊಸ ಔಷಧಿಯನ್ನು ಆಕೆಯ ಮೇಲೆ ಪ್ರಯೋಗಿಸಿ ಅವಳನ್ನು ಗುಣಮುಖ ಮಾಡಿದ. ಔಷಧಿಯ ಈ ವಿನೂತನ ಗುಣವನ್ನು ಅವನು 1932ರಲ್ಲಿ ಪ್ರಕಟಿಸಿದ. ಅಂದಿನಿಂದಲೇ ವೈದ್ಯಶಾಸ್ತ್ರದಲ್ಲಿ ರಸಚಿಕಿತ್ಸಕ (ಕೆಮೊತೆರಪ್ಯಾಟಿಕ್) ವಸ್ತುಗಳ ಬಳಕೆಯ ಯುಗ ಆರಂಭವಾಯಿತೆನ್ನಬಹುದು.

ಡೊಮಾಕ್ ತೀವ್ರಸೋಂಕುಗಳ ಚಿಕಿತ್ಸೆ ಮಾಡುವುದಷ್ಟೇ ಅಲ್ಲದೆ ಕ್ಷಯರೋಗ ನಿವಾರಣೆಯ ಮೇಲೂ ಸಂಶೋಧನೆ ನಡೆಸಿದ. 1947ರಿಂದ ಮುಂದಕ್ಕೆ ಅವನು ಕೆಲವು ವರ್ಷ ಏಡಿಗಂತಿ ರೋಗದ ಸಂಶೋಧನೆಗೆ ಸಂಬಂಧಪಟ್ಟ ಒಂದು ವಿಜ್ಞಾನಪತ್ರಿಕೆಯ ಸಂಪಾದಕನೂ ಆಗಿದ್ದ. ಈತ 1964ರ ಏಪ್ರಿಲ್ 24ರಂದು ವುರ್ಟಂಗ್‍ಫ–ಬ್ಯಾಡೆನ್ನಿನ ಬರ್ಬರ್ಗ್‍ನಲ್ಲಿ ನಿಧನನಾದ. (ಡಿ.ಎಸ್.ಎಂ.)

**ಗೆರಿಲ್ಲಾ ಕಾಳಗ : ನೋಡಿ–ಕಿರುಕುಳ ಕಾಳಗ**

**ಗೆರ್ಹಾರ್ಟ್, ಪಾಲ್ :** 1607–76. ಸ್ತೋತ್ರಗೀತೆಗಳ (ಹಿಮ್ಸ್) ರಚನೆಯಲ್ಲಿ ಹೆಸರಾದ ಜರ್ಮನ್ ಕವಿಗಳಲ್ಲಿ ಒಬ್ಬ ಪ್ರಮುಖ.

ಗ್ರಾಫೆನ್‍ಹೈನಿಚೆನ್ ಎಂಬಲ್ಲಿ ಹುಟ್ಟಿ ವಿಟ್ಟೆನ್‍ಬರ್ಗ್‍ನಲ್ಲಿ ವಿದ್ಯಾಭ್ಯಾಸ ಮಾಡಿದ ಈತ ಸ್ವಲ್ಪಕಾಲ ಬರ್ಲಿನ್‍ನಲ್ಲಿ ಮೊದಲಿಗೆ ಶಿಕ್ಷಕನಾಗಿದ್ದು ಅನಂತರ ಚರ್ಚಿನ ಅಧಿಕಾರಿಯಾದ. ಅದು ಮಹಾ ಧರ್ಮಾಧಿಕಾರಿಯ (ಪೋಪ್) ನಿರಂಕುಶಾಧಿಕಾರದ ವಿರುದ್ಧ ಪ್ರತಿಭಟನೆ ತೀವ್ರವಾಗಿದ್ದ ಕಾಲ. ಮಾರ್ಟಿನ್ ಲೂಥರ್‍ನಿಂದ ಆ ಕ್ರಾಂತಿ ಅತ್ಯಂತ ಪ್ರಖರವಾಗಿ ಎಲ್ಲೆಡೆಯೂ ಹಬ್ಬುತ್ತಿತ್ತು. ಗೆರ್ಹಾರ್ಟ್ ಕಟ್ಟಾ ಲೂಥರ್ ಅನುಯಾಯಿ. ಅದರಿಂದಾಗಿ ಈತನ ಅಧಿಕಾರಕ್ಕೆ ಸ್ವಲ್ಪ ಕಾಲ ಚ್ಯುತಿ ಬಂತು. ಆದರೆ ಕೆಲಕಾಲದ ಮೇಲೆ ಮತ್ತೆ ಈತ ಆರ್ಚ್‍ಡೀಕನ್ ಆದ.

ಈತನ ಗೀತೆಗಳು ಮೊದಲು ಅಖಂಡವಾಗಿ ಪ್ರಕಾಶಿತವಾದದ್ದು ಬರ್ಲಿನ್‍ನಲ್ಲಿ ಸಂಗೀತ ನಿರ್ದೇಶಕನಾಗಿದ್ದ ಇಬೆಲಿಂಗ್ ಎಂಬುವನಿಂದ. ಗೆರ್ಹಾರ್ಟ್‍ನ ಆಧ್ಯಾತ್ಮಿಕ ಹಾಡುಗಳು ಎಂಬ ಹೆಸರಿನಲ್ಲಿ ಕೆಲ್ಲಿ ಎಂಬಾತ 1867ರಲ್ಲಿ ಇಂಗ್ಲಿಷಿಗೆ ಇವನ್ನು ಅನುವಾದಿಸಿ ಪ್ರಕಟಿಸಿದ್ದಾನೆ. ಈತನ ಸಮಕಾಲೀನರಾಗಿದ್ದ ಜೊಹಾನ್ ಫ್ರ್ಯಾಂಕ್, ಜೊಹಾನ್ ಶೆಫ್ಲರ್ ಮುಂತಾದವರೆಲ್ಲರಿಗಿಂತ ಈತನಿಗೆ ಹೆಚ್ಚಿನ ಗೌರವ ಕೊಟ್ಟು ಲೂಥರನ್ ಕವಿಗಳಲ್ಲಿ ಚಕ್ರವರ್ತಿ– ಎಂದು ವಿಮರ್ಶಕರು ಈತನನ್ನು ಹೊಗಳಿದ್ದಾರೆ. 'ಹೋಗು ನನ್ನ ಹೃದಯವೇ, ಹರ್ಷವನ್ನರಸು', 'ನೀನು ನನ್ನವನು, ಹೌದು, ಮತ್ತೂ ನನ್ನವನೇ', 'ವನಗಳೆಲ್ಲ ಈಗ ನಿದ್ರಾವೃತ' –ಮುಂತಾದ ಕೆಲವು ಗೀತೆಗಳು ನಿಸರ್ಗಪ್ರೇಮ, ಮೃದು ಮಧುರ ಹೃದಯಸ್ಪರ್ಶಿ ಭಾವನೆ, ಭಾಷೆಯ ಇನಿದನಿಗಳಿಗೆ ಪ್ರಸಿದ್ಧವಾಗಿವೆ. (ಆರ್.ಎಸ್.ಜಿ.)

**ಗೆಲಿಲಿಯೊ ಗೆಲೀಲಿ :** 1564–1642. ಇಟಾಲಿಯನ್ ಭೌತ ಮತ್ತು ಖಗೋಳ ವಿಜ್ಞಾನಿ. ಇಟಾಲಿಯನ್ನರ ಪದ್ಧತಿಯಂತೆ ಗೆಲಿಲಿಯೊ ಎಂಬ ಮೊದಲ ಹೆಸರಿನಿಂದಲೇ ಪರಿಚಿತನಾಗಿದ್ದಾನೆ. ರೆನೆಸಾನ್ಸ್ ಕಾಲದಲ್ಲಿ ಉಂಟಾದ ವಿಜ್ಞಾನ ಪುನರುಜ್ಜೀವನದ ಆದ್ಯ ಪ್ರವರ್ತಕರಲ್ಲೊಬ್ಬ. ಆಧುನಿಕ ವಿಜ್ಞಾನದ ಆಧಾರಸ್ತಂಭಗಳಲ್ಲೊಂದು ಎನಿಸಿರುವ ಪ್ರಯೋಗಮಾರ್ಗವನ್ನು ಅನುಷ್ಠಾನಕ್ಕೆ ತಂದವನೆಂದೂ ಯಂತ್ರಶಾಸ್ತ್ರದ (ಮೆಕ್ಯಾನಿಕ್ಸ್) ಮೂಲಪುರುಷನೆಂದೂ ಪ್ರಸಿದ್ಧಿ ಪಡೆದಿದ್ದಾನೆ. ಖಗೋಳೀಯ ಸಂಶೋಧನೆಗೆ ದೂರದರ್ಶಕವನ್ನು ಮೊತ್ತಮೊದಲ ಬಾರಿಗೆ ಬಳಸಿ ವಿವಿಧ ಆಕಾಶ ಕಾಯಗಳ ಬಗ್ಗೆ ಅನೇಕಾನೇಕ ಸ್ವಾರಸ್ಯಕರ ವಿಷಯಗಳನ್ನು ಸಂಗ್ರಹಿಸಿ ಕೊಪರ್ನಿಕಸ್ ಸಿದ್ಧಾಂತಕ್ಕೆ ಬೆಂಬಲ ನೀಡಿದ; ಮತ್ತು ಅದರಿಂದ ಅಪಾರ ಕಷ್ಟನಷ್ಟಗಳನ್ನು ಅನುಭವಿಸಿದ.



ಗೆಲಿಲಿಯೊ ಹುಟ್ಟಿದ್ದು ಪೀಸಾ ನಗರದಲ್ಲಿ, 1564 ರ ಫೆಬ್ರುವರಿ 15ರಂದು. ತಂದೆ ವಿನ್ಸೆನ್ಸಿಯೊ ಗೆಲೀಲಿ ಉಣ್ಣೆ ವ್ಯಾಪಾರಿ ಮತ್ತು ಹೆಸರುವಾಸಿಯಾದ ಸಂಗೀತಗಾರ. ಆತನ ಅಭಿಲಾಷೆಯಂತೆ ಗೆಲಿಲಿಯೊ ವೈದ್ಯಶಾಸ್ತ್ರ ಕಲಿಯಲೆಂದು ಪೀಸಾ ವಿಶ್ವವಿದ್ಯಾಲಯ ಸೇರಿದ. ಆದರೆ ಆಕಸ್ಮಿಕವಾಗಿ ಕೇಳಿದ ಒಂದು ಉಪನ್ಯಾಸದಿಂದ ಪ್ರಭಾವಿತನಾಗಿ ಗಣಿತಶಾಸ್ತ್ರದಲ್ಲಿ ಆಸಕ್ತನಾದ. ಕ್ರಮೇಣ ಗಣಿತದ ಗೀಳು ಹೆಚ್ಚಾಗಿ ವಿಶ್ವವಿದ್ಯಾಲಯವನ್ನು ಬಿಟ್ಟು ಮನೆಗೆ ಬಂದ. ಅವನ ಮುಂದಿನ ವಿದ್ಯಾಭ್ಯಾಸ ನಡೆದದ್ದು ಮನೆಯಲ್ಲಿಯೇ. ಬಹುಬೇಗ ಅಪಾರ ಪಾಂಡಿತ್ಯವನ್ನು ಸಂಪಾದಿಸಿ ಪೀಸಾ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕನಾದ. ಸಾವಿರಾರು ವರ್ಷಗಳಿಂದ ಮಾನ್ಯತೆ ಪಡೆದಿದ್ದ ಅರಿಸ್ಟಾಟಲನ ಅನೇಕ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ಅಲ್ಲಗಳೆದು ಸಹ ಪ್ರಾಧ್ಯಾಪಕರ ದ್ವೇಷ ಕಟ್ಟಿಕೊಂಡ. ಅವರ ಕಿರುಕುಳವನ್ನು ತಾಳಲಾರದೆ ಎರಡೇ ವರ್ಷಗಳಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಫ್ಲಾರೆನ್ಸ್ ನಗರಕ್ಕೆ ಓಡಿಹೋದ. 1592ರಲ್ಲಿ ಪಡೂವ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ, ಅಲ್ಲಿ ಹದಿನೆಂಟು ವರ್ಷ ಕಳೆದು, 1610 ರಲ್ಲಿ ಟಸ್ಕನಿ ಡ್ಯೂಕರ ಆಸ್ಥಾನ ವಿದ್ವಾಂಸನಾಗಿ ಸೇರಿಕೊಂಡ. ಈತ ಇತಿಹಾಸ ಪ್ರಸಿದ್ಧನಾಗಲು ಕಾರಣವಾದ ಈತನ ಮಹತ್ತ್ವಪೂರಿತ ಸಂಶೋಧನೆಗಳಲ್ಲಿ ಬಹುಪಾಲು ನಡೆದದ್ದು ಪಡೂವ ವಿಶ್ವವಿದ್ಯಾಲಯದಲ್ಲಿದ್ದ ಅವಧಿಯಲ್ಲೇ. ಯುರೋಪಿನ ಎಲ್ಲ ಭಾಗಗಳಿಗೂ ಈತನ ಕೀರ್ತಿ ಹಬ್ಬಿ ಎಲ್ಲ ದೇಶಗಳಿಂದಲೂ ವಿದ್ಯಾರ್ಥಿಗಳು ಅಲ್ಲಿಗೆ ಬರತೊಡಗಿದರು. ಜೊತೆಗೆ ಈತನ ಸಂಪ್ರದಾಯವಿರೋಧಿ ಬೋಧನೆಗಳ ಪರಿಣಾಮವಾಗಿ ಇವನ ವೈರಿಗಳ ಸಂಖ್ಯೆಯೂ ಬೆಳೆಯಿತು. ಇವನ ಬೋಧನೆಗಳು ಧರ್ಮಬಾಹಿರವಾದವೆಂದು ಪೋಪ್ ಐದನೆಯ ಪಯಸ್‍ರವರ ಮನ ಒಪ್ಪಿಸುವುದರಲ್ಲಿ ಈತನ ಶತ್ರುಗಳು ಯಶಸ್ವಿಯಾದರು. 1615 ರಲ್ಲಿ ಇವನನ್ನು ವಿಚಾರಣೆಗೆ ಗುರಿಪಡಿಸಿ ಇವನ ಬಾಯಿ ಮುಚ್ಚಿಸಿದರು.

1623 ರಲ್ಲಿ ಗೆಲಿಲಿಯೊನ ಸ್ನೇಹಿತ ಬಾರ್ಬೆರಿನಿ ಎಂಬಾತ ಎಂಟನೆಯ ಅರ್ಬನ್ ಎಂಬ ಹೆಸರಿನಿಂದ ಪೋಪ್ ಪದವಿಗೇರಿದ. ತನಗೆ ಸತ್ಯವೆಂದು ತೋರಿದ್ದನ್ನು ಬಹಿರಂಗವಾಗಿ ಸಾರಲು ಇನ್ನು ಮುಂದೆ ಯಾವ ಅಡ್ಡಿಯೂ ಇರಲಾರದೆಂದು ಭಾವಿಸಿದ ಗೆಲಿಲಿಯೊ 'ಎರಡು ಪ್ರಮುಖ ಸಿದ್ಧಾಂತಗಳನ್ನು ಕುರಿತ ಸಂವಾದ' ಎಂಬ ಒಂದು ಗ್ರಂಥವನ್ನು ಪ್ರಕಟಿಸಿದ (1632). ಟಾಲೆಮಿ ಸಿದ್ಧಾಂತದ ಪರವಾಗಿ ವಾದಿಸುವ ಒಬ್ಬ, ಕೊಪರ್ನಿಕಸ್ ಸಿದ್ಧಾಂತದ ಪರ ವಾದಿಸುವ ಒಬ್ಬ ಮತ್ತು ಇನ್ನೊಬ್ಬ ಸಾಮಾನ್ಯ ಮನುಷ್ಯ– ಈ ಮೂವರ ಮಧ್ಯೆ ನಡೆಯುವ ಸಂಭಾಷಣೆಯ ರೂಪದಲ್ಲಿದ್ದ ಆ ಗ್ರಂಥದಲ್ಲಿ ಕೊಪರ್ನಿಕಸ್ ವಾದಿಯನ್ನು ಪ್ರತಿಭಾವಂತನಂತೆಯೂ ಟಾಲೆಮಿ ವಾದಿಯನ್ನು ಬೆಪ್ಪನಂತೆಯೂ ಚಿತ್ರಿಸಲಾಗಿತ್ತು. ಟಾಲೆಮಿ ವಾದಿಯ ಚಿತ್ರವನ್ನು ರಚಿಸುವಾಗ ಗೆಲಿಲಿಯೊ ಪೋಪ್‍ರವರನ್ನೇ ಮನಸ್ಸಿನಲ್ಲಿಟ್ಟುಕೊಂಡು ಅವರನ್ನು ಗೇಲಿ ಮಾಡಿದ್ದಾನೆಂದು ಈತನ ವೈರಿಗಳು ಅಪಪ್ರಚಾರ ಮಾಡಲಾರಂಭಿಸಿದರು. 1633 ರಲ್ಲಿ ಈತ ಪುನಃ ವಿಚಾರಣೆಗೆ ಗುರಿಯಾದ. ಗೆಲಿಲಿಯೊ ತಪ್ಪಿತಸ್ಥನೆಂದು ನ್ಯಾಯಾಧೀಶ ಮಂಡಲಿ ತೀರ್ಮಾನವಿತ್ತಿತು. ಕೇವಲ ಮೂವತ್ತೆಂಟು ವರ್ಷಗಳ ಹಿಂದೆ ಅದೇ ಅಪರಾಧಕ್ಕೆ ಬ್ರೂನೊ (**ನೋಡಿ**) ಎಂಬಾತನನ್ನು ಜೀವಸಹಿತ ಸುಡಲಾಗಿತ್ತು. ಆದರೆ ಗೆಲಿಲಿಯೊಗೆ ಮರಣದಂಡನೆ ವಿಧಿಸಲಿಲ್ಲ. ಇವನ ವಯಸ್ಸನ್ನು ಗಮನಿಸಿ ಕಡಿಮೆ ಶಿಕ್ಷೆ ಕೊಟ್ಟರು. ಆ ಕಾಲದ ಪದ್ಧತಿಯಂತೆ ಗೋಣಿಪಟ್ಟಿಯನ್ನುಟ್ಟು ಮೈಗೆ ಬೂದಿ ಬಳಿದುಕೊಂಡು ಮೊಣಕಾಲೂರಿ ಕುಳಿತು 'ನಾನು ಅಪರಾಧಿ, ನಾನು ಬೋಧಿಸಿದುದೆಲ್ಲ ಸುಳ್ಳು, ಭೂಮಿ ಚಲಿಸುತ್ತಿಲ್ಲ ; ಸ್ಥಿರವಾಗಿ ನಿಂತಿದೆ' ಎಂದು ಬಹಿರಂಗವಾಗಿ ಸಾರಬೇಕಾಯಿತು. ಮೇಲಕ್ಕೇಳುವಾಗ ತಗ್ಗಿಸಿದ ದನಿಯಲ್ಲಿ 'ನಾನು ಏನೇ ಹೇಳಿರಲಿ ಅದು ಚಲಿಸಿಯೇ ಚಲಿಸುತ್ತದೆ' ಎಂದು ಹೇಳಿದನೆಂದು ಕಥೆ.

ಅಲ್ಲಿಂದ ಮುಂದೆ ಇವನು ಬಂಧನದಲ್ಲಿರಬೇಕಾಗಿ ಬಂತು. ಕೆಲವು ದಿವಸ ರೋಮ್‍ನಲ್ಲಿದ್ದ ಟಸ್ಕನಿ ಡ್ಯೂಕರ ಮನೆಯಲ್ಲಿಯೂ ಅನಂತರ ಆರ್ಸೆಟ್ರಿ ಎಂಬ ಹಳ್ಳಿಯಲ್ಲಿದ್ದ ತನ್ನದೇ ಮನೆಯಲ್ಲಿಯೂ ಗೃಹಬಂಧನದಲ್ಲಿದ್ದು 1642 ಜನವರಿ 8 ರಂದು ನಿಧನ ಹೊಂದಿದ. ತನ್ನ ಜೀವನದ ಕೊನೆಯ ನಾಲ್ಕು ವರ್ಷ ಸಂಪೂರ್ಣ ಕುರುಡನಾಗಿ ದಿನಗಳನ್ನು ಕಳೆದ.

ಗೆಲಿಲಿಯೊ ತನ್ನ ಮೊತ್ತಮೊದಲ ಪ್ರಮುಖ ಆವಿಷ್ಕಾರವನ್ನು ಮಾಡಿದ್ದು 1581 ರಲ್ಲಿ. ಆಗ ಇವನಿಗಿನ್ನೂ ಹದಿನೇಳು ವರ್ಷ: ಪೀಸಾ ವಿಶ್ವವಿದ್ಯಾಲಯದಲ್ಲಿ ವೈದ್ಯಶಾಸ್ತ್ರದ ವಿದ್ಯಾರ್ಥಿ. ಪೀಸಾ ನಗರದ ಕತೀಡ್ರಲ್‍ನಲ್ಲಿ ಪ್ರಾರ್ಥನಾ ಸಭೆಯೊಂದರಲ್ಲಿ ಭಾಗವಹಿಸುತ್ತಿದ್ದಾಗ ಛಾವಣಿಯಿಂದ ನೇತಾಡುತ್ತಿದ್ದ ತೂಗುದೀಪವನ್ನು ನೋಡುತ್ತಿದ್ದ. ತೂಗಾಟದ ವಿಸ್ತಾರ ಎಷ್ಟೇ ಇರಲಿ, ದೀಪ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಲು ಹಿಡಿಸುತ್ತಿದ್ದ ಕಾಲ ಸ್ಥಿರ ಎಂಬುದನ್ನು ಇವನು ಗಮನಿಸಿದ. ಗಡಿಯಾರ ಅಥವಾ ಇನ್ನಾವುದೇ ನಿಷ್ಕೃಷ್ಟ ಕಾಲಮಾಪಕಗಳು ಆಗ ಇರಲಿಲ್ಲವಾದ್ದರಿಂದ ಕಾಲವನ್ನು ಅಳೆಯಲು ಇವನು ತನ್ನ ನಾಡಿಯ ಬಡಿತವನ್ನೇ ಬಳಸಿಕೊಂಡ. ಮನೆಗೆ ಹಿಂತಿರುಗಿದ ತರುವಾಯ ಒಂದು ಸರಳ ಲೋಲಕವನ್ನು ತಯಾರಿಸಿಕೊಂಡು ಅದರ ಉದ್ದವನ್ನು ಅವಲಂಬಿಸಿ ಆಂದೋಲನ ಕಾಲ ಹೇಗೆ ವ್ಯತ್ಯಾಸವಾಗುವುದೆಂಬುದನ್ನು ನಿರ್ಧರಿಸಿದ.

ಉಷ್ಣತೆಯನ್ನು ಅಳೆಯಲು ಪ್ರಯತ್ನಿಸಿದ ಗೆಲಿಲಿಯೊ 1593 ರಲ್ಲಿ ಒಂದು ಉಷ್ಣತಾಮಾಪಕವನ್ನು ನಿರ್ಮಿಸಿದ. ಇವನು ನಿರ್ಮಿಸಿದ್ದು ಅನಿಲ ಉಷ್ಣತಾಮಾಪಕ; ಅನಿಲದ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳ ಆಧಾರದ ಮೇಲೆ ಅದರ ಉಷ್ಣತೆಯನ್ನು ಅಳೆಯುವುದು ಇದರಿಂದ ಸಾಧ್ಯವಾಯಿತು.

ಮೇಲಿನಿಂದ ಬೀಳುವ ಕಾಯಗಳು ಹೇಗೆ ವರ್ತಿಸುವುವೆಂಬುದನ್ನು ಗೆಲಿಲಿಯೊ ಅಧ್ಯಯನ ಮಾಡತೊಡಗಿದ. ಬೇರೆಬೇರೆ ತೂಕವಿರುವ ಎರಡು ಕಾಯಗಳನ್ನು ಮೇಲಿನಿಂದ ಬಿಟ್ಟರೆ ಹೆಚ್ಚು ತೂಕವಿರುವ ವಸ್ತು ಹೆಚ್ಚು ವೇಗದಿಂದ ಚಲಿಸಿ

ಇನ್ನೊಂದಕ್ಕಿಂತ ಮುಂಚಿತವಾಗಿ ಬೀಳುವುದೆಂದು ಅರಿಸ್ಟಾಟಲ್ ಬೋಧಿಸಿದ್ದ. ಅವನು ಮಡಿದು 1800 ವರ್ಷಗಳಾಗಿದ್ದರೂ ಅವನ ಅಭಿಪ್ರಾಯ ಸರಿಯೇ ತಪ್ಪೇ ಎಂಬುದನ್ನು ಪ್ರಶ್ನಿಸುವ ಗೊಡವೆಗೆ ಯಾರೂ ಹೋಗಿರಲಿಲ್ಲ. ಎಲ್ಲರೂ ಅದು ನಿಜವೆಂದೇ ಭಾವಿಸಿದ್ದರು. ವಾಯು ಒಡ್ಡುವ ಅಡಚಣೆಯ ಕಾರಣ ಹಗುರವಾದ ಕಾಯಗಳ ವೇಗ ಕುಗ್ಗುವುದರಿಂದ ಈ ತಪ್ಪು ತೀರ್ಮಾನಕ್ಕೆ ದಾರಿಯಾಗಿದೆ ಎಂದು ಗೆಲಿಲಿಯೊ ಅಭಿಪ್ರಾಯಪಟ್ಟ. ನಿರ್ವಾತ ಪ್ರದೇಶದಲ್ಲಿ ಎಲ್ಲ ಕಾಯಗಳೂ ಒಂದೇ ವೇಗದಿಂದ ಭೂಮಿಗೆ ಬೀಳುವುದೆಂದು ಇವನು ವಿದ್ಯಾರ್ಥಿಗಳಿಗೆ ಬೋಧಿಸಿದ. ಅಷ್ಟೇ ಅಲ್ಲ, ವಾಯು ಒಡ್ಡುವ ಅಡಚಣೆಗೆ ಮಣಿಯದಷ್ಟು ತೂಕವಿರುವ ಎರಡು ಕಾಯಗಳನ್ನು ತೆಗೆದುಕೊಂಡದ್ದೇ ಆದರೆ, ಅವೆರಡರ ತೂಕಗಳಲ್ಲಿ ವ್ಯತ್ಯಾಸವಿದ್ದರೂ ಅವು ಒಂದೇ ವೇಗದಿಂದ ಭೂಮಿಗೆ ಬೀಳುವುವೆಂದು ಹೇಳಿದ. ಒಂದಕ್ಕಿಂತ ಇನ್ನೊಂದು ಹತ್ತರಷ್ಟು ಭಾರವಿರುವಂಥ ಎರಡು ಫಿರಂಗಿ ಗುಂಡುಗಳನ್ನು ಪೀಸಾದಲ್ಲಿರುವ ವಾಲುಗೋಪುರದ ಮೇಲಿನಿಂದ ಕೆಳಕ್ಕೆ ಬಿಟ್ಟು ತನ್ನ ಅಭಿಪ್ರಾಯವನ್ನು ಸಮರ್ಥಿಸಿದನೆಂದು ದಂತಕಥೆ.

ಕಾಯ ನೇರವಾಗಿ ಭೂಮಿಗೆ ಬೀಳುತ್ತಿರುವಾಗ ಅದರ ವೇಗ ಬಹಳವಾಗಿರುತ್ತದೆ. ಹೀಗಾಗಿ ಅದರ ಚಲನೆಯನ್ನು ವಿವರವಾಗಿ ಅಧ್ಯಯನ ಮಾಡಲು ನಿಷ್ಕೃಷ್ಟ ಕಾಲಮಾಪಕಗಳು ಬೇಕಾಗುತ್ತವೆ. ಅವು ಆಗ ಲಭ್ಯವಾಗಿರಲಿಲ್ಲವಾದ್ದರಿಂದ ಕಾಯದ ವೇಗವನ್ನು ತಗ್ಗಿಸುವುದಕ್ಕಾಗಿ ಗೆಲಿಲಿಯೊ ಇಳಿಜಾರು ಹಲಗೆಗಳನ್ನು ಬಳಸಿಕೊಂಡ. ಹಲಗೆಯನ್ನು ಕ್ಷಿತಿಜೀಯ ರೇಖೆಗೆ ಸ್ವಲ್ಪ ಮಾತ್ರ ಓರೆಯಾಗಿರುವಂತೆ ನಿಲ್ಲಿಸಿ, ಅದರ ಮೇಲೆ ಉರುಳುವ ಗುಂಡಿನ ವೇಗವನ್ನು ಸಾಕಷ್ಟು ಕಡಿಮೆ ಮಾಡುವುದು ಸಾಧ್ಯವಾಯಿತು. ಈ ವಿಧಾನವನ್ನು ಬಳಸಿಕೊಂಡು ಸಂಶೋಧನೆಗಳನ್ನು ಮುಂದುವರಿಸಿದ. ಭೂಮಿಯ ಗುರುತ್ವಬಲಕ್ಕೆ ಸತತವಾಗಿ ಒಳಗಾಗಿರುವ ಕಾಯದ ವೇಗ ಕ್ಲುಪ್ತ ದರದಲ್ಲಿ ಏರುವುದೆಂದೂ ಅದು ಚಲಿಸುವ ದೂರ ಕಾಲದ ವರ್ಗದ ಅನುಪಾತದಲ್ಲಿರುವುದೆಂದೂ ಒಂದು ಕಾಯದ ಮೇಲೆ ಪ್ರಯುಕ್ತವಾಗುತ್ತಿರುವ ಬಲವನ್ನು ನಿಲ್ಲಿಸಿಬಿಟ್ಟರೆ ಅಲ್ಲಿಂದ ಮುಂದೆ ಕಾಯ ಒಂದೇ ನೇರದಲ್ಲಿ ಸಮವೇಗದಿಂದ ಚಲಿಸುವುದೆಂದೂ ಇವನು ತೋರಿಸಿದ. ಕಾಯ ತನ್ನ ಚಲನೆಯಲ್ಲಿ ಮುಂದುವರಿಯುತ್ತಿರಲು ಬಲವನ್ನು ಸತತವಾಗಿ ಪ್ರಯುಕ್ತಿಸುತ್ತಿರುವುದು ಅಗತ್ಯವೆಂದು ಅದುವರೆಗೆ ಜನ ನಂಬಿದ್ದರು. ಅದು ತಪ್ಪು ಭಾವನೆ ಎಂಬುದನ್ನು ಗೆಲಿಲಿಯೊ ತೋರಿಸಿದಂತಾಯಿತು.

ಒಂದು ಕಾಯ ಏಕಕಾಲದಲ್ಲಿ ಎರಡು ಬೇರೆಬೇರೆ ಬಲಗಳಿಗೆ ಗುರಿಯಾದಾಗ, ಇಲ್ಲವೇ ಸಮವೇಗದಲ್ಲಿ ಚಲಿಸುತ್ತಿರುವ ಕಾಯದ ಮೇಲೆ ಬೇರೊಂದು ದಿಕ್ಕಿನಲ್ಲಿ ಬಲಪ್ರಯುಕ್ತವಾದಾಗ ಆ ಕಾಯ ಹೇಗೆ ವರ್ತಿಸುವುದೆಂಬುದನ್ನೂ ಗೆಲಿಲಿಯೊ ಪರಿಶೀಲಿಸಿದ. ಈ ಎಲ್ಲ ಅಧ್ಯಯನಗಳಿಗೂ ಇವನು ಗಣಿತವನ್ನು ಬಳಸಿದ. ಹೀಗಾಗಿ ಈತನನ್ನು ಗತಿವಿಜ್ಞಾನದ ಮೂಲಪುರುಷನೆಂದು  ಪರಿಗಣಿಸಲಾಗಿದೆ.

ಪಡೂವದಲ್ಲಿದ್ದಾಗ ಗೆಲಿಲಿಯೊ ವಿಖ್ಯಾತ ಖಗೋಳವಿಜ್ಞಾನಿ ಕೆಪ್ಲರ್‌ನೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದ. ಅದರ ಫಲವಾಗಿ ಈತನಿಗೆ ಕೊಪರ್ನಿಕಸ್ ಸಿದ್ಧಾಂತದಲ್ಲಿ ನಂಬಿಕೆ ಹುಟ್ಟಿತು. ಆದರೆ ಕೆಲವು ಕಾಲ ತನ್ನ ಅಭಿಪ್ರಾಯಗಳನ್ನು ಬಹಿರಂಗಪಡಿಸಲಿಲ್ಲ. ಆದರೆ 1609 ರಲ್ಲಿ ಒಂದು ಸುದ್ದಿ ಬಂದಿತು: ದೂರದಲ್ಲಿರುವ ವಸ್ತುಗಳು ಹತ್ತಿರದಲ್ಲಿ ಕಾಣಿಸುವಂತೆ ಒಂದು ಉಪಕರಣವನ್ನು ಹಾಲೆಂಡಿನಲ್ಲಿ ಯಾರೋ ಒಬ್ಬರು ತಯಾರಿಸಿದ್ದಾರೆಂಬುದೇ ಆ ಸುದ್ದಿ. ಆರು ತಿಂಗಳು ಕಳೆಯುವುದರೊಳಗೆ ಗೆಲಿಲಿಯೊ ತನ್ನದೇ ದೂರದರ್ಶಕವನ್ನು ತಯಾರಿಸಿಕೊಂಡ. ಕಾಲಕ್ರಮದಲ್ಲಿ ತನ್ನ ಉಪಕರಣವನ್ನು ಉತ್ತಮಪಡಿಸುತ್ತ ಮುಂದುವರಿದು ಹೆಚ್ಚುಹೆಚ್ಚು ಪ್ರಬಲವಾದ ಹಲವಾರು ದೂರದರ್ಶಕಗಳನ್ನು ತಯಾರಿಸಿದ. ಖಗೋಳೀಯ ವೀಕ್ಷಣೆಗಳಿಗೆ ಅದು ಒಳ್ಳೆಯ ಸಾಧನವಾಯಿತು.

ದೂರದರ್ಶಕದ ಸಹಾಯದಿಂದ ಗೆಲಿಲಿಯೊ ಆಕಾಶಕಾಯಗಳನ್ನು ಪರೀಕ್ಷಿಸಿ ಅನೇಕಾನೇಕ ಸ್ವಾರಸ್ಯಕರ ವಿಷಯಗಳನ್ನು ಪತ್ತೆಮಾಡಿದ. ಗುರುಗ್ರಹಕ್ಕೆ ಉಪಗ್ರಹಗಳಿರುವುದನ್ನೂ ಶುಕ್ರಗ್ರಹ ಚಂದ್ರಬಿಂಬದಂತೆ ನಿಶ್ಚಿತ ಅವಧಿಯಲ್ಲಿ ವೃದ್ಧಿಕ್ಷಯಗಳಿಗೆ ಒಳಗಾಗುವುದನ್ನೂ ಚಂದ್ರನ ಮೇಲ್ಮೈಯಲ್ಲಿ ಭೂಮಿಯ ಮೇಲಿರುವಂತೆ ಪರ್ವತ ಕಂದರಗಳಿರುವುದನ್ನೂ ಇವನು ಕಂಡುಹಿಡಿದು ಪ್ರಕಟಿಸಿದ. ಬರಿಯ ಕಣ್ಣಿಗೆ ಬಿಳಿಯ ಪಟ್ಟಿಯಂತೆ ಕಾಣಿಸುವ ಆಕಾಶಗಂಗೆ (ಮಿಲ್ಕಿ ವೇ) ನಿಜಕ್ಕೂ ಒತ್ತಾಗಿ ಸೇರಿಕೊಂಡಿರುವ ನಕ್ಷತ್ರಸಮೂಹವೆಂಬುದನ್ನು ತೋರಿಸಿಕೊಟ್ಟ. ತೇಜಸ್ಸಿನಿಂದ ಕಣ್ಣುಕೋರೈಸುವ ಸೂರ್ಯಬಿಂಬದ ಮೇಲೆ ಕಪ್ಪು ಕಲೆಗಳಿರುವುದನ್ನೂ ಅವು ಕಾಲಕಾಲಕ್ಕೆ ತಮ್ಮ ಸ್ಥಾನಗಳನ್ನು ಬದಲಾಯಿಸುವುದನ್ನೂ ಗುರುತಿಸಿ ಸೂರ್ಯಗೋಳ ತನ್ನ ಅಕ್ಷದ ಸುತ್ತ ಆವರ್ತಿಸುತ್ತಿರುವುದೆಂಬುದನ್ನು ಪತ್ತೆಮಾಡಿದ. ಈ ಎಲ್ಲ ಆವಿಷ್ಕಾರಗಳೂ ಕೊಪರ್ನಿಕಸ್‌ನ ಸಿದ್ಧಾಂತವನ್ನು ಪುಷ್ಟೀಕರಿಸಿದುವು. (ಜಿ.ಆರ್.ಎಲ್.;ಬಿ.ವಿ.ಎಸ್.)

**ಗೆಲ್ಡ್‌ನರ್, ಕಾರ್ಲ್ ಫ್ರೀಡ್ರಿಕ್ :** 1852–1929. ಜರ್ಮನ್ ಭಾಷಾತಜ್ಞ, ಋಗ್ವೇದವನ್ನು ಜರ್ಮನ್ ಭಾಷೆಗೆ ಅನುವಾದ ಮಾಡಿ ಅದರ ಸರಳ ಅರ್ಥವಿವರಣೆಗೆ ಹೆಸರಾದ ವಿದ್ವಾಂಸ. ಜರ್ಮನಿಯ ಮಾರ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕನಾಗಿದ್ದ. ಈತ ಪ್ರಸಿದ್ಧ ತತ್ತ್ವಜ್ಞಾನಿ ರೊತನ ಶಿಷ್ಯ. ಅಮೆರಿಕನ್ ಓರಿಯಂಟಲ್ ಸೊಸೈಟಿ, ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಸ್ ಮುಂತಾದ ಸಂಸ್ಥೆಗಳ ಸದಸ್ಯನಾಗಿ ಕೆಲಸ ಮಾಡಿದ. 1875ರಲ್ಲಿ ಅಡಾಲ್ಫ್ ಕೇಗಿಯ ಜೊತೆಗೂಡಿ ಋಗ್ವೇದದ 70 ಸೂಕ್ತಗಳನ್ನು ಭಾಷಾಂತರಿಸಿ ಪ್ರಕಟಿಸಿದ. ಅನಂತರ ಋಗ್ವೇದವನ್ನು ಸಂಪೂರ್ಣವಾಗಿ ಜರ್ಮನ್ ಭಾಷೆಗೆ ಅನುವಾದ ಮಾಡುವ ಕಾರ್ಯವನ್ನು ಕೈಗೊಂಡು, ಟಿಪ್ಪಣಿ ಸಹಿತ ಮೂರು ಭಾಗಗಳಲ್ಲಿ ಪ್ರಕಟಿಸಿದ. ರಿಚರ್ಡ್ ಪಿಶೆಲ್‌ನ ಸಹಾಯದಿಂದ ಪ್ರಕಟಿಸಿದ ವೇದಿಕ್ ಸ್ಟಡೀಸ್ ಎಂಬ ಗ್ರಂಥದಲ್ಲಿ ವೇದ ವಾಙ್ಮಯವನ್ನು ಕುರಿತ ಅನೇಕ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ ಪಾರ್ಸಿ ಜನಾಂಗದ ಧರ್ಮಗ್ರಂಥವಾದ ಅವೆಸ್ತವನ್ನು ಈತ ಪೂರ್ಣವಾಗಿ ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದಾನೆ (1889–1901). (ಬಿ.ಆರ್.ಎಂ.)

**ಗೆಸ್ಟಾಫ್ ಫ್ರೈಟಾಕ್ :** 1816–95. ಜರ್ಮನ್ ಕಾದಂಬರಿಕಾರ, ನಾಟಕಕಾರ ಮತ್ತು ವಿಮರ್ಶಕ, ಹುಟ್ಟಿದ್ದು ಸೈಲೀಶಿಯದ ಕ್ರೆಟ್ಸ್‌ಬರ್ಗ್‌ನಲ್ಲಿ ಈತ ಬ್ರೆಸ್ಲಾವ್ ಮತ್ತು ಬರ್ಲಿನ್ ಶಾಲೆ, ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಭಾಷಾಶಾಸ್ತ್ರದಲ್ಲಿ ವಿಶೇಷ ಅಧ್ಯಯನ ನಡೆಸಿ ಮಹಾಪ್ರಬಂಧ ಬರೆದು ಪದವೀಧರನಾದ. 1848ರಿಂದ 1861ರವರೆಗೆ ಮತ್ತು 1867–70ರ ವರೆಗೆ ಲೀಪಾಜಿಗ್ನಲ್ಲಿ ಗ್ರೆಂಟ್ಸ್‌ಬೊಟನ್ ವಾರಪತ್ರಿಕೆಯ ಸಹ ಸಂಪಾದಕನಾಗಿ ದುಡಿದ. 1841ರಲ್ಲಿ ಆರಂಭವಾದ ಈ ಪತ್ರಿಕೆ ಜರ್ಮನಿ ಮತ್ತು



ಆಸ್ಟ್ರಿಯಾಗಳ ಉದಾರವಾದದ ಮುಖವಾಣಿ ಆಯಿತು. ಜರ್ಮನ್ ಉದಾರವಾದಿ ಪಕ್ಷದ ಮತ್ತು ಮಧ್ಯಮವರ್ಗದ ನಾಯಕನಾಗಿದ್ದ ಈತ ಜರ್ಮನ್ ಭಾಷೆಯ ಮತ್ತು ಸಾಹಿತ್ಯದ ಖಾಸಗಿ ಶಿಕ್ಷಕನಾಗಿ ಬ್ರೆಸ್ಲಾವ್‌ನಲ್ಲಿ ನೆಲಸಿದ. 1879ರಲ್ಲಿ ವೀಸ್ ಬೇಡೆನ್ಗೆ ಹೋಗಿ ವಾಸಿಸತೊಡಗಿದ.

ಡೈ ಬ್ರಾಂಟ್ ಫಾಟ (1844), ಡೈಜರ್ನಲಿಸ್ಟೆನ್ (1854) ಎಂಬ ಎರಡು ಹರ್ಷನಾಟಕಗಳನ್ನು ಬರೆದ. ಜರ್ನಲಿಸ್ಟೆನ್ (ದಿ ಜರ್ನಲಿಸ್ಟ್) 19ನೆಯ ಶತಕದ ಶ್ರೇಷ್ಠ ಪ್ರಹಸನಗಳಲ್ಲಿ ಒಂದು ಎಂದು ಪರಿಗಣಿಸಲಾಯಿತು. ಸ್ವಾನುಭವವೇ ಇದರ ವಸ್ತು. 1855ರಲ್ಲಿ ಜರ್ಮನಿಯ ವರ್ತಕ ಜೀವನವನ್ನು ಚಿತ್ರಿಸುವ ಜೋಲ್ ಊಂಟ್ ಹಾಬಿನ್ ಎಂಬ ವಸ್ತುನಿಷ್ಠಪ್ರಧಾನ ಕಾದಂಬರಿಯನ್ನು ಪ್ರಕಟಿಸಿ ವಿಶ್ವವಿಖ್ಯಾತನಾದ. ಎಲ್ಲ ಐರೋಪ್ಯ ಭಾಷೆಗಳಿಗೂ ಅದು ಅನುವಾದವಾಗಿದೆ. ಸಾಮಾಜಿಕ, ರಾಜಕೀಯ ಕ್ಷೋಭೆಯ ಹಿನ್ನೆಲೆಯಲ್ಲಿ ಜರ್ಮನಿಯ ವ್ಯಾಪಾರಸ್ಥರ ಜೀವನದ ತದ್ವತ್ ಚಿತ್ರ ಇಲ್ಲಿದೆ. ಜೊತೆಗೆ ಡಿಕನ್ಸ್‌ನನ್ನು ನೆನಪಿಗೆ ತರುವ ಲವಲವಿಕೆಯ ಹಾಸ್ಯಸಿಂಚನ. ಈ ಹಲವಾರು ಗುಣಗಳಿಂದ ಇದು ಆ ಕಾಲದ ಶ್ರೇಷ್ಠ ಕಾದಂಬರಿ ಎನಿಸಿತು.

ಗ್ರೆಂಟ್ಸ್ ಬೋಟೆನ್ ಪತ್ರಿಕೆಯಲ್ಲಿ ಪ್ರಷ್ಯದ ಅಧಿನಾಯಕತ್ವದ ಪರವಾಗಿ ವಾದಿಸಿದ. ಇದರಿಂದ ಗೋಥಾದ ಡ್ಯೂಕ್ ಸ್ಯಾಕ್ಸ್ ಕೋಬಗನ ಸ್ನೇಹ ಲಭಿಸಿತು. ಗೋಥಾದ ಪಕ್ಕದ ಎಸ್ಟೇಟನ್ನೇ ಕೊಂಡು ಅಲ್ಲಿ ನೆಲೆಸಿದ. 1870ರ ಯುದ್ಧ ಮತ್ತು ಚಳವಳಿಗಳಲ್ಲಿ ಭಾಗವಹಿಸಿದ. 1864ರಲ್ಲಿ ಡೀ ಫರ್ಲೊರೇನ್ ಹ್ಯಾಂಡ್ ಶ್ರಿಫ್ಟ್ ಎಂಬ ಕಾದಂಬರಿ ರಚಿಸಿದ. ಈ ಕೃತಿಯಲ್ಲಿ ಲೀಪಾಜಿಗ್ನ ಸಮಾಜವನ್ನೂ ಜರ್ಮನ್ ವಿಶ್ವವಿದ್ಯಾಲಯದ ಜೀವನವನ್ನೂ ಚಿತ್ರಿಸಿದ. ಡೈ ಆನೆನ್ ಎಂಬ ಆರು ಐತಿಹಾಸಿಕ ಕಾದಂಬರಿಗಳ ಸರಣಿ ಈತನ ಮತ್ತೊಂದು ಕೊಡುಗೆ. 4ನೆಯ ಶತಮಾನದ ಜರ್ಮನ್ ಇತಿಹಾಸದ ಆರಂಭಕಾಲದಿಂದ 19ನೆಯ ಶತಮಾನದ ವರೆಗಿನ ಜರ್ಮನ್ ಕುಟುಂಬವೊಂದರ ರಮ್ಯ ಕಥಾನಕ. ಜರ್ಮನಿಯ ಐತಿಹಾಸಿಕ ಸಂಗತಿಗಳು, ಕಾಲಕಾಲದ ಸಾಮಾಜಿಕ ಜೀವನ ಎಲ್ಲ ತೆರೆದುಕೊಳ್ಳುತ್ತ ಸ್ವಾರಸ್ಯವಾಗಿ ಕಥೆ ಓದಿಸಿಕೊಳ್ಳುತ್ತದೆ. ಉದ್ದಕ್ಕೂ ರಾಷ್ಟ್ರಾಭಿಮಾನ ದೇಶಭಕ್ತಿ ತುಂಬಿ ತುಳುಕುತ್ತವೆ.

ಬಿಲ್ಡರ್ ಔಸ್ ಡೆರ್ ಡಾಯಿಟ್ಷೆನ್ ಫರ್ಗಾಂಗೆನ್‌ಹೈಟ್ (1872) ಜನಪ್ರಿಯತೆಯನ್ನು ಗಳಿಸಿದ ಜರ್ಮನ್ ಇತಿಹಾಸ ಗ್ರಂಥ. ಗ್ರೀನ್ ಸಂಕ್ಷಿಪ್ತ ಇಂಗ್ಲಿಷ್ ಇತಿಹಾಸ ಎಂಬ ಗ್ರಂಥದಷ್ಟೇ ಶ್ರೇಷ್ಠ ಮತ್ತು ಮಹೋನ್ನತ ಕೃತಿ. ಇದರದು ಮಾದರಿ ಶೈಲಿ. 1887ರಲ್ಲಿ ಕಾಲಮ್ಯಾಥಿ ಎಂಬ ಕಾವ್ಯನಾಮದಲ್ಲಿ ಎರಿನ್ನೆರುಂಗೆನ್ ಔಸ್ ಮೇನಿಮ್ ಲೀಬೆನ್ ಎಂಬ ಶಿರೋನಾಮೆಯಲ್ಲಿ ಆತ್ಮಕತೆ ಬರೆದ.

ಈತ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯತತ್ತ್ವಗಳ ಸಮನ್ವಯವನ್ನು ಸಾಧಿಸಿದ. ಸಮಕಾಲೀನರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ. ಈತನ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳಲ್ಲಿ ಡಿಕನ್ಸ್ ಮತ್ತು ಸ್ಕಾಟ್‌ರ ಪ್ರಭಾವವಿರುವುದನ್ನು ಗುರುತಿಸಬಹುದು.


ಓಡರ್ ಕುಂಟ್ಸ್ 'ಫಾನ್ ಡೆರ್ ರೊಸೆನ್ (1884) ಎಂಬುದು ಈತನ ಯಶಸ್ವಿ ಪ್ರಹಸನ.

ಗೆಸಾಮ್ಮೆಲ್ಟೆ ಔಫ್ ಸೆಟ್ಸ್‌ಗ್ರೆಂಟ್ಸ್ ಬೋಟನ್ (1888), ಡೆರ್ ಕ್ರೋನ್ ಪ್ರಿನ್ಸ್ ಊಚಿಟ್ ಡೀ ಡಾಯಿಟ್ಷೆ ಕೈಸೆರ್ ಕ್ರೋನ್, ಎರಿನ್ನೆರೊಂಗ್ಸ್ ಬ್ಲಾಟೆರ್ (1889) – ಇವು ಈತನ ಇತರ ಕೃತಿಗಳು. (ಕೆ.ವಿ.ಸಿ.)

**ಗೆಸ್ಟಾಲ್ಟ್ ಮನೋವಿಜ್ಞಾನ :** ಜರ್ಮನಿಯಲ್ಲಿ ಹುಟ್ಟಿ ಬೆಳೆದ ಒಂದು ಮನೋವೈಜ್ಞಾನಿಕ ಪಂಥ. ಜರ್ಮನ್ ಭಾಷೆಯ ಗೆಸ್ಟಾಲ್ಟ್ ಶಬ್ದಕ್ಕೆ ಸಮಾನಾರ್ಥಕ ಇಂಗ್ಲಿಷ್ ಪದ ಇಲ್ಲವೆನ್ನಲಾಗಿದೆ. ಹಾಗಾದರೂ ಈ ಶಬ್ದ ರೂಪ (ಫಾರಂ), ಆಕಾರ (ಷೇಪ್), ಸಂಘಟನೆ (ಆರ್ಗನೈಜೇಷನ್) ಮತ್ತು ವಿನ್ಯಾಸ (ಕಾನ್‌ಫಿಗರೇಷನ್)– ಇವುಗಳಲ್ಲಿ ಅಡಕವಾಗಿರುವ ಅರ್ಥವನ್ನು ಸೂಚಿಸುತ್ತದೆ ಎನ್ನಬಹುದು.

ಗೆಸ್ಟಾಲ್ಟ್ ಮನೋವಿಜ್ಞಾನದ ಹಿನ್ನೆಲೆ ಹೀಗಿದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಸುಮಾರಿಗೆ ಮನೋವಿಜ್ಞಾನದ ಮೊದಲ ಪ್ರಯೋಗಶಾಲೆ ಜರ್ಮನಿಯಲ್ಲಿ ಸ್ಥಾಪಿತವಾಯಿತು. ಅದರ ಸ್ಥಾಪಕ ವೂಂಟ್ ಸ್ವರೂಪಾತ್ಮಕವಾದ (ಸ್ಟ್ರಕ್ಚರಲಿಸಂ) ಎಂದು ಕರೆಯಲಾಗುವ ಮನೋವೈಜ್ಞಾನಿಕ ಪಂಥವೊಂದನ್ನು ಬೆಳೆಸಿದ. ವೂಂಟ್ ಮತ್ತು ಇವನ ಅನುಯಾಯಿಗಳು ಅನುಭವವನ್ನು ತುಂಡು ತುಂಡಾಗಿರಿಸಿ, ಘಟಕಾಂಶಗಳಾಗಿ ವಿಭಜಿಸಿ, ವಿಶ್ಲೇಷಣೆ ನಡೆಸುವಲ್ಲಿ ನಿರತರಾಗಿದ್ದರು. ಸ್ವರೂಪಾತ್ಮಕ ವಾದಕ್ಕೆ ಹಲವು ಮೂಲಗಳಿಂದ, ಪ್ರಮುಖವಾಗಿ ಅಮೆರಿಕದ ವರ್ತನವಾದಿಗಳಿಂದ ವಿರೋಧ ತೋರಿಬಂತು. ಗೆಸ್ಟಾಲ್ಟ್ ಮನೋವಿಜ್ಞಾನ ಮೊದಲಿಗೆ ಅಮೆರಿಕದ ವರ್ತನವಾದಕ್ಕೆ ಸಮಕಾಲಿಕವಾಗಿ ವೂಂಟನ ಸ್ವರೂಪಾತ್ಮಕ ವಾದಕ್ಕೆ ಪ್ರತಿಯಾಗಿ ಪ್ರಾರಂಭವಾದರೂ ಅನಂತರ ವರ್ತನವಾದವನ್ನು ಸಹ ಧಿಕ್ಕರಿಸಿತು. ಗೆಸ್ಟಾಲ್ಟ್ ಮನೋವಿಜ್ಞಾನಿಗಳು ಮೂಲತಃ ವಿಶ್ಲೇಷಣೆಯ ವಿರೋಧಿಗಳು. ಅನುಭವವನ್ನು ಸಂವೇದನೆಯ ಘಟಕಾಂಶಗಳಾಗಿ ವಿಶ್ಲೇಷಿಸುವ ವೂಂಟ್ ಮತ್ತು ಇವನ ಅನುಯಾಯಿಗಳ ವಿಧಾನವನ್ನು ಅವರು ಇಟ್ಟಿಗೆ ಮತ್ತು ಗಾರೆಯ ಮನೋವಿಜ್ಞಾನ ಎಂದು ಟೀಕಿಸಿದರು. ಇಲ್ಲಿ ಸಂವೇದನೆಯ ಘಟಕಾಂಶಗಳೇ ಇಟ್ಟಿಗೆಗಳು: ಅವನ್ನು ಒಂದಾಗಿ ಹಿಡಿದಿಡುವ ಗಾರೆಯೆಂದರೆ ಸಾಹಚರ್ಯ ಪ್ರಕ್ರಿಯೆ.

ಗೆಸ್ಟಾಲ್ಟ್ ನಿಯಮ: ಗೆಸ್ಟಾಲ್ಟ್ ವಾದಿಗಳ ಪ್ರಕಾರ ಅನುಭವಗಳನ್ನು ಘಟಕಾಂಶಗಳಾಗಿ ವಿಶ್ಲೇಷಿಸುವ ವಿಧಾನ ಅನುಭವದ ವಾಸ್ತವಿಕತೆಗೆ ಅಪಚಾರವನ್ನೆಸಗುತ್ತದೆ. ವಿಶ್ಲೇಷಣೆ ಎಷ್ಟೇ ಆಮೂಲಾಗ್ರವಾಗಿರಲಿ, ಅದು ಸಮಗ್ರದ (ಪೂರ್ಣ) ಅರಿವನ್ನು ಒದಗಿಸಿಕೊಡಲು ಅಸಮರ್ಥವಾಗುತ್ತದೆ. ಪೂರ್ಣದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಅದನ್ನು ಸ್ವ್ಂಗ್ರವಾಗಿಂ೨ೀ ಪರಿಗಣಿಸಬೇಕು. ಪೂರ್ಣ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತದೆ. ಯಾವುದೇ ಭಾಗದ ಸ್ಥಾನ, ಪಾತ್ರ ಅಥವಾ ಕ್ರಿಯೆ ಪೂರ್ಣದ ಸ್ವರೂಪವನ್ನೇ ಅವಲಂಬಿಸುತ್ತದೆ. ಭಾಗಗಳನ್ನು ಬಿಡಿಬಿಡಿಯಾಗಿ ವಿಶ್ಲೇಷಿಸುವ ಮೂಲಕ ಪೂರ್ಣದ ಸ್ವರೂಪವನ್ನು ಗುರುತಿಸುವುದು ಅಸಾಧ್ಯ. ಸಾರಾಂಶರೂಪದಲ್ಲಿ ಹೇಳಬೇಕೆಂದರೆ ಪೂರ್ಣದ ಲಕ್ಷಣಗಳು ಅದರ ಯಾವುದೇ ಭಾಗದಲ್ಲಿ ಅಡಕವಾಗಿರುವುದಿಲ್ಲ: ಆದರೆ ಭಾಗಗಳು ಪೂರ್ಣದಲ್ಲಿ ಸಂಯೋಜಿತವಾದಾಗ ಪೂರ್ಣದ ಲಕ್ಷಣಗಳು ಹೊರಹೊಮ್ಮುತ್ತವೆ. ಪೂರ್ಣ ಅದರ ಭಾಗಗಳ ಮೊತ್ತಕ್ಕಿಂತ ಮಿಗಿಲಾಗಿರುತ್ತದೆ. ಹೀಗೆನ್ನುವುದು ಗೆಸ್ಟಾಲ್ಟ್ ನಿಯಮದ ತಿರುಳು. ಎಂದರೆ ಗೆಸ್ಟಾಲ್ಟ್ ಮನೋವಿಜ್ಞಾನ ಸಮಗ್ರತೆ ಅಥವಾ ಪೂರ್ಣತೆಗೆ (ಹೋಲ್ಸ್) ಸಂಬಂಧಿಸಿದ್ದಾಗಿದೆ.



ಚಿತ್ರ 1

ಭಾಗಗಳು ತಾವು ಪೂರ್ಣದಲ್ಲಿ ಪಡೆದುಕೊಂಡಿರುವ ಸ್ಥಾನ, ಪಾತ್ರ ಅಥವಾ ಕ್ರಿಯೆಗಳಿಂದ ಬೇರೆಯಾಗಿರುವ ತಮ್ಮದೇ ಆದ ಸ್ವಂತಿಕೆಯನ್ನು (ಐಡೆಂಟಿಟಿ) ಹೊಂದಿಲ್ಲ. ಎಂದರೆ ಅವು ತಮ್ಮ ಸ್ವರೂಪವನ್ನು ಪೂರ್ಣದಿಂದಲೇ ಪಡೆದುಕೊಳ್ಳುತ್ತವೆ. ಈ ಅಂಶವನ್ನು ವಿಶದಗೊಳಿಸಲು ಒಂದು ಸರಳವಾದ ನಿದರ್ಶನವನ್ನು ಕೊಡಬಹುದು. ಚಿತ್ರ 1 ರಲ್ಲಿ ಪ್ರತಿಯೊಂದು ಚೌಕವೂ ಒಂದೊಂದು ವೃತ್ತವನ್ನು ಒಳಗೊಂಡಿದೆ. ಆ ವೃತ್ತಗಳು ವಾಸ್ತವವಾಗಿ ಒಂದೇ ಬಗೆಯ ಬೂದುಬಣ್ಣವನ್ನು ಹೊಂದಿವೆ. ಆದರೂ ಬಲಗಡೆಯ ವೃತ್ತದ ಬೂದುಬಣ್ಣ ಹೆಚ್ಚು ಮಸುಕಾಗಿ ತೋರಿಬರುತ್ತದೆ. ಅದಕ್ಕೆ ಕಾರಣ ಅಂಶಗಳ ಮೇಲೆ ಪೂರ್ಣ ಬೀರುವ ಪ್ರಭಾವವೇ ಆಗಿದೆ.

ಪೂರ್ವಭಾವೀ ಪ್ರಭಾವಗಳು : ಕ್ರಿಶ್ಚನ್ ಎರ್‍ನ್‌ಫೆಲ್ಸ್ ಎಂಬಾತ ಗೆಸ್ಟಾಲ್ಟ್ ಭಾವವನ್ನು 1890ರ ಸುಮಾರಿಗೆ ಪರಿಚಯ ಮಾಡಿಕೊಟ್ಟ. ಯಾವುದೇ ಒಂದು ರಾಗವನ್ನು ಬೇರೆ ಬೇರೆ ಸ್ವರಗಳಿಂದ ನುಡಿಸಬಹುದು ಮತ್ತು ಏಕಪ್ರಕಾರವಾದ ಸ್ವರಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸಿ ಬೇರೆ ಬೇರೆ ರಾಗಗಳನ್ನು ಪಡೆಯಬಹುದು.

ಅಂತೆಯೇ ಏಕಪ್ರಕಾರವಾಗಿರುವ ತುಂಡುಗಳನ್ನು ಬಗೆಬಗೆಯಾಗಿ ಜೋಡಿಸಿ ವಿವಿಧ ರಚನೆಗಳನ್ನು ಸೃಷ್ಟಿಸಬಹುದು. ಸ್ವರಗಳು ಮತ್ತು ತುಂಡುಗಳು ಪ್ರತ್ಯಕ್ಷಾನುಭವದಲ್ಲಿ ದತ್ತವಾಗಿರುವ ಅಂಶಗಳು. ಆದರೆ ಆಕಾರ ಮತ್ತು ರಚನೆಗಳು ಗ್ರಾಹಕನ ಮನಸ್ಸಿನಲ್ಲಿ ರೂಪಗೊಂಡು ಹೊರಹೊಮ್ಮುತ್ತವೆ. ಇದು ಎರ್‍ನ್‌ಫೆಲ್ಸ್‌ನ ನಂಬುಗೆಯಾಗಿತ್ತು. ಈ ಬಗೆಯ ತೀರ್ಮಾನಕ್ಕೆ ಬರಲು ಇವನು ಕ್ಯಾಂಟ್‌ನಿಂದ ಪ್ರಭಾವಿತನಾಗಿದ್ದಿರಬೇಕು. ಕ್ಯಾಂಟ್ ವಾದದ ಧಾಟಿ ಹೆಚ್ಚು ಕಡಿಮೆ ಹೀಗಿದೆ: ನಾವು ವಸ್ತುಗಳ ಪ್ರತ್ಯಕ್ಷಾನುಭವ ಪಡೆದಾಗ ನಮ್ಮ ಮನಃಸ್ಥಿತಿಗಳೂ ಸಂವೇದನೆಯ ಘಟಕಾಂಶಗಳಿಂದ ರಚಿತವಾಗಿರುವಂತೆ ಕಾಣಬರುತ್ತದೆ. ಹಾಗಾದರೂ ಈ ಘಟಕಾಂಶಗಳು ಅರ್ಥವತ್ತಾಗಿ ಸಂಘಟಿತವಾಗಿವೆ. ಗ್ರಹಿಕೆಯ ಕಾರ್ಯಗತಿಯಲ್ಲಿ ಮನಸ್ಸು ಒಂದು ಏಕಾತ್ಮಕ (ಯೂನಿಟರಿ) ಅನುಭವವನ್ನು ರೂಪಿಸುತ್ತದೆ: ಅರ್ಥವತ್ತಾದ ಸನ್ನಿವೇಶದಲ್ಲಿ ವಸ್ತುವನ್ನು ಕಾಣುತ್ತದೆ. ಪ್ರತ್ಯಕ್ಷಾನುಭವ ಮನಸ್ಸಿನ ಮೇಲೆ ನಾಟುವ ಸಂವೇದನಾ ಘಟಕಾಂಶಗಳ ಸಂಯೋಜನೆ ಅಥವಾ ನಿಷ್ಕ್ರಿಯ ಮುದ್ರೆಯಾಗಿರದೆ, ಈ ಘಟಕಾಂಶಗಳನ್ನು ಏಕಾತ್ಮಕವಾದ ಹಾಗೂ ಸುಸಂಗತವಾದ ಅನುಭವಗಳನ್ನಾಗಿ ಮಾರ್ಪಡಿಸುವ ಪರಿಣಾಮಕಾರಿ ಸಂಘಟನೆಯಾಗಿದೆ. ಮನಸ್ಸು ಗ್ರಹಿಕೆಯ ಮೂಲವಸ್ತುವಿಗೆ ರೂಪವನ್ನೂ ವ್ಯವಸ್ಥೆಯನ್ನೂ ಕೊಡುತ್ತದೆ.

ಗೆಸ್ಟಾಲ್ಟ್ ಮನೋವಿಜ್ಞಾನದ ಆರಂಭ ಮತ್ತು ಪೈ ವಿದ್ಯಮಾನ (ಫಿನಾಮೆನನ್) : ಚಲನೆಯ ಪ್ರತ್ಯಕ್ಷಾನುಭವವನ್ನು ಕುರಿತು ಮ್ಯಾಕ್ಸ್‌ವರ್ದ್ಹಿಮೀರನ ಪ್ರಾಯೋಗಿಕ ಅಧ್ಯಯನಗಳು (1912) ಗೆಸ್ಟಾಲ್ಟ್ ಮನೋವಿಜ್ಞಾನದ ಪ್ರಾರಂಭವನ್ನು ಗುರುತಿಸುತ್ತವೆ. ಈ ಪ್ರಯೋಗಗಳಲ್ಲಿ ಕರ್ಟ್, ಕಾಫ್ಕಾ ಮತ್ತು ವುಲ್ಫ್‌ಗ್ಯಾಂಗ್ ಕೋಯ್ಲರರು ವರ್ದ್ಹಿಮೀರನಿಗೆ ಸಹಾಯಕರಾಗಿದ್ದರು. ವಾಸ್ತವವಾಗಿ ಗೆಸ್ಟಾಲ್ಟ್ ಮನೋವಿಜ್ಞಾನದ ಆರಂಭ ಮತ್ತು ಬೆಳವಣಿಗೆ ಈ ಮೂರು ಹೆಸರುಗಳೊಂದಿಗೆ ಅನ್ಯೋನ್ಯವಾಗಿ ಹೊಂದಿಕೊಂಡುಬಿಟ್ಟಿದೆ.

ಚಲನೆಯ ಪ್ರತ್ಯಕ್ಷಾನುಭವವನ್ನು ಕುರಿತ ಈ ಪ್ರಯೋಗದಲ್ಲಿ ಎರಡು ಸೀಳುಗಂಡಿ ಗಳನ್ನು (ಸ್ಲಿಟ್ಸ್) ಬಳಸುತ್ತಾರೆ. ಒಂದು ಸೀಳುಗಂಡಿ ಲಂಬವಾಗಿಯೂ ಇನ್ನೊಂದು ಅದರಿಂದ 20 ಅಥವಾ 30 ಡಿಗ್ರಿಗಳಷ್ಟು ವಾಲಿಕೊಂಡಿರುವಂತೆಯೂ ಇರುತ್ತವೆ. ಬೆಳಕನ್ನು ಮೊದಲು ಒಂದು ಕಂಡಿಯ ಮೂಲಕ, ಅನಂತರ ಇನ್ನೊಂದು ಕಂಡಿಯ ಮೂಲಕ ಹರಿಯಬಿಟ್ಟರೆ, ಮತ್ತು ಈ ಎರಡು ಪ್ರಸಾರಗಳ ನಡುವಣ ಕಾಲಾವಧಿ ಸಾಕಷ್ಟು ದೀರ್ಘವಾಗಿದ್ದರೆ, ಅನುಕ್ರಮವಾಗಿ ಒಂದರ ಮೇಲೊಂದರಂತೆ ಎರಡು ಬೆಳಕನ್ನೂ ಕಾಣಬಹುದು. ಬದಲಾಗಿ ಎರಡು ಪ್ರಸಾರಗಳ ನಡುವಣ ಕಾಲಾವಧಿ ಅತ್ಯಲ್ಪವಾದಾಗ ಎರಡು ಬೆಳಕನ್ನೂ ಅವಿಚ್ಛಿನ್ನವಾಗಿ ಕಾಣಬಹುದು. ಆದರೆ ಎರಡು ಪ್ರಸಾರಗಳ ನಡುವಿನ ಕಾಲದ ಅಂತರ ಸುಮಾರು 60 ಮಿಲಿ ಸೆಕೆಂಡುಗಳಾಗಿದ್ದರೆ ಒಂದೇ ಬೆಳಕು ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ ಚಲಿಸುವ ಅನುಭವ ಉಂಟಾಗುತ್ತದೆ. ಈ ಪ್ರಯೋಗದಿಂದ ಖಚಿತವಾಗಿ ತಿಳಿದುಬರುವ ಅಂಶ ಇಷ್ಟು. ಒಂದಕ್ಕೊಂದು ಸಮೀಪದಲ್ಲಿರುವ ಎರಡು ಪ್ರತ್ಯೇಕವಾದ ಮತ್ತು ಸ್ಥಾಯಿಯಾಗಿರುವ ಸಾಲುಗಳನ್ನು ಒಂದಾದ ಮೇಲೊಂದರಂತೆ ಬೇಗಬೇಗನೆ ಪ್ರದರ್ಶಿಸಿದರೆ ಒಂದೇ ಸಾಲು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಚಲಿಸುತ್ತಿರುವಂತೆ ಗ್ರಾಹಕ ಅವನ್ನು ಗ್ರಹಿಸುತ್ತಾನೆ. ಈ ತೋರಿಕೆಯ ಚಲನೆಯನ್ನು ಪೈ ವಿದ್ಯಮಾನ ಎಂದು ವರ್ದ್ಹಿಮೀರ್ ಹೆಸರಿಸಿದ್ದಾನೆ.

ವರ್ದ್ಹಿಮೀರನ ಪ್ರಕಾರ ಚಲನೆಯ ಪ್ರತ್ಯಕ್ಷಾನುಭವಕ್ಕೆ ಕಾರಣವಾಗಿರುವ ಅಂಶ ಗೆಸ್ಟಾಲ್ಟ್, ಬೇರೆ ಬೇರೆ ಘಟಕಾಂಶಗಳು ಒಂದುಗೂಡಿ ಪೂರ್ಣದಲ್ಲಿ ಅವತರಿಸುವಿಕೆ. ಪೈ ವಿದ್ಯಮಾನ ಎಂದು ಕರೆಯಲಾಗುವ ಈ ಘಟನೆಯನ್ನು ಬೇರೆ ಬೇರೆ ಪ್ರಚೋದನೆಗಳ ಮೊತ್ತದಿಂದ ಪಡೆಯಲಾಗದು. ಸ್ವರೂಪಾತ್ಮಕವಾದಿಗಳಿಗೆ ಈ ಘಟನೆಯನ್ನು ವಿವರಿಸುವುದು ಸುಲಭ

ಸಾಧ್ಯವಲ್ಲ. ಏಕೆಂದರೆ ಒಂದು ಸ್ಥಾಯಿಯಾಗಿರುವ ಪ್ರಚೋದನೆಯನ್ನು ಇನ್ನೊಂದು ಸ್ಥಾಯಿಯಾಗಿರುವ ಪ್ರಚೋದನೆಗೆ ಸೇರಿಸಿ, ಅವುಗಳ ಸಂಕಲನದಿಂದ ಚಲನೆಯ ಅನುಭವವನ್ನು ಪಡೆಯಲಾಗದು.

ಗೆಸ್ಟಾಲ್ಟ್ ಮನೋವಿಜ್ಞಾನದ ಮೂಲಾಧಾರ ವರ್ದಿಮೀರನ ಪ್ರಯೋಗ ಮತ್ತು ಅದಕ್ಕೆ ಈತ ಕೊಟ್ಟ ವಿವರಣೆ. ಪೈ ವಿದ್ಯಮಾನ ಒಂದು ವಾಸ್ತವ ಘಟನೆ: ಅದನ್ನು ಘಟಕಾಂಶಗಳಾಗಿ ವಿಭಜಿಸುವುದು ಅಸಾಧ್ಯ. ಹಾಗೊಮ್ಮೆ ವಿಶ್ಲೇಷಿಸಹೊರಟರೆ ಘಟನೆ ತನ್ನ ವಾಸ್ತವಾಂಶಗಳನ್ನು ಕಳೆದುಕೊಳ್ಳುತ್ತದೆ. ಎಂದರೆ ನಾವು ಏನನ್ನು ಗ್ರಹಿಸುತ್ತೇವೆಯೋ ಅದನ್ನು ನಿರ್ಧರಿಸುವಲ್ಲಿ ಆದ್ಯಂತ ಸನ್ನಿವೇಶಗಳೇ ಪರಿಗಣನೆಗೆ ಬರುತ್ತವೆ. ಈ ವಿಚಾರ ಗೆಸ್ಟಾಲ್ಟ್ ವಾದಿಗಳು ಪ್ರತಿಪಾದಿಸಿದ ಸಮಗ್ರ ಅಥವಾ ಪೂರ್ಣದ ಮಹತ್ತ್ವವನ್ನು ಸ್ಥಿರೀಕರಿಸುತ್ತದೆ.

ಹೊರನೋಟಕ್ಕೆ ಗೆಸ್ಟಾಲ್ಟ್ ಮನೋವಿಜ್ಞಾನದ ಮೂಲತತ್ತ್ವ ಸರಳವಾಗಿ ತೋರಿಬಂದರೂ ಅದು ಮನೋವೈಜ್ಞಾನಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ರಚನೆಗಳು ಪ್ರತ್ಯೇಕಾನುಭವದ ಮೂಲಾಂಶಗಳು ಎನ್ನುವ ವರ್ದಿಮೀರನ ಅಭಿಪ್ರಾಯ ಅಂಗೀಕೃತ ಅಭಿಪ್ರಾಯಗಳಿಗೆ ವಿರೋಧವಾಗಿತ್ತು. ಶಾಸ್ತ್ರೀಯ ಸಂಪ್ರದಾಯದ ಪ್ರಕಾರ ರಚನೆಗಳು ಘಟಕಾಂಶಗಳಾಗಿ ವಿಭಜಿಸಿ ವಿಶ್ಲೇಷಿಸಬಹುದಾದ ವಸ್ತುಗಳಾಗಿದ್ದವು. ಅನುಭವದ ಮೂಲಾಂಶಗಳು ಈ ಘಟಕಾಂಶಗಳೇ ಹೊರತು ರಚನೆಗಳಲ್ಲ ಎನ್ನುವುದು ವೂಂಟ್ ಮತ್ತು ಇವನ ಅನುಯಾಯಿಗಳ ವಾದವಾಗಿತ್ತು.

ಪ್ರತ್ಯಕ್ಷಾನುಭವ : ಚಲನೆಯ ಪ್ರತ್ಯಕ್ಷಾನುಭವದ ಮೇಲೆ ಪ್ರಯೋಗಗಳನ್ನು ನಡೆಸಿದ ಅನಂತರದಲ್ಲಿ ಗೆಸ್ಟಾಲ್ಟ್ ಮನೋವಿಜ್ಞಾನಿಗಳು ತಮ್ಮ ಪ್ರತಿಪಾದನೆಗಳನ್ನು ಸಮರ್ಥಿಸಲು ಇನ್ನಷ್ಟು ಪ್ರತ್ಯಕ್ಷಾನುಭವ ಸಂಗತಿಗಳನ್ನೇ ಆಯ್ದುಕೊಂಡರು. ಪ್ರತ್ಯಕ್ಷಾನುಭವಗಳಲ್ಲಿನ ಸ್ಥಿರತೆ (ಕಾನ್ಸ್ಟೆನ್ಸಿ) ಗೆಸ್ಟಾಲ್ಟ್‌ರ ಪ್ರತಿಪಾದನೆಗಳಿಗೆ ಯಥೇಷ್ಟ ಸಮರ್ಥನೆಯನ್ನು ಒದಗಿಸಿಕೊಡುತ್ತದೆ. ನಿದರ್ಶನಕ್ಕೆ ಗುಂಡಗಿರುವ ತಟ್ಟೆಯೊಂದನ್ನು ಅಕ್ಷಿಪಟದ ಮೇಲೆ ಅದರ ಪ್ರತಿಬಿಂಬ ಅಂಡವೃತ್ತಾಕೃತಿಯನ್ನು ಪಡೆಯುವ ರೀತಿಯಲ್ಲಿ ಹಿಡಿಯೋಣ. ಆಗಲೂ ನಾವು ತಟ್ಟೆಯನ್ನು ಗುಂಡಗಿರುವಂತೆಯೇ ಕಾಣುತ್ತೇವೆ. ಎಂದಮೇಲೆ ಸಂವೇದನಾಂಶಗಳು ಬದಲಾವಣೆ ಹೊಂದಿದರೂ ತಟ್ಟೆಯ ಪ್ರತ್ಯಕ್ಷಾನುಭವ ಬದಲಾಗದೆಯೇ ಉಳಿಯುತ್ತದೆ. ಗಾತ್ರ ಮತ್ತು ಪ್ರಕಾಶಮಾನತೆಯಲ್ಲಿಯೂ ಇದೇ ಬಗೆಯ ಸ್ಥಿರತೆಗಳು ತೋರಿಬರುತ್ತವೆ. ಆದ್ದರಿಂದ ಸಂವೇದನಾಂಶಗಳು ಬದಲಾದರೂ ಪ್ರತ್ಯಕ್ಷಾನುಭವ ಬದಲಾಗದೆಯೇ ಉಳಿಯುತ್ತದೆ. ವಾಸ್ತವವಾಗಿ ಪ್ರತ್ಯಕ್ಷಾನುಭವಕ್ಕೂ ಅದಕ್ಕೆ ಎಡೆ ಮಾಡಿಕೊಡುವ ಸಂವೇದನಾ ಪ್ರಚೋದನೆಗಳ ಸ್ವರೂಪಕ್ಕೂ ವ್ಯತ್ಯಾಸ ಇರುತ್ತದೆ. ಇದರಿಂದ ತಿಳಿದುಬರುವ ವಿಚಾರವೆಂದರೆ ಪ್ರತ್ಯಾಕ್ಷಾನುಭವ ಸಂವೇದನಾಂಗಗಳ ಕೇವಲ ಸಂಗ್ರಹಣೆ ಇಲ್ಲವೆ ಅಂಶಗಳ ಮೊತ್ತ ಮಾತ್ರವೇ ಆಗಿರುವುದಿಲ್ಲ.

ಸಂಘಟನೆಯ ನಿಯಮಗಳು : ವರ್ದಿಮೀರ್ ಪ್ರತಿಪಾದಿಸುವ ಪ್ರತ್ಯಕ್ಷಾನುಭವ ಸಂಘಟನೆಯ ನಿಯಮಗಳನ್ನು ರೂಪಿಸಿ ಗೆಸ್ಟಾಲ್ಟ್ ಮನೋವಿಜ್ಞಾನಿಗಳು ತುಂಬ ಜನಪ್ರಿಯರಾಗಿದ್ದಾರೆ. ಒಬ್ಬ ತೋರಿಕೆಯ ಚಲನೆಯನ್ನು ಯಾವ ಒಂದು ಏಕೀಕೃತ (ಯೂನಿಫೈಡ್) ರೀತಿಯಲ್ಲಿ ಗ್ರಹಿಸುತ್ತಾನೆಯೋ ಅಂತೆಯೇ ಇತರ ವಸ್ತುಗಳನ್ನೂ ಏಕೀಕೃತ ಸಮಗ್ರಗಳನ್ನಾಗಿಯೇ ಗ್ರಹಿಸುತ್ತಾನೆ ಎನ್ನುವುದು ವರ್ದಿಮೀರನ ನಿಲುವು.


ಪ್ರತ್ಯಕ್ಷಾನುಭವ ಸಂಘಟನೆಯ ನಿಯಮಗಳಲ್ಲೆಲ್ಲ ಅತ್ಯಂತ ಮೂಲಭೂತವಾದದ್ದು ಆಕೃತಿ (ಫಿಗರ್) ಮತ್ತು ಹಿನ್ನೆಲೆ (ಗ್ರೌಂಡ್) ಭಾವನೆ. ಪ್ರತಿ ಪ್ರತ್ಯಕ್ಷಾನುಭವವೂ ಹಿನ್ನೆಲೆಯಿಂದ ಎದ್ದು ಕಾಣುವ ಆಕೃತಿಯಾಗಿ ವ್ಯವಸ್ಥಿತವಾಗಿರುತ್ತದೆ. ಆಕೃತಿ ಅವಧಾನದ ಕೇಂದ್ರ. ಅದು ಸ್ಪಷ್ಟವಾಗಿ ಗುರುತಿಸಬಹುದಾದ ಎಲ್ಲೆಕಟ್ಟು, ಗಾಢತೆ ಮತ್ತು ದೃಢತೆಗಳನ್ನು ಪಡೆದುಕೊಂಡು ಸಮಗ್ರವಾಗಿ ತೋರಿಬರುತ್ತದೆ. ವಿಸ್ತರದ ಉಳಿದ ಅಂಶಗಳು ಹಿನ್ನೆಲೆಯಾಗಿರುತ್ತವೆ. ಅವು ಸ್ಪಷ್ಟವಾಗಿರುವುದಿಲ್ಲವಲ್ಲದೆ ಅವಧಾನದ ಅಂಚಿನಲ್ಲಿರುತ್ತವೆ. ಸಾಮಾನ್ಯವಾಗಿ ಹಿನ್ನೆಲೆ ವಸ್ತುವಿಗಿಂತ ಇನ್ನೂ ದೂರದಲ್ಲಿ ಕಾಣಿಸಿಕೊಳ್ಳುತ್ತವೆ; ಹಿನ್ನೆಲೆಯೇ ಒಂದು ವಸ್ತುವಾಗಿ ಗ್ರಹಿಸಲ್ಪಡುವುದಿಲ್ಲ. ಒಂದು ಅನುಭವದಲ್ಲಿ ಯಾವುದು ಆಕೃತಿ ಯಾವುದು ಹಿನ್ನೆಲೆ ಎನ್ನುವ ವಿಚಾರ ಚಾಕ್ಷುಷ ವಿಸ್ತರದಲ್ಲಿನ ಎಲ್ಲೆಕಟ್ಟುಗಳು, ರಚನೆ ಮತ್ತು ಛಾಯೆಗಳನ್ನು ಅವಲಂಬಿಸಿರುತ್ತದೆ.

ಗೆಸ್ಟಾಲ್ಟ್ ಮನೋವಿಜ್ಞಾನಿಗಳ ಪ್ರಕಾರ ಆಕೃತಿ–ಹಿನ್ನೆಲೆ ವ್ಯವಸ್ಥೆ ಸ್ವಾಭಾವಿಕವಾಗಿ ಹಾಗೂ ಅಪ್ರಯತ್ನಪೂರ್ವಕವಾಗಿ ತೋರಿಬರುವ ಸಂಘಟನೆ. ಅದು ಕಲಿಕೆಯಿಂದ ನಿರ್ಧರಿಸಲ್ಪಡದೆ, ಮನುಷ್ಯನ ಪ್ರತ್ಯಕ್ಷಾನುಭವಕ್ಕೆ ಸಂಬಂಧಿಸಿದ ಅಂಗವ್ಯೂಹದ ಪರಿಣಾಮವಾಗಿದೆ.

ಪ್ರತ್ಯಾಕ್ಷಾನುಭವವನ್ನು ನಿರ್ಧರಿಸುವಲ್ಲಿ ಆಕೃತಿ ಹಿನ್ನೆಲೆ ನಿಯಮಕ್ಕಿಂತ ಕಡಿಮೆ ಮೂಲಭೂತವಾದ, ಆದರೆ ಅಷ್ಟೇ ಪ್ರಬಲವಾದ ಸಂಘಟನಾಂಶಗಳೆಂದರೆ ಪ್ರಚೋದನೆಯ ಲಕ್ಷಣಗಳು. ಅವು ಹೀಗಿವೆ.

1. ಸಾಮೀಪ್ಯ : ಕಾಲ ಅಥವಾ ಸ್ಥಳದಲ್ಲಿ ಒಂದಕ್ಕೊಂದು ಹತ್ತಿರವಾಗಿರುವ ಭಾಗಗಳು ಒಟ್ಟಾಗಿ ಗ್ರಹಿಸಲ್ಪಡುತ್ತದೆ. ಪಕ್ಕದ ಚಿತ್ರದಲ್ಲಿ ab, cd, ef- ಈ ಮೂರು ಜೋಡಿ ಸಾಲುಗಳನ್ನು ಕಾಣುತ್ತೇವೆಯೇ ಹೊರತು bc, de ಈ ಬಗೆಯ ಜೋಡಿಗಳನ್ನಲ್ಲ.


2. ಸಾದೃಶ್ಯ : ಒಂದಕ್ಕೊಂದು ಸಾಮ್ಯವನ್ನು ಹೊಂದಿರುವ ಭಾಗಗಳು ಒಂದಾಗಿ ಗ್ರಹಿಸಲ್ಪಡುತ್ತವೆ. 3ನೆಯ ಚಿತ್ರದಲ್ಲಿ ಮೇಲಿನಿಂದ ಕೆಳಕ್ಕೆ ಏರ್ಪಡುವ ಕೇವಲ O ಗಳಿಂದಲೇ ಅಥವಾ ಕೇವಲ X ಗಳಿಂದಲೇ ರಚಿಸಲ್ಪಟ್ಟ ಕಂಬ ಸಾಲುಗಳನ್ನು ಕಾಣುತ್ತೇವೆಯೇ ಹೊರತು XO ಕೂಡಿದ ಅಡ್ಡಸಾಲುಗಳನ್ನಲ್ಲ.



ಚಿತ್ರ 2


3. ಪೂರ್ಣ : ಅಪೂರ್ಣ ಚಿತ್ರಗಳನ್ನು ಪೂರ್ಣಗೊಳಿಸುವ, ತೆರಪುಗಳನ್ನು ಭರ್ತಿ ಮಾಡುವ, ಒಂದು ಪ್ರವೃತ್ತಿ ಪ್ರತ್ಯಕ್ಷಾನುಭವದಲ್ಲಿ ಕಾಣಬರುತ್ತದೆ. ಮುಂದಿನ ಚಿತ್ರಗಳು ಅಪೂರ್ಣವಾಗಿದ್ದರೂ ಅವು ಚೌಕಾಕೃತಿಗಳಾಗಿ ತೋರಿಬರುತ್ತವೆ.

4 ಸಾತತ್ಯ : ಒಂದು ಸತತ ಸರಣಿಯ ಭಾಗವಾಗಿರುವ ಪ್ರಚೋದನಾಂಶಗಳು ಒಟ್ಟಾಗಿ ಗ್ರಹಿಸಲ್ಪಡುತ್ತವೆ. 5 ನೆಯ ಚಿತ್ರದಲ್ಲಿ ಒಂದು ನೇರವಾಗಿರುವ ರೇಖೆಯನ್ನೂ ಮತ್ತೊಂದು ಬಾಗಿರುವ ರೇಖೆಯನ್ನೂ ಕಾಣಬಹುದು. ಕೇವಲ ಸಾದೃಶ್ಯ ಮತ್ತು ಸಾಮೀಪ್ಯ ನಿಯಮಗಳೇ ಕೆಲಸ ಮಾಡುವುದಾದರೆ, ಒಂದೊಂದರಲ್ಲೂ ಬಾಗಿರುವ ಮತ್ತು ನೇರವಾದ ಭಾಗಗಳನ್ನೊಳಗೊಂಡ ಎರಡು ರೇಖೆಗಳನ್ನು ಕಾಣಬೇಕಾಗಿತ್ತು. ಆದರೆ ಹಾಗೆ ಕಾಣಿಸಿಕೊಳ್ಳದೆ ಒಂದು ನೇರವಾದ ಹಾಗೂ ಮತ್ತೊಂದು ಬಾಗಿರುವ ರೇಖೆ ಕಾಣಿಸಿಕೊಳ್ಳುವುದು ಸಾತತ್ಯ ನಿಯಮದ ಅಗತ್ಯವನ್ನು ಸೂಚಿಸುತ್ತದೆ.


ಚಿತ್ರ 3

ಮೇಲೆ ಹೇಳಿರುವ ಸಂಘಟನಾಂಶಗಳು ಉನ್ನತ ಮಾನಸಿಕ ಪ್ರಕ್ರಿಯೆಗಳನ್ನಾಗಲೀ ವ್ಯಕ್ತಿಯ ಪೂರ್ವಾನುಭವಗಳನ್ನಾಗಲೀ ಅವಲಂಬಿಸುವುದಿಲ್ಲ. ವಾಸ್ತವವಾಗಿ ಅವು ಪ್ರಚೋದನೆಗಳಲ್ಲಿಯೇ ಅಡಕವಾಗಿವೆ. ಹೀಗೆ ಪ್ರಚೋದನೆಗಳಲ್ಲಿಯೇ ಅಡಕವಾಗಿರುವ ಸಂಘಟನಾಂಶಗಳನ್ನು ಗೆಸ್ಟಾಲ್ಟ್‌ವಾದಿಗಳು ಮಹತ್ತ್ವಪೂರ್ಣ ಎಂದು ಪರಿಗಣಿಸಿದ್ದರೂ ಪೂರ್ವ ಪರಿಚಯ, ವಿನ್ಯಾಸ ಈ ಮೊದಲಾದ ಜೀವಿ ಸಂಬಂಧಿ ಅಂಶಗಳೂ ಪ್ರತ್ಯಕ್ಷಾನುಭವವನ್ನು ಪ್ರಭಾವಿತಗೊಳಿಸುತ್ತದೆ ಎಂದು ಗುರುತಿಸಿದ್ದಾರೆ.


ಹೀಗಿದ್ದರೂ ಗೆಸ್ಟಾಲ್ಟ್‌ವಾದಿಗಳು ಕಲಿಕೆಗಿಂತ ಹೆಚ್ಚಿನ ಪ್ರಾಧಾನ್ಯವನ್ನು ಪ್ರಚೋದನೆಗಳಲ್ಲಿ ಅಡಕವಾಗಿರುವ ಸಂಘಟನಾಂಶಗಳಿಗೇ ಕೊಟ್ಟಿದ್ದಾರೆ.


ಚಿತ್ರ 4

ಕಲಿಕೆ ಮತ್ತು ಅಂತರ್‌ದೃಷ್ಟಿ : ಗೆಸ್ಟಾಲ್ಟ್ ವಾದಿಗಳ ಮೊದಲ ಒಲವು ಪ್ರತ್ಯಕ್ಷಾನುಭವದ ಕಡೆಗೆ. ಇದರಲ್ಲಿ ಕಲಿಕೆಯ ಪಾತ್ರ ಮಿತವಾದದ್ದು ಎಂದ ಮಾತ್ರಕ್ಕೆ ಅವರು ಕಲಿಕೆಯ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎಂದರ್ಥವಲ್ಲ. ಗೆಸ್ಟಾಲ್ಟ್ ಕಲಿಕೆಯ ಸಿದ್ಧಾಂತ ಕೋಯ್ಲರನ ಹೆಸರಿನೊಂದಿಗೂ ಅಂತರ್‌ದೃಷ್ಟಿ ಎಂಬ ಪದದೊಂದಿಗೂ ಕೂಡಿಹೋಗಿದೆ.

ಗೆಸ್ಟಾಲ್ಟ್ ಮನೋವಿಜ್ಞಾನಿಗಳು ಪ್ರತ್ಯಕ್ಷಾನುಭವದ ಬಗ್ಗೆ ತಳೆದ ನಿಲುವಿನ

ಧಾಟಿಯಲ್ಲಿಯೇ ಕೋಯ್ಲರ್ ತಾನು ಪ್ರಾಣಿಗಳ ಮೇಲೆ ನಡೆಸಿದ ಕಲಿಕೆಯ ಪ್ರಯೋಗಗಳ ಫಲಿತಾಂಶಗಳನ್ನೂ ವ್ಯಾಖ್ಯಾನ ಮಾಡುತ್ತಾನೆ. ಕಲಿಕೆಯ ಸಮಗ್ರ ಸನ್ನಿವೇಶ ಮತ್ತು ಆ ಸನ್ನಿವೇಶದಲ್ಲಿನ ವಿವಿಧ ಪ್ರಚೋದನೆಗಳ ನಡುವಣ ಸಂಬಂಧ–ಇವು ಮುಖ್ಯವಾಗಿ ಕೋಯ್ಲರನ ವ್ಯಾಖ್ಯಾನದಲ್ಲಿ ಪರಿಗಣನೆಗೆ ಬರುತ್ತವೆ. ಕೋಯ್ಲರನ ಅಧ್ಯಯನಗಳಲ್ಲಿ ಚಿಂಪಾಂಜಿಗಳನ್ನು ಪಂಜರದಲ್ಲಿರಿಸಿ, ಪಂಜರದಿಂದ ಸ್ವಲ್ಪ ದೂರದಲ್ಲಿ ಒಂದು ಬಾಳೆಹಣ್ಣನ್ನು ಇರಿಸಲಾಗಿತ್ತು. ಹಣ್ಣನ್ನು ಪಡೆಯುವುದಕ್ಕೆ ಅವು ತಂತಿ, ಕೋಲು, ಮತ್ತು ಪೆಟ್ಟಿಗೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದುವು. ಕೋಯ್ಲರನ ಚಿಂಪಾಂಜಿಗಳು, ಥಾರ್ನ್‌ಡೈಕ್ ಸೂಚಿಸಿದಂತೆ, ಪ್ರಯತ್ನ ಮಾಡುತ್ತ ತಪ್ಪಿದ್ದಾಗ ತಿದ್ದಿಕೊಳ್ಳುತ್ತ ಹೋಗುವ ಮಾರ್ಗ (ಟ್ರಯಲ್ ಅಂಡ್ ಎರರ್ ಮೆಥಡ್) ಹಿಡಿಯಲಿಲ್ಲ; ಅಥವಾ ಪ್ಯಾವ್ಲವ್ ಸೂಚಿಸಿದಂತೆ ಅನುಬಂಧನಕ್ಕೂ (ಕಂಡಿಷನಿಂಗ್) ಒಳಗಾಗಲಿಲ್ಲ. ಅವು ಹೊಸ ಸನ್ನಿವೇಶವನ್ನು ಮನದಟ್ಟು ಮಾಡಿಕೊಂಡು, ಸಮಗ್ರ ಸನ್ನಿವೇಶವನ್ನೇ ಒಟ್ಟಾಗಿ ಗ್ರಹಿಸಿದವು; ತಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದುವು.



ಚಿತ್ರ 5

ಕೋಯ್ಲರ್ ಒಂದು ಪ್ರಯೋಗದಲ್ಲಿ ಪಂಜರದಿಂದ ಅನತಿ ದೂರದಲ್ಲಿ ಬಾಳೆಹಣ್ಣನ್ನು ಇರಿಸಿದ. ಬಾಳೆಹಣ್ಣಿಗೆ ಎದುರಾಗಿ ಒಂದು ಕೋಲನ್ನು ಪಂಜರದ ಸರಳಿನ ಹತ್ತಿರ ಇರಿಸಿದಾಗ, ಚಿಂಪಾಂಜಿ ಹಣ್ಣು ಮತ್ತು ಕೋಲನ್ನು ಒಂದೇ ಸನ್ನಿವೇಶದ ಅಂಗಗಳಾಗಿ ಗ್ರಹಿಸಿ, ಕೋಲಿನ ಸಹಾಯದಿಂದ ಹಣ್ಣನ್ನು ತನ್ನ ಸಮೀಪಕ್ಕೆ ಎಳೆದುಕೊಳ್ಳುತ್ತಿತ್ತು. ಆದರೆ ಕೋಲನ್ನು ಪಂಜರದ ಇನ್ನೊಂದು ಭಾಗಕ್ಕೆ ಇಟ್ಟಾಗ, ಅವೆರಡೂ ಒಂದೇ ಸನ್ನಿವೇಶದ ಭಾಗಗಳೆಂದೂ ಗ್ರಹಿಸುವುದು ಚಿಂಪಾಂಜಿಗೆ ಕಷ್ಟವಾಯಿತು. ಇಂಥ ಸಂದರ್ಭಗಳಲ್ಲಿ ಸಮಸ್ಯೆಯ ಪರಿಹಾರಕ್ಕೆ ಪ್ರತ್ಯಕ್ಷಾನುಭವದ ಪುನರ್ ವ್ಯವಸ್ಥೆ ಅಗತ್ಯವಾಗುತ್ತದೆ.

ಕೋಯ್ಲರನ ಇನ್ನೊಂದು ಪ್ರಯೋಗದಲ್ಲಿ ಹೆಚ್ಚು ಕಡಿಮೆ ಮೇಲಿನ ವ್ಯವಸ್ಥೆಯನ್ನೇ ಬಳಸಿಕೊಳ್ಳಲಾಯಿತು. ಆದರೆ ಈ ಪ್ರಯೋಗದಲ್ಲಿ ಬಾಳೆಹಣ್ಣು ಯಾವುದೇ ಕೋಲಿಗೆ ನಿಲುಕದಷ್ಟು ದೂರದಲ್ಲಿತ್ತು. ಇನ್ನೊಂದು ವ್ಯತ್ಯಾಸವೆಂದರೆ ಈ ಬಾರಿ ಎರಡು ಕೋಲುಗಳಿದ್ದವು. ಒಂದು ಕೋಲಿನ ತುದಿಯಲ್ಲಿ ರಂಧ್ರವಿತ್ತು. ಮತ್ತೊಂದು ಕೋಲಿನ ತುದಿ ಚೂಪಾಗಿತ್ತು. ಅವೆರಡನ್ನೂ ಕೂಡಿಸಿ ಹಣ್ಣನ್ನು ಪಡೆಯುವುದು ಸಾಧ್ಯವಿತ್ತು. ಕೋಯ್ಲರನ ಅತಿ ಚುರುಕಾದ ಸುಲ್ತಾನ್ ಎಂಬ ಚಿಂಪಾಂಜಿ ಹಣ್ಣನ್ನು ಪಡೆಯಲು ಸುಮಾರು ಒಂದು ಗಂಟೆಯ ಕಾಲ ಯತ್ನಿಸಿತು. ಮೊದಲಿಗೆ ಒಂದು ಕೋಲಿನಿಂದ ಬಾಳೆಹಣ್ಣನ್ನು ಪಡೆಯಲು ಪ್ರಯತ್ನಿಸಿ, ಅನಂತರ ಒಂದು ಕೋಲನ್ನು ಎಷ್ಟು ದೂರ ತಳ್ಳಬಹುದೋ ಅಷ್ಟು ದೂರ ತಳ್ಳಿ, ಇನ್ನೊಂದು ಕೋಲಿನ ಸಹಾಯದಿಂದ ಮೊದಲ ಕೋಲನ್ನು ಬಾಳೆಹಣ್ಣಿಗೆ ತಾಕುವಷ್ಟರ ವರೆಗೆ ತಳ್ಳಿತು. ಅನಂತರ ಎರಡು ಕೋಲುಗಳನ್ನೂ ಇಟ್ಟುಕೊಂಡು ಆಟವಾಡಲಾರಂಭಿಸಿತು. ಹೀಗೆ ಆಡುತ್ತಿದ್ದಾಗ ಅಕಸ್ಮಾತ್ತಾಗಿ ಚೂಪಾದ ಕೋಲಿನ ತುದಿಯನ್ನು ಇನ್ನೊಂದು ಕೋಲಿನ ರಂಧ್ರದಲ್ಲಿ ಸೇರಿಸಿತು. ಆಗ ಕೋಲು ಸಾಕಷ್ಟು ಉದ್ದವಾಗಿ ತೋರಿತೋ ಇಲ್ಲವೋ ತತ್‌ಕ್ಷಣವೇ ಓಡಿಹೋಗಿ ಹಣ್ಣನ್ನು ಪಡೆಯಲು ಪ್ರಯತ್ನಿಸಿತು. ಎರಡು ಕೋಲುಗಳನ್ನು ಸಾಕಷ್ಟು ಭದ್ರವಾಗಿ ಜೋಡಿಸದ ಕಾರಣ ಅವು ಬೇರೆ ಬೇರೆಯಾದವು. ಕೂಡಲೇ ಅವೆರಡನ್ನೂ ಪುನಃ ಭದ್ರವಾಗಿ ಜೋಡಿಸಿ, ಉದ್ದನೆಯ ಕೋಲಿನ ಸಹಾಯದಿಂದ ಬಾಳೆಹಣ್ಣನ್ನು ಪಡೆದುಕೊಂಡಿತು. ಹಿಂದಿನ ಅನುಭವವೇ ಇಲ್ಲದೆ ಹೀಗೆ ಸಂಬಂಧವನ್ನು ಕಂಡುಕೊಂಡದ್ದು ಅಂತರ್‌ದೃಷ್ಟಿಯ ಕುರುಹು ಎನ್ನುವುದಾಗಿ ಕೋಯ್ಲರ್ ಪರಿಗಣಿಸುತ್ತಾನೆ.

ಕೋಯ್ಲರನ ಈ ಪ್ರಯೋಗಗಳು ಗೆಸ್ಟಾಲ್ಟ್‌ವಾದಿಗಳು ಪ್ರತಿಪಾದಿಸಿರುವ ವರ್ತನೆಯ ಬೃಹತ್ ಕಲ್ಪನೆಗೆ ಬೆಂಬಲ ನೀಡುತ್ತವೆಯಲ್ಲದೆ ಕಲಿಕೆ ನಿಜವಾಗಿ ಪರಿಸರದ ಪುನರ್‌ರಚನೆ ಇಲ್ಲವೆ ಪುನರ್ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ ಎನ್ನುವ ಗೆಸ್ಟಾಲ್ಟ್ ಕಲ್ಪನೆಯನ್ನು ಸಹ ಸ್ಥಿರೀಕರಿಸುತ್ತವೆ.

ರಾಬರ್ಟ್ ಯರ್ಕಿಸ್ ಎಂಬಾತ ಗೆಸ್ಟಾಲ್ಟ್‌ವಾದಿಗಳ ಅಂತರ್‌ದೃಷ್ಟಿಯಲ್ಲಿ ಅಡಕವಾಗಿರುವ ಸಾಮಾನ್ಯ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಿದ್ದಾನೆ.

1. ಸಮಸ್ಯಾತ್ಮಕ ಸನ್ನಿವೇಶದ ಸಮೀಕ್ಷಣೆ, ತನಿಖೆ ಅಥವಾ ಕೂಲಂಕಷ ಪರೀಕ್ಷೆ.

2. ಅನಿಶ್ಚಯತೆ, ಕಾರ್ಯನಿಲುಗಡೆ, ಏಕಾಗ್ರತೆಯಿಂದ ಕೂಡಿರುವ ಅವಧಾನ ಮನೋಭಾವ.

3. ಹೆಚ್ಚು ಕಡಿಮೆ ಸರಿ ಎಂದು ತೋರಿಬರುವ ಅನುಕ್ರಿಯೆಯನ್ನು ಪ್ರಯತ್ನಿಸುವುದು.

4. ಮೊದಲು ಅನುಕ್ರಿಯೆ ಸರಿಯಾಗಿಲ್ಲವೆಂದು ತೋರಿ ಬಂದರೆ ಅದನ್ನು ಕೈಬಿಟ್ಟು ಬೇರೊಂದು ಅನುಕ್ರಿಯೆಯನ್ನು ಪ್ರಯತ್ನಿಸುವುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಒಂದು ಮಾರ್ಗದಿಂದ ಇನ್ನೊಂದಕ್ಕೆ ಪರಿವರ್ತನೆ ಶೀಘ್ರವಾದ ಮತ್ತು ಹಠಾತ್ತಾದ ರೀತಿಯಲ್ಲಿ ನಡೆದು ಹೋಗುವುದು.

5. ಗುರಿ ಅಥವಾ ಉದ್ದೇಶದತ್ತ ಸತತವಾದ ಅವಧಾನ ಮತ್ತು ಅದರಿಂದಾದ ಅಭಿಪ್ರೇರಣೆ.

6. ಯಾವುದೋ ಒಂದು ಸಂದಿಗ್ಧ ಗಳಿಗೆಯಲ್ಲಿ ಜೀವಿ ಅಗತ್ಯವಾದ ಹೊಂದಾಣಿಕೆಯ ಕ್ರಿಯೆಯನ್ನು ಹಠಾತ್ತನೆ ನಿರ್ವಹಿಸುವುದು.

7. ಒಮ್ಮೆ ನಿರ್ವಹಿಸಿದ ಅನಂತರದಲ್ಲಿ ಹೊಂದಾಣಿಕೆಯ ಅನುಕ್ರಿಯೆಯ ಪುನರಾವರ್ತನೆ.

8. ಸಮಸ್ಯಾತ್ಮಕ ಸನ್ನಿವೇಶಕ್ಕೆ ಅಗತ್ಯವಾದ ಅಂಶಗಳನ್ನು ಗುರುತಿಸಿ ಅವುಗಳಿಗೆ ಅವಧಾನವೀಯುವ ಸಾಮರ್ಥ್ಯ ಮತ್ತು ಅನವಶ್ಯಕ ಅಂಶಗಳನ್ನು ಕಡೆಗಾಣಿಸುವಿಕೆ.

ಫಲದಾಯಕ ಚಿಂತನೆ (ಪ್ರೊಡಕ್ಟಿವ್ ಥಿಂಕಿಂಗ್) : ವರ್ದಿಮೀರನ ಪ್ರೊಡಕ್ಟಿವ್ ಥಿಂಕಿಂಗ್ ಎಂಬ ಕೃತಿ ಸಮಸ್ಯಾ ಪರಿಹಾರದ ಪರಿಣಾಮಕಾರಿ ವಿಧಾನಗಳನ್ನು ಸೂಚಿಸುತ್ತದೆ. ಗೆಸ್ಟಾಲ್ಟ್ ಕಲಿಕೆಯ ತತ್ತ್ವಗಳನ್ನು ವರ್ದಿಮೀರ್ ಮಾನವನ ಸೃಜನಾತ್ಮಕ ಆಲೋಚನೆಗೆ ಅನ್ವಯಿಸಿದ್ದಾನೆ. ಅವನ ಪ್ರಕಾರ ಆಲೋಚನೆ ಪೂರ್ಣಗಳನ್ನೊಳಗೊಂಡಿರಬೇಕು. ಯಾರೇ ಆಗಲಿ ಸನ್ನಿವೇಶದ ಸಮಗ್ರ ನೋಟವನ್ನು ಗಣನೆಗೆ ತೆಗೆದುಕೊಳ್ಳಬೇಕು. ಸನ್ನಿವೇಶದ ವಿವರಗಳಲ್ಲಿ ಹಾದಿಯನ್ನು ಕಳೆದುಕೊಳ್ಳಬಾರದು. ತಪ್ಪುಗಳು ಅನಿವಾರ್ಯವೇ; ಆದರೆ ಕನಿಷ್ಠ ಪಕ್ಷ ಅವು ಮೆಚ್ಚಬಹುದಾದ ತಪ್ಪುಗಳಾಗಿರಬೇಕು. ಹಾಗೆ ಮಾಡುವ ತಪ್ಪುಗಳು ಸಫಲತೆಯ ಸಾಧ್ಯತೆಯನ್ನಾದರೂ ಹೊಂದಿರಬೇಕು. ಅವು ಸನ್ನಿವೇಶದ ಸ್ವರೂಪವನ್ನು ತಿಳಿಯದೆ ಮಾಡಿದ ಕುರುಡು ತಪ್ಪುಗಳಾಗಿರಬಾರದು. ಕಲಿಯುವವ ಹೇಗೆ ಸನ್ನಿವೇಶದ ಸಮಗ್ರ ಚಿತ್ರವನ್ನು ಪರಿಗಣಿಸಬೇಕೋ ಹಾಗೆಯೇ ಕಲಿಸುವವ ಕೂಡ ಸನ್ನಿವೇಶದ ಸಮಗ್ರ ಚಿತ್ರವನ್ನು ಕಲಿಯುವವನ ಮುಂದಿಡಬೇಕು. ಕಲಿಯುವವ ಸಹ ತಾನು ಮುಟ್ಟಬೇಕಾದ ಗುರಿ ಮತ್ತು ಅದನ್ನು ಸಾಧಿಸಲು ಬೇಕಾದ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಇರಬೇಕು.

ಗೆಸ್ಟಾಲ್ಟ್ ಮನೋವಿಜ್ಞಾನದ ಅನಂತರದ ಬೆಳವಣಿಗೆಯಲ್ಲಿ ಗೆಸ್ಟಾಲ್ಟ್‌ವಾದವನ್ನು ಕರ್ಟ್‌ಲೆವಿನ್ ಎಂಬಾತ ವ್ಯಕ್ತಿತ್ವ ಮತ್ತು ಸಾಮಾಜಿಕ ಮನೋವಿಜ್ಞಾನದ ಅಧ್ಯಯನಗಳಿಗೆ ಅನ್ವಯಿಸಿದ್ದಾನೆ. ಸಮಾಜ ಮನೋವಿಜ್ಞಾನದ ಬೆಳವಣಿಗೆಯ ಮೇಲೆ ಕರ್ಟ್‌ಲೆವಿನ್ನನ ಪ್ರಭಾವ, ಹಾಗಾಗಿ ಗೆಸ್ಟಾಲ್ಟ್‌ವಾದದ ಪ್ರಭಾವ, ದೊಡ್ಡ ಪರಿಣಾಮವನ್ನು ಬೀರಿದೆ.

ಒಟ್ಟಿನಲ್ಲಿ ಮನೋವಿಜ್ಞಾನದ ಮೇಲೆ ಗೆಸ್ಟಾಲ್ಟ್ ಚಳವಳಿ ಅಳಿಸಲಾಗದ ಮುದ್ರೆಯನ್ನು ಒತ್ತಿದೆ. ಗೆಸ್ಟಾಲ್ಟ್ ದೃಷ್ಟಿ ವಿಶೇಷವಾಗಿ ಪ್ರತ್ಯಕ್ಷಾನುಭವ ಮತ್ತು ಸ್ವಲ್ಪಮಟ್ಟಿಗೆ ಕಲಿಕೆಯ ಕ್ಷೇತ್ರಗಳ ಮೇಲೂ ಪ್ರಭಾವ ಬೀರಿದೆ. ಹಾಗಾದರೂ ಗೆಸ್ಟಾಲ್ಟ್ ನಿಲುವು ಅಸ್ಪಷ್ಟ ಎಂಬುದಾಗಿ ಹಲವು ವಿಮರ್ಶಕರು ವಾದಿಸಿದ್ದಾರೆ. ಗೆಸ್ಟಾಲ್ಟ್‌ರ ಮೂಲಭಾವನೆಗಳು ಮತ್ತು ಪಾರಿಭಾಷಿಕ ಪದಗಳು (ಉದಾ: ಸಂಘಟನೆ ಇತ್ಯಾದಿ) ವೈಜ್ಞಾನಿಕವಾಗಿ ಅರ್ಥವತ್ತಾದ ರೀತಿಯಲ್ಲಿ ನಿರೂಪಿತವಾಗಿಲ್ಲ ಎಂದು ಅವರು ಆಕ್ಷೇಪಿಸಿದ್ದಾರೆ. ಗೆಸ್ಟಾಲ್ಟ್ ಮನೋವಿಜ್ಞಾನ ಸಾಕಷ್ಟು ಪ್ರಾಯೋಗಿಕ ಸಂಶೋಧನೆಯ ಬೆಂಬಲವಿಲ್ಲದ ಸೈದ್ಧಾಂತಿಕ ಪ್ರತಿಪಾದನೆಯನ್ನು ಒಳಗೊಂಡಿದೆ ಎಂದು ಇನ್ನು ಕೆಲವರು ವಿಮರ್ಶಕರು ಆಪಾದಿಸಿದ್ದಾರೆ. ಅಷ್ಟೇ ಅಲ್ಲದೆ ವರ್ತನಾವಾದಿಗಳ ಪ್ರಯೋಗಗಳಿಗೆ ಹೋಲಿಸಿದಾಗ ಗೆಸ್ಟಾಲ್ಟ್‌ರ ಪ್ರಯೋಗಗಳು ಗುಣಮಟ್ಟದಲ್ಲಿ ಕಡಿಮೆಯಾಗಿವೆ ಎಂದೂ ಹೇಳಬಹುದು. (ಎಚ್.ಎಸ್.ಐ.)

**ಗೇ, ಜಾನ್ :** 1685–1732. ಕವಿ ಮತ್ತು ನಾಟಕಕಾರ. ಇಂಗ್ಲೆಂಡಿನ ಡೆವನ್‌ನಲ್ಲಿ ಹುಟ್ಟಿದ ಈತ ಚಿಕ್ಕಂದಿನಲ್ಲೇ ಅನಾಥನಾದ. ಲಂಡನಿನ ರೇಷ್ಮೆ ವ್ಯಾಪಾರಿಯ ಬಳಿ ಕೆಲಸಕ್ಕೆ ಸೇರಿದ. ಆದರೆ ಈತನಿಗೆ ಆ ಕೆಲಸದಲ್ಲಿ ಅಭಿರುಚಿಯಿಲ್ಲವೆಂಬುದನ್ನು ಕಂಡುಕೊಂಡ ಯಜಮಾನ ಇವನನ್ನು ಕೆಲಸದಿಂದ ತೆಗೆದುಹಾಕಿದ. 1708ರ ಹೊತ್ತಿಗೆ ವೈನ್ ಎಂಬ ಪದ್ಯವನ್ನು ಬರೆದು ಜಾನ್ ಪ್ರಸಿದ್ಧನಾದನಲ್ಲದೆ 1713ರಲ್ಲಿ ಗ್ರಾಮ ಜೀವನವನ್ನು ಕುರಿತ ರೂರಲ್ ಸ್ಪೋರ್ಟ್ಸ್ ಎಂಬ ಪದ್ಯಸಂಕಲನವನ್ನು ಹೊರತಂದ. 1714ರಲ್ಲಿ ಷಪರ್ಡ್ಸ್ ವೀಕ್ ಎಂಬ ವೀರಕಾವ್ಯವನ್ನೂ 1716ರಲ್ಲಿ ಟ್ರಿವಿಯ ಎಂಬ ಅಣಕು ವೀರಕಾವ್ಯವನ್ನೂ ರಚಿಸಿದ. 1727 ಮತ್ತು 1728ರಲ್ಲಿ ಅಚ್ಚಾದ ಫೇಬಲ್ಸ್ ಈತನಿಗೆ ಶಾಶ್ವತವಾದ ಪ್ರಸಿದ್ಧಿಯನ್ನು ದೊರಕಿಸಿಕೊಟ್ಟವು. ಆ ವೇಳೆಗೆ ಈತ ಸಾಹಿತ್ಯಕೂಟಗಳಲ್ಲಿ ಸೇರತೊಡಗಿ ಪೋಪ್ ಮತ್ತು ಸ್ವಿಫ್ಟರ ಸ್ನೇಹಿತನಾದ. ಈತನ ದಿ

ಬೆಗ್ಗರ್ಸ್ ಆಪೆರ (1728) ಎಂಬ ಕೃತಿಗೆ ವಸ್ತುವನ್ನು ಸೂಚಿಸಿದವ ಜೋನಾಥನ್ ಸ್ವಿಫ್ಟ್‌ನೇ. ಈ ಕೃತಿಯಲ್ಲಿ ಇಟಾಲಿಯನ್ ಆಪೆರದ ಮಾರ್ಮಿಕ ವಿಡಂಬನೆಯಿದೆ. ಇಂದಿಗೂ ಜಾನನ ಪ್ರಸಿದ್ಧಿ ನಿಂತಿರುವುದು ಈ ನಾಟಕದಿಂದಲೇ. ಇದರ ಹಾಡುಗಳು ಅತ್ಯಂತ ಜನಪ್ರಿಯವಾದುವು. ನಾಟಕದ ಉತ್ತರ ಭಾಗವಾದ ಪಾಲಿ 1729ರಲ್ಲಿ ಹೊರಬಂತು. ರಾಜಾಸ್ಥಾನವನ್ನು ಟೀಕಿಸುತ್ತದೆಂಬ ಕಾರಣದಿಂದ ಈ ನಾಟಕವನ್ನು ಚೇಂಬರ್ಲಿನ್ ನಿಷೇಧಿಸಿದನಾದರೂ ನಾಟಕದ ಪ್ರತಿಗಳೇನೋ ಚೆನ್ನಾಗಿ ಖರ್ಚಾದವು.



ಲಂಡನಿನ ನ್ಯಾಷನಲ್ ಪೋರ್ಟ್ರೇಟ್ ಗ್ಯಾಲರಿಯಲ್ಲಿರುವ ಜಾನ್ ಗೇ ಚಿತ್ರಕೃತಿ. ಕಲಾವಿದ ಜಿ. ನೀಲರ್

ಕಥನ ಕವನಗಳನ್ನು ಬಳಸಿಕೊಂಡಿರುವ ದಿ ಬೆಗ್ಗರ್ಸ್ ಆಪೆರ ನಾಟಕ, ಕರ್ತೃವಿನ ಉದ್ದೇಶ, ವಾಕ್ಚಾತುರ್ಯ ಮತ್ತು ವಿಡಂಬನೆಯ ಮೂಲಕ ಇಲ್ಲಿ ಕಲೆಯಾಗಿ ಸಫಲಗೊಂಡಿದೆ. ಸಂಭಾಷಣೆಗಳು ಅನೀತಿಯನ್ನು ಪ್ರತಿಪಾದಿಸುವಂತಿದ್ದರೂ ಪ್ರೇಕ್ಷಕರು ಅದರ ವಿರೋಧ ಭಾವವನ್ನೇ ಗ್ರಹಿಸುತ್ತಾರೆ. ಇದು ಮುಖ್ಯವಾಗಿ ರಾಜಕೀಯ ವಿಡಂಬನೆ. 18ನೆಯ ಶತಮಾನದ ವಿಡಂಬನ ಸಾಹಿತ್ಯದಂತಿದ್ದರೂ ಇಂದಿಗೂ ಇದು ನವನವೀನವಾಗಿದೆ. ಇದರ ವಸ್ತು ಅಂದಿನ ಪ್ರಧಾನಮಂತ್ರಿಯಾಗಿದ್ದ ರಾಬರ್ಟ್ ವಾಲ್‌ಪೋಲನ ಆಡಳಿತದ ಟೀಕೆ. ಈ ನಾಟಕವನ್ನು ರಾಬರ್ಟ್ ವಾಲ್‌ಪೋಲನೂ ಅವನ ಅನುಯಾಯಿಗಳೂ ಸ್ವತಃ ವೀಕ್ಷಿಸಿ ತಮ್ಮ ಆಡಳಿತದ ಕೊಳೆಯನ್ನು ರಂಗದ ಮೇಲೆ ತೊಳೆಯುತ್ತಿರುವುದನ್ನು ಕಂಡು ಚಪ್ಪಾಳೆ ತಟ್ಟಿದರಂತೆ. ಈ ನಾಟಕ ಪ್ರದರ್ಶನದಿಂದ ಮಂತ್ರಿಮಂಡಲ ಉರುಳಿ ಹೋಗದಿದ್ದರೂ ಮಹತ್ತ್ವಪೂರ್ಣ ಪರಿಣಾಮಗಳಾದವು. ಮುಖ್ಯವಾಗಿ ಜೈಲು ಸುಧಾರಣೆಗಳು ಜಾರಿಗೆ ಬಂದದ್ದು ಈ ನಾಟಕದಿಂದ. ಬ್ರಿಟಿಷ್ ಪೌರ ಮತ್ತು ರಾಜಕೀಯ ಆಡಳಿತದಲ್ಲಿ ಅನೇಕ ಸುಧಾರಣೆಗಳಿಗೂ ಈ ನಾಟಕ ಕಾರಣವಾಯಿತಲ್ಲದೆ ಅವರ ಸಾರ್ವಜನಿಕ ಜೀವನದಲ್ಲಿ ಸಹನೆ ಮತ್ತು ಪ್ರಾಮಾಣಿಕತೆಯನ್ನು ಹೆಚ್ಚಿಸಿತು. ಜನಜೀವನಕ್ಕೆ ಇದು ಕನ್ನಡಿ ಹಿಡಿಯಿತು. ಒಬ್ಬ ಕಳ್ಳನಿಂದ ಇನ್ನೊಬ್ಬ ಕಳ್ಳನನ್ನು ಹಿಡಿಯುವುದು ಪ್ರಾಚೀನ ನೀತಿ. ಅದನ್ನು ಗೇ ಬಹಳ ಚೆನ್ನಾಗಿ ಕಥನಕವನಗಳ ಮೂಲಕ ಈ ನಾಟಕದಲ್ಲಿ ತೋರಿಸಿದ್ದಾನೆ. ಮೊದಲನೆಯ ಹಾಡು ಮತ್ತು ಕೊನೆಯ ಹಾಡು ನಾಂದಿ ಮತ್ತು ಭರತ ವಾಕ್ಯಗಳಂತಿವೆ.

ಆಂಗ್ಲ ಸಾಹಿತ್ಯ ಚರಿತ್ರೆಯಲ್ಲಿ ಈತನ ಕೃತಿಯನ್ನು ಚರ್ಚಿಸುವಾಗ ಈತನನ್ನು ಸಂಪ್ರದಾಯಶೀಲ ಸಾಹಿತಿಗಳ ಪಂಕ್ತಿಗೆ ಸೇರಿಸಲಾಗಿದೆ. ಈತ ತನ್ನ ಸಮಕಾಲೀನನಾದ ಮ್ಯಾಥ್ಯೂ ಪ್ರಯರ್‌ಗಿಂತ (1664–1721) ಹೆಚ್ಚು ಸ್ಫೂರ್ತಿಯುಳ್ಳ ಲೇಖಕ. ಅಲ್ಲದೆ ಈತನ ಲಘು ಪದ್ಯಗಳೂ ಕಳಪೆಯವೇನಲ್ಲ.

ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಕವಿಯ ಸಮಾಧಿ ಇದೆ. (ಎಚ್.ಎಚ್.ಎ.)

**ಗೇಟ್ಸ್, ಬಿಲ್ :** 1955–. ಮೈಕ್ರೊಸಾಫ್ಟ್ ಕಾರ್ಪೊರೇಶನ್‌ನ ಸ್ಥಾಪಕ ಹಾಗೂ ಅಧ್ಯಕ್ಷ. 1975ರಿಂದ 2000 ದವರೆಗೆ ಮೈಕ್ರೊಸಾಫ್ಟ್‌ನ ಮುಖ್ಯ ಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸಿದ್ದಾರೆ. ಮೈಕ್ರೊಸಾಫ್ಟ್ ಒಂದು ವ್ಯಕ್ತಿಗತ ಕಂಪ್ಯೂಟರ್ ಕಾರ್ಯನಿರ್ವಹಣೆಯ ಸಾಫ್ಟ್‌ವೇರ್‌ನ ಪ್ರಕಾಶನ ಹಾಗೂ ಅಭಿವೃದ್ಧಿಪಡಿಸುವ ಕಂಪನಿಯಾಗಿದೆ.

ವಿಲಿಯಂ ಹೆನ್ರಿಗೇಟ್ಸ್ 1955ರ ಅಕ್ಟೋಬರ್ 28 ರಂದು ಸಿಯಾಟಲ್‌ನಲ್ಲಿ ಜನಿಸಿದರು. ತಮ್ಮ 19ನೆಯ ವಯಸ್ಸಿನಲ್ಲಿ ಸಾಫ್ಟ್‌ವೇರ್ ಕಂಪನಿಯನ್ನು ಸ್ಥಾಪಿಸಿದರು. 1975ರಲ್ಲಿ ಬಿಲ್ ಹಾಗೂ ಇವರ ಸಹಪಾಠಿ ಆಲೆನ್ ಇಬ್ಬರೂ ಸೇರಿ ಅದೇ ತಾನೇ ಮಾರುಕಟ್ಟೆಯನ್ನು ಪ್ರವೇಶಿಸಿದ್ದ ವ್ಯಕ್ತಿಗತ ಕಂಪ್ಯೂಟರ್‌ಗೆ ಪ್ರೋಗ್ರಾಂಗಳನ್ನು ವಿನ್ಯಾಸಗೊಳಿಸುವ ಕೆಲಸ ಪ್ರಾರಂಭಿಸಿದರು. ಇಬ್ಬರೂ ಸೇರಿ ಮೈಕ್ರೊಸಾಫ್ಟ್ ಕಂಪನಿಯನ್ನು ಸ್ಥಾಪಿಸಿದರು. 1980ರಲ್ಲಿ ಐಬಿಎಂ (ಇಂಟರ್‌ನ್ಯಾಷನಲ್ ಬಿಸಿನೆಸ್ ಮೆಷಿನ್ಸ್ ಕಾರ್ಪೊರೇಷನ್) ಸಂಸ್ಥೆ ತನ್ನ ಮೊದಲ ವ್ಯಕ್ತಿಗತ ಕಂಪ್ಯೂಟರ್‌ನ ಕಾರ್ಯಾಚರಣ ವ್ಯವಸ್ಥೆಯ ಆಪರೇಟಿಂಗ್ ಸಿಸ್ಟಮ್ ಅಭಿವೃದ್ಧಿಗಾಗಿ ಮೈಕ್ರೊಸಾಫ್ಟ್ ಕಂಪನಿಯನ್ನು ಆಯ್ಕೆ ಮಾಡಿತು. ಆಪರೇಟಿಂಗ್ ಸಿಸ್ಟಮ್ ಎನ್ನುವುದು ಕಂಪ್ಯೂಟರ್ ಬಳಕೆಯನ್ನು ಮಾಡುವ ಸೂಚನೆಗಳನ್ನು ಹೊಂದಿರುತ್ತದೆ. ಐಬಿಎಂಗಾಗಿ ಬಿಲ್‌ಗೇಟ್ಸ್ ಮೈಕ್ರೊಸಾಫ್ಟ್ ಡಿಸ್ಕ್ ಆಪರೇಟಿಂಗ್ ಸಿಸ್ಟಮ್ ಯೋಜನೆಯನ್ನು ರೂಪಿಸಿದರು. ಗೇಟ್ಸ್ ಅವರ ಮಾರ್ಗದರ್ಶನದಲ್ಲಿ ಮೈಕ್ರೊಸಾಫ್ಟ್ ಕಂಪನಿಯು ಅಭಿವೃದ್ಧಿಯಾಗುತ್ತಿದೆ. 1980ರಲ್ಲಿ ಈ ಕಂಪನಿ ವಿಂಡೋಸ್ ಎನ್ನುವ ಪಿಸಿ ಪರ್ಸನಲ್ ಕಂಪ್ಯೂಟರ್ ಪ್ರೋಗ್ರಾಂನ ಸರಣಿಯನ್ನು ಪರಿಚಯಿಸಿತು. 'ವಿಂಡೋಸ್'ನ ಮೂಲಕ ವ್ಯಕ್ತಿಯು ಕಂಪ್ಯೂಟರ್ ಸ್ಕ್ರೀನ್‌ನಲ್ಲಿ (ಒಟ್ಟಿಗೆ) ಒಮ್ಮೆಲೆ ವಿವಿಧ ರೀತಿಯ ಕಾರ್ಯಗಳನ್ನು ಮಾಡಬಹುದಲ್ಲದೆ ಪರದೆಯ ಮೇಲಿರುವ ಸೂಚನಾಚಿಹ್ನೆಗಳನ್ನು ಉಪಯೋಗಿಸಿ ಕಮ್ಯಾಂಡ್ ಮಾಡಬಹುದು.



**ಗೇಟ್ಸ್ ಫೌಂಡೇಶನ್ :** ಪ್ರಪಂಚದ ದೊಡ್ಡ ಚಾರಿಟಬಲ್ (ದತ್ತಿಸಂಸ್ಥೆ) ಫೌಂಡೇಶನ್ ಆಗಿದೆ. 1999ರಲ್ಲಿ ಬಿಲ್‌ಗೇಟ್ಸ್ ಹಾಗೂ ಇವರ ಪತ್ನಿಯಿಂದ ಸ್ಥಾಪಿತವಾಯಿತು. ಪ್ರಪಂಚಾದ್ಯಂತ ಆರೋಗ್ಯ ಮತ್ತು ಶಿಕ್ಷಣ ನೀಡುವ ಬಗ್ಗೆ ಗಮನ ಹರಿಸುತ್ತಿದೆ. ಹಿಂದುಳಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನರ ಆರೋಗ್ಯ ಸುಧಾರಣೆಯತ್ತ ಕಾರ್ಯಕ್ರಮಗಳನ್ನು ನಿಯೋಜಿಸುತ್ತಿದೆ. ಮಕ್ಕಳನ್ನು ರೋಗಗಳಿಂದ ಮುಕ್ತಗೊಳಿಸಲು ಲಸಿಕೆಗಳನ್ನು ಸರಬರಾಜು ಮಾಡುತ್ತದೆ. ಅಲ್ಲದೆ ಅಲ್ಪಸಂಖ್ಯಾತ ಮಕ್ಕಳಿಗೆ ವಿದ್ಯಾರ್ಥಿ ವೇತನದ ವ್ಯವಸ್ಥೆಯನ್ನೂ ಮಾಡುತ್ತಿದ್ದು ವಿಕಲಾಂಗ ಚೇತನರಿಗೆ ಬಳಸಲು ಅನುಕೂಲ ವಾಗುವಂತೆ ತಾಂತ್ರಿಕ ಕೌಶಲ್ಯದ ಅಭಿವೃದ್ಧಿಯನ್ನು ಕೈಗೊಂಡಿದೆ. ಕೆಳ ಆರ್ಥಿಕ ವರ್ಗಗಳ ಸಾರ್ವಜನಿಕ ಗ್ರಂಥಾಲಯಗಳಿಗೆ ಕಂಪ್ಯೂಟರ್ ಹಾಗೂ ಅಂತರ್ಜಾಲ ಬಳಕೆಯನ್ನು ಒದಗಿಸುತ್ತದೆ. ಇದರ ಕೇಂದ್ರ ಕಚೇರಿ ಸಿಯಾಟಲ್‌ನಲ್ಲಿದೆ.

(ಪಿ.ಸಿ.ಎಸ್.)


**ಗೇಣಿ, ಗೇಣಿ ಸಿದ್ಧಾಂತ :** ಭೂಮಿಯ ಉಪಯೋಗಕ್ಕಾಗಿ, ವಿಶೇಷತಃ ಕೃಷಿ ಭೂಮಿಯ ಉಪಯೋಗಕ್ಕಾಗಿ, ಅದರ ಒಡೆಯನಿಗೆ ಸಲ್ಲುವ ಪ್ರತಿಫಲ (ರೆಂಟ್). ಭೂಮಿಯ ಮತ್ತು ನಿಸರ್ಗದ ಇತರ ನಿರುಪಾಧಿಕ ಕೊಡುಗೆಗಳ ಒಡೆತನದಿಂದ ಪಡೆದ ವರಮಾನ– ಎಂಬುದು ಆಲ್‌ಫ್ರೆ ಮಾರ್ಷಲ್ ನೀಡಿರುವ ವ್ಯಾಖ್ಯೆ. ಬಳಕೆಗಾಗಿ ಭೂಮಿಯನ್ನು ಗುತ್ತಿಗೆಗೆ ಕೊಟ್ಟಿದ್ದಕ್ಕಾಗಿ ಭೂಮಾಲೀಕ ಪಡೆದ ಪರಿಹಾರವೇ ಗೇಣಿ, ಎಂಬುದು ನ್ಯಾಯಶಾಸ್ತ್ರದ ವ್ಯಾಖ್ಯೆ.

18ನೆಯ ಶತಮಾನದ ನಡುಗಾಲದಲ್ಲಿದ್ದ ಫ್ರೆಂಚ್ ಪ್ರಕೃತಿಪ್ರಾಧಾನ್ಯವಾದಿಗಳು (ಫಿಸಿಯೊಕ್ರಾಟ್ಸ್) ಭೂಮಿ ಮತ್ತು ಅದರ ವಿಚಿತ್ರ ಶಕ್ತಿಗಳನ್ನು ಕುರಿತು ವಿಚಾರ ನಡೆಸಿದ್ದರು. ಆದರೆ ಭೂಮಿಯಿಂದ ಬಂದ ವರಮಾನವನ್ನು ಅವರು ಗೇಣಿಯೆಂದು ಕರೆಯಲಿಲ್ಲ, ನಿವ್ವಳ ಉತ್ಪನ್ನವೆಂದು ಕರೆದರು. ದುಡಿಮೆಯ ವೆಚ್ಚಕ್ಕಿಂತ ಅಧಿಕವಾದ ಪ್ರತಿಫಲವನ್ನು ನೀಡುವ ಶಕ್ತಿ ಭೂಮಿಗೆ ಮಾತ್ರ ಇದೆಯೆಂಬುದು ಅವರ ಭಾವನೆಯಾಗಿತ್ತು.


ಅನಂತರ ಬಂದ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಆಡಂ ಸ್ಮಿತ್‌ನ ದೃಷ್ಟಿ ಬೇರೆಯಾಗಿತ್ತು. ಭೂಮಿಯ ಶಕ್ತಿಗಿಂತಲೂ ಶ್ರಮವಿಭಜನೆಯೇ ರಾಷ್ಟ್ರಗಳ ಸಂಪತ್ತಿಗೆ ಆಧಾರವೆಂದು ಆತ ಹೇಳಿದ. ದುಡಿಮೆಗೆ ಪ್ರತಿಫಲವಾದ ಕೂಲಿ, ಬಂಡವಾಳಕ್ಕೆ ಪ್ರತಿಫಲವಾದ ಲಾಭ, ಭೂಮಿಗೆ ಪ್ರತಿಫಲವಾದ ಗೇಣಿ– ಇವು ಮೂರೂ ಅಂಶಗಳು ಪದಾರ್ಥಗಳ ಬೆಲೆಯಲ್ಲಿ ಸೇರಿವೆಯೆಂದು ಆತ ಪ್ರಥಮತಃ ವಿಶ್ಲೇಷಿಸಿದ. ಕೂಲಿ, ಲಾಭ ಮತ್ತು ಗೇಣಿಗಳ ಸಹಜ ದರವೊಂದು ಇದೆಯೆಂಬುದು ಆತನ ಭಾವನೆಯಾಗಿತ್ತು. ಭೂಮಿ ಇರುವಂಥ ಸ್ಥಳದ ನೆರೆಹೊರೆ ಅಥವಾ ಅಲ್ಲಿಯ ಸಮಾಜದ ಸಾಮಾನ್ಯ ಪರಿಸ್ಥಿತಿಗಳಿಂದಲೂ ಭೂಮಿಯ ಸಹಜವಾದ ಅಥವಾ ಅಭಿವೃದ್ಧಿ ಪಡಿಸಿದ ಫಲವತ್ತತೆಯಿಂದಲೂ ಅದರ ಸಾಮಾನ್ಯ ಅಥವಾ ಸರಾಸರಿ ಗೇಣಿಯ ದರ ನಿಶ್ಚಿತವಾಗುತ್ತದೆಯೆಂದು ಅವನು ಹೇಳಿದ್ದಾನೆ. ಆತನ ಪ್ರಕಾರ ನೆಲದ ಉತ್ಪನ್ನ ಎರಡು ಬಗೆ: 1.

ನೆಲದೊಡೆಯನಿಗೆ ಯಾವಾಗಲೂ ಗೇಣಿಯನ್ನು ದೊರಕಿಸಿಕೊಡುವಂಥ ಉತ್ಪನ್ನ (ಉದಾ: ಆಹಾರ) 2. ಕೆಲವು ಬಾರಿ ಗೇಣಿ ದೊರಕಿಸಿಕೊಡುವ, ಮತ್ತೆ ಕೆಲವು ಬಾರಿ ದೊರಕಿಸಿಕೊಡದೆ ಇರುವ ಉತ್ಪನ್ನ (ಉದಾ: ತುಪ್ಪಳ, ಉಣ್ಣೆ, ಕಲ್ಲು, ಕಲ್ಲಿದ್ದಲು, ಮರ ಮುಂತಾದವು). ಎರಡನೆಯ ಬಗೆಯನ್ನು ಕುರಿತು ವಿವೇಚನೆ ನಡೆಸುವಾಗ ಆಡಂ ಸ್ಮಿತ್ ಸೀಮಾಂತ ತತ್ತ್ವದ ದೃಗ್ಗೋಚರ ಮಾಡಿಸಿದನಾದರೂ ಗೇಣಿಯನ್ನು ಕುರಿತು ಅವನ ವಿವೇಚನೆ ಅಸ್ಪಷ್ಟವಾಗಿದೆ.

**ರಿಕಾರ್ಡೋನ ಗೇಣಿ ಸಿದ್ಧಾಂತ :** 19ನೆಯ ಶತಮಾನದ ಆದಿ ಭಾಗದಲ್ಲಿ ಡೇವಿಡ್ ರಿಕಾರ್ಡೋ ಗೇಣಿಯನ್ನು ಕುರಿತ ಸಿದ್ಧಾಂತವೊಂದನ್ನು ಮಂಡಿಸಿದ. ಇದೊಂದು ಅಭಿಜಾತ ಸಿದ್ಧಾಂತ. ಆತನ ಅಭಿಪ್ರಾಯದಲ್ಲಿ ಗೇಣಿಗೆ ಮೂಲವಾದ್ದು ಪ್ರಕೃತಿಯ ಕೃಪಣತನವೇ ವಿನಾ ಔದಾರ್ಯವಲ್ಲ. ಉತ್ತಮ ದರ್ಜೆಯ ಜಮೀನಿನ ಅಭಾವವೇ ಗೇಣಿಗೆ ಕಾರಣ. ಕೀಳು ದರ್ಜೆಯ ಜಮೀನಿಗೆ ಬೇಸಾಯವನ್ನು ವಿಸ್ತರಿಸಿದಾಗ, ಉತ್ತಮ ಜಮೀನಿನಲ್ಲಿ ದೊರೆಯುವ ಆಧಿಕ್ಯವನ್ನು ಭೂಮಾಲೀಕರು ಗೇಣಿ ಎಂದು ತೆಗೆದುಕೊಳ್ಳುತ್ತಾರೆ. ಭೂಮಾಲೀಕರು ಪಡೆಯುವ, ಸಂಪಾದಿಸದ ವರಮಾನವೇ ಗೇಣಿ. ಗೇಣಿ ಎಂದರೆ ಭೂಮಿಯ ಮೂಲ ಹಾಗೂ ಅವಿನಾಶಿ ಶಕ್ತಿಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಭೂಮಾಲೀಕನಿಗೆ ಕೊಡುವ ಭೂಮಿಯ ಉತ್ಪನ್ನದ ಭಾಗ ಎಂದು ರಿಕಾರ್ಡೋ ನಿರೂಪಿಸಿದ್ದಾನೆ.



ನಕ್ಷೆ 1



ನಕ್ಷೆ 2

ಭೂಮಿಯ ಗುಣ ಮತ್ತು ಸ್ಥಾನಿಕ ಸೌಕರ್ಯ ಎಲ್ಲೆಡೆಯೂ ಏಕರೀತಿ ಇರುವುದಿಲ್ಲ. ಅವು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಹೊಂದುತ್ತವೆ. ಒಂದು ಪ್ರದೇಶದಲ್ಲಿ ಜನ ನೆಲಸುವಾಗ ಮೊದಲು ಉತ್ಕೃಷ್ಟ ಜಮೀನನ್ನು ಬೇಸಾಯ ಮಾಡುತ್ತಾರೆ. ಕಾಲಕ್ರಮದಲ್ಲಿ ಜನಸಂಖ್ಯೆ ಹೆಚ್ಚಿ, ಆಹಾರ ಪದಾರ್ಥಗಳಿಗೆ ಬೇಡಿಕೆ ಹೆಚ್ಚಿದಾಗ, ಕಡಿಮೆ ದರ್ಜೆಯ ಜಮೀನುಗಳನ್ನೂ ಬೇಸಾಯ ಮಾಡಬೇಕಾಗುತ್ತದೆ. ಆದರೆ ಮೇಲುದರ್ಜೆಯ ಜಮೀನುಗಳಿಗೆ ಹಾಕುವಷ್ಟೇ ಪ್ರಮಾಣದಲ್ಲಿ ಬಂಡವಾಳ ಮತ್ತಿತರ ಉತ್ಪಾದನಾಂಗಗಳನ್ನು ಕಡಿಮೆ ದರ್ಜೆಯ ಜಮೀನುಗಳಿಗೂ ಹಾಕಿದಾಗ, ಇಳಿಮುಖ ಪ್ರತಿಫಲ ನಿಯಮ ಅನ್ವಯವಾಗುತ್ತದೆ. ಅಂದರೆ ಕೆಳದರ್ಜೆಯ ಭೂಮಿಯ ಉತ್ಪಾದನ ವೆಚ್ಚ ಅಧಿಕವಾಗುತ್ತದೆ. ಆ ವೆಚ್ಚಕ್ಕಿಂತ ಧಾನ್ಯದ ಬೆಲೆ ಕಡಿಮೆಯಿಲ್ಲದಿದ್ದರೆ ಮಾತ್ರ ಆ ಕೀಳು ಭೂಮಿಯನ್ನು ಬೇಸಾಯ ಮಾಡಬಹುದು. ಆದರೆ ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಮೇಲು ಕೀಳು ಜಮೀನುಗಳೆರಡರ ಉತ್ಪನ್ನಕ್ಕೂ ಬೆಲೆ ಒಂದೇ ದರದಲ್ಲಿರುತ್ತದೆ. ಆದ್ದರಿಂದ ಕಡಿಮೆ ವೆಚ್ಚ ತಗಲುವ ಮೇಲ್ದರ್ಜೆಯ ಭೂಮಿಯಲ್ಲಿ ಉತ್ಪನ್ನದ ಆಧಿಕ್ಯ ಕಂಡುಬರುತ್ತದೆ. ಈ ಆಧಿಕ್ಯಕ್ಕೆ ಕಾರಣ ಮೇಲ್ದರ್ಜೆಯ ಹಾಗೂ ಕೆಳದರ್ಜೆಯ ಜಮೀನುಗಳ ಸ್ವಾಭಾವಿಕ ಗುಣಗಳ ವ್ಯತ್ಯಾಸವೇ ವಿನಾ ಬೇರೇನೂ ಅಲ್ಲ. ಇದು ಭಿನ್ನಕ ಆಧಿಕ್ಯ (ಡಿಫರೆನ್ಷಿಯಲ್ ಸರ್ಪ್ಲಸ್). ಇದನ್ನು ಭೂಮಾಲೀಕ ಗೇಣಿ ಎಂದು ತೆಗೆದುಕೊಳ್ಳುತ್ತಾನೆ. ಧಾನ್ಯದ ಬೆಲೆ ಸೀಮಾಂತ ಭೂಮಿಯ ಉತ್ಪಾದನ ವೆಚ್ಚಕ್ಕೆ ಸಮನಾಗಿರುತ್ತದೆಯಾದ್ದರಿಂದ ಆ ಭೂಮಿಯಿಂದ ಅಧಿಕೋತ್ಪನ್ನ ದೊರಕುವುದಿಲ್ಲ. ಅದು ಗೇಣಿರಹಿತ ಭೂಮಿ.

ಧಾನ್ಯದ ಬೆಲೆ ನಿರ್ಧಾರವಾಗುವುದು ಸೀಮಾಂತ ಭೂಮಿ ಅಥವಾ ಗೇಣಿ ರಹಿತ ಭೂಮಿಯ ಉತ್ಪಾದನ ವೆಚ್ಚದ ಆಧಾರದ ಮೇಲಾದ್ದರಿಂದ ರಿಕಾರ್ಡೋನ ಅಭಿಪ್ರಾಯದಲ್ಲಿ ಬೆಲೆಯಿಂದ ಗೇಣಿ ನಿರ್ಧರಿಸಲ್ಪಡುವುದೇ ವಿನಾ ಬೆಲೆಯನ್ನು ಗೇಣಿ ನಿರ್ಧರಿಸುವುದಿಲ್ಲ. ಗೇಣಿ ಕೊಡಬೇಕಾಗಿ ಬಂದುದೇ ಧಾನ್ಯದ ಬೆಲೆ ಏರಿಕೆಗೆ ಕಾರಣವೆಂದು ಹೇಳುವುದು ಸರಿಯಲ್ಲ. ಧಾನ್ಯದ ಬೆಲೆ ಏರಿದಷ್ಟೂ ಸೀಮಾಂತ ಭೂಮಿಗೆ ಮೇಲ್ಪಟ್ಟ ಜಮೀನುಗಳ ಪ್ರತಿಫಲದ ಆಧಿಕ್ಯವೂ ಏರುತ್ತದೆ. ಗೇಣಿಯೂ ಹೆಚ್ಚುತ್ತದೆ.

ಮೇಲೆ ವಿವರಿಸಿದ, ರಿಕಾರ್ಡೋ ನೀಡಿರುವ ಗೇಣಿ ಸಿದ್ಧಾಂತ ವಿಸ್ತೃತ (ವ್ಯಾಪಕ) ವ್ಯವಸಾಯ ಪದ್ಧತಿ, ಸಾಂದ್ರ ವ್ಯವಸಾಯ ಪದ್ಧತಿ ಎರಡಕ್ಕೂ ಅನ್ವಯವಾಗುತ್ತದೆ. ವ್ಯಾಪಕ ಕೃಷಿ ಪದ್ಧತಿಯಲ್ಲಿ ಭೂಮಿಯ ಪರಿಮಾಣವನ್ನು ಹೆಚ್ಚಿಸುತ್ತ, ಉಳಿದ ಉತ್ಪಾದನಾಂಗಗಳ ಪರಿಮಾಣವನ್ನು ಒಂದೇ ಮಟ್ಟದಲ್ಲಿಡಲಾಗುವುದು. ಸಾಂದ್ರ ವ್ಯವಸಾಯ ಪದ್ಧತಿಯಲ್ಲಿ ಭೂಮಿಯ ಪರಿಮಾಣವನ್ನು ಹೆಚ್ಚಿಸಲು ಸಾಧ್ಯವಿಲ್ಲದ್ದರಿಂದ, ಇತರ ಉತ್ಪಾದನಾಂಗಗಳ ಪರಿಮಾಣವನ್ನು ಹೆಚ್ಚು ಮಾಡಲಾಗುವುದು. ಈ ಎರಡು ಬೇಸಾಯ ಪದ್ಧತಿಗಳಲ್ಲೂ ಇಳಿಮುಖ ಸೀಮಾಂತ ಪ್ರತಿಫಲ ಪ್ರವೃತ್ತಿ ತಲೆದೋರುತ್ತದೆ.

ವ್ಯಾಪಕ ವ್ಯವಸಾಯ ಪದ್ಧತಿಯನ್ನು ಸೂಚಿಸುವ ನಕ್ಷೆ 1 ರಲ್ಲಿ ಒಂದು ಗೊತ್ತಾದ ಪರಿಮಾಣದ ಬಂಡವಾಳ ಮತ್ತಿತರ ಉತ್ಪಾದನಾಂಗಗಳನ್ನು ಪ್ರಥಮ ದರ್ಜೆಯ ಜಮೀನಿಗೆ ಹಾಕಿದಾಗ 10 ಕ್ವಿಂಟಲ್, ದ್ವಿತೀಯ ದರ್ಜೆಯ ಜಮೀನಿಗೆ ಹಾಕಿದಾಗ 8 ಕ್ವಿಂಟಲ್, ತೃತೀಯ ದರ್ಜೆಯ ಜಮೀನಿಗೆ ಹಾಕಿದಾಗ 5 ಕ್ವಿಂಟಲ್ ಮತ್ತು ಚತುರ್ಥ ದರ್ಜೆಯ ಜಮೀನಿಗೆ ಹಾಕಿದಾಗ 3 ಕ್ವಿಂಟಲ್ ಬತ್ತ ಬರುತ್ತದೆ. ಇಲ್ಲಿ ಬತ್ತದ ಏಕಮಾನದ ಬೆಲೆ ನಾಲ್ಕನೆಯ ದರ್ಜೆಯ ಜಮೀನಿನ ಏಕಮಾನ ಉತ್ಪಾದನ ವೆಚ್ಚಕ್ಕೆ ಸಮನಾಗಿರುತ್ತದೆ. ಏಕೆಂದರೆ ನಾಲ್ಕನೆಯ ದರ್ಜೆಯ ಜಮೀನು ಸೀಮಾಂತ ಅಥವಾ ಗೇಣಿ ರಹಿತ ಭೂಮಿ. ಇದಕ್ಕೆ ಮೇಲ್ಮಟ್ಟದ ಮೂರು ಜಮೀನುಗಳಿಂದ ಭೂಮಾಲೀಕರಿಗೆ ಸಿಗುವ ಗೇಣಿ ಅನುಕ್ರಮವಾಗಿ 2, 5, 7, ಕ್ವಿಂಟಲ್ ಬತ್ತದ ಬೆಲೆ.

ಹಾಗೆಯೇ ಸಾಂದ್ರ ವ್ಯವಸಾಯ ಪದ್ಧತಿಯನ್ನು ಸೂಚಿಸುವ ನಕ್ಷೆ 2 ರಲ್ಲಿ, ಒಂದು ಗೊತ್ತಾದ ಗಾತ್ರದ ಭೂಮಿಗೇ ಹೆಚ್ಚು ಹೆಚ್ಚು ಪರಿಮಾಣಗಳಲ್ಲಿ ಶ್ರಮ ಮತ್ತು ಬಂಡವಾಳಗಳನ್ನು ಹಾಕಿದಾಗ ಮೊದಲನೆಯದರಿಂದ 10 ಕ್ವಿಂಟಲ್, ಎರಡನೆಯದರಿಂದ 8 ಕ್ವಿಂಟಲ್, ಮೂರನೆಯದರಿಂದ 5 ಕ್ವಿಂಟಲ್ ಮತ್ತು ನಾಲ್ಕನೆಯದರಿಂದ 3 ಕ್ವಿಂಟಲ್ ಬತ್ತ ಬರುತ್ತದೆ. ಇಲ್ಲಿಯೂ ನಾಲ್ಕನೆಯ ಪರಿಮಾಣದಿಂದ ಬರುವ ಬತ್ತದ ಉತ್ಪಾದನಾಂಗಗಳ (ಫ್ಯಾಕ್ಟರ್ಸ್ ಆಫ್ ಪ್ರೊಡಕ್ಷನ್) ವೆಚ್ಚ 3 ಕ್ವಿಂಟಲ್ ಬತ್ತದ ಬೆಲೆಗೆ ಸಮ. ಆದ್ದರಿಂದ ನಾಲ್ಕನೆಯ ಪರಿಮಾಣದ ಶ್ರಮ ಮತ್ತು ಬಂಡವಾಳದಿಂದ ಗೇಣಿ ಸಿಕ್ಕುವುದಿಲ್ಲ. ಇನ್ನುಳಿದ (ಹೆಚ್ಚಿನ ಮಟ್ಟಗಳ) ಪರಿಮಾಣಗಳಿಂದ ಅನುಕ್ರಮವಾಗಿ 2, 5, 7 ಕ್ವಿಂಟಲ್ ಬತ್ತ ಗೇಣಿಯಾಗಿ ಸಿಕ್ಕುತ್ತದೆ.

ರಿಕಾರ್ಡೋನ ಅಭಿಪ್ರಾಯದಲ್ಲಿ ಭೂಮಿಗೂ ಇತರ ಉತ್ಪಾದನಾಂಗಗಳಿಗೂ ವ್ಯತ್ಯಾಸವಿದೆ. ಭೂಮಿ ಪ್ರಕೃತಿಯ ಪ್ರಸಾದ; ಆದರೆ ಇತರ ಉತ್ಪಾದನಾಂಗಗಳು ಮನುಷ್ಯಕೃತ. ಭೂಮಿಯ ಪರಿಮಾಣವನ್ನು ಹೆಚ್ಚಿಸಲು ಸಾಧ್ಯವಿಲ್ಲ; ಆದರೆ ಇತರ ಉತ್ಪಾದನಾಂಗಗಳ ಪರಿಮಾಣಗಳನ್ನು ಅಧಿಕ ಪ್ರತಿಫಲ ನೀಡಿ ಹೆಚ್ಚಿಸಬಹುದು. ಆದ್ದರಿಂದ ಭೂಮಿಯ ಪ್ರತಿಫಲವಾದ ಗೇಣಿ ಧಾನ್ಯದ ಬೆಲೆಗೆ ಸೇರುವುದಿಲ್ಲ. ಆದರೆ ಶ್ರಮ, ಬಂಡವಾಳ ಮತ್ತು ಸಂಘಟನೆಗೆ ಪ್ರತಿಫಲವೆನಿಸುವ ವೇತನ, ಬಡ್ಡಿ ಮತ್ತು ಲಾಭ ಇವು ಬೆಲೆಗೆ ಸೇರುತ್ತವೆ.

ರಿಕಾರ್ಡೋನ ಗೇಣಿ ಸಿದ್ಧಾಂತವನ್ನು ಕುರಿತ ಟೀಕೆಗಳಿವು :

1. ರಿಕಾರ್ಡೋ ಊಹಿಸಿದಂತೆ ಭೂಮಿಯಲ್ಲಿ ಮೂಲ ಮತ್ತು ಅವಿನಾಶಿ ಶಕ್ತಿಗಳಿವೆಯೆನ್ನುವುದು ಸರಿಯಲ್ಲ. ಏಕೆಂದರೆ ದೀರ್ಘಕಾಲದ ಬೇಸಾಯದ ಫಲವಾಗಿ ಭೂಮಿ ತನ್ನ ನೈಜ ಸಾರವನ್ನು ಕಳೆದುಕೊಂಡಿದೆ. ಗೊಬ್ಬರ ಮುಂತಾದವನ್ನು ಹಾಕಿ ಮನುಷ್ಯ ಅದನ್ನು ಕೃಷಿಗೆ ಯೋಗ್ಯವಾಗಿಟ್ಟುಕೊಂಡಿದ್ದಾನೆ.

2. ರಿಕಾರ್ಡೋ ಹೇಳಿರುವ ಕ್ರಮದಲ್ಲಿಯೇ ಬೇಸಾಯಕ್ಕೆ ಭೂಮಿಯನ್ನು ಆಕ್ರಮಿಸಿಕೊಳ್ಳಲಾಗುವು ದೆಂಬುದಕ್ಕೆ ಚಾರಿತ್ರಿಕ ನಿದರ್ಶನವಿಲ್ಲ. ಅನೇಕ ಕಡೆ ಫಲವತ್ತಾದ ಭೂಮಿಗೂ ಮುಂಚೆಯೇ ಕಳಪೆ ಜಮೀನನ್ನು ಬೇಸಾಯ ಮಾಡಲಾಗಿದೆ.

3. ಭೂಮಿಗೆ ಮಾತ್ರ ಗೇಣಿ ದೊರೆಯುವುದೆಂಬುದನ್ನು ಜೋನ್ ರಾಬಿನ್ಸನ್ ಮುಂತಾದ ಅರ್ಥಶಾಸ್ತ್ರಜ್ಞರು ಟೀಕಿಸಿದ್ದಾರೆ. ಭೂಮಿಗೆ ಗೇಣಿ ದೊರಕಲು ಕಾರಣ ಶ್ರೇಷ್ಠ ದರ್ಜೆಯ ಜಮೀನಿನ ಅಭಾವ. ಅಲ್ಪಾವಧಿಯಲ್ಲಿ ಈ ಮಾತು ಇತರ ಉತ್ಪಾದನಾಂಗಗಳಿಗೂ ಅನ್ವಯಿಸುತ್ತದೆಯೆಂಬುದು ಆಲ್ಫ್ರೆ ಮಾರ್ಷಲ್ ಮೊದಲ್ಗೊಂಡು ಹಲವರ ಅಭಿಪ್ರಾಯ. ಆದರೆ ಭೂಮಿಯ ಪ್ರತ್ಯೇಕತೆಯನ್ನು ತೋರಿಸುವುದಕ್ಕಾಗಿ ಅದರಿಂದ ಪ್ರಾಪ್ತವಾಗುವ ಆಧಿಕ್ಯವನ್ನು ಗೇಣಿ ಎಂದು ಕರೆದು, ಇತರ ಉತ್ಪಾದನಾಂಗಗಳ ಆಧಿಕ್ಯವನ್ನು ಅರೆ-ಗೇಣಿ (ಕ್ವಾಸೈ-ರೆಂಟ್) ಎಂದು ಆತ ಕರೆದಿದ್ದಾನೆ.

4. ಶ್ರೇಷ್ಠ ದರ್ಜೆಯ ಭೂಮಿಯ ಅಭಾವದಿಂದ ಗೇಣಿ ದೊರಕುವುದೆಂದು ರಿಕಾರ್ಡೋ ಭಾವಿಸಿದ್ದ. ಆದರೆ ಒಂದು ವೇಳೆ ಎಲ್ಲ ಭೂಮಿಯೂ ಶ್ರೇಷ್ಠ ದರ್ಜೆಯದೇ ಆಗಿದ್ದರೂ ಗೇಣಿ ಇರುತ್ತದೆ. ಏಕೆಂದರೆ ಇಳಿಮುಖ ಪ್ರತಿಫಲ ಪ್ರವೃತ್ತಿ ಕಂಡುಬರುವುದು ಅನಿವಾರ್ಯ.

5. ಗೇಣಿ ಬೆಲೆಗೆ ಸೇರುವುದಿಲ್ಲ ಎಂಬ ಅಭಿಪ್ರಾಯವನ್ನು ಮಿಲ್ ಮುಂತಾದವರು ಟೀಕಿಸಿದ್ದಾರೆ. ಒಟ್ಟಿನಲ್ಲಿ ಭೂಮಿಯ ಪರಿಮಾಣವನ್ನು ಹೆಚ್ಚಿಸಲು ಸಾಧ್ಯವಾಗದಿದ್ದರೂ ಯಾವುದೇ ನಿರ್ದಿಷ್ಟ ಉದ್ದೇಶಕ್ಕೆ ಬೇಕಾಗುವ ಭೂಮಿಯ ಪರಿಮಾಣವನ್ನು ಹೆಚ್ಚಿಸಬಹುದು. ಕಡಿಮೆ ಪ್ರತಿಫಲ ನೀಡುವ ಉದ್ದೇಶದಿಂದ ಹೆಚ್ಚಿನ ಪ್ರತಿಫಲ ನೀಡುವ ಉದ್ದೇಶಕ್ಕೆ ಭೂಮಿಯನ್ನು ವರ್ಗಾಯಿಸುವುದರಿಂದ ಇದು ಸಾಧ್ಯ. ಆಗ ವರ್ಗಾವಣೆಯ ವೆಚ್ಚ ಬೆಲೆಯಲ್ಲಿ ಸೇರುತ್ತದೆ.

6. ರಿಕಾರ್ಡೋ ಸಿದ್ಧಾಂತ ಪರಿಪೂರ್ಣ ಸ್ಪರ್ಧೆಯ ಆಧಾರದ ಮೇಲೆ ರೂಪಿತವಾಗಿದೆ. ಆದರೆ ವಾಸ್ತವ ಪ್ರಪಂಚದಲ್ಲಿ ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿ ಇರುವುದಿಲ್ಲ.

ಈ ಕಾರಣಗಳಿಂದ ರಿಕಾರ್ಡೋ ಗೇಣಿ ಸಿದ್ಧಾಂತವನ್ನು ಟೀಕಿಸಿದರೂ, ಅದು ಅನೇಕ ರೀತಿಗಳಲ್ಲಿ ಉಪಯುಕ್ತವಾಗಿದೆ. ಜನಸಂಖ್ಯೆಯ ಒತ್ತಡ ಹೆಚ್ಚಿ ಆಹಾರಕ್ಕೆ ಬೇಡಿಕೆ ಹೆಚ್ಚಿದಂತೆಲ್ಲ ಕಡಿಮೆ ದರ್ಜೆಯ ಜಮೀನುಗಳನ್ನೂ ಬೇಸಾಯಕ್ಕೆ ತರಬೇಕಾಗುವುದೆಂಬ ಅಂಶವನ್ನು ಅದು ಒತ್ತಿ ಹೇಳುತ್ತದೆ. ಭೂಮಾಲೀಕ ವರ್ಗಕ್ಕೂ ಸಮಾಜದ ಇತರ ವರ್ಗಗಳಿಗೂ ಘರ್ಷಣೆಗೆ ಕಾರಣವೇನೆಂಬುದನ್ನು ಇದು ತಿಳಿಸುತ್ತದೆ. ಗೇಣಿ ಶ್ರಮರಹಿತ ವರಮಾನವೆಂದು ರಿಕಾರ್ಡೋ ಪ್ರತಿಪಾದಿಸಿದ ಮೇಲೆ ಅದನ್ನು ತೆರಿಗೆಯ ರೂಪದಲ್ಲಿ ಸರ್ಕಾರ ಕಸಿದುಕೊಳ್ಳಬೇಕೆಂದು ಮಿಲ್ ಒತ್ತಾಯಪಡಿಸಿದ. ಗೇಣಿಯನ್ನು ರದ್ದುಗೊಳಿಸಿದರೆ ಜನಸಾಮಾನ್ಯರ ದಾರಿದ್ರ್ಯ ನಿವಾರಣೆಯಾಗುವುದೆಂದು ಹೆನ್ರಿ ಜಾರ್ಜ್ ಭಾವಿಸಿದ. ಒಟ್ಟಿನಲ್ಲಿ ರಿಕಾರ್ಡೋ ಗೇಣಿ ಸಿದ್ಧಾಂತ ಸಮಾಜವಾದಿಗಳ ಅಭಿಪ್ರಾಯವನ್ನು ಪುಷ್ಟಿಗೊಳಿಸಲು ಸಹಾಯಕವಾಯಿತು.

**ಆಧುನಿಕ ಸಿದ್ಧಾಂತ :** ರಿಕಾರ್ಡೋ ಸಿದ್ಧಾಂತಕ್ಕನುಸಾರ ಗೇಣಿ ನಿಸರ್ಗದತ್ತವಾದ ಭೂಮಿಯ ವೈಶಿಷ್ಟ್ಯ. ಮೇಲುದರ್ಜೆಯ ಹಾಗೂ ಕೆಳದರ್ಜೆಯ ಭೂಮಿಗಳ ಉತ್ಪಾದನ ಸಾಮರ್ಥ್ಯಗಳ ವ್ಯತ್ಯಾಸವೇ ಗೇಣಿಗೆ ಕಾರಣ. ಆದ್ದರಿಂದ ಗೇಣಿ ಸಿದ್ಧಾಂತ ಭೂಮಿಗೆ ಮಾತ್ರ ಅನ್ವಯಿಸುತ್ತದೆ.

ಆದರೆ ಆಧುನಿಕ ಅರ್ಥಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಗೇಣಿ ಸಿದ್ಧಾಂತವನ್ನು ಭೂಮಿಗೆ ಮಾತ್ರವೇ ಅನ್ವಯಿಸಬೇಕಾಗಿಲ್ಲ. ಅದು ಎಲ್ಲ ಉತ್ಪಾದನಾಂಗಗಳಿಗೂ ಅನ್ವಯಿಸುತ್ತದೆ. ಭೂಮಿಯಂತೆಯೇ ಶ್ರಮ, ಬಂಡವಾಳ, ಸಂಘಟನೆ ಇವುಗಳ ಉತ್ಪಾದನ ಸಾಮರ್ಥ್ಯಗಳ ವ್ಯತ್ಯಾಸದಿಂದಲೂ ಗೇಣಿ ತಲೆದೋರುವುದೆನ್ನಬಹುದು. ದಕ್ಷ ಕಾರ್ಮಿಕರು ಮತ್ತು ಸಂಘಟಕರಿಂದ ಬರುವ ಅಧಿಕ ಪ್ರತಿಫಲವನ್ನು ಸಾಮರ್ಥ್ಯ ಗೇಣಿ ಎನ್ನಬಹುದು. ಹಾಗೆಯೇ ಬಂಡವಾಳಕ್ಕೆ ದೊರಕುವ ಸದವಕಾಶದಿಂದಾಗಿ ಬರುವ ಅಧಿಕ ಪ್ರತಿಫಲವನ್ನು ಸದವಕಾಶ ಗೇಣಿ ಅಥವಾ ಅವಸರ ಗೇಣಿ ಎನ್ನಬಹುದು. ಈ ದೃಷ್ಟಿಯಲ್ಲಿ ಗೇಣಿಗೂ ವೇತನಕ್ಕೂ ಯಾವ ವ್ಯತ್ಯಾಸವೂ ಇಲ್ಲವೆಂದು ವಿಕ್‌ಸ್ಟೀಡ್ ಹೇಳಿದ್ದಾನೆ. ವಾಕರ್ ಎಂಬ ಅಮೆರಿಕನ್ ಅರ್ಥಶಾಸ್ತ್ರಜ್ಞ ಲಾಭದ ಗೇಣಿ ಸಿದ್ಧಾಂತ ಎಂಬ ಪ್ರತ್ಯೇಕ ಸಿದ್ಧಾಂತವನ್ನೇ ಪ್ರತಿಪಾದಿಸಿದ್ದಾನೆ. ಇದರಿಂದ ವ್ಯಕ್ತವಾಗುವ ಅಂಶವೆಂದರೆ, ಗೇಣಿಯನ್ನು ಎಲ್ಲ ಉತ್ಪಾದನಾಂಗಗಳಲ್ಲೂ ಕಾಣಬಹುದು. ಮಾರ್ಷಲ್ ಹೇಳಿದಂತೆ ಗೇಣಿ ವಿಶಾಲತರ ಜಾತಿಯೊಂದರ (ಜೀನಸ್) ಪ್ರಮುಖ ಪ್ರಭೇದ (ಸ್ಪೀಷೀಸ್). ಆದ್ದರಿಂದ ಗೇಣಿ ಸಿದ್ಧಾಂತವನ್ನು ಭೂಮಿಗೆ ಮಾತ್ರವೇ ಅನ್ವಯಿಸದೆ ಎಲ್ಲ ಉತ್ಪಾದನಾಂಗಗಳಿಗೂ ಅನ್ವಯಿಸುವ ಒಂದು ಸಾಮಾನ್ಯ ಸಿದ್ಧಾಂತವಾಗಿ ರೂಪಿಸಬೇಕು. ಇದೇ ಆಧುನಿಕ ಗೇಣಿ ಸಿದ್ಧಾಂತದ ಉದ್ದೇಶ.

ಜಾನ್ ರಾಬಿನ್ಸನ್ ಪ್ರಕಾರ ಆಧುನಿಕ ಗೇಣಿ ಸಿದ್ಧಾಂತದ ಮುಖ್ಯಾಂಶಗಳು ಇವು: ಗೇಣಿಗೆ ಮೂಲ ಕಾರಣ ಉತ್ಪಾದನಾಂಗದ ಅಭಾವ; ಅಂದರೆ ಅದರ ಬೇಡಿಕೆಗೆ ತಕ್ಕ ಪ್ರಮಾಣದಲ್ಲಿ ಪೂರೈಕೆಯಿಲ್ಲದಿರುವುದು. ಇದು ಭೂಮಿಗೆ ಹೇಗೆ ಅನ್ವಯಿಸುವುದೋ ಹಾಗೆಯೇ ಇತರ ಉತ್ಪಾದನಾಂಗಗಳಿಗೂ ಅನ್ವಯಿಸುತ್ತದೆ. ನಿಸರ್ಗದತ್ತವಾದ ಭೂಮಿಯ ಪರಿಮಾಣವನ್ನು ಹೇಗೆ ಹೆಚ್ಚಿಸಲಾಗುವುದಿಲ್ಲವೋ ಹಾಗೆಯೇ ಮಾನವಕೃತವಾದ ಇತರ ಉತ್ಪಾದನಾಂಗಗಳ ಪರಿಮಾಣವನ್ನೂ ಅಲ್ಪಾವಧಿಯಲ್ಲಿ ಹೆಚ್ಚಿಸಲಾಗುವುದಿಲ್ಲ.

ಹೀಗಿರುವಾಗ ಅಲ್ಪಾವಧಿಯಲ್ಲಿ ಯಾವುದಾದರೂ ಉತ್ಪಾದನಾಂಗವನ್ನು ಹೆಚ್ಚು ಹೆಚ್ಚು ಪರಿಮಾಣಗಳಲ್ಲಿ ಉಪಯೋಗಿಸಿದರೆ, ಅದರ ಸೀಮಾಂತ ಏಕಮಾನದ ವರಮಾನ ಅದರ ಉತ್ಪನ್ನಕ್ಕೆ ಸಮನಾಗಿರುತ್ತದೆ. ಅದಕ್ಕೆ ಮೇಲ್ಪಟ್ಟಿದ ಏಕಮಾನಗಳಿಗೆ ಹೆಚ್ಚಿನ ವರಮಾನ ದೊರೆಯುತ್ತದೆ. ಆ ಹೆಚ್ಚುವರಿಯನ್ನು ಗೇಣಿ ಎನ್ನಬಹುದು.

ಈ ದೃಷ್ಟಿಯಲ್ಲಿ ಎಲ್ಲ ಉತ್ಪಾದನಾಂಗಗಳ ಪರಿಸ್ಥಿತಿಯೂ ಸ್ಥೂಲವಾಗಿ ಒಂದೇ. ವ್ಯತ್ಯಾಸವಿಷ್ಟೇ: ಭೂಮಿಯ ಪರಿಮಾಣ ಖಾಯಂ ಆಗಿ ನಿಶ್ಚಿತವಾಗಿರುತ್ತದೆ. ಇತರ ಉತ್ಪಾದನಾಂಗಗಳ ಪರಿಮಾಣ ತಾತ್ಕಾಲಿಕವಾಗಿ ನಿಶ್ಚಿತವಾಗಿರುತ್ತದೆ. ಸಾಕಷ್ಟು ಸಮಯ ದೊರೆತರೆ ಇವುಗಳ ಪರಿಮಾಣವನ್ನು ಹೆಚ್ಚಿಸಬಹುದು.

ಹೀಗೆ ಉತ್ಪಾದನಾಂಗಗಳಿಗೆ ಅಲ್ಪಾವಧಿಯಲ್ಲಿ ಅಭಾವವಿರುವಾಗ ಅವುಗಳಿಗೆ ಪರ್ಯಾಯ ಬೇಡಿಕೆಗಳಿರುತ್ತವೆ. ಆಗ ಅವು ಅಧಿಕ ವರಮಾನವನ್ನರಸುತ್ತ ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ವರ್ಗಾವಣೆ ಹೊಂದಲು ಪ್ರಯತ್ನಿಸುತ್ತವೆ. ಈ ಪರಿಸ್ಥಿತಿಯಲ್ಲಿ ಯಾವುದೇ ಉತ್ಪಾದನಾಂಗವನ್ನು ಒಂದು ಉದ್ಯಮದಲ್ಲಿ ಉಳಿಸಿಕೊಳ್ಳಲು ಅದಕ್ಕೆ ಸಲ್ಲಬೇಕಾದ ಬೆಲೆಯೇ ವರ್ಗಾವಣೆ ಸಂಪಾದನೆ (ಟ್ರಾನ್ಸ್‌ಫರ್ ಅರ್ನಿಂಗ್ಸ್). ಎಂದರೆ ಒಂದು ಉತ್ಪಾದನಾಂಗ ತನಗಿರುವ ಪರ್ಯಾಯ ಉದ್ಯೋಗಾವಕಾಶಗಳಲ್ಲಿ ಅತ್ಯಂತ ಫಲದಾಯಕ ಉದ್ಯೋಗದಿಂದ ಪಡೆಯುವ ಸಂಪಾದನೆ. ಈ ವರ್ಗಾವಣೆ ಸಂಪಾದನೆಯನ್ನು ಮೀರಿ ಬರುವ ವರಮಾನ, ಗೇಣಿ. ಉದಾಹರಣೆಗೆ ಒಬ್ಬ ಕಾರ್ಮಿಕನಿಗೆ ಒಂದು ಗಿರಣಿಯಲ್ಲಿ ದಿನಕ್ಕೆ 20 ರೂ. ವೇತನವಿದ್ದು, ಒಂದು ಅಂಗಡಿಯಲ್ಲಿ 12 ರೂ. ವೇತನ ದೊರೆಯುವುದಾದರೆ, ಆಗ ಗಿರಣಿಯ ದೃಷ್ಟಿಯಿಂದ ಅವನ ವರ್ಗಾವಣೆ ಸಂಪಾದನೆ 12 ರೂ. ಆತ ಗಿರಣಿಯ ಕೆಲಸ ಬಿಡದಂತೆ ತಡೆಯಲು ಅಷ್ಟನ್ನಾದರೂ ಕೊಡಲೇಬೇಕು. ಅದಕ್ಕೆ ಹೆಚ್ಚಾಗಿ ಕೊಡುವ 8 ರೂ. ಗೇಣಿ ಎನಿಸಿಕೊಳ್ಳುತ್ತದೆ.

ಆಲ್‌ಫ್ರೆ ಮಾರ್ಷಲ್ ಗೇಣಿ ಎಂಬ ಪದವನ್ನು ಭೂಮಿಯ ಹೆಚ್ಚಳದ ವರಮಾನಕ್ಕೇ ಮೀಸಲಿಟ್ಟು, ಇತರ ಉತ್ಪಾದನಾಂಗಗಳಿಗೆ ಅಲ್ಪಾವಧಿಯಲ್ಲಿ ದೊರೆಯುವ ಆಧಿಕ್ಯವನ್ನು ಅರೆ-ಗೇಣಿ ಅಥವಾ ಒಂದು ಬಗೆಯ ಗೇಣಿ ಎನ್ನುತ್ತಾನೆ. ಏಕೆಂದರೆ, ಗೇಣಿ ದೀರ್ಘಾವಧಿಯಲ್ಲಿಯೂ ಇರುತ್ತದೆ; ಆದರೆ ಅರೆ-ಗೇಣಿ ಅಲ್ಪಾವಧಿಯಲ್ಲಿ ಮಾತ್ರ ಇರುತ್ತದೆ; ದೀರ್ಘಾವಧಿಯಲ್ಲಿ ಅದು ಅದೃಶ್ಯವಾಗುತ್ತದೆ.

ಅರೆ-ಗೇಣಿ ತಲೆದೋರಲು ಕಾರಣವೇನೆಂದರೆ, ಅಲ್ಪಾವಧಿಯಲ್ಲಿ ಆ ಉತ್ಪಾದನಾಂಗದ ಪರಿಮಾಣವನ್ನು ಬೇಡಿಕೆಗೆ ಅನುಗುಣವಾಗಿ ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಆಗ ಆ ಉತ್ಪಾದನಾಂಗದ ಕೆಳದರ್ಜೆಯ ಏಕಮಾನಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಎಂದರೆ ಮೇಲ್ದರ್ಜೆಯ ಏಕಮಾನಗಳಿಗೆ ಹೆಚ್ಚಿನ ವರಮಾನ ಬರುತ್ತದೆ. ಆ ಆಧಿಕ್ಯವೇ ಗೇಣಿ. ಆದರೆ ಇದು ತಾತ್ಕಾಲಿಕ. ಏಕೆಂದರೆ, ಕಾಲಕ್ರಮದಲ್ಲಿ ಉತ್ತಮ ದರ್ಜೆಯ ಏಕಮಾನಗಳ ಸರಬರಾಯಿ ಹೆಚ್ಚಿದಂತೆ ಈ ಹೆಚ್ಚಳ ಕಡಿಮೆಯಾಗುತ್ತದೆ. ಉದಾಹರಣೆಗೆ, ಮೀನಿಗೆ ಇದ್ದಕ್ಕಿದ್ದಂತೆಯೇ ಅಧಿಕ ಬೇಡಿಕೆ ತಲೆದೋರಿದರೆ, ಮೀನಿನ ಬಲೆಗಳಿಗೆ ಬೇಡಿಕೆ ಹೆಚ್ಚುತ್ತದೆ. ಆದರೆ ಕೂಡಲೇ ಬಲೆಗಳ ಸರಬರಾಯಿಯನ್ನು ಹೆಚ್ಚಿಸಲಾಗುವುದಿಲ್ಲ. ಆದ್ದರಿಂದ ಹಳೆಯ ಬಲೆಗಳನ್ನು ಹೊರತರಲಾಗುತ್ತದೆ. ಆಗ ಉತ್ತಮ ಬಲೆಗಳಿಗೆ ಹಳೆಯ ಬಲೆಗಳಿಗಿಂತ ಹೆಚ್ಚಿನ ಬೆಲೆ ಬರುತ್ತದೆ. ಈ ಆಧಿಕ್ಯವೇ ಗೇಣಿ ಇದ್ದಂತೆ. ಆದರೆ ಇದು ತಾತ್ಕಾಲಿಕ ಮಾತ್ರ. ಏಕೆಂದರೆ, ಕಾಲಕ್ರಮದಲ್ಲಿ ಹೊಸ ಬಲೆಗಳು ತಯಾರಾಗಿ ಬರುತ್ತವೆ. ಬಲೆಗಳು ಪಡೆಯುತ್ತಿದ್ದ ಗೇಣಿ ಹೋಗುತ್ತದೆ.

ಅಲ್ಪಾವಧಿಯಲ್ಲಿ ಗೇಣಿ ಮತ್ತು ಅರೆ-ಗೇಣಿ ಎರಡೂ ಒಂದೇ. ಆದರೆ ದೀರ್ಘಾವಧಿಯಲ್ಲಿ ಅವು ಭಿನ್ನವಾದಂಥವು. ಈ ವ್ಯತ್ಯಾಸವನ್ನು ಮಾರ್ಷಲ್ ಉಲ್ಕಾ ಶಿಲೆಗಳ ಉದಾಹರಣೆಯ ಮೂಲಕ ತೋರಿಸಿದ್ದಾನೆ: ಒಂದೆಡೆ ಉಲ್ಕಾವೃಷ್ಟಿಯ ಫಲವಾಗಿ ಸಾವಿರಾರು ಉಲ್ಕಾ ಶಿಲೆಗಳು ಬಿದ್ದು ಚದರಿದವೆನ್ನೋಣ. ಒಂದನ್ನೂ ಬಿಡದೆ ಅವನ್ನು ಆರಿಸಿಕೊಳ್ಳಲಾಯಿತೆಂದೂ ಭಾವಿಸೋಣ. ಅವು ಕೈಗಾರಿಕೆಗಳಿಗೆ ಉಪಯುಕ್ತವೆಂದು ಕಂಡುಬಂದರೆ ಅವನ್ನು ಆರಿಸಿಟ್ಟುಕೊಂಡಿರುವವರು ಅಧಿಕ ಹಣ ಪಡೆಯುತ್ತಾರೆ. ಆದರೆ ಅಧಿಕ ಬೆಲೆ ಕೊಟ್ಟರೂ ಅವುಗಳ ಪರಿಮಾಣವನ್ನು ಹೆಚ್ಚಿಸಲಾಗುವುದಿಲ್ಲ. ಹೀಗೆ ಅಭಾವವಿರುವಾಗ ಅವುಗಳಿಗೆ ಕೊಡುವ ಬೆಲೆ ಗೇಣಿ ಎನಿಸಿಕೊಳ್ಳುತ್ತದೆ. ಒಂದು ವೇಳೆ ಅವು ಸುಲಭವಾಗಿ ದೊರಕುವಂತಾದರೆ ಅವುಗಳಿಗೆ ಗೇಣಿಯೇ ಇರುವುದಿಲ್ಲ. ಹಾಗಲ್ಲದೆ ಅವುಗಳ ಅಭಾವ ತಾತ್ಕಾಲಿಕವಾಗಿದ್ದು, ದೀರ್ಘಾವಧಿಯಲ್ಲಿ ಅವುಗಳ ಪರಿಮಾಣವನ್ನು ಹೆಚ್ಚಿಸಬಹುದಾದರೆ ಅವುಗಳಿಗೆ ಅಲ್ಪಾವಧಿಯಲ್ಲಿ ದೊರೆಯುವ ಬೆಲೆ ಅರೆ-ಗೇಣಿ ಎನಿಸಿಕೊಳ್ಳುತ್ತದೆ. (ಕೆ.ಎನ್.ಎಂ.)

**ಗೇಬಲ್, (ವಿಲಿಯಂ) ಕ್ಲಾರ್ಕ್ :** 1901-60. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಸಿನಿಮಾ ಪ್ರಪಂಚದಲ್ಲಿ ಮೆರೆದು ನಟಸಾರ್ವಭೌಮನೆಂದೆನಿಸಿಕೊಂಡ ಖ್ಯಾತ ನಟ. ಆಂಟೇರಿಯೋ ರಾಜ್ಯದ ಕ್ಯಾಡಿಜ್‌ನಲ್ಲಿ ಜನಿಸಿದ. ಈತನ ತಂದೆ ವಿಲಿಯಂ ಎಚ್. ಗೇಬಲ್ ಒಬ್ಬ ಎಣ್ಣೆಬಾವಿ ಕೆಲಸಗಾರನಾಗಿದ್ದ. ಗೇಬಲ್ ಚಿಕ್ಕವನಿದ್ದಾಗ ಸಣ್ಣಪುಟ್ಟ ಕೆಲಸಗಳನ್ನು ಮಾಡಿದ್ದನಷ್ಟೆ. ಅನಂತರ ಎಡ್ ಲಿಲ್ಲೀ ಷೇರು ಕಂಪನಿಯಲ್ಲಿ ಕೆಲ ಕಾಲ ಕೆಲಸದಲ್ಲಿದ್ದ. ಆಗಾಗ್ಗೆ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಈತ ವಹಿಸುತ್ತಿದ್ದ. 1924ಕ್ಕೆ ಮೊದಲು ಕೆಲವು

ಮೂಕ ಚಲನಚಿತ್ರಗಳಲ್ಲಿ ಪಾತ್ರ ವಹಿಸಲು ಆರಂಭಿಸಿ ಕ್ರಮೇಣ ಸುಧಾರಿತ ಚಲನಚಿತ್ರಗಳಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದ. 1928ರಲ್ಲಿ ಮ್ಯಾಕಿನಲ್ ಎಂಬ ಚಿತ್ರದಲ್ಲಿ ಈತನಿಗೆ ಒಂದು ಮುಖ್ಯ ಪಾತ್ರವನ್ನು ಕೊಡಲಾಯಿತು. ಈತನ ಮೊದಲ ಪತ್ನಿ (ಮದುವೆಯಾದದ್ದು 1924ರಲ್ಲಿ) ಜೋಸಫೀನ್ ಡಿಲ್ಲಾನ್ ಎಂಬುವಳು ಆ ಪ್ರಮುಖ ಪಾತ್ರ ವಹಿಸಲು ಈತನಿಗೆ ಬಹುವಾಗಿ ನೆರವಾದಳು. ಅನಂತರ ಹಾಲಿವುಡ್ಡಿಗೆ ಬಂದು ಅಲ್ಲಿ ಹೆಚ್ಚು ಕಡಿಮೆ ಎಲ್ಲ ಪ್ರಮುಖ ಚಿತ್ರಗಳಲ್ಲೂ ಪಾತ್ರ ವಹಿಸತೊಡಗಿದ. 1931ರಲ್ಲಿ ತೆರೆಕಂಡ ಕ್ಲ್ಯಾರೆನ್ಸ್ ಬ್ರೌನ್ ತಯಾರಿಸಿದ ಎ ಫ್ರೀ ಸೋಲ್ ಎಂಬ ಚಿತ್ರದಲ್ಲಿ ಈತನ ದರೋಡೆಕಾರನ ಪಾತ್ರ ಜನರ ಮೆಚ್ಚುಗೆ ಗಳಿಸಿತು. ಖ್ಯಾತ ಚಲನಚಿತ್ರ ನಿರ್ಮಾಪಕ ಸಂಸ್ಥೆ ಎನಿಸಿದ ಮೆಟ್ರೋ–ಗೋಲ್ಡ್‌ವಿನ್–ಮೇಯರ್ ಸ್ಟುಡಿಯೋದಲ್ಲಿ 1931–1954 ರವರೆಗೆ ಇದ್ದು ಅಲ್ಲಿ ತಯಾರಾಗುತ್ತಿದ್ದ ಬಹುತೇಕ ಚಿತ್ರಗಳಲ್ಲಿ ಪಾತ್ರ ವಹಿಸಿದ. ಈತನನ್ನು ಅಲ್ಲಿನ ಸಿನಿಪ್ರೇಮಿಗಳು ತಮ್ಮ ಆರಾಧ್ಯದೈವವೆಂದೇ ಪರಿಗಣಿಸಿದ್ದರು. ಈತನ ಪಾತ್ರಗಳಲ್ಲಿ ಪೌರುಷ, ಹಠವಾದಿತನ,



ಗಂಡುಗಲಿತನಗಳು ಕಂಡುಬರುತ್ತಿದ್ದು ಜನ ಈತನನ್ನು ಒರಟು ಸ್ವಭಾವದವನೆಂದು ಕರೆದರೂ ಗೇಬಲ್ ತನ್ನಲ್ಲಿದ್ದ ಆ ಆಕರ್ಷಣೀಯ ದೇಹ ಸೌಂದರ್ಯವನ್ನು ಎಂದೂ ಕಳೆದುಕೊಳ್ಳಲಿಲ್ಲ. ತನ್ನ ಮೂರನೆಯ ಪತ್ನಿ ಕ್ಯಾರಲ್ ಲಂಬಾರ್ಡ್ ತೀರಿಕೊಂಡ ಅನಂತರ ಅಮೆರಿಕ ಸಂಯುಕ್ತಸಂಸ್ಥಾನದ ವಾಯುಪಡೆಗೆ ಸೇರಿದ. ಆಗ ಎರಡನೆಯ ಮಹಾಯುದ್ಧದ ಸಮಯ. ಬಾಂಬು ಎಸೆತದ ವಿಮಾನ ಕಾರ್ಯಾಚರಣೆಗಳಲ್ಲಿ ಅತ್ಯದ್ಭುತ ಕೌಶಲವನ್ನು ಪ್ರದರ್ಶಿಸಿದ್ದರಿಂತ ಈತನಿಗೆ ವಾಯುಸೇನಾ ಪದಕವನ್ನೀಯಲಾಯಿತಲ್ಲದೆ ಈತನನ್ನು ಮೇಜರ್ ದರ್ಜೆಗೂ ಏರಿಸಲಾಯಿತು. ಈತನ ಐದನೆಯ ಪತ್ನಿ ಕೇ ವಿಲಿಯಂಸ್ ಸ್ಪ್ರೆಕ್ಕೆಲ್ಸ್ ತನ್ನ ಪತಿಯ ಮರಣದ ನಾಲ್ಕು ತಿಂಗಳಿನ ಅನಂತರ ಒಂದು ಗಂಡು ಮಗುವಿಗೆ ಜನ್ಮವಿತ್ತಳು.

ಜನಪ್ರಿಯ ಸಿನಿಮಾತಾರೆಯರಾದ ಗ್ರೀಟ ಗಾರ್ಬೋ, ಜೋನ್ ಕ್ರಾಫರ್ಡ್, ನಾರ್ಮ ಷಿಯರರ್, ಮರ್ನ ಲಾಯ್ ಮುಂತಾದವರೊಡನೆ ಗೇಬಲ್ ಪಾತ್ರವಹಿಸಿದ್ದಾನೆ. ಇವುಗಳಲ್ಲೆಲ್ಲ ಜೀನ್ ಹಾರ್ಲೋಳೊಡನೆ ಈತ ನಟಿಸಿದ ಪಾತ್ರ ಜನಪ್ರಶಂಸೆಗಳಿಸಿತು. ಇವರೀರ್ವರೂ ಒಟ್ಟುಗೂಡಿ ಆರು ಚಿತ್ರಗಳಲ್ಲಿ ಪಾತ್ರವಹಿಸಿದರು. ಫ್ರಾಂಕ್ ಕಾಪ್ರಾ ತಯಾರಿಸಿದ ಇಟ್ ಹ್ಯಾಪನ್ಡ್ ಒನ್ ನೈಟ್ ಎಂಬ ಚಲನಚಿತ್ರದಲ್ಲಿನ ಈತನ ಪಾತ್ರಕ್ಕೆ ಅಕೆಡಮಿ ಪ್ರಶಸ್ತಿ ದೊರೆತಿದೆ (1934).

ಫ್ರಾಂಕ್ ಲಾಯ್ಡ್‌ನ ಮ್ಯೂಟಿನಿ ಆನ್ ದಿ ಬೌಂಟಿ (1935), ವಿಲಿಯಂ ಎಸ್. ವ್ಯಾನ್‌ಡೈಕ್‌ನ ಸ್ಯಾನ್ ಫ್ರಾನ್ಸಿಸ್ಕೋ (1936), ಜಾನ್ ಎಂ. ಸ್ಟಾಹ್ಲನ ಪಾರ್ನೆಲ್ (1937); ಟೆಸ್ಟ್ ಪೈಲಟ್ (1938) ಮತ್ತು ವಿಕ್ಟರ್ ಫ್ಲೆಮಿಂಗನ ಗಾನ್ ವಿತ್ ದಿ ವಿಂಡ್ (1939) – ಮುಂತಾದವು ಈತನಿಗೆ ಹೆಸರು ತಂದ ಚಲನಚಿತ್ರಗಳು. ಆರ್ಥರ್ ಮಿಲ್ಲರನ ದಿ ಮಿಸ್‌ಫಿಟ್ಸ್ (1960) ಈತನ ಕಡೆಯ ಚಿತ್ರ. ಈತ ಹಾಲಿವುಡ್ಡಿನಲ್ಲಿ ಹೃದಯಾಘಾತದಿಂದ ನಿಧನನಾದ. *

**ಗೇಬ್ರಿಯಲ್ ಫ್ಯಾಲ್ಲೋಪಿಯಸ್ :** 1523–62. ಹದಿನಾರನೆಯ ಶತಮಾನದಲ್ಲಿ ಇಟಲಿಯಲ್ಲಿದ್ದ ಅತ್ಯಂತ ಪ್ರಮುಖ ಅಂಗರಚನಾ ವಿಜ್ಞಾನಿಗಳ ಪೈಕಿ ಒಬ್ಬ. ತನ್ನ ಕಾಲದಲ್ಲಿ ಅತ್ಯಂತ ಮೇಧಾವಿ ಪ್ರಾಣಿ ವಿಜ್ಞಾನಿ ಎನಿಸಿಕೊಂಡಿದ್ದ ಕುವಿಯರನ, (1779–1882), ಅಭಿಪ್ರಾಯದಂತೆ ಫ್ಯಾಲ್ಲೋಪಿಯಸ್, ಯೂಸ್ಟೇಕಿಯಸ್ ಮತ್ತು ವೆಸೇಲಿಯಸ್ ಇವರು ಮೂವರೂ ಹದಿನಾರನೆಯ ಶತಮಾನದಲ್ಲಿ ಅಂಗರಚನಾ ವಿಜ್ಞಾನಕ್ಕೆ ಅಧಿಕೃತದಾತರೆಂದು ನಿರ್ವಿವಾದವಾಗಿ ಪರಿಗಣಿಸಲ್ಪಡತಕ್ಕವರು. ಫ್ಯಾಲ್ಲೋಪಿಯಸ್ 1523ರಲ್ಲಿ ಮೊಡೆನ ಎಂಬಲ್ಲಿ ಜನಿಸಿದ. ಅಲ್ಲೆ ವಿದ್ಯಾಭ್ಯಾಸಮುಗಿಸಿ ಅಲ್ಲಿಯ ಮುಖ್ಯ ಆರಾಧನಾ ಮಂದಿರದ ಮಂಡಲಿಯ ಸದಸ್ಯನಾದ. ಆಸ್ತಿಕತೆಯ ಕಟ್ಟುನಿಟ್ಟುಗಳಿಗಿಂತ ಬಂಧವಿಮುಕ್ತ ಲೌಕಿಕದ ಬಗ್ಗೆ ಆದರ ಉಳ್ಳವನಾದ್ದರಿಂದ ಆ ಸ್ಥಾನದಿಂದ ಬಿಡುಗಡೆ ಹೊಂದಿ ಫೆರ್ರಾರ ಎಂಬಲ್ಲಿ ವೈದ್ಯಕೀಯ ವ್ಯಾಸಂಗ ಮಾಡಿದ. ಕೆಲಕಾಲ ಅಲ್ಲಿಯೇ ಅಂಗರಚನಾ ವಿಜ್ಞಾನಾಧ್ಯಾಪಕನಾಗಿದ್ದು ಮುಂದೆ 1548ರಲ್ಲಿ ಪೀಸಾ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ. ಮೂರು ವರ್ಷಗಳ ಬಳಿಕ ಪಾಡುವಾ ವಿಶ್ವವಿದ್ಯಾಲಯದಲ್ಲಿ ಅಂಗರಚನಾ ವಿಜ್ಞಾನ ಪ್ರಾಧ್ಯಾಪಕನಾಗಿ ಕೆಲಸ ಮಾಡಲು ತೆರಳಿದ. ಅಲ್ಲಿ ಇವನ ಗುರುವೂ ಅನಂತರ ಸ್ನೇಹಿತನೂ ಆಗಿದ್ದ ವೆಸೇಲಿಯಸ್, ಪ್ರಾಣಿ ಹಾಗೂ ಮಾನವಶವಗಳನ್ನು ಕೊಯ್ದು ಪ್ರತ್ಯಕ್ಷವಾಗಿ ಅಂಗರಚನೆಯನ್ನು ವ್ಯಾಸಂಗಿಸುವ ವಿಧಾನವನ್ನು ಆ ಹಿಂದೆಯೇ ಸ್ಥಾಪಿಸಿದ್ದ. ಅದರಂತೆ ಆತ (ವೆಸೇಲಿಯಸ್) ಗಳಿಸಿದ್ದ ಜ್ಞಾನವನ್ನು ಗ್ರಂಥೀಕರಿಸಿದ್ದಕ್ಕಾಗಿ, ಗ್ಯಾಲೆನ್ನನ ಗ್ರಂಥಗಳ ಕುರುಡುಪಾಠ ಹೇಳುತ್ತ ಅಂಗರಚನಾ ವಿಜ್ಞಾನ ಬೋಧಿಸುತ್ತಿದ್ದ ಇತರ ವಿಜ್ಞಾನಿಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸಿ ವೆಸೇಲಿಯಸ್ ಪಾಡುವಾವನ್ನು ಬಿಟ್ಟು ಹೊರಟು ಹೋಗುವಂತೆ ಮಾಡಿದ್ದರು. ಇದಾದ ಸುಮಾರು ಐದಾರು ವರ್ಷಗಳ ತರುವಾಯ ವೆಸೇಲಿಯಸ್ಸನ ಗಾದಿ ಏರಿದ ಫ್ಯಾಲ್ಲೋಪಿಯಸ್ ಮೊದಲಿನವನ ವ್ಯಾಸಂಗಕ್ರಮವನ್ನೇ ಮುಂದುವರಿಸಿ ಪ್ರಸಿದ್ಧಿ ಪಡೆದ. ಗ್ಯಾಲೆನ್ನನ ಗ್ರಂಥಗಳ ಕುರುಡುಪಾಠ ಮಾಡುವವರ ಅವಹೇಳನಗೈಯುವುದರಲ್ಲಿ ಫ್ಯಾಲ್ಲೋಪಿಯಸ್ ವೆಸೇಲಿಯಸ್ಸಿಗಿಂತ ಏನೂ ಕಡಿಮೆ ಇರಲಿಲ್ಲ. ಪ್ರಮುಖವಾಗಿ ಕಿವಿ ಮತ್ತು ಪ್ರಜನನಾಂಗಗಳಿಗೆ ಸಂಬಂಧಪಟ್ಟಂತೆ ಮೂಲವ್ಯಾಸಂಗಗಳನ್ನು ಮುಂದುವರಿಸುತ್ತ ಫ್ಯಾಲ್ಲೋಪಿಯಸ್ ಹನ್ನೊಂದು ವರ್ಷ ಪಾಡುವಾದಲ್ಲಿದ್ದು 1562 ಅಕ್ಟೋಬರ್ 9ರಂದು ಅಲ್ಲೆ ನಿಧನನಾದ.

ಕಿವಿಯೊಳಗಿರುವ ಕಾರ್ಡಟಿಂಪನಿ ನರ ಹಾಗೂ ಅರ್ಧವೃತ್ತನಾಳಗಳು (ಸೆಮಿಸರ್ಕ್ಯುಲರ್ ಕೆನಾಲ್ಸ್), ಟ್ರೈಜೆಮಿನಲ್, ಆಡಿಟರಿ ಮತ್ತು ಗ್ಲಾಸೋಫೆರಿನ್‌ಜಿಯಲ್ ನರಗಳು, ತಲೆಬುರುಡೆ ತಳದ ಸ್ಫೀನಾಯ್ಡ್ ಮೂಳೆಯ ಒಳಗಿರುವ ಡೊಗರು ಗರ್ಭಕೋಶನಾಳಗಳು, ಉದರದ ಒಳಗೆ ತೆರೆದುಕೊಳ್ಳುವ ದ್ವಾರಗಳು—ಇವುಗಳ ಇರುವಿಕೆಯನ್ನು ಫ್ಯಾಲ್ಲೋಪಿಯಸ್ ಸ್ಥಾಪಿಸಿದ. ಅಲ್ಲದೆ ಗರ್ಭಕೋಶನಾಳಗಳು (ಒವೇರಿಯನ್ ಟ್ಯೂಬ್ಸ್), ಯೋನಿ (ವೆಜೈನ), ಭಗಲಿಂಗ (ಕ್ಲೈಟೊರಿಸ್) ಜರಾಯು (ಪ್ಲಾಸೆಂಟ), ಒಳಕಿವಿಯ ಶಂಖಾಕಾರದ ಶ್ರವಣಭಾಗ (ಕಾಕ್ಲಿಯ) ಮುಂತಾದ ಅನೇಕ ದೇಹಭಾಗಗಳಿಗೆ ವೈಜ್ಞಾನಿಕ ಹೆಸರುಗಳನ್ನು ಕೊಟ್ಟ. ಭ್ರೂಣದ ಧಮನಿಗಳು ಮತ್ತು ಮೂಳೆಗಳ ವಿನ್ಯಾಸವನ್ನು ಮೊತ್ತಮೊದಲಿಗೆ ವಿವರಿಸಿದ್ದು ಫ್ಯಾಲ್ಲೋಪಿಯಸ್ಸೇ. ಅಂಗರಚನಾವಿಜ್ಞಾನಕ್ಕೆ ಇವನ ಈ ಕೊಡುಗೆಗಳಿಗಾಗಿ ಗರ್ಭಕೋಶ ನಾಳಗಳಿಗೆ ಫ್ಯಾಲ್ಲೋಪಿಯನ್ ಟ್ಯೂಬ್ಸ್ ಎಂದು ಹೆಸರಿಟ್ಟು ಮುಂದಿನ ಪೀಳಿಗೆಯವರು ಇವನನ್ನು ಗೌರವಿಸಿದ್ದಾರೆ. ಫ್ಯಾಲ್ಲೋಪಿಯಸ್ ಬರೀ ಅಂಗರಚನಾವಿಜ್ಞಾನಿ ಮಾತ್ರವಲ್ಲ. ಪಾಡುವಾದಲ್ಲಿ ಅವನು ಸಸ್ಯವಿಜ್ಞಾನಿಯೂ ಆಗಿದ್ದು ಆ ವಿಜ್ಞಾನಕ್ಕೆ ಸಂಬಂಧಪಟ್ಟ ಉದ್ಯಾನವನ್ನು ಉತ್ತಮ ಮಟ್ಟದಲ್ಲಿ ವೈಜ್ಞಾನಿಕವಾಗಿ ನಿರ್ಮಾಣ ಮಾಡಿಯೂ ಪ್ರಸಿದ್ಧಿ ಪಡೆದ. ಇವನು ರಚಿಸಿದ ಅಬ್ಸರ್ವೇಷನ್ಸ್ ಅನಟಾಮಿಕೆ ಎಂಬ ಗ್ರಂಥ ಒಂದೇ ಇವನ ಜೀವಮಾನದ ಕಾಲದಲ್ಲಿ (1561) ಪ್ರಕಟಿಸಲ್ಪಟ್ಟು ಇವನಿಗೆ ಬಹು ಗೌರವವನ್ನೂ (ವೆಸೇಲಿಯಸ್‌ನಿಂದಲೂ) ಪ್ರಸಿದ್ಧಿಯನ್ನೂ ಗಳಿಸಿಕೊಟ್ಟಿತ್ತು. ಇವನ ಮರಣಾನಂತರ 1564ರಲ್ಲಿ ಪ್ರಚಾರಿತವಾದ ಡಿ ಮಾರ್ಬೋ ಗ್ಯಾಲ್ಲಿಕೊ ಎಂಬ ಗ್ರಂಥದಲ್ಲೂ ಇವನ ಲೇಖನ ಇದೆ. ಇದು ಮುಂದೆ ಪರಂಗಿ ರೋಗದ ವ್ಯಾಸಂಗಕ್ಕೆ ದಾರಿ ಮಾಡಿಕೊಟ್ಟಂತೆ ಕಾಣುತ್ತದೆ. 1584ರಲ್ಲಿ ಫ್ಯಾಲ್ಲೋಪಿಯಸ್ಸನ ಶಿಷ್ಯರು ಅವನ ಬರಹಗಳೆಂದು ಮೂರು ಸಂಪುಟಗಳನ್ನು ಪ್ರಕಟಿಸಿದರು. ಆದರೆ ಇವುಗಳಲ್ಲಿ ಎಷ್ಟು ಅಂಶ ನಿಜವಾಗಿ ಫ್ಯಾಲ್ಲೋಪಿಯಸ್ಸನದೇ ಎನ್ನುವುದು ಅನುಮಾನ. (ಎಸ್.ಆರ್.ಆರ್.)

**ಗೇಮೋವ್, ಜಾರ್ಜ್ :** 1904–68. ರಷ್ಯದಲ್ಲಿ ಹುಟ್ಟಿ ಬೆಳೆದು ಅನಂತರದ ವರ್ಷಗಳಲ್ಲಿ ಅಮೆರಿಕದಲ್ಲಿ ನೆಲೆಸಿದ ಭೌತವಿಜ್ಞಾನಿ. ಜನಪ್ರಿಯ ವಿಜ್ಞಾನಲೇಖಕನಾಗಿ ಅಸಾಧಾರಣ ಖ್ಯಾತಿಯನ್ನು ಗಳಿಸಿದ್ದೇ ಕಾರಣವಿರಬಹುದು. ಇವನ ಪುಸ್ತಕಗಳನ್ನು ಓದಿ ಮೆಚ್ಚಿಕೊಂಡಿರುವ ಸಾಮಾನ್ಯ ಓದುಗರನೇಕರಿಗೆ ಗೇಮೋವ್ ವೈಜ್ಞಾನಿಕ ವೃತ್ತಗಳಲ್ಲಿಯೂ ಮಾನ್ಯತೆ ಪಡೆದಿದ್ದ ದೊಡ್ಡ ವಿಜ್ಞಾನಿಯಾಗಿದ್ದ ಎಂಬ ವಿಷಯವೇ ಗೊತ್ತಿಲ್ಲ. ಈತ ಭೌತಶಾಸ್ತ್ರದಲ್ಲಿ ಮತ್ತು ಖಗೋಳ ವಿಜ್ಞಾನದಲ್ಲಿ ಗಣನೀಯ ಸಂಶೋಧನೆ ನಡೆಸಿರುವನಲ್ಲದೆ ಅಣುಜೀವವಿಜ್ಞಾನದಲ್ಲಿಯೂ ಆಸಕ್ತಿ ತಳೆದು ಆ ಕ್ಷೇತ್ರಕ್ಕೆ ಕೂಡ ಗಮನಾರ್ಹ ಕೊಡುಗೆ ನೀಡಿದ್ದಾನೆ.

ಗೇಮೋವ್ ಯುಕ್ರೇನಿನಲ್ಲಿ ಕಪ್ಪು ಸಮುದ್ರದ ತೀರದಲ್ಲಿರುವ ಒಡೆಸ್ಸ ನಗರದಲ್ಲಿ 1904 ರ ಮಾರ್ಚ್ 4 ರಂದು ಜನಿಸಿದ. ಪ್ರಾಂತೀಯ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಗಿಸಿದ ಬಳಿಕ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿ ಪದವೀಧರನಾದ. ಪದವಿ ಪಡೆದ ತರುಣದಲ್ಲಿ ಒಂದು ಸಲ ಜರ್ಮನಿಯ ಗಾಟಿಂಗೆನ್ನಿನಲ್ಲಿ ಒಂದು ಬೇಸಿಗೆ ಅಧ್ಯಯನ ಶಿಬಿರದಲ್ಲಿ ಭಾಗವಹಿಸಿದ. ಪರಮಾಣು ರಚನೆಗೆ ಕ್ವಾಂಟಮ್ ಸಿದ್ಧಾಂತವನ್ನು ಅನ್ವಯಿಸುವುದರಲ್ಲಿ ಮ್ಯಾಕ್ಸ್ ಬಾರ್ನ್ ತಂಡದವರು

ಅಲ್ಲಿ ಸಾಧಿಸಿದ್ದ ಪ್ರಗತಿಯಿಂದ ಪ್ರಭಾವಿತನಾಗಿ ಪರಮಾಣು ಬೀಜದ ಅಧ್ಯಯನಕ್ಕೂ ಕ್ವಾಂಟಮ್ ಸಿದ್ಧಾಂತವನ್ನು ಅನ್ವಯಿಸುವ ಪ್ರಯತ್ನ ನಡೆಸಿ, ನೈಸರ್ಗಿಕ ವಿಕಿರಣ ಪಟುತ್ವವನ್ನೂ (ನ್ಯಾಚುರಲ್ ರೇಡಿಯೊ ಆ್ಯಕ್ಟಿವಿಟಿ) ಲಾರ್ಡ್ ರುದರ್ಫರ್ಡ್ ಸಾಧಿಸಿದ್ದ ಧಾತುಪರಿವರ್ತನೆಗಳನ್ನೂ (ಟ್ರಾನ್ಸ್‌ಮ್ಯುಟೇಷನ್ ಆಫ್ ಎಲಿಮೆಂಟ್ಸ್) ಸಮಂಜಸವಾಗಿ ವಿವರಿಸುವುದರಲ್ಲಿ ಜಯಶೀಲನಾದ. ಈ ಸಂಶೋಧನೆಗಳ ಆಧಾರದ ಮೇಲೆ ಈತ 1928 ರಲ್ಲಿ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದ ಪಿ.ಎಚ್‌ಡಿ. ಪದವಿಯನ್ನು ಪಡೆದ. 1928–29ರಲ್ಲಿ ಕೋಪನ್‌ಹೇಗನ್ನಿನ ಇನ್‌ಸ್ಟಿಟ್ಯೂಟ್ ಆಫ್ ಥಿಯೊರಿಟಿಕಲ್ ಫಿಸಿಕ್ಸ್‌ನಲ್ಲಿ ನೀಲ್ಸ್ ಬೋರನ ಜೊತೆಗೆ ಅದೇ ಸಂಶೋಧನೆಗಳನ್ನು ಮುಂದುವರಿಸಿದ. ಅದೇ ಸಮಯದಲ್ಲಿ, ಸೂರ್ಯನ ಅಂತರಾಳದಲ್ಲಿ ನಡೆಯುವ ಉಷ್ಣಬೈಜಿಕ ಕ್ರಿಯೆಗಳನ್ನು (ಥರ್ಮೋನ್ಯೂಕ್ಲಿಯರ್ ರಿಯಾಕ್ಷನ್ಸ್) ಕುರಿತ ಸಂಶೋಧನೆಯಲ್ಲಿ ಆಟ್ಕಿನ್ಸನ್ ಮತ್ತು ಹೌಟರ್‌ಮಾನ್ಸ್‌ರವರೊಂದಿಗೆ ಸಹಕರಿಸಿದ. ಅಲ್ಲಿಂದ ಒಂದು ವರ್ಷ ಕೇಂಬ್ರಿಜಿನಲ್ಲಿ ಲಾರ್ಡ್ ರುದರ್ಫರ್ಡ್‌ನೊಡನೆಯೂ ಪುನಃ ಒಂದು ವರ್ಷ ಕೋಪನ್‌ಹೇಗನ್ನಿ ನಲ್ಲಿ ನೀಲ್ಸ್ ಬೋರ್‌ನೊಡನೆಯೂ ಕಳೆದು 1931 ರಲ್ಲಿ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕನಾದ. 1933ರಲ್ಲಿ ಬ್ರಸೆಲ್ಸ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಾಲ್ವೆ ಕಾಂಗ್ರೆಸಿ ನಲ್ಲಿ ಭಾಗವಹಿಸಲು ಅಲ್ಲಿಗೆ ಹೋಗಿ ದ್ದಾಗ ಅಮೆರಿಕದ ಮಿಚಿಗನ್ ವಿಶ್ವವಿದ್ಯಾಲಯದವರು ಗೇಮೋವ್ ನನ್ನು ಉಪನ್ಯಾಸಕ್ಕಾಗಿ ತಮ್ಮಲ್ಲಿಗೆ ಆಹ್ವಾನಿಸಿದರು. ಆ ಪ್ರಕಾರ ಅಮೆರಿಕಕ್ಕೆ ತೆರಳಿದ ಗೇಮೋವ್ ಪುನಃ ತಾಯ್ನಾಡಿಗೆ ಹಿಂತಿರುಗಲೇ ಇಲ್ಲ: ಜಾರ್ಜ್ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕತ್ವವನ್ನು ಸ್ವೀಕರಿಸಿ ಅಮೆರಿಕದಲ್ಲಿಯೇ ನೆಲೆಸಿದ. 1956ರ ವರೆಗೂ ಅದೇ ವಿಶ್ವವಿದ್ಯಾಲಯದಲ್ಲಿದ್ದು ಅನಂತರ ಕಾಲೊರಾಡೋ ವಿಶ್ವವಿದ್ಯಾಲಯಕ್ಕೆ ತೆರಳಿದ.



ಪರಮಾಣು ಬೀಜದಲ್ಲಿರುವ ಪ್ರೋಟಾನ್ ಮತ್ತು ನ್ಯೂಟ್ರಾನುಗಳ ನಡುವೆ ಸ್ಥಿರ ವಿದ್ಯುದಾಕರ್ಷಣೆ (ಎಲೆಕ್ಟ್ರೊಸ್ಟ್ಯಾಟಿಕ್ ಅಟ್ರ್ಯಾಕ್ಷನ್) ಇಲ್ಲವಾದರೂ ಅವು ಒಂದಕ್ಕೊಂದು ಬಿಗಿಯಾಗಿ ಅಂಟಿಕೊಂಡಿರುವುದಕ್ಕೆ ಕಾರಣವಾದ ಯಾವುದೋ ಪ್ರಬಲವಾದ ಬಲಗಳಿವೆಯಷ್ಟೆ? ಈ ಬಲಗಳಿಗೂ ದ್ರವದಲ್ಲಿ ಅಣುಗಳು ಒಂದಕ್ಕೊಂದು ಅಂಟಿಕೊಂಡಿರುವುದಕ್ಕೆ ಕಾರಣವಾದ ಸಾಂಸಕ್ತಿಕ ಬಲಗಳಿಗೂ (ಕೊಹಿಸಿವ್ ಫೋರ್ಸಸ್) ಸಾಮ್ಯವಿರಬಹುದೆಂದು 1930 ರಲ್ಲಿ ಗೇಮೋವ್ ಸೂಚಿಸಿದ. ಅದರ ಪ್ರಕಾರ ಪರಮಾಣು ಬೀಜವನ್ನು ದ್ರವದ ಒಂದು ಹನಿ ಎಂದು ಚಿತ್ರಿಸಿಕೊಳ್ಳಬಹುದು. ಗೇಮೋವ್ ಮುಂದಿಟ್ಟ ಈ ಭಾವನೆಗಳಿಂದ ಪರಮಾಣು ಬೀಜದ ವರ್ತನೆಯನ್ನು ಅರ್ಥಮಾಡಿಕೊಳ್ಳಲು, ಅದರಲ್ಲೂ ಬೀಜ ವಿದಳನವನ್ನು (ನ್ಯೂಕ್ಲಿಯರ್ ಫಿಷನ್) ವಿವರಿಸಲು ಬಹಳ ಅನುಕೂಲವಾಯಿತು. ಈ ಸಿದ್ಧಾಂತವನ್ನು ಬೋರ್‌ನ ಸಹಕಾರದಿಂದ ಈತ ಮಂಡಿಸಿದ್ದು ಕೋಪನ್‌ಹೇಗನ್‌ನಲ್ಲಿದ್ದಾಗ. ಅದೇ ಸಮಯದಲ್ಲಿ ಗೇಮೋವ್ ಆಟ್ಕಿನ್ಸನ್ ಮತ್ತು ಹೌಟರ್‌ಮಾನ್ಸ್‌ರವರೊಂದಿಗೆ ಸಂಶೋಧನೆ ನಡೆಸಿ ನಕ್ಷತ್ರಗಳ ಒಳಗಡೆ ಸಂಭವಿಸುವ ಉಷ್ಣಬೈಜಿಕ ಕ್ರಿಯೆಗಳು ನಡೆಯುವ ದರವನ್ನು ಲೆಕ್ಕಹಾಕಲು ತನ್ನ ದ್ರವದ ಹನಿ ಮಾದರಿಯನ್ನು ಅನ್ವಯಿಸಿದ. ಇವನು ರೂಪಿಸಿದ ಸೂತ್ರವನ್ನು ಹೈಡ್ರೊಜನ್ ಬಾಂಬ್ ತಯಾರಿಕೆಯಲ್ಲಿ ಬಳಸಲಾಗುತ್ತದೆ.

ವಾಷಿಂಗ್‌ಟನ್ನಿನಲ್ಲಿದ್ದಾಗ ಗೇಮೋವ್ ಕೆಂಪು ದೈತ್ಯ ನಕ್ಷತ್ರಗಳ (ರೆಡ್ ಜಯಂಟ್ ಸ್ಟಾರ್ಸ್) ಒಳರಚನೆಯ ಬಗ್ಗೆ ಸಂಶೋಧನೆಯನ್ನು ಕೈಗೊಂಡ. ಈ ನಕ್ಷತ್ರಗಳ ಪ್ರಮುಖ ಇಂಧನವೆಂದು ನಂಬಲಾಗಿರುವ ಹೈಡ್ರೊಜನ್ ಮುಗಿಯುತ್ತ ಬಂದಂತೆ ನಕ್ಷತ್ರದ ಉಷ್ಣತೆ ಹೆಚ್ಚಾಗುವುದೆಂದು ಅವನು ತೋರಿಸಿದ. ನಕ್ಷತ್ರದ ವಯಸ್ಸೂ ಹೆಚ್ಚಾಗುತ್ತ ಹೋದಂತೆ ಅದು ತಣ್ಣಗಾಗುವುದೆಂದು ಅದುವರೆಗೆ ಭಾವಿಸಲಾಗಿದ್ದುದು ತಪ್ಪೆಂಬುದು ಇದರಿಂದ ವ್ಯಕ್ತವಾಯಿತು. ನಕ್ಷತ್ರದ ಉಷ್ಣತೆ ಹೀಗೆ ಅಧಿಕವಾಗುತ್ತ ಹೋಗಿ ಒಂದು ಹಂತದಲ್ಲಿ ನಕ್ಷತ್ರದೊಳಗಿನ ಬೈಜಿಕಕ್ರಿಯೆಗಳ ಫಲವಾಗಿ ಅಪಾರ ಸಂಖ್ಯೆಯ ನ್ಯೂಟ್ರಿನೊಗಳು ಉತ್ಪತ್ತಿಯಾಗುವುದೆಂದೂ ಅವು ನಕ್ಷತ್ರದ ದೇಹದ ಮೂಲಕ ಸರಾಗವಾಗಿ ಹಾದು ಹೊರಗೆ ಬಂದುಬಿಡುವುದರಿಂದ ನಕ್ಷತ್ರದ ಉಷ್ಣತೆ ಅಲ್ಲಿಂದ ಮುಂದೆ ವೇಗವಾಗಿ ಬಿದ್ದುಹೋಗುವುದೆಂದೂ ಅವನು ತೋರಿಸಿದ. ಗೇಮೋವ್ ಮತ್ತು ಷೋನ್‌ಬರ್ಗ್ ಜೊತೆಗೂಡಿ ರೂಪಿಸಿದ ಈ ಸಿದ್ಧಾಂತ ಉರ್ಕ ಪ್ರಕ್ರಿಯೆ (ಉರ್ಕ ಪ್ರೋಸೆಸ್) ಎಂದು ಪ್ರಸಿದ್ಧವಾಗಿದೆ.

ವಿಶ್ವದ ಉಗಮದ ಬಗ್ಗೆ ಲೆಮೇತರ್ ಪ್ರತಿಪಾದಿಸಿರುವ ಮಹಾಸ್ಫೋಟ ಸಿದ್ಧಾಂತದ (ಬಿಗ್ ಬ್ಯಾಂಗ್ ಥಿಯರಿ) ಪ್ರಮುಖ ಬೆಂಬಲಿಗರಲ್ಲಿ ಗೇಮೋವ್ ಕೂಡ ಒಬ್ಬ. ಲೆಮೇತರನ ಕಲ್ಪನೆಯ ವಿಶ್ವಾಂಡ (ಕಾಸ್ಮಿಕ್ ಎಗ್) ಸ್ಫೋಟಗೊಂಡ ತರುವಾಯ ಅನತಿ ಕಾಲದಲ್ಲಿಯೇ ರಾಸಾಯನಿಕ ಧಾತುಗಳೆಲ್ಲವೂ ಹೇಗೆ ರೂಪುಗೊಳ್ಳುವುವೆಂಬ ಬಗ್ಗೆ ಗೇಮೋವ್ ತನ್ನದೇ ಆದ ಒಂದು ಸಿದ್ಧಾಂತವನ್ನು ಮಂಡಿಸಿದ್ದಾನೆ. ಮಹಾಸ್ಫೋಟ ಸಿದ್ಧಾಂತಕ್ಕೆ ವಿರುದ್ಧವಾದ ಸ್ಥಿಮಿತ ಸ್ಥಿತಿ ಸಿದ್ಧಾಂತ (ಸ್ಟೆಡಿ ಸ್ಟೇಟ್ ಥಿಯರಿ) ಅಥವಾ ಅವಿರತ ಸೃಷ್ಟಿ ಸಿದ್ಧಾಂತದ (ಕಂಟಿನ್ಯುಯಸ್ ಕ್ರಿಯೇಷನ್ ಥಿಯರಿ) ಪ್ರಮುಖ ಬೆಂಬಲಿಗನಾದ ಫ್ರೆಡ್ ಹಾಯ್ಲ್‌ನಿಗೂ ಮಿಗಿಲಾದ ಪರಿಣಾಮಕಾರೀ ಜನಪ್ರಿಯ ಲೇಖಕ ಗೇಮೋವ್. ತನ್ನ ಪುಸ್ತಕಗಳ ಮತ್ತು ಲೇಖನಗಳ ಮೂಲಕ ಗೇಮೋವ್ ಲೆಮೇತರ್‌ನ ಸಿದ್ಧಾಂತಕ್ಕೆ ಅಪಾರವಾದ ಪ್ರಚಾರ ನೀಡಿದ್ದಾನೆ.

1954 ರಲ್ಲಿ ಗೇಮೋವ್ ಜೀವವಿಜ್ಞಾನದಲ್ಲಿ ಆಸಕ್ತನಾಗಿ ಪ್ರೋಟೀನುಗಳ ಸಂಶ್ಲೇಷಣೆಗೆ ನ್ಯೂಕ್ಲೆಯಿಕ್ ಆಮ್ಲ ಒಂದು ವಿಧವಾದ ಸಂಕೇತ ಭಾಷೆಯಾಗಿ ವರ್ತಿಸುವುದೆಂಬ ಸೂಚನೆಯನ್ನು ಮುಂದಿಟ್ಟ. ಅಲ್ಲದೆ ಪ್ರತಿಯೊಂದು ಅಮೈನೋ ಆಮ್ಲಕ್ಕೂ ಒಂದೊಂದು ನ್ಯೂಕ್ಲಿಯೊಟೈಡ್ ತ್ರಿವಳಿ ಸಂಕೇತವಾಗಿರುವುದೆಂದು ಮೊಟ್ಟಮೊದಲು ಸೂಚಿಸಿದವನೂ ಈತನೇ. ಈ ಸಿದ್ಧಾಂತಕ್ಕೆ 1961 ರಿಂದ ಈಚೆಗೆ ಹೇರಳವಾದ ಪುರಾವೆ ದೊರೆತಿದೆ.

ಗೇಮೋವ್ ಖ್ಯಾತ ಜನಪ್ರಿಯ ವಿಜ್ಞಾನ ಲೇಖಕ. ಈತ ಹುಟ್ಟಿದ್ದು ಬೆಳೆದದ್ದು ರಷ್ಯದಲ್ಲಿ; ವಿದ್ಯಾಭ್ಯಾಸ ಪಡೆದದ್ದು ರಷ್ಯನ್ ಭಾಷೆಯ ಮೂಲಕ. ಬಹುಶಃ ಈತನಿಗೆ 25 ವರ್ಷ ತುಂಬುವವರೆಗೂ ಇಂಗ್ಲಿಷ್ ಭಾಷೆಯೊಡನೆ ಹೆಚ್ಚಿನ ಸಂಪರ್ಕವಿರಲಿಲ್ಲ. ಆದರೂ ಇಂಗ್ಲಿಷ್ ಲೇಖನ ಕಲೆಯಲ್ಲಿ ಸಿದ್ಧಹಸ್ತನೆನಿಸಿಕೊಂಡ. ನಾಲ್ಕಾರು ಪ್ರೌಢವಿಜ್ಞಾನ ಗ್ರಂಥಗಳನ್ನಲ್ಲದೆ ಹತ್ತಿಪ್ಪತ್ತು ಜನಪ್ರಿಯ ವೈಜ್ಞಾನಿಕ ಪುಸ್ತಕಗಳನ್ನು ಬರೆದಿದ್ದಾನೆ. ಟಾಂಪ್‌ಕಿನ್ಸ್ ಇನ್ ವಂಡರ್ ಲ್ಯಾಂಡ್, ಟಾಂಪ್‌ಕಿನ್ಸ್ ಎಕ್ಸ್‌ಪ್ಲೋರ್ಸ್ ದಿ ಆಟಮ್ ಮುಂತಾದ ಈತನ ಟಾಂಪ್‌ಕಿನ್ಸ್ ಶ್ರೇಣಿಯ ಪುಸ್ತಕಗಳು ಮೊದಲು ಹೊರಬಂದಾಗ ಇಂಗ್ಲಿಷ್ ಓದುಗರ ಮೇಲೆ ಅವು ಬೀರಿದ ಪ್ರಭಾವ ಅದ್ಭುತವಾದುದಾಗಿತ್ತು. ಪರಿಣಾಮವಾಗಿ ಗೇಮೋವ್ ಎಂಬ ಹೆಸರು ಜನಪ್ರಿಯ ವಿಜ್ಞಾನ ಲೇಖಕ ಎಂಬುದಕ್ಕೆ ಒಂದು ಪರ್ಯಾಯ ಪದವಾಗಿ ಬಿಟ್ಟಿದೆ.


ಡೆನ್ಮಾರ್ಕಿನ ರಾಯಲ್ ಅಕಾಡೆಮಿ ಆಫ್ ಸೈನ್ಸಸ್ ಗೇಮೋವ್‌ನನ್ನು 1950 ರಲ್ಲಿ ಸಂಸ್ಥೆಯ ಸದಸ್ಯನನ್ನಾಗಿ ಸ್ವೀಕರಿಸಿ ಗೌರವಿಸಿತು. 1953 ರಲ್ಲಿ ಈತ ಅಮೆರಿಕದ ರಾಷ್ಟ್ರೀಯ ಸೈನ್ಸ್ ಅಕಾಡೆಮಿಯ ಸದಸ್ಯನಾಗಿ ಚುನಾಯಿತನಾದ. 1965ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಚರ್ಚಿಲ್ ಕಾಲೇಜಿನ ವಿದೇಶೀ ಫೆಲೋ ಆಗಿ ಚುನಾಯಿತನಾದ. ಯುನೆಸ್ಕೊ ಸಂಸ್ಥೆಯವರು ಪ್ರತಿ ವರ್ಷ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕಾಗಿ ನೀಡುವ ಕಳಿಂಗ ಬಹುಮಾನ 1956ರಲ್ಲಿ ಗೇಮೋವ್‌ಗೆ ದೊರೆಯಿತು. ಒರಿಸ್ಸ ರಾಜ್ಯದ ಒಂದು ಶ್ರೀಮಂತ ಮನೆತನದವರು ನಿರ್ಮಿಸಿರುವ ದತ್ತಿಯಿಂದ ಕೊಡಲಾಗುವ ಈ ಬಹುಮಾನದ ನಿಯಮದ ಪ್ರಕಾರ ಬಹುಮಾನಿತರು ಭಾರತಕ್ಕೆ ಬಂದು ಭಾರತದ ರಾಷ್ಟ್ರಪತಿಯವರಿಂದ ಈ ಬಹುಮಾನವನ್ನು ಸ್ವೀಕರಿಸಬೇಕು. ಅದರಂತೆ ಗೇಮೋವ್ 1956ರಲ್ಲಿ ಭಾರತಕ್ಕೆ ಬಂದು ಭಾರತದ ವಿವಿಧ ನಗರಗಳಿಗೆ ಭೇಟಿ ಕೊಟ್ಟು ಉಪನ್ಯಾಸಗಳನ್ನು ನೀಡಿದ್ದ.

1968ರ ಆಗಸ್ಟ್ 19ರಂದು ಕಾಲೊರಾಡೋನಲ್ಲಿರುವ ಬೌಲ್ಡರ್ ನಗರದಲ್ಲಿ ಈತ ನಿಧನನಾದ. (ಜೆ.ಆರ್.ಎಲ್.)

**ಗೇಯರೂಪಕ : ನೋಡಿ–ಗೀತರೂಪಕ**

**ಗೇಯಲ್ :** ಸ್ತನಿವರ್ಗ, ಆರ್ಟಿಯೊಡ್ಯಾಕ್ಟಿಲ ಗಣ, ಬೋವಿಡೀ ಕುಟುಂಬಕ್ಕೆ ಸೇರಿದ ಒಂದು ಪ್ರಾಣಿ. ಬೈಬಾಸ್ ಫ್ರಾಂಟ್ಯಾಲಿಸ್ ಇದರ ಶಾಸ್ತ್ರೀಯ ನಾಮ. ಭಾರತ ಮತ್ತು ಆಗ್ನೇಯ ಏಷ್ಯದಲ್ಲಿ ಕಾಣಬರುವ ಕಾಡುಕೋಣದ (ಗೌರ್) ಸಾಕುತಳಿ ಇದು ಎಂದು ಅನೇಕ ಪ್ರಾಣಿ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಆದರೆ ಕಾಡುಕೋಣಕ್ಕೂ ಗೇಯಲಿಗೂ ಹಲವಾರು ವ್ಯತ್ಯಾಸಗಳಿವೆ. ಕಾಡುಕೋಣಕ್ಕೆ ಹೋಲಿಸಿದರೆ ಗೇಯಲ್ ಚಿಕ್ಕಗಾತ್ರದ್ದು. ಇದರ ಎತ್ತರ 1.3 ಮೀ (5'), ಉದ್ದ 3 ಮೀ (9') ತೂಕ ಸುಮಾರು 540 ಕಿಗ್ರಾಂ. ದೇಹದ ಬಣ್ಣ ಕಪ್ಪುಮಿಶ್ರಿತ ಕಂದು. ಕೆಲವು

ಸಲ ನೀಲಿ ಛಾಯೆಯಿರುವುದುಂಟು. ಮಂಡಿಯ ಕೆಳಗಿನ ಭಾಗ ಮತ್ತು ಬಾಲದ ತುದಿಗಳು ಮಾತ್ರ ಬೆಳ್ಳಗಿವೆ. ಕೊಂಬುಗಳು ಮೋಟು. ತಲೆಯ ಆಚೀಚೆ ಅಗಲವಾಗಿ ಹರಡಿವೆ. ವ್ಯವಸಾಯಕ್ಕಾಗಲಿ, ಗಾಡಿಗೆ ಕಟ್ಟುವುದಕ್ಕಾಗಲಿ, ಹೈನಿಗಾಗಲಿ ಗೇಯಲ್



ಉಪಯುಕ್ತವಿಲ್ಲ. ಆದರೆ ಇದರ ಮಾಂಸ ಬಹಳ ರುಚಿಯಾದುದು. ಇದಕ್ಕಾಗಿಯೇ ಅಸ್ಸಾಂ, ಟೆನಸ್ಸಿರಂ ಮತ್ತು ಉತ್ತರ ಮಯನ್ಮಾರ್‌ನಲ್ಲಿ ಇದನ್ನು ಸಾಕುತ್ತಾರೆ. (ಎಚ್.ಬಿ.ಡಿ.)

**ಗೇಯಸ್ :** ರೋಮಿನ ಪ್ರಖ್ಯಾತ ನ್ಯಾಯ ತತ್ತ್ವವೇತ್ತ (ಜೂರಿಸ್ಟ್). ಈತ 2ನೆಯ ಶತಮಾನದಲ್ಲಿ ಬದುಕಿದ್ದನೆಂಬುದಷ್ಟೇ ತಿಳಿದಿದೆ. ಇವನು ರೋಂ ನ್ಯಾಯಶಾಸ್ತ್ರ ಚರಿತ್ರೆಯ ಸುವರ್ಣಯುಗದ ಆದಿಕಾಲದಲ್ಲಿದ್ದ. ಕೆಲವು ವಿದ್ವಾಂಸರು ಗೇಯಸ್ ಗ್ರೀಕನೆಂದು ಅಭಿಪ್ರಾಯಪಟ್ಟರೂ ಅದಕ್ಕೆ ಯಾವ ನಿರ್ದಿಷ್ಟ ಆಧಾರಗಳೂ ಇಲ್ಲ. ರೋಮಿನ ಪೌರನಾಗಿದ್ದು, ಲ್ಯಾಟಿನ್ ಭಾಷೆಯಲ್ಲಿ ಪರಿಣತನಾಗಿ, ಅದರಲ್ಲಿ ಅನೇಕ ಪುಸ್ತಕಗಳನ್ನು ಬರೆದಿರುವುದರಿಂದ ರೋಮಿನವನೆಂದು ಇತರ ವಿದ್ವಾಂಸರ ಅಭಿಪ್ರಾಯ.

ಸಮಕಾಲೀನ ಗ್ರಂಥಗಳಲ್ಲಾಗಲೀ ಆಗಿನ ಕಾಲದ ಚಕ್ರವರ್ತಿಗಳಿಂದ ವಿಶೇಷ ಪುರಸ್ಕೃತಿ ಹೊಂದಿದ ನ್ಯಾಯಶಾಸ್ತ್ರಜ್ಞರ ಮಾಲಿಕೆಯಲ್ಲಾಗಲೀ ಇವನ ಹೆಸರು ಕಂಡು ಬರದಿರುವುದರಿಂದ ಇವನು ತನ್ನ ಜೀವಿತಕಾಲದಲ್ಲಿ ವಿಶೇಷ ಪ್ರಸಿದ್ಧಿ ಹೊಂದಿರಲಿಲ್ಲ ವೆಂದು ಊಹಿಸಬಹುದು. 350ರ ಅನಂತರ ಗೇಯಸನ ಪುಸ್ತಕಗಳು ವಿದ್ವಜ್ಜನ ಪ್ರಿಯವಾಗಿ ಇವನ ಹೆಸರು ಖ್ಯಾತಿ ಪಡೆಯಿತು. ಯಾವುದೇ ವ್ಯವಹರಣೆಯಲ್ಲಿ ತೀರ್ಮ ನೀಡಬೇಕಾದಾಗ ನ್ಯಾಯಾಲಯದ ಅಧಿಕಾರಿಗಳು ಪರಿಗಣಿಸಬೇಕಾದ ಐವರು ನ್ಯಾಯತತ್ತ್ವವೇತ್ತರಲ್ಲಿ ಗೇಯಸನೂ ಒಬ್ಬನೆಂದು 3ನೆಯ ವ್ಯಾಲೆಂಟಿಯನ್ ಚಕ್ರವರ್ತಿ ಇವನನ್ನು ಹೆಸರಿಸಿದ. ಈ ಐವರ ಕೃತಿಗಳು ರೋಮನ್ ನ್ಯಾಯದ ಅತ್ಯಂತ ಮುಖ್ಯ ಆಕರಗಳಾಗಿ ಪರಿಣಮಿಸಿದುವು.

ಈತ ಬರೆದ ಅನೇಕ ಗ್ರಂಥಗಳಲ್ಲಿ ಈತನ ನ್ಯಾಯಸೂತ್ರಗಳು (ಇನ್ಸ್ಟಿಟ್ಯೂಟ್ಸ್) ಮುಖ್ಯ. ಈ ಗ್ರಂಥ ಸುಮಾರು 350 ವರ್ಷಗಳ ಕಾಲ ರೋಮಿನ ನ್ಯಾಯಶಾಸ್ತ್ರಾಭ್ಯಾಸಿಗಳ ಕೈಪಿಡಿಯಾಗಿತ್ತೆಂದು ಪೊಸ್ಟೆ ಎಂಬ ವಿದ್ವಾಂಸ ಹೇಳುತ್ತಾನೆ. ಸುಪ್ರಸಿದ್ಧವಾದ ಜಸ್ಟಿನಿಯನನ ನ್ಯಾಯಸೂತ್ರಗಳು ರೂಪಿತವಾದ್ದು ಗೇಯಸನ ಗ್ರಂಥದ ಆಧಾರದ ಮೇಲೆ. ಆ ಮಾದರಿಯಲ್ಲಿ ಗೇಯಸ್ ನ್ಯಾಯಶಾಸ್ತ್ರಾಧ್ಯಾಪಕನಾಗಿದ್ದನೆಂದೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೇ ಈ ಗ್ರಂಥವನ್ನು ಬರೆದನೆಂದೂ ನಂಬಲಾಗಿದೆ. ನ್ಯಾಯಸೂತ್ರಗಳನ್ನು ಕುರಿತು ಗೇಯಸ್ ಬರೆದಿರುವ ಗ್ರಂಥ ನಾಲ್ಕು ಭಾಗಗಳಾಗಿ ವಿಂಗಡವಾಗಿದೆ : 1. ವ್ಯಕ್ತಿಗಳು, ಕಾನೂನಿನ ದೃಷ್ಟಿಯಲ್ಲಿ ಅವರ ಭಿನ್ನ ಸ್ಥಾನಮಾನಗಳು; 2. ವಸ್ತುಗಳು ಮತ್ತು ಅವುಗಳನ್ನು ಪಡೆದುಕೊಳ್ಳುವ ವಿಧಾನಗಳು, ಉಯಿಲಿಗೆ ಸಂಬಂಧಿಸಿದ ಕಾನೂನು; 3. ಉಯಿಲು ಮಾಡದೆ ಮರಣಿಸಿದವನ ಉತ್ತರಾಧಿಕಾರ ಮತ್ತು ಹೊಣೆಗಳು; 4. ವ್ಯವಹರಣಕ್ರಮ ಮತ್ತು ಅದರ ನಾನಾ ರೂಪಗಳು. ಎಲ್ಲ ನ್ಯಾಯವೂ ವ್ಯಕ್ತಿಗಳಿಗೆ, ಸ್ವತ್ತಿಗೆ ಅಥವಾ ವ್ಯವಹರಣ ಕ್ರಮಕ್ಕೆ ಸಂಬಂಧಿಸಿದ್ದೆಂಬ ಆಧಾರದ ಮೇಲೆ ಅವನು ವಿವೇಚನೆಯನ್ನು ವರ್ಗೀಕರಿಸಿದ. ಈ ವರ್ಗೀಕರಣ ವಿಧಾನವನ್ನು ಜಸ್ಟಿನಿಯನನ ನ್ಯಾಯಸೂತ್ರಗಳಲ್ಲೂ ಅನುಸರಿಸಲಾಗಿದೆ. ಆದರೆ ಈ ವರ್ಗೀಕರಣದ ಭಿನ್ನಭಿನ್ನ ಭಾಗಗಳ ನಿಶ್ಚಿತವಾದ ಅರ್ಥ ಹಾಗೂ ಪರಿಮಿತಿಯ ಬಗೆಗೆ ತೀವ್ರ ವಿವಾದವಿದೆ. ಪ್ರಪ್ರಥಮವಾಗಿ ಈ ವರ್ಗೀಕರಣ ಮಾಡಿದವನು ಗೇಯಸ್ ಅಲ್ಲವೆಂದು ಅನೇಕ ಪಂಡಿತರು ಅಭಿಪ್ರಾಯಪಡುತ್ತಾರೆ. ಈ ವರ್ಗೀಕರಣ ಪರಂಪರಾಗತವಾಗಿದ್ದರೂ ಇದರ ಆಧಾರದ ಮೇಲೆ ಸುವ್ಯವಸ್ಥಿತವಾದ ವಿಷಯ ನಿರೂಪಣೆ ಮಾಡಿದವರಲ್ಲಿ ಗೇಯಸನೇ ಮೊದಲಿಗ; ಮಾರ್ಗದರ್ಶಕ.

ರೋಂ ಗಣರಾಜ್ಯ ಕಾಲದ ಮತ್ತು ಚಕ್ರಾಧಿಪತ್ಯದ ಮೊದಲನೆಯ ಎರಡು ಶತಮಾನಗಳಲ್ಲಿ ರೂಢಿಯಲ್ಲಿದ್ದ ನ್ಯಾಯಪದ್ಧತಿಯನ್ನು ಕುರಿತ ವಿಷಯಗಳಿಗೆ ಗೇಯಸನ ಈ ಕೃತಿಯೇ ಆಧಾರ. ಜಸ್ಟಿನಿಯನನ ನಿಬಂಧ (ಡೈಜೆಸ್ಟ್) ರೋಮನ್ ನ್ಯಾಯಶಾಸ್ತ್ರದ ಇತಿಹಾಸ ದೃಷ್ಟಿಯಿಂದ ಅಸಮರ್ಪಕವಾಗಿದ್ದು ಅನೇಕ ವಿಷಯಗಳಲ್ಲಿ ಊಹಾಪೋಹ ಗಳಿಗೆ ಮತ್ತು ವಿವಾದಗಳಿಗೆ ಅವಕಾಶ ನೀಡಿತ್ತು. 1816ರಲ್ಲಿ ಗೇಯಸನ ನ್ಯಾಯಸೂತ್ರಗಳ ಪ್ರತಿ ದೊರಕಿದಾಗ ಈ ಸಂದೇಹಗಳು ಪರಿಹಾರವಾದುವು. (ಬಿ.ವಿ.ಎ.)

**ಗೇರಿಕೆ, ಆಟ್ಟೋ ಫಾನ್ :** 1602–86. ಜರ್ಮನಿಯ ಭೌತವಿಜ್ಞಾನಿ. 1602ನೆಯ ನವೆಂಬರ್ 20ರಂದು ಪ್ರಷ್ಯನ್ ಸ್ಯಾಕ್ಸನಿಯ ಮ್ಯಾಗ್ಡೆಬರ್ಗ್ ಎಂಬಲ್ಲಿ ಜನನ. ಜರ್ಮನಿಯ ಲೇಡನ್‌ನಲ್ಲಿ ನ್ಯಾಯ ಹಾಗೂ ಗಣಿತಶಾಸ್ತ್ರಗಳ ಅಭ್ಯಾಸ. ಎರ್‌ಫರ್ಟ್ ಎಂಬಲ್ಲಿ ಮುಖ್ಯ ಎಂಜಿನಿಯರ್ ಆಗಿ ನೇಮಕ (1626). ಮ್ಯಾಗ್ಡೆಬರ್ಗ್‌ನ ಉಪಮೇಯರ್ ಆಗಿ (1627) ಬಳಿಕ ಅದೇ ನಗರದ ಮೇಯರ್ ಆಗಿ (1646) ಆಯ್ಕೆ. ಮುಂದೆ ಬ್ರಾಂಡನ್‌ಬರ್ಗ್‌ನ ಮ್ಯಾಜಿಸ್ಟ್ರೇಟ್ ಆಗಿ ಕೂಡ ನೇಮಕಗೊಂಡ. ತನ್ನ ವಿರಾಮ ಕಾಲವನ್ನು ವೈಜ್ಞಾನಿಕ ಸಂಶೋಧನೆಯಲ್ಲಿ ಅದರಲ್ಲೂ ವಾಯುಶಾಸ್ತ್ರ ಅಭ್ಯಾಸ ಮತ್ತು ಸಂಶೋಧನೆಯಲ್ಲಿ ಕಳೆಯುತ್ತಿದ್ದ. ಗೆಲಿಲಿಯೊ, ಪಾಸ್ಕಲ್ ಮತ್ತು ಟಾರಿಸೆಲ್ಲಿ ಇವರ ಸಂಶೋಧನೆಗಳಿಂದ ಪ್ರಭಾವಿತನಾಗಿ ನಿರ್ವಾತ ಉಂಟುಮಾಡುವ ವಿಧಾನಗಳನ್ನು ಕುರಿತು ಪ್ರಯೋಗಗಳನ್ನು ಮಾಡಿದ. ಈ ದಿಶೆಯಲ್ಲಿ ಗೇರಿಕೆ ಅನೇಕ ವಿಫಲತೆಗಳನ್ನು ಅನುಭವಿಸಿದ. ತರುವಾಯ ವಾಯುರೇಚಕವನ್ನು ರಚಿಸುವುದರಲ್ಲಿ ಯಶಸ್ವಿಯಾದ (1650). ಇದರ ಜೊತೆಗೆ ಸುತ್ತುತ್ತಿರುವ ಗಂಧಕದ ಚೆಂಡಿನ ವಿದ್ಯುದೀಕರಣದ ಮೇಲೆ ಆಧಾರಗೊಂಡಿರುವ ಒಂದು ವಿದ್ಯುದ್ಯಂತ್ರವನ್ನು ಕೂಡ ರಚಿಸಿದ. ಧೂಮಕೇತುಗಳು ಕಾಣಿಸಿಕೊಳ್ಳುವ ಅವಧಿಕಾಲವನ್ನು ಗಣಿಸಿದ. ಗೇರಿಕೆ ಬರೆದ ಎಕ್ಸ್‌ಪೆರಿಮೆಂಟ ನೋವ ಮ್ಯಾಗ್ಡೆಬರ್ಗಿಕ ಡೀ ವ್ಯಾಕ್ಯು ಓ ಸ್ಪೇಶಿಯೋ ಎಂಬ ಪುಸ್ತಕ ಬಹು ಪ್ರಸಿದ್ಧವಾದದ್ದು. ಅದರಲ್ಲಿ ಮ್ಯಾಗ್ಡೆಬರ್ಗ್ ಪ್ರಯೋಗ ಎಂಬ ಒಂದು ಚಿತ್ರವಿದೆ. ಒಳಗೆ ನಿರ್ವಾತಗೊಳಿಸಿರುವ ಮತ್ತು ಪರಸ್ಪರ ಅಂಟಿಕೊಂಡಿರುವ ಟೊಳ್ಳಾದ ಎರಡು ಅರ್ಧಗೋಳಗಳನ್ನು ಕುದುರೆಗಳ ಎರಡು ಗುಂಪು ವಿರುದ್ಧ ದಿಕ್ಕಿನಲ್ಲಿ ಎಳೆದರೂ ಆ ಅರ್ಧಗೋಳಗಳನ್ನು ಬೇರ್ಪಡಿಸ ಲಾಗದು ಎಂಬುದನ್ನು ತೋರಿಸುವುದೇ ಆ ಚಿತ್ರ.



ಮ್ಯಾಗ್ಡೆಬರ್ಗ್ ಅರ್ಧಗೋಳಗಳು

1686ರ ಮೇ11 ರಂದು ಗೇರಿಕೆ ಮೃತನಾದ. (ಪಿ.ವಿ.)

**ಗೇರಿ ಶಿಕ್ಷಣಪದ್ಧತಿ :** ಅಮೆರಿಕದ ಸಂಯುಕ್ತ ಸಂಸ್ಥಾನಗಳ ಇಂಡಿಯಾನದ ಗೇರಿ ಎಂಬಲ್ಲಿನ ಶಾಲೆಯೊಂದರಲ್ಲಿ ಶಾಲಾ ಮುಖ್ಯಾಧಿಕಾರಿಯಾಗಿದ್ದ ವಿಲಿಯಂ ಎ. ವರ್ಟ್ ಎಂಬಾತ 1908ರಲ್ಲಿ ಮೊಟ್ಟಮೊದಲು ಆಚರಣೆಗೆ ತಂದ ಒಂದು ಶಿಕ್ಷಣಪದ್ಧತಿ. ಶಾಲೆಯ ಮಕ್ಕಳಿಗೆ ಬೌದ್ಧಿಕ ಶಿಕ್ಷಣದ ಜೊತೆಗೆ ದೈಹಿಕ, ಕಲಾತ್ಮಕ ಮತ್ತು ವೈಜ್ಞಾನಿಕ ಶಿಕ್ಷಣವನ್ನೂ ನೀಡಬೇಕೆಂದು ವರ್ಟ್ ಭಾವಿಸಿದ. ಅದಕ್ಕಾಗಿ ತನ್ನ ಶಾಲೆಗೆ ಆಟದ ಮೈದಾನ, ಈಜುಕೊಳ, ತೋಟ, ವಿಜ್ಞಾನ ಪ್ರಯೋಗಾಲಯ, ಯಂತ್ರಕಾರ್ಯಾಗಾರ, ಗಾನ ಮತ್ತು ನೃತ್ಯಮಂದಿರ–ಇವನ್ನೆಲ್ಲ ನಿರ್ಮಿಸಿಕೊಂಡ. ಆಟ, ಪ್ರಯೋಗಾಲಯ ಮತ್ತು ಕಾರ್ಯಾಗಾರದ ಕೆಲಸ, ಸಾಮಾಜಿಕ ಮತ್ತು ಕ್ರಿಯಾತ್ಮಕ ಕಾರ್ಯ, ಸಾಂಪ್ರದಾಯಿಕ ವಿಷಯಗಳ ವ್ಯಾಸಂಗ–ಇವನ್ನು ಶಾಲೆಯ ಕಾರ್ಯಕ್ರಮಗಳಲ್ಲಿ ಸೇರಿಸಿದ್ದ. ಮಕ್ಕಳ ಕಾಲವನ್ನು ಫಲದಾಯಕವಾಗಿ ಬಳಸಿಕೊಳ್ಳುವುದಕ್ಕೂ ವಿರಾಮದಲ್ಲಿ ಹೊರಗೆ ಅವರು ವ್ಯರ್ಥ ಕಾಲಹರಣ ಮಾಡುವುದನ್ನು ತಪ್ಪಿಸುವುದಕ್ಕೂ ವ್ಯಾಸಂಗದ ಅನಂತರ ಆಟವನ್ನೂ ಆಟದ ಅನಂತರ ವ್ಯಾಸಂಗವನ್ನೂ ಪರ್ಯಾಯವಾಗಿ ವೇಳಾಪಟ್ಟಿಯಲ್ಲಿ ಸೇರಿಸಿದ. ಇದಕ್ಕನುಕೂಲಿಸುವಂತೆ ಇಡೀ ಶಾಲೆಯ ವಿದ್ಯಾರ್ಥಿಗಳನ್ನು ಎರಡು ಪಂಗಡಗಳಾಗಿ (ಪ್ಲಟೂನ್) ವಿಂಗಡಿಸಿದ–ತರಗತಿಯ ಪಂಗಡ ಮತ್ತು ಆಟ ಇಲ್ಲವೆ ಕೆಲಸದ ಪಂಗಡ ಎಂದು. ಮೊದಲ ಪಂಗಡ ತರಗತಿಯ ವ್ಯಾಸಂಗದಲ್ಲಿದ್ದರೆ ಎರಡನೆಯ ಪಂಗಡ ಆಟದ ಮೈದಾನದಲ್ಲೋ ಇತರ ಕಾರ್ಯಾಲಯದಲ್ಲೋ ಇರುವಂತೆ ವೇಳಾಪಟ್ಟಿಯನ್ನು ರಚಿಸಿದ. ಇದರಿಂದ ಇಡೀ ಶಾಲೆಯ ಸೌಲಭ್ಯವನ್ನು ದಿನದ ಎಲ್ಲ ವೇಳೆಯಲ್ಲೂ ಬಳಸಿಕೊಳ್ಳುವ ಅವಕಾಶವಾಗಿ, ಅಲ್ಲಿನ ಶಿಕ್ಷಣಾಧಿಕಾರಿಗಳು ಕಟ್ಟಡದ ನಿರ್ಮಾಣಕ್ಕೆ ಸಾಮಾನ್ಯಶಾಲೆಗೆ ಬೇಕಾಗುತ್ತಿದ್ದ ಹಣದಲ್ಲಿ ಅರ್ಧವನ್ನು ಮಾತ್ರ

ವ್ಯಯಮಾಡಬೇಕಾಗುತ್ತಿತ್ತು. ಅಲ್ಲಿ ವಿದ್ಯಾರ್ಥಿಗಳು ಇತರರಿಗಿಂತ ಹೆಚ್ಚುಕಾಲ ಶಾಲೆಯಲ್ಲಿದ್ದು ಕಡಿಮೆ ವೆಚ್ಚದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಲಿಕೆಯನ್ನು ಸಾಧಿಸುತ್ತಿದ್ದರು.

ಗೇರಿ ಶಾಲೆಯಲ್ಲಿ ಕಿಂಡರ್‌ಗಾರ್ಟನ್ನಿನಿಂದ ಪ್ರೌಢಶಾಲೆಯವರೆಗಿನ ತರಗತಿಗಳಿರುತ್ತಿದ್ದು, ಹಿರಿಯರನ್ನು ನೋಡಿ ಕಿರಿಯರು ಕಲಿಯುವುದಕ್ಕೂ ಕಿರಿಯರ ಬಗ್ಗೆ ಹಿರಿಯರು ತಮ್ಮ ಹೊಣೆಯನ್ನು ನಿರ್ವಹಿಸುವುದನ್ನು ರೂಢಿಸಿಕೊಳ್ಳುವುದಕ್ಕೂ ಅವಕಾಶವಿತ್ತು. ವಿದ್ಯಾರ್ಥಿಗಳು ಕಲಿಯುವ ವಿಷಯಗಳನ್ನೂ ಮಾಡುವ ಕೆಲಸಗಳನ್ನೂ ಸಮಾಜ ಜೀವನದೊಡನೆ ಸಂಬಂಧಿಸಿಕೊಳ್ಳಲಾಗುತ್ತಿತ್ತು. ರಸಾಯನಶಾಸ್ತ್ರದಲ್ಲಿ ಬರುವ ನೀರು ಸರಬರಾಜು ಪಾಠವನ್ನು ಆ ಊರಿನ ಪೌರಸಭೆಯ ನೀರಿನ ಇಲಾಖೆಯ ಎಂಜಿನಿಯರೂ ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದ ಪಾಠವನ್ನು ಅಲ್ಲಿನ ಆರೋಗ್ಯಾಧಿಕಾರಿಯೂ ಬೋಧಿಸುವ ವ್ಯವಸ್ಥೆಯಿತ್ತು. ಹೀಗೆಯೆ ಇತರ ಪಾಠಗಳಲ್ಲಿ ಕೂಡ. ಕಾರ್ಯಾಗಾರಗಳಲ್ಲಿ ಶಾಲೆಗೆ ಬೇಕಾಗುವ ವಸ್ತುಗಳನ್ನು ಮಾಡಿಸುತ್ತಿದ್ದರು. ಗೃಹವಿಜ್ಞಾನದ ತರಗತಿಯಲ್ಲಿ ಮಧ್ಯಾಹ್ನದ ಉಪಾಹಾರ ತಯಾರಿಸಿ ಬಡಿಸುತ್ತಿದ್ದರು. ಯಂತ್ರಕಾರ್ಯಾಗಾರ, ಉಪನ್ಯಾಸ ಮಂದಿರ, ಆಟದ ಮೈದಾನ-ಇತ್ಯಾದಿಗಳಲ್ಲಿರುವಾಗ ಮಕ್ಕಳು ಊರಿನ ಹಿರಿಯರ ಸಂಪರ್ಕವನ್ನೂ ಪಡೆಯಬಹುದಾಗಿದ್ದು ಅವರ ಸಾಮಾಜಿಕ ಜೀವನ ವೃದ್ಧಿಯಾಗಲು ಅವಕಾಶವಾಗುತ್ತಿತ್ತು. ದಿನಾಚರಣೆ, ಚರ್ಚೆ, ನಾಟಕಾಭಿನಯ, ನೃತ್ಯ-ಇವುಗಳಿಗೆ ಸಿದ್ಧತೆ ಪಡೆಯುವಾಗ ಅವರ ಕಲಾಜೀವನ ವರ್ಧಿಸುತ್ತಿತ್ತು.

ಒಟ್ಟಿನಲ್ಲಿ ಈ ಶಿಕ್ಷಣಪದ್ಧತಿ ಸಾಂಪ್ರದಾಯಿಕ ಶಿಕ್ಷಣವೀಯುವುದರ ಜೊತೆಗೆ ವಿದ್ಯಾರ್ಥಿಗಳ ಪೂರ್ಣ ಬೆಳೆವಣಿಗೆಗೂ ಅವಕಾಶವೀಯುತ್ತಿತ್ತು; ವಿದ್ಯಾರ್ಥಿಗಳಿಗೆ ಅಲ್ಲಿನ ಜೀವನ ಅರ್ಥಪೂರ್ಣವಾಗಿರುತ್ತಿತ್ತು. ಈ ಪದ್ಧತಿ ಮೂಲರೂಪದಲ್ಲಿ ಈಗ ಅಷ್ಟಾಗಿ ಪ್ರಚಾರದಲ್ಲಿಲ್ಲದಿದ್ದರೂ ಅದರ ಉತ್ತಮಾಂಶಗಳು ಕ್ರಮಕ್ರಮವಾಗಿ ಶಿಕ್ಷಣವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿವೆ. ವಿದ್ಯಾರ್ಥಿಸಂಖ್ಯೆ ಅಧಿಕವಾಗಿರುವ ಭಾರತದಂಥ ದೇಶಗಳಲ್ಲಿ ಸ್ಥಳಾವಕಾಶ ದೊರಕಿಸಿಕೊಳ್ಳಲು ಇರುವ ಕಟ್ಟಡಾದಿ ಅಲ್ಪ ಸೌಲಭ್ಯಗಳನ್ನು ಸರದಿಯ ಪ್ರಕಾರ ಬಳಸಿಕೊಳ್ಳಲು ಈ ಪದ್ಧತಿ ಬೆಳಕು ನೀಡಬಲ್ಲುದು.

ಇದನ್ನು ಪ್ಲಟೂನ್ ಶಾಲೆ, ಕೆಲಸ-ವ್ಯಾಸಂಗ-ಆಟದ ಶಾಲೆ, ಪರ್ಯಾಯ ಯೋಜನೆಯ ಪಾಠಶಾಲೆ ಇತ್ಯಾದಿ ಹೆಸರುಗಳಿಂದಲೂ ಕರೆಯುವುದುಂಟು. (ಕೆ.ಬಿ.)

**ಗೇರುಸೊಪ್ಪೆ :** ಗೇರುಸೊಪ್ಪೆ ಜಲಪಾತಕ್ಕೂ ಹೊನ್ನಾವರಕ್ಕೂ ನಡುವೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವ ಒಂದು ಹಳ್ಳಿ. ಶರಾವತಿಯ ಎಡದಂಡೆಯ ಮೇಲೆ, ತೆಂಗಿನ ತೋಪುಗಳ ಮಧ್ಯೆ, ಜಲಪಾತದಿಂದ 29 ಕಿಮೀ ದೂರದಲ್ಲೂ ಹೊನ್ನಾವರದಿಂದ 28 ಕಿಮೀ ದೂರದಲ್ಲೂ ಇದೆ. ಈ ಸುತ್ತಿನಲ್ಲಿ ಗೇರು ಬೀಜದ ಗಿಡಗಳು ಹೇರಳವಾಗಿರುವುದರಿಂದ ಇದಕ್ಕೆ ಗೇರುಸೊಪ್ಪೆ ಎಂಬ ಹೆಸರು ಬಂದಿರಬೇಕೆಂದು ಹೇಳಲಾಗಿದೆ. ಹೊನ್ನಾವರ ಸರೋವರದ ದಕ್ಷಿಣ ಹಾಗೂ ಉತ್ತರ ಭಾಗಗಳನ್ನು ಒಳಗೊಂಡ ಒಂದು ಜಿಲ್ಲೆ ಗೇರುಸೊಪ್ಪೆ- ಎಂದು 1801ರಲ್ಲಿ ಇಲ್ಲಿ ಪ್ರವಾಸ ಮಾಡಿದ ಹ್ಯಾಮಿಲ್ಟನ್ ಬುಚನಾನ್ ಹೇಳುತ್ತಾನೆ. ಇದೇ ಹೆಸರನ್ನು ಹೊತ್ತ ನಗರ ಸರೋವರದ ದಕ್ಷಿಣ ತುದಿಯಲ್ಲಿತ್ತು; ಈಗ ಅದು ಪಾಳು ಬಿದ್ದಿದೆಯೆಂದೂ ಈ ಗೇರುಸೊಪ್ಪೆ ನಗರ ಮತ್ತು ಕರಾವಳಿಯ ಮೇಲುನಾಡಿನ ಗೇರುಸೊಪ್ಪೆ ಕೋಟೆ ಬೇರೆ ಬೇರೆ ಎಂಬುದನ್ನು ಗಮನಿಸಬೇಕು ಎಂದೂ ಆತ ತಿಳಿಸುತ್ತಾನೆ. ಇಕ್ಕೇರಿಯ ನಾಯಕರ ಕಾಲದಲ್ಲಿ ಘಟ್ಟದ ಕೆಳಗಿನ ಸೀಮೆ ಭಟ್ಕಳ, ಶಿರಾಳ, ಚಂದಾವಾರ, ಗೇರುಸೊಪ್ಪೆ ಮತ್ತು ಮಿರ್ಜಿ ಜಿಲ್ಲೆಗಳೆಂದು ವಿಭಾಗಿಸಲ್ಪಟ್ಟು ಪ್ರತಿಯೊಂದು ಜಿಲ್ಲೆಯೂ ಕರಾವಳಿಯಿಂದ ಹಿಡಿದು ಅರಬ್ಬಿ ಸಮುದ್ರದ ವರೆಗೆ ವ್ಯಾಪಿಸಿತ್ತು. (ವಿ.ಜಿ.ಕೆ.)

ಸುಮಾರು ನಾನೂರು ವರ್ಷಗಳ ಹಿಂದೆ ಈ ಹಳ್ಳಿ ಗೇರುಸೊಪ್ಪೆ ರಾಜ್ಯದ ಭವ್ಯ ರಾಜಧಾನಿಯಾಗಿತ್ತು. ಅದನ್ನು ನಗಿರೆ, ಭಿಲ್ಲಾಕೀಪುರ ಮತ್ತು ಕ್ಷೇಮಪುರ ಎಂದೂ ಕರೆಯುತ್ತಿದ್ದರು. ಗೇರುಸೊಪ್ಪೆ ರಾಜ್ಯವನ್ನು ನಗಿರಾ ರಾಜ್ಯ ಎಂದು ಕರೆಯುತ್ತಿದ್ದರು. ಶರಾವತಿಯ ಒಂದು ದಂಡೆಯಲ್ಲಿರುವ ಗ್ರಾಮವನ್ನು ಗೇರುಸೊಪ್ಪೆ ಎಂದು ಕರೆದರೆ ಆ ಬದಿಯ ಹಳ್ಳಿಯನ್ನು ನಗಿರೆ ಬಸ್ತಿಕೇರಿ ಎಂದು ಕರೆಯುತ್ತಿದ್ದರು. ಅಲ್ಲಿ ಜೈನರ ಬಸದಿಗಳು ಇರುವುದರಿಂದಲೇ ಅದು ಆ ಹೆಸರನ್ನು ಪಡೆಯಿತು.

ನಗಿರೆ ಬಸ್ತಿಕೇರಿ ನಾನೂರು ವರ್ಷಗಳ ಹಿಂದೆ ವೈಭವದಿಂದ ಮೆರೆದ ಪಟ್ಟಣವಾಗಿತ್ತು. ಅಲ್ಲಿಯ ರಾಜರು ಕಟ್ಟಿಸಿದ ಜೈನಬಸದಿಗಳು, ದೇವಾಲಯಗಳನ್ನು ಇಂದೂ ನೋಡಬಹುದು. ಇತಿಹಾಸದಲ್ಲಿ ಖ್ಯಾತಿ ಪಡೆದ ಸಾಳುವ ಮನೆತನಕ್ಕೆ ಸೇರಿದ ಎರಡು ಪ್ರಮುಖ ಶಾಖೆಗಳು ಹಾಡುವಳ್ಳಿ ಅಥವಾ ಸಂಗೀತಪುರ ಮತ್ತು ಗೇರುಸೊಪ್ಪೆಗಳಿಂದ ಆಳುತ್ತಿದ್ದುವು. ಅವು ಅಕ್ಕಪಕ್ಕದ ರಾಜ್ಯಗಳಾದರೂ ಅಲ್ಲಿಯ ರಾಜರು ಸಂಬಂಧಿಕರಾದರೂ ಅವರು ಆಗಾಗ್ಗೆ ಯುದ್ಧದಲ್ಲಿ ತೊಡಗುತ್ತಿದ್ದರು.

ಕರ್ನಾಟಕದ ಇತರ ಪಾಳೆಯಗಾರರಂತೆ ಗೇರುಸೊಪ್ಪೆಯ ಅರಸರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಅವರ ರಕ್ಷಣೆಯಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಉತ್ತರ ಕನ್ನಡ ದಕ್ಷಿಣ ಕನ್ನಡ ಜಿಲ್ಲೆಗಳ ಸ್ವಲ್ಪ ಭಾಗಗಳನ್ನು ಒಳಗೊಂಡ ಗೇರುಸೊಪ್ಪೆ ರಾಜ್ಯದ ಅರಸರು ಸಾಳುವ ವಂಶಕ್ಕೆ ಸೇರಿದವರು. ಅಲ್ಲಿಯ ರಾಜರ ಇತಿಹಾಸ 1398ರಿಂದ ಈಚೆಗೆ ಸಿಗುತ್ತದೆ. ರಾಜ ಹಯಿವರಸನೆಂಬುವನು 1398ರಲ್ಲಿ ಗೇರುಸೊಪ್ಪೆ ರಾಜ್ಯವನ್ನಾಳುತ್ತಿದ್ದುದು ಕಂಡುಬರುತ್ತದೆ.

ಜೈನಧರ್ಮವನ್ನು ಅವಲಂಬಿಸಿದ ಈ ರಾಜರ ಪೈಕಿ ಪ್ರಮುಖರಾದವರು ಭೈರವದೇವ, ಇಮ್ಮಡಿ ಭೈರವದೇವ, ದೇವರಾಯ (ಸಾಳ್ವದೇವ) ಮತ್ತು ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿ.

ಭೈರವದೇವ (1438-62) ಪರಮ ಧಾರ್ಮಿಕನೂ ಉದಾರಿಯೂ ಆದ ದೊರೆ. ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿ, ಗೇರುಸೊಪ್ಪೆ, ಹೊನ್ನಾವರ, ಚಂದ್ರಗುತ್ತಿಗಳ ಬಸದಿಗಳಿಗೆ ಅಪಾರ ದಾನ ಮಾಡಿದ. ಮೂಡುಬಿದಿರೆಯ ಬಸದಿಯಲ್ಲಿಯ ಸಾವಿರ ಕಂಬದ ಭೈರಾದೇವಿ ಮಂಟಪ ರೂಪಿತವಾದ್ದು ಬಹುಶಃ ಈತನ ಕಾಲದಲ್ಲೇ. ಈತನ ರಾಣಿ ನಾಗಲೆ ಆ ಬಸದಿಯ ಮಾನಸ್ತಂಭವನ್ನು ಮಾಡಿಸಿದಳು. ವಿಜಯನಗರದ ಸಾಮಂತ ರಾಜನಾದರೂ ಅದರ ವಿರುದ್ಧ ಬಂಡಾಯವನ್ನು ಹೂಡಿದ. ಸುಮಾರು 30 ವರ್ಷಗಳ ಕಾಲ ರಾಜ್ಯವಾಳಿದ ಭೈರವದೇವನ ಕಾಲದಲ್ಲಿ ಸಾಹಿತ್ಯ ಧರ್ಮಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತು. ಇವನ ಅನಂತರ ಗೇರುಸೊಪ್ಪೆಯ ಸಿಂಹಾಸನಕ್ಕಾಗಿ ಅಂತಃಕಲಹ ಉಂಟಾಗಿ ರಾಜ್ಯ ಒಡೆದು ಇಬ್ಭಾಗವಾಯಿತು.

ಗೇರುಸೊಪ್ಪೆಯ ಮತ್ತೊಬ್ಬ ಪ್ರಮುಖರಾಜ ದೇವರಾಯ. ಈತ 1481ರಲ್ಲಿ ಗೋವೆಯಲ್ಲಿದ್ದ ಆದಿಲಷಹನ ಸೇನಾನಿಯನ್ನು ಯುದ್ಧದಲ್ಲಿ ಸೋಲಿಸಿ, ಕರಾವಳಿಯಲ್ಲಿ ಸುಲ್ತಾನ ಮುಂದುವರಿಯದಂತೆ ಮಾಡಿದ. ಮಹಾರಾಜಾಧಿರಾಜ ಮತ್ತು ಪರಮೇಶ್ವರ ಎಂಬ ಬಿರುದುಗಳನ್ನು ಪಡೆದ ದೇವರಾಯ 1492ರಲ್ಲಿ ವಿಜಯನಗರದ ಸಾಮ್ರಾಟ ವಿರೂಪಾಕ್ಷರಾಯನ ಸೇನೆಯ ವಿರುದ್ಧ ಯುದ್ಧಮಾಡಿದ. ಆದರೆ ಯುದ್ಧದಲ್ಲಿ ಜಯಶೀಲನಾಗದೆ, ಅವನೊಡನೆ ಒಪ್ಪಂದ ಮಾಡಿಕೊಂಡ. ಅವನ ಅನಂತರ ಪಟ್ಟಕ್ಕೆ ಬಂದ ಇಮ್ಮಡಿ ದೇವರಾಯ (1515-50) ಪೋರ್ಚುಗೀಸರ ಮೇಲೆ ಯುದ್ಧಮಾಡಿದ. ಮಡಗೋವೆಯ ಬಳಿ ನಡೆದ ಭೀಕರ ಯುದ್ಧದಲ್ಲಿ ಗೇರುಸೊಪ್ಪೆಯ ಸೈನಿಕರು ಧೈರ್ಯದಿಂದ ಹೋರಾಡಿದರಾದರೂ ಕೊನೆಯಲ್ಲಿ ಸೋಲಬೇಕಾಯಿತು.

1540 ರಿಂದ 1570 ರವರೆಗೆ ಸಂಗೀತಪುರದಲ್ಲಿ ಆಳುತ್ತಿದ್ದ ಚೆನ್ನಭೈರಾದೇವಿಯನ್ನು ಗೇರುಸೊಪ್ಪೆಯ ರಾಣಿ ಎಂದು ವರ್ಣಿಸಲಾಗಿದೆ. ಆದ್ದರಿಂದ ಇಮ್ಮಡಿ ದೇವರಸನ ಅನಂತರ ಗೇರುಸೊಪ್ಪೆ ಸಂಗೀತಪುರದ ರಾಣಿಯ ವಶಕ್ಕೆ ಬಂದಿರಬೇಕು.

ಇವಳ ಆಳ್ವಿಕೆಯ ಕಾಲದಲ್ಲಿ ಗೇರುಸೊಪ್ಪೆಯ ಖ್ಯಾತಿ ಹೊರದೇಶಗಳಿಗೆ ಹರಡಿತು. ಎರಡು ರಾಜ್ಯಗಳ ರಾಣಿಯಾಗಿ ಪೋರ್ಚುಗೀಸರ ವಿರುದ್ಧ, ಕೆಳದಿಯ ನಾಯಕರ ವಿರುದ್ಧ ಯುದ್ಧಮಾಡಿದ ವಿಷಯ ಹಲವಾರು ಮೂಲಗಳಿಂದ ತಿಳಿದುಬರುತ್ತದೆ. ಕರಿಮೆಣಸಿನ ರಾಣಿಯೆಂದು ಪೋರ್ಚುಗೀಸರಿಗೆ ಪರಿಚಿತಳಾದ ಚೆನ್ನಭೈರಾದೇವಿ ಮಲೆನಾಡಿನಲ್ಲಿ ಬೆಳೆಯುತ್ತಿದ್ದ ಮೆಣಸನ್ನು ಕೊಳ್ಳುವ ಬಗ್ಗೆ ಪೋರ್ಚುಗೀಸರೊಡನೆ ಒಪ್ಪಂದ ಮಾಡಿಕೊಂಡಿದ್ದಳು. ಅಲ್ಲದೆ ಪೋರ್ಚುಗೀಸರ, ಕೆಳದಿಯ ನಾಯಕರ ವಿರೋಧಿಯಾಗಿದ್ದ ಆದಿಲ್‌ಷಹನ ಸ್ನೇಹ ಹೊಂದಿದ್ದಳು.

ಗೇರುಸೊಪ್ಪೆಯ ಮೇಲೆ ಕಣ್ಣಿಟ್ಟ ಇಕ್ಕೇರಿಯ ಹಿರಿಯ ವೆಂಕಟಪ್ಪನಾಯಕ ಆ ರಾಜ್ಯದ ಮೇಲೆ ದಂಡೆತ್ತಿಹೋಗಿ, ರಾಣಿ ಚೆನ್ನಭೈರಾದೇವಿಯನ್ನು ಯುದ್ಧದಲ್ಲಿ ಸೋಲಿಸಿ ಗೇರುಸೊಪ್ಪೆಯನ್ನು ಸಂಪೂರ್ಣವಾಗಿ ಧ್ವಂಸಮಾಡಿದ. ಈ ವಿಜಯದ ಪರಿಣಾಮವಾಗಿ ಹೊನ್ನಾವರ, ಬಾರ್ಕಲೂರು, ಭಟ್ಕಳ ಬಂದರುಗಳು ಕೆಳದಿ ಸಂಸ್ಥಾನಕ್ಕೆ ಸೇರಿಹೋದುವು. ರಾಣಿ ಮಾಡುತ್ತಿದ್ದ ಮೆಣಸಿನ ವ್ಯಾಪಾರವೆಲ್ಲ ವೆಂಕಟಪ್ಪನ ಅಧೀನವಾಯಿತು. ಗೇರುಸೊಪ್ಪೆ ಕೆಳದಿ ರಾಜ್ಯದಲ್ಲಿ ಐಕ್ಯವಾಯಿತು.

ಸುಮಾರು 200 ವರ್ಷಗಳ ಕಾಲ ವೈಭವದಿಂದ ಮೆರೆದ ಗೇರುಸೊಪ್ಪೆಯ ರಾಜರು ಸಾಹಿತ್ಯ, ಧರ್ಮ ಮತ್ತು ಕಲೆಗೆ ವಿಶೇಷವಾದ ಪ್ರೋತ್ಸಾಹ ನೀಡಿದ್ದಕ್ಕೆ ಸಾಕ್ಷಿಯಾಗಿ ಬಸದಿ, ದೇವಾಲಯಗಳು ಅಲ್ಲಿ ಕಂಡುಬರುತ್ತವೆ. ಗೇರುಸೊಪ್ಪೆಯಲ್ಲಿರುವ ಸುಂದರ ಚತುರ್ಮುಖ ಬಸದಿ ಅಲ್ಲಿಯ ರಾಜರ ಕೊಡುಗೆ. ರಾಣಿ ಭೈರಾದೇವಿ ಈ ಬಸದಿಯನ್ನು ಕಟ್ಟಿಸಿದಳು. ನಾಲ್ಕು ಬಾಗಿಲುಗಳಿದ್ದು, ಗರ್ಭಗುಡಿ ಮಧ್ಯದಲ್ಲಿದ್ದು, ನಾಲ್ವರು ತೀರ್ಥಂಕರರನ್ನು ಪಡೆದಿರುವ ಇಂಥ ಬಸದಿ ಅಪರೂಪ. ಇದಲ್ಲದೆ, ಅಲ್ಲಿಯ ಜ್ವಾಲಾಮಾಲಿನಿ ದೇವಾಲಯ, ನೇಮಿನಾಥ ಬಸದಿ, ಅನೇಕ ವೀರಗಲ್ಲುಗಳು ಮತ್ತು ಶಾಸನಗಳು ಅಲ್ಲಿಯ ರಾಜರುಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತವೆ. (ಕೆ.ಟಿ.ಆರ್.)

**ಗೇರುಸೊಪ್ಪೆ ಜಲಪಾತ :** ಶರಾವತೀ ನದಿಯ ಜಲಪಾತ. ಜೋಗ್ (ಜಲಪಾತ) ಎಂದೂ ಪ್ರಸಿದ್ಧ. ಕರ್ನಾಟಕದಲ್ಲಿ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗಡಿಯಲ್ಲಿ ಉ.ಅ. $14^0$ $14^1$ ಮತ್ತು ಪೂ.ರೇ. $74^0$ $50^1$ ಮೇಲಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥದಲ್ಲಿ ಹುಟ್ಟುವ ಶರಾವತೀ ನದಿ ಫತ್ತೀಪೆಟ್ ಬಳಿ ವಾಯವ್ಯಕ್ಕೆ ತಿರುಗಿ, ಹರಿದ್ರಾವತಿ ಮತ್ತು ಎಣ್ಣೆಹೊಳೆಗಳನ್ನು ಕೂಡಿಕೊಂಡು ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳ ಗಡಿಯ ಬಳಿ ಪಶ್ಚಿಮಕ್ಕೆ ತಿರುಗಿ, ಗೇರುಸೊಪ್ಪೆ ಪ್ರಪಾತದಲ್ಲಿ ಧುಮುಕುತ್ತದೆ. ಅನಂತರ ನದಿ 29 ಕಿಮೀ ದೂರದಲ್ಲಿರುವ ಗೇರುಸೊಪ್ಪೆ ಗ್ರಾಮದತ್ತ ಸಾಗಿ ಮುಂದೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಈ ಜಲಪಾತ ಶಿವಮೊಗ್ಗದಿಂದ 100 ಕಿಮೀ ಹಾಗೂ ಹೊನ್ನಾವರದಿಂದ 58 ಕಿಮೀ ದೂರದಲ್ಲಿದೆ.

ಸೌಂದರ್ಯ ತುಂಬಿದ ಔನ್ನತ್ಯದಲ್ಲಿ ಗೇರುಸೊಪ್ಪೆಯನ್ನು ಮೀರಿಸುವ ಜಲಪಾತ ಜಗತ್ತಿನಲ್ಲೆಲ್ಲೂ ಇಲ್ಲ. ಆಲ್ಪ್ಸ್ ಪರ್ವತದಲ್ಲಿರುವ ಸೆರೊಸೊಲಿ (2400 ಅಡಿ 732ಮೀ), ಎವಾನ್ಸನ್ (1200 ಅಡಿ 366ಮೀ) ಮತ್ತು ಆರ್ವೆ (1100 ಅಡಿ 335ಮೀ) ಜಲಪಾತಗಳು. ಜೋಗ್ ಜಲಪಾತಕ್ಕಿಂತ (829 ಅಡಿ 252.6ಮೀ) ಎತ್ತರವಾಗಿವೆ ಯಾದರೂ ಅವುಗಳಲ್ಲಿ ಜೋಗದಷ್ಟು ನೀರಿಲ್ಲ. ನಯಾಗರ ಜಲಪಾತದ ನೀರಿನ ಮೊತ್ತ ಜೋಗದ್ದಕ್ಕಿಂತ ಅಧಿಕ. ಆದರೆ ಆ ಜಲಪಾತ (164 ಅಡಿ 50ಮೀ) ಗೇರುಸೊಪ್ಪೆಯಷ್ಟು ಎತ್ತರವಿಲ್ಲ. ಶರಾವತೀ ನದಿ ಹರಿದು ಧುಮುಕುವ ಕಮರಿಯ ಬಂಡೆ 250 ಗಜಗಳಷ್ಟು (228.6ಮೀ) ಉದ್ದವಾಗಿದೆ. ನಾಲ್ಕು ಪ್ರತ್ಯೇಕ ಬಿರುಕುಗಳಿಂದ ನದಿ ರಭಸದಿಂದ ಇಳಿದು ಕಮರಿಗೆ ಬೀಳುತ್ತದೆ. ಅದು ಧುಮುಕುವ ಶೀವಿ ಮನಮೋಹಕವಾದ್ದು. ಜಲಪಾತದ ನಾಲ್ಕು ಕವಲುಗಳ ಪೈಕಿ ರಾಜಾ ಸು. 829 ಅಡಿ (252.6ಮೀ) ಆಳಕ್ಕೆ ಧುಮುಕುತ್ತದೆ. ಈ



ಕವಲು ಸಿರಸಿಯ ಸೋದೆ ರಾಜನ ಹೆಸರನ್ನು ತಾಳಿ ರಾಜಾ ಎನಿಸಿಕೊಂಡಿದೆ. ಸೋದೆ ರಾಜ ಈ ಕವಲಿರುವ ಕಡೆಯಲ್ಲಿ ಕಟ್ಟಿಸಲು ಉದ್ದೇಶಿಸಿದ್ದ ಮಂಟಪದ ತಳಪಾಯದ ಗುರುತುಗಳನ್ನು ಈಗಲೂ ಕಾಣಬಹುದು. ರಾಜಾ ಜಲಪಾತ ಬೀಳುತ್ತಿರುವಂತೆಯೇ, ಸ್ವಲ್ಪ ಕೆಳಗೆ, ಬಂಡೆಯ ಬಿರುಕಿನಿಂದ ಹರಿದು ಬೀಳುವ ರೋರರ್ ಜಲಪಾತವನ್ನು ಅಪ್ಪಿಕೊಂಡು, ಅದರೊಂದಿಗೆ ಕಮರಿಗೆ ಬೀಳುತ್ತದೆ. ಮೂರನೆಯ ಜಲಪಾತ ರಾಕೆಟ್ ಬಂಡೆಯ ಮೇಲಿಂದ ಹಲವು ಧಾರೆಗಳಲ್ಲಿ ಚಿಮ್ಮಿ ತಳಕ್ಕೆ ಕುಪ್ಪಳಿಸುತ್ತದೆ. ನಾಲ್ಕನೆಯ ಜಲಪಾತ ರಾಣಿ (ಲೇಡಿಬ್ಲಾಂಚೆ) ತಾನು ಬೀಳುವ ರಭಸದಿಂದೇಳುವ ನೊರೆಯಿಂದ ತುಂಬಿ ಸೊಗಸುಗಾತಿಯಂತೆ ಪ್ರಪಾತಕ್ಕೆ ಇಳಿಯುತ್ತದೆ.

ಮಳೆಗಾಲದ ಅನಂತರದ ತಿಂಗಳುಗಳಲ್ಲಿ ನದಿಯ ಪ್ರವಾಹ ಸರಿಯಾದ ಗಾತ್ರದಲ್ಲಿರುವುದರಿಂದ ಜಲಪಾತ ನೋಡಲು ರಮ್ಯವಾಗಿರುತ್ತದೆ. ಮಳೆಗಾಲದಲ್ಲಿ ಹೆಚ್ಚು ನೀರು ರಭಸದಿಂದ ಬೀಳುವ ಕಾರಣ ನೀರಿನಿಂದ ಏಳುವ ಧೂಮ ಪ್ರಪಾತವನ್ನು ಆವರಿಸಿರುತ್ತದೆ. ಆಗ ನೀರಿನ ಭೋರ್ಗರೆತದ ಶಬ್ದ ಹೃದಯವನ್ನು ಕಂಪಿಸುವಂತಿರುತ್ತದೆ. ಜಲಪಾತದ ಪೂರ್ಣದೃಶ್ಯವನ್ನು ಶಿವಮೊಗ್ಗ ಗಡಿ ಭಾಗದಿಂದ ಕಾಣಬಹುದು. ಜಲಪಾತದ ಕಡಿದಾದ ಬಂಡೆಯ ಅಂಚುಗಳಲ್ಲಿರುವ ಪೊಟರೆಗಳಲ್ಲಿ ಕಾಡು ಪಾರಿವಾಳಗಳು ಮನೆಮಾಡಿಕೊಂಡು ಪ್ರಪಾತದ ಬಳಿ ಗುಂಪು ಗುಂಪಾಗಿ ಹಾರುತ್ತಿರುತ್ತವೆ. ಸೂರ್ಯಕಿರಣಗಳಿಂದ ಜಲಪಾತ ದಿನದ ವಿವಿಧ ಕಾಲಗಳಲ್ಲಿ ವೈವಿಧ್ಯ ತಾಳುತ್ತದೆ. ನಿತ್ಯ ಹಸುರಿನ ಹೆಮ್ಮರಗಾಡಿನ ನಡುವೆ ಧುಮುಕುವ ಶರಾವತಿಯ ಸದ್ದನ್ನು ಕೇಳಿ ಬ್ರಿಟಿಷ್ ಸೈನಿಕರು ಟಿಪ್ಪುಸುಲ್ತಾನನ ಸೈನ್ಯದ ಆರ್ಭಟವೆಂದು ತಿಳಿದು ಮೋಸ ಹೋಗಿದ್ದರೆಂದು ಪ್ರತೀತಿಯಿದೆ. ಆದರೆ ಈಗ ಪ್ರವಾಹದ ಪರಿಮಾಣ ಇಳಿದಿರುವುದರಿಂದ ಅಂಥ ಗರ್ಜನೆ ಕೇಳಿಸದು. ಆದರೂ ಅದರ ಏಕತಾನದ ನಾದ ಹತ್ತಿರ ನಿಂತು ನೋಡುವವರ ಕಿವಿಗಳಿಗೆ ಘನಗರ್ಜನೆಯಂತೆ ಕೇಳಿಸುತ್ತದೆ. ಅದರ ಮೇಘನಾದದ ಗಾಂಭೀರ್ಯ ನಿಸರ್ಗ ಸಂಗೀತದ ಒಂದು ನಿರುಪಮ ಮಾದರಿ. ಮೌನವನ್ನು ಸೀಳುವ ಆ ನಿತ್ಯನಾದವನ್ನು ಆಲಿಸುತ್ತ ನಿಂತವರಿಗೆ ಒಮ್ಮೆ ನಾದಸಮಾಧಿಯನ್ನುಂಟುಮಾಡಬಹುದು. ಜೊತೆಗೆ ಬಿಸಿಲು ಹರಿದಂತೆ ಜಲಧಾರೆಗಳ ಮೇಲೆ ಹರಿದು ನಿಂತಿರುವ ಕಾಮನಬಿಲ್ಲುಗಳು ನಿತ್ಯನವ್ಯವಾಗಿ ಕಾಣಿಸುವುವು; ಬೆಳದಿಂಗಳು ತುಂಬಿದ್ದಾಗ ರಾತ್ರಿಯ ವೇಳೆಯೂ ಕಾಮನಬಿಲ್ಲು ಕಾಣಿಸುವುದುಂಟು. ಈ ಜೀವಂತ ಪ್ರವಾಹದ ಸೌಮ್ಯ–ಭೀಕರತೆಗಳ ವರ್ಣನೆ ಮಾತಿಗೆ ನಿಲುಕುವುದಿಲ್ಲ.

ಗೇರುಸೊಪ್ಪೆ ಜಲಪಾತವನ್ನು ಅಳೆದು ಮಾಹಿತಿಯನ್ನು ಸಂಗ್ರಹಿಸಲು ಮಾರ್ಚ್ 1856ರಲ್ಲಿ ಬಂದ ಇಬ್ಬರು ಬ್ರಿಟಿಷ್ ನೌಕಾಧಿಕಾರಿಗಳು ಜಲಪಾತದ ಬಗ್ಗೆ ಗಮನಾರ್ಹ ವರದಿಯನ್ನು ಒಪ್ಪಿಸಿದ್ದಾರೆ. ಪ್ರಪಾತದ ಆಳ 829' ಎಂದು ಇವರು ಖಚಿತಪಡಿಸಿದರು. ಪ್ರಪಾತದ ತಳದಲ್ಲಿ ನದಿ ಕೊರೆದಿರುವ ಮಡುವಿನ ಆಳ 132' (40ಮೀ). ನದಿಯ ಅಡ್ಡಗಲ ಉತ್ತರ ಕನ್ನಡ ಮತ್ತು ಶಿವಮೊಗ್ಗ ದಂಡೆಗಳ ಮೇಲಿರುವ ಬಂಗಲೆಗಳ ನಡುವೆ 710 ಗಜ (649ಮೀ).

1869ರ ಜನವರಿಯಲ್ಲಿ ಜಲಪಾತವನ್ನು ಕಂಡ ಶ್ರೀಮತಿ ಲೂಯಿ ಬೌನಿಂಗ್ ತಿಳಿಸುವಂತೆ ಆಗ ಶಿವಮೊಗ್ಗ ಜಿಲ್ಲೆಯ ಅಂಚಿನ ಕಡೆ ಜಲಪಾತದ ಸಮೀಪದಲ್ಲಿ ಡೇರೆಯನ್ನು ಹಾಕಲು ಸಹ ಸಾಧ್ಯವಿಲ್ಲದಂತೆ ಒತ್ತಾದ ಕಾಡು ಬೆಳೆದಿತ್ತು. ಈಗ ಅಲ್ಲಿ, ಶರಾವತಿ ಧುಮುಕುವ ಪ್ರಪಾತದ ಎದುರಿಗೆ, ನದಿ ಭೋರ್ಗರೆದು ಸಾಗುವ ಸುಂದರವಾದ ಸ್ಥಳದಲ್ಲಿ, ಪ್ರವಾಸಿ ಬಂಗಲೆ, ಹೋಟೆಲು, ಸರ್ಕಾರಿಭವನ ಮತ್ತು ಸಣ್ಣ ಅಂಚೆ ಕಚೇರಿ ಇವೆ. ಅಕ್ಟೋಬರಿನಿಂದ ಫೆಬ್ರವರಿಯ ವರೆಗೆ ಸಹಸ್ರಾರು ಪ್ರವಾಸಿಗರು ಜಗತ್‌ಪ್ರಸಿದ್ಧವಾದ ಈ ಮನೋಹರ ಸ್ಥಳಕ್ಕೆ ಭೇಟಿ ನೀಡುತ್ತಾರೆ.

ಜಲಪಾತದ ಬಳಿ ಜೋಗ್ ಎಂಬ ಕಿರುಗ್ರಾಮ 1948ರಲ್ಲಿ ಪ್ರಾರಂಭವಾದ ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆಯ ಚಟುವಟಿಕೆಗಳಿಂದ ದೊಡ್ಡದಾಗಿ ಬೆಳೆದುಕೊಂಡಿದೆ. (ವಿ.ಜಿ.ಕೆ.;ಬಿ.ಎಚ್.ಎಸ್.)

**ಗೇರ್‌ವಿನಸ್, ಜಾರ್ಜ್ ಗಾಟ್‌ಫ್ರೀಡ್ :** 1805–71. ಜರ್ಮನಿಯ ಇತಿಹಾಸಕಾರ ಮತ್ತು ಷೇಕ್ಸ್‌ಪಿಯರ್ ನಾಟಕಗಳ ವಿಮರ್ಶಕ. 1835ರಲ್ಲಿ ಗಾಟಿಂಗೆನ್‌ನಲ್ಲಿ ಇತಿಹಾಸದ ಪ್ರಾಧ್ಯಾಪಕನಾಗಿ ನೇಮಕಗೊಂಡ. ಹ್ಯಾನೊವರಿನ ಅರಸ ರಾಜ್ಯಾಂಗವನ್ನು ಗಣಿಸದೆ ನಿರಂಕುಶನಾಗಿ ನಡೆದನೆಂದು ಆರು ಮಂದಿ ಪ್ರಾಧ್ಯಾಪಕರೊಡನೆ ಈತನೂ ಪ್ರತಿಭಟಿಸಿದನಾಗಿ ಕೆಲಸವನ್ನು ಕಳೆದುಕೊಂಡ (1837). ಅಲ್ಲಿಂದ ಏಳು ವರ್ಷಗಳ ಕಾಲ ಹಲವು ದೇಶಗಳಲ್ಲಿ ಪ್ರವಾಸ ಮಾಡಿ, 1844ರಲ್ಲಿ ಹೈಡಲ್‌ಬರ್ಗ್‌ನಲ್ಲಿ ಇತಿಹಾಸದ ಪ್ರಾಧ್ಯಾಪಕನಾದ. ಕ್ರೈಸ್ತಮತದ ಎಲ್ಲ ಪಂಥಗಳವರೂ ಒಂದುಗೂಡುವ ಕನಸನ್ನು ಕಂಡಿದ್ದ ಈತ 1845ರಲ್ಲಿ ಜರ್ಮನಿಯ ಕೆಥೊಲಿಕರಿಗೆ ಬೆಂಬಲ ನೀಡಿದ. ಈತನೂ ಇತರೆ ಕೆಲವು ವಿದ್ವಾಂಸರೂ ಸೇರಿ ಒಂದು ನಿಯತಕಾಲಿಕವನ್ನು ನಡೆಸುತ್ತಿದ್ದರು. ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಹನೆ, ವಿಶಾಲಮನೋಭಾವಗಳನ್ನು ಬೆಳೆಸುವುದು ಈ ಪತ್ರಿಕೆಯ ಉದ್ದೇಶವಾಗಿತ್ತು.

1835 ರಿಂದ 1842 ರವರೆಗಿನ ಅವಧಿಯಲ್ಲಿ ಗೇರ್‌ವಿನಸ್ ಜರ್ಮನಿಯ ಸಾಹಿತ್ಯ ಚರಿತ್ರೆಯನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿದ. ಇದು ಜರ್ಮನಿಯ ಮೊದಲನೆಯ ಗಮನಾರ್ಹ ಸಾಹಿತ್ಯ ಚರಿತ್ರೆ ಎನಿಸಿತು; ಈತನ ವಿಶೇಷ ವಿದ್ವತ್ತು ಇದರಲ್ಲಿ ಪ್ರಕಟವಾಯಿತು. 1849 ರಿಂದ 1852ರ ಅವಧಿಯಲ್ಲಿ ಈತನ ಮುಖ್ಯ ಕೃತಿ– ಷೇಕ್ಸ್‌ಪಿಯರ್– ನಾಲ್ಕು ಸಂಪುಟಗಳಲ್ಲಿ ಜರ್ಮನ್ ಭಾಷೆಯಲ್ಲಿ ಹೊರಬಿತ್ತು (1863ರಲ್ಲಿ ಷೇಕ್ಸ್‌ಪಿಯರ್ ಕಾಮೆಂಟರೀಸ್ ಎಂಬ ಹೆಸರಿನಲ್ಲಿ ಇದರ ಇಂಗ್ಲಿಷ್ ಅನುವಾದ ಪ್ರಕಟವಾಯಿತು). 1868ರಲ್ಲಿ ಈತ ಪ್ರಸಿದ್ಧ ಗಾಯಕ ಹ್ಯಾಂಡಲ್ ಮತ್ತು ಪ್ರಸಿದ್ಧ ನಾಟಕಕಾರ ಷೇಕ್ಸ್‌ಪಿಯರ್ ಇವರನ್ನು ಹೋಲಿಸಿ ಅಧ್ಯಯನ ನಡೆಸಿದ. ಷೇಕ್ಸ್‌ಪಿಯರ್ ಬಳಸಿದ ಪದ್ಯಮಾಧ್ಯಮದ ಆಧಾರದ ಮೇಲೆ ಈತ ಆತನ ನಾಟಕಗಳನ್ನು ಮೂರು ಗುಂಪುಗಳನ್ನಾಗಿ ವಿಭಾಗಿಸಿದ. ಷೇಕ್ಸ್‌ಪಿಯರ್‌ನ ಎಲ್ಲ ಕೃತಿಗಳನ್ನೂ ಅಭ್ಯಾಸ ಮಾಡಿ ಆತನ ನಾಟಕಕಲೆಯ ವಿಕಸನವನ್ನು ಗುರುತಿಸುವುದರ ಅಗತ್ಯವನ್ನು ಮೊದಲು ಸ್ಪಷ್ಟಪಡಿಸಿದ ವಿಮರ್ಶಕ ಈತ. (ಎಲ್.ಎಸ್.ಎಸ್.)

**ಗೇಲಾರ್ಡಿಯ :** ಆಸ್ಟರೇಸೀ (ಕಂಪಾಸಿಟೀ) ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಬಲು ಸುಂದರವಾದ ಹೂ ಬಿಡುವ ಈ ಸಸ್ಯವನ್ನು ಕುಂಡಸಸ್ಯ, ಅಂಚುಸಸ್ಯ, ಮಡಿಸಸ್ಯವಾಗಿ ಬಳಸುತ್ತಾರೆ. ಹೂಗಳಿಗೆ ಉದ್ದವಾದ ತೊಟ್ಟು ಇರುವುದರಿಂದ ಹೂದಾನಿಗಳಲ್ಲಿಟ್ಟು ಗೃಹಾಲಂಕರಣಗಳಲ್ಲಿ ಬಳಸುವುದೂ ಉಂಟು. ಗೇಲಾರ್ಡಿಯದ

ಮೂಲಸ್ಥಾನ ಅಮೆರಿಕ. ಇದರಲ್ಲಿ ಸುಮಾರು 20 ಪ್ರಭೇದಗಳು ಇವೆ. ಇವುಗಳಲ್ಲಿ ಆಂಬ್ಲಿಯೋಡಾನ್, ಪಲ್ಚೆಲ ಮತ್ತು ಅರಿಸ್ಟೇಟ ಎಂಬವು ಅತಿಮುಖ್ಯವಾದುವು. ಇವುಗಳಲ್ಲಿ ಕೆಲವು ಏಕವಾರ್ಷಿಕ ಮೂಲಿಕೆಗಳಾದರೆ ಇನ್ನು ಕೆಲವು ಬಹುವಾರ್ಷಿಕಗಳು. ಗೇಲಾರ್ಡಿಯದ ಎಲೆಗಳಿಗೆ ಒರಟು ಮೈಯೂ ದಂತಿತ ಅಂಚೂ ಉಂಟು. ಇವುಗಳ ಜೋಡಣೆ ಪರ್ಯಾಯ ಮಾದರಿಯದು. ಹೂಗಳು ಬಲುಸೊಗಸಾದ ಮತ್ತು



ಗೇಲಾರ್ಡಿಯ ಪಲ್ಚೆಲ: ಪಿಕ್ಟ ತಳಿ, (ಎಡಗಡೆ), ಲೊರೆಂಜಿಯಾನ ತಳಿ (ಬಲಗಡೆ)

ಆಕರ್ಷಕವಾದ ಚಂಡು ಮಂಜರಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಇವುಗಳ ಬಣ್ಣ ಕಿತ್ತಳೆ, ಕಡುಗೆಂಪು, ಊದಾ, ಹಳದಿ ಮುಂತಾಗಿ ವೈವಿಧ್ಯಮಯ. ಅಲ್ಲದೆ ಹೂಗೊಂಚಲಿನ ಕದಿರುಪುಷ್ಪಕಗಳು ಒಂದು ಬಣ್ಣದವಾದರೆ ಬಿಂಬಪುಷ್ಪಕಗಳು ಇನ್ನೊಂದು ಬಣ್ಣದವಾಗಿದ್ದು ಹೂವಿನ ಚೆಲುವನ್ನು ಹೆಚ್ಚಿಸುತ್ತವೆ. ಹೂಗಳು ಬಹುಕಾಲ ಬಾಡದೆ ಇರುತ್ತವಾದ್ದರಿಂದ ಗೇಲಾರ್ಡಿಯ ಬಲು ಜನಪ್ರಿಯವಾಗಿದೆ.

ಗೇಲಾರ್ಡಿಯ ಗಿಡಗಳನ್ನು ವರ್ಷದ ಯಾವ ಕಾಲದಲ್ಲಾದರೂ ಬೆಳೆಸಬಹುದು. ಇವನ್ನು ಬೀಜಗಳ ಮೂಲಕ ವೃದ್ಧಿಸುವುದೇ ರೂಢಿಯಲ್ಲಿರುವ ಕ್ರಮ. ಬಹುವಾರ್ಷಿಕ ಬಗೆಗಳನ್ನು ಬೇರಿನ ತುಂಡುಗಳಿಂದಲೂ ವೃದ್ಧಿಸಬಹುದು. ಮೊದಲು ಒಟ್ಲು ಪಾತಿಯಲ್ಲಿ ಬೀಜ ಬಿತ್ತಿ, ಸಸಿಗಳನ್ನು ಬೆಳೆಸಿ, ಒಂದು ತಿಂಗಳ ಅನಂತರ ಸಸಿಗಳನ್ನು ಅಪೇಕ್ಷಿತ ಸ್ಥಳಗಳಲ್ಲಿ ನಾಟಿ ಮಾಡಬೇಕು. ಆಗಿಂದಾಗ್ಗೆ ಸೂಕ್ತ ಪರಿಮಾಣಗಳಲ್ಲಿ ಕೊಟ್ಟಿಗೆ ಗೊಬ್ಬರ, ಎಲೆಗೊಬ್ಬರ, ಅಮೋನಿಯಂ ಸಲ್ಫೇಟುಗಳನ್ನು ಹಾಕುತ್ತ ಆರೈಕೆ ಮಾಡಬೇಕು. ನಾಟಿ ಮಾಡಿದ 3–4 ತಿಂಗಳ ಬಳಿಕ ಗಿಡಗಳು ಹೂಬಿಡತೊಡಗುತ್ತವೆ. (ಬಿ.ಎ.ಪಿ.)

**ಗೇಲೆನ್ :** ಸು. 129–200. ಗ್ರೀಸ್ ಮತ್ತು ರೋಮಿನ ವೈದ್ಯ ಹಾಗೂ ಲೇಖಕ. ಏಷ್ಯಮೈನರಿನ ಮೈಸಿಯ ದೇಶದ ರಾಜಧಾನಿಯಾಗಿದ್ದ ಪರ್ಗಮಮ್ ಎಂಬ ಸ್ಥಳದಲ್ಲಿ ಗ್ರೀಕ್ ದಂಪತಿಗಳ ಮಗನಾಗಿ ಜನಿಸಿದ. ಹದಿನೈದನೆಯ ವಯಸ್ಸಿನಲ್ಲಿ ತತ್ತ್ವಶಾಸ್ತ್ರ ವ್ಯಾಸಂಗವನ್ನೂ 18ನೆಯ ವಯಸ್ಸಿನಲ್ಲಿ ವೈದ್ಯ ವ್ಯಾಸಂಗವನ್ನೂ ಪ್ರಾರಂಭಿಸಿ ವೃತ್ತಿಯಲ್ಲಿ ಇವೆರಡನ್ನೂ ಮಿಶ್ರ ಮಾಡಿಯೇ ವ್ಯವಹರಿಸುತ್ತಿದ್ದ. ಈತ 146 ರಲ್ಲಿ ಗ್ರೀಸಿಗೆ ವೈದ್ಯವಿದ್ಯೆ ಕಲಿಯಲು ತೆರಳಿದ. ಅಲ್ಲಿಂದ ಪೆಲಾಪ್ಸ್ ಎಂಬ ಪ್ರಸಿದ್ಧ ವೈದ್ಯನ ಕೈಕೆಳಗೆ ವ್ಯಾಸಂಗ ಮಾಡಲು ಸ್ಮರ್ನಕ್ಕೆ ಹೋದ (148). ಮುಂದೆ ಫಿನಿಷಿಯ, ಪ್ಯಾಲಸ್ತೀನ್, ಕೋರಿಂಥ್, ಕ್ರೀಟ್, ಸೈಪ್ರಸ್ ಮುಂತಾದ ಸ್ಥಳಗಳಲ್ಲೆಲ್ಲ ಅಲೆಯುತ್ತ ವೈದ್ಯಕೀಯ ವ್ಯಾಸಂಗವನ್ನು ಮುಂದುವರಿಸಿ ಕೊನೆಗೆ ಈಜಿಪ್ಟಿನ ಅಲೆಗ್ಸಾಂಡ್ರಿಯ ನಗರಕ್ಕೆ ಬಂದ. ಪರ್ಗಮಮಿಗೆ ಹಿಂತಿರುಗಿ (157) ಅಲ್ಲೇ ನೆಲೆಸಿ ಖಡ್ಗಮಲ್ಲರ (ಗ್ಲೇಡಿಯೇಟರ್) ಶಾಲೆಯಲ್ಲಿ ಶಸ್ತ್ರವೈದ್ಯನಾಗಿ ಸೇರಿಕೊಂಡ. ಅಲ್ಲಿ ಗಾಯಗೊಂಡ ಖಡ್ಗಮಲ್ಲರಿಗೆ ಶಸ್ತ್ರಚಿಕಿತ್ಸೆ ಮಾಡುತ್ತ ತನ್ನ ಶಸ್ತ್ರಚಿಕಿತ್ಸಾ ಪಾರಂಗತಿಯನ್ನು ಸಂಪೂರ್ಣ ಮಾಡಿಕೊಂಡ. ಆ ಸಮಯದಲ್ಲಿ ರೋಮನ್ ಚಕ್ರಾಧಿಪತ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದುದರಿಂದ ಸುಮಾರು 161–162 ರಲ್ಲಿ ರೋಮಿಗೆ ತೆರಳಿ ಅಲ್ಲಿ ಜನಪ್ರಿಯನಾಗಿ ಕೊನೆಗೆ ಚಕ್ರವರ್ತಿ ಮಾರ್ಕಸ್ ಅರೇಲಿಯಸನ ಆಸ್ಥಾನವೈದ್ಯನಾಗಿ ನೇಮಕಗೊಂಡ. ಬಳಿಕ 167 ರಲ್ಲಿ ತನ್ನ ಜನ್ಮಸ್ಥಳಕ್ಕೆ ಹಿಂತಿರುಗಿದ. ಆದರೆ ಅದೇ ಸುಮಾರಿಗೆ (169) ಈತನಿಗೆ ಯುದ್ಧರಂಗದಲ್ಲಿ ತನ್ನನ್ನು ಹಿಂಬಾಲಿಸಲು ಮಾರ್ಕಸ್ ಅರೇಲಿಯಸನಿಂದ ಕರೆಬಂದಿತು. ಗೇಲೆನ್ ರೋಮಿಗೆ ಹಿಂತಿರುಗಿ ಭಾವೀ ಚಕ್ರವರ್ತಿ ಕಾಮೊಡಸಿನ ಆರೋಗ್ಯವನ್ನು ನೋಡಿಕೊಳ್ಳಲು ತಾನು ರೋಮಿನಲ್ಲಿ ಇರಬೇಕಾಗುತ್ತದೆಂಬ ನೆಪವೊಡ್ಡಿ ಯುದ್ಧರಂಗಕ್ಕೆ ಹೋಗುವುದನ್ನು ತಪ್ಪಿಸಿಕೊಂಡ. ಆಮೇಲೆ ಕೊನೆಯವರೆಗೂ



ರೋಮಿನಲ್ಲೇ ನೆಲೆಸಿದ್ದು ಸುಮಾರು 200 ರಲ್ಲಿ ಬಹುಶಃ ಸಿಸಿಲಿಯಲ್ಲಿ ನಿಧನನಾದ.

ಗೇಲೆನ್ ತನ್ನ ಪಾಠಪ್ರವಚನಗಳಿಗೂ ಲೇಖನಗಳಿಗೂ ಪ್ರಸಿದ್ಧನಾಗಿದ್ದ. ಮುಖ್ಯವಾಗಿ ವೈದ್ಯಶಾಸ್ತ್ರ ಮತ್ತು ತತ್ತ್ವವಿಷಯಗಳ ಮೇಲೆ ಈತ ಸುಮಾರು 300 ಗ್ರಂಥಗಳನ್ನು ರಚಿಸಿದ್ದಾನೆಂದು ಪ್ರತೀತಿ. ಈ ವೈದ್ಯಗ್ರಂಥಗಳಲ್ಲಿ ಅರ್ಧದಷ್ಟು ಮಾತ್ರ ಉಪಲಬ್ಧವಾಗಿವೆ. ತತ್ತ್ವಜ್ಞಾನ ವಿಷಯ ಗ್ರಂಥಗಳು ಬಹುಪಾಲು ಕಳೆದುಹೋಗಿವೆ. ಸಿಕ್ಕಿರುವ ಗ್ರಂಥಗಳಲ್ಲಿ 98 ಅವನೇ ನಿಶ್ಚಯವಾಗಿ ಬರೆದವೆಂದೂ 19 ಬಹುಶಃ ಅವನು ಬರೆದಿರಬಹುದೆಂದೂ 45 ಅವನ ರಚನೆಗಳೇ ಅಲ್ಲವೆಂದೂ ತಿಳಿದುಬಂದಿದೆ. 191 ರಲ್ಲಿ ರೋಮಿನಲ್ಲಿ ಸಂಭವಿಸಿದ ಅಗ್ನಿದುರಂತದಲ್ಲಿ ಅವನ ಅನೇಕ ಗ್ರಂಥಗಳು ಸುಟ್ಟುಹೋದವು. ಆದರೂ ಗೇಲೆನ್ ಧೃತಿಗೆಡದೆ ತನ್ನ ಕೊನೆಯ ಕಾಲದವರೆಗೂ ಪಾಠಪ್ರವಚನಗಳನ್ನೂ ಪ್ರಯೋಗಗಳನ್ನೂ ನಡೆಸುತ್ತಲೇ ಇದ್ದ.

ಗೇಲೆನನ್ನು ಪ್ರಯೋಗಾತ್ಮಕ ಶರೀರ ವಿಜ್ಞಾನದ ಸ್ಥಾಪಕನೆಂದು ಗಣಿಸಬಹುದು. ಹಿಪಾಕ್ರಟೀಸನ ತರುವಾಯದ ಗತಕಾಲದ ವೈದ್ಯರಲ್ಲೆಲ್ಲ ಈತನೇ ಅತ್ಯಂತ ಪ್ರಸಿದ್ಧನಾದವ. ಮಾನವ ದೇಹದ ಅಂಗಛೇದನವನ್ನು ಇವನು ಮಾಡದಿದ್ದರೂ ಬೇರೆ ಪ್ರಾಣಿಗಳ ದೇಹಗಳನ್ನು ಸ್ಥಿರಪ್ರಯತ್ನ ಮತ್ತು ಚತುರತೆಯಿಂದ ಛೇದನ ಮಾಡಿ ತಿಳಿದ ವಿಷಯಗಳನ್ನು ಕರಾರುವಾಕ್ಕಾದ ಮತ್ತು ಸ್ಪಷ್ಟವಾದ ವಾಕ್ಸರಣಿಯಿಂದ ವಿವರಿಸುತ್ತ ತನ್ನ ಕಾಲದಲ್ಲಿ ಪ್ರಚಲಿತವಿದ್ದ ವೈದ್ಯಜ್ಞಾನವನ್ನೆಲ್ಲ ಕ್ರೋಡೀಕರಿಸಿ ಭದ್ರವಾದ ತಳಹದಿಯ ಮೇಲೆ ಗ್ರಂಥಗಳನ್ನು ರಚಿಸಿದ. ಸುಮಾರು 16ನೆಯ ಶತಮಾನದವರೆಗೂ ಈತನ ವಿಚಾರಗಳು ಚರ್ಚೆಗೆ ಒಳಪಡಿಸಲಾಗದ ಅಧಿಕಾರವಾಣಿಯಾಗಿದ್ದವು. ಈತನನ್ನು ವೈದ್ಯರಾಜನೆಂದೂ, ವೈದ್ಯಕೀಯದ ಸರ್ವಾಧಿಕಾರಿಯೆಂದೂ ವರ್ಣಿಸಿದ್ದಾರೆ. ಆದರೆ ರೋಮ್ ಚಕ್ರಾಧಿಪತ್ಯ ನಾಶವಾದ ಮೇಲೆ ಪಶ್ಚಿಮ ಯುರೋಪಿನಲ್ಲಿ ಗೇಲೆನ್ ಪ್ರಸಾರಮಾಡಿದ್ದ ಜ್ಞಾನ ಇಲ್ಲವಾಯಿತು. ಪೂರ್ವಕ್ಕೆ ಪ್ರಸರಿಸಿದ್ದ ಜ್ಞಾನ ಮಾತ್ರ ಲ್ಯಾಟಿನ್ ಮತ್ತು ಅರಬ್ಬಿ ಭಾಷೆಗಳಿಗೆ ಪರಿವರ್ತಿತವಾಗಿ ಜೀವಂತವಾಗಿತ್ತು. ಗೇಲೆನನ ಗ್ರಂಥಗಳು ಪಶ್ಚಿಮ ಯುರೋಪಿನ ಪುನರುಜ್ಜೀವನಕಾಲದ ಸುಮಾರಿಗೆ (15–16ನೆಯ ಶತಮಾನ) ಥಾಮಸ್ ಲಿನೇಕರ್, ಗಿಂಟರ್ ಫಾನ್ ಅಂಡರ್‌ನಾಕ್ ಮುಂತಾದವರ ವ್ಯಾಸಂಗ ಭಾಷ್ಯಗಳಿಂದ ಪುನರ್ಜನ್ಮ ಪಡೆದು ಅಧಿಕಾರಯುತ ಸ್ಥಾನವನ್ನು ಪಡೆದವು. ಗೇಲೆನನ ವಿಚಾರಗಳನ್ನು ಪ್ರಶ್ನಿಸುವ ಧೈರ್ಯ ಆ ಕಾಲದ ಯಾವ ವೈದ್ಯನಿಗೂ ಇರಲಿಲ್ಲ. ಆದರೆ ಇದರಿಂದ ವೈದ್ಯವಿದ್ಯೆಯ ಪ್ರಗತಿ ಬಹಳವಾಗಿ ಕುಂಠಿತವಾಯಿತು.

ಅಂಗರಚನಾಶಾಸ್ತ್ರ ಮತ್ತು ಶರೀರ ವಿಜ್ಞಾನಕ್ಕೆ ಸಂಬಂಧಿಸಿದಂತೆ ಗೇಲೆನ್ ತಿಳಿಸಿಕೊಟ್ಟ ವಿಚಾರಗಳು ವಿಶೇಷವಾಗಿ ಗಮನಾರ್ಹವಾಗಿವೆ. ಅಭಿದಮನಿಗಳಲ್ಲಿ (ಆರ್ಟರೀಸ್) ವಾಯು ಇರುವುದೆಂದು ಸುಮಾರು 400 ವರ್ಷಗಳಿಂದಲೂ ಅಲೆಗ್ಸಾಂಡ್ರಿಯ ಪಂಥದವರು ಸಾರುತ್ತಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಗೇಲೆನ್ ಅವುಗಳಲ್ಲಿ ರಕ್ತವೇ ಇರುತ್ತದೆಂಬುದನ್ನು ತೋರಿಸಿಕೊಟ್ಟ. ಮಿದುಳು, ನರಗಳು, ಮಿದುಳುಬಳ್ಳಿ, ನಾಡಿ ಮುಂತಾದವುಗಳ ವಿಷಯವಾಗಿ ಗೇಲೆನ್ ಬಹು ತಿಳಿವಳಿಕೆಯನ್ನುಂಟುಮಾಡಿದ. ಮಿದುಳುಬಳ್ಳಿಯನ್ನು ಬೇರೆ ಬೇರೆ ಸ್ಥಳಗಳಲ್ಲಿ ಛಿದ್ರಿಸಿ, ಅದರಿಂದ ಸಂವೇದನೆ ಮತ್ತು ಕ್ರಿಯಾಶೀಲತ್ವದಲ್ಲಿ ಆಗುವ ಬದಲಾವಣೆಗಳನ್ನೂ ಸಂಯಮರಹಿತ ಮೂತ್ರವಿಸರ್ಜನೆಯನ್ನೂ ವಿವರವಾಗಿ ಪರಿಶೀಲಿಸಿದ. ಮಿದುಳುಬಳ್ಳಿಯನ್ನು ಫ್ರೆನಿಕ್ ನರಗಳ ಉಗಮದಿಂದ ಮೇಲ್ಮಟ್ಟದಲ್ಲಿ ಛಿದ್ರಿಸಿದಾಗ ಸಾವು ಸಂಭವಿಸುವುದು ಏಕೆ ಎನ್ನುವುದನ್ನು ಯಥಾವತ್ತಾಗಿ ವಿವರಿಸಿದ. ಆದರೆ ಮಿದುಳುಬಳ್ಳಿಯನ್ನು ಎಡಬಲಭಾಗವಾಗಿ ಸೀಳಿದರೆ ಚಲನೆ ನಾಶವಾಗುವುದಿಲ್ಲವೆಂಬ ಅಂಶವನ್ನೂ ಸ್ಪಷ್ಟಪಡಿಸಿದ. ಗಂಟಲಿಗೆ ಒದಗುವ ನರವನ್ನು ಕಂಡುಹಿಡಿದು ಅದನ್ನು ಬಿಗಿಯಾಗಿ ದಾರದಿಂದ ಕಟ್ಟಿಬಿಟ್ಟರೆ ಪ್ರಾಣಿಗಳು

ಕೂಗುವುದನ್ನು ಇಷ್ಟಬಂದಾಗ ತಡೆಹಿಡಿಯಬಹುದು ಎಂದು ತೋರಿಸಿಕೊಟ್ಟ. ಗುಂಡಿಗೆಯ ರಚನೆಯನ್ನೂ ಕ್ರಿಯೆಯನ್ನೂ ಚೆನ್ನಾಗಿ ತಿಳಿದಿದ್ದರೂ ಅದು ಮಾಂಸದ ಕೋಶವಿರಬಹುದೆಂದು ಮಾತ್ರ ನಂಬಲಿಲ್ಲ.

ಗೇಲೆನ್ ಎಂದರೆ ಸಮಾಧಾನವಾಗಿರುವ ಎಂಬ ಅರ್ಥ ಬರುತ್ತದೆ. ಆದರೆ ಈತ ಇದಕ್ಕೆ ವ್ಯತಿರಿಕ್ತವಾಗಿ ಸೊಕ್ಕಿದ ಮತ್ತು ಉದ್ಧಟವಾದ ಮನೋವೃತ್ತಿಯನ್ನು ಹುಟ್ಟುಗುಣವಾಗಿ ಪಡೆದಿದ್ದ. ತನಗೆ ನಿಸರ್ಗದ ಅರ್ಥಪೂರ್ಣತೆ ನಿಚ್ಚಳವಾಗಿ ತಿಳಿದಿದೆಯೆಂದೂ ದೇವರ ಸೃಷ್ಟಿ ಏಕೆ ಆ ರೀತಿಯಲ್ಲೇ ಇದೆ ಎನ್ನುವುದು ತನಗೆ ಅರ್ಥವಾಗಿದೆ ಎಂದೂ ತನಗೆ ಗೊತ್ತಾಗದೇ ಇರುವುದು ಯಾವುದೂ ಇಲ್ಲವೆಂದೂ ಹೇಳಹೊರಟದ್ದು ಈತನ ತಪ್ಪು. ಇದರಿಂದಾಗಿ ತನ್ನ ನಿಜವಾದ ಮಹತ್ತ್ವಕ್ಕೆ ಕುಂದು ತಂದುಕೊಂಡ. (ಎಸ್.ಆರ್.ಆರ್.)

**ಗೇ–ಲ್ಯೂಸ್ಯಾಕ್, ಜೋಸೆಫ್ ಲೂಯಿ :** 1778–1850. ಫ್ರಾನ್ಸ್ ದೇಶದ ರಸಾಯನ ವಿಜ್ಞಾನಿ. ಅನಿಲಗಳ ಗುಣಗಳನ್ನು ಅನ್ವೇಷಿಸುವುದರಲ್ಲಿ ಇವನು ಮಹತ್ತ್ವದ ಪಾತ್ರವನ್ನು ವಹಿಸಿ ಗೇ–ಲ್ಯೂಸ್ಯಾಕ್ ನಿಯಮವನ್ನು ಆವಿಷ್ಕರಿಸಿದ (1809). ನಿರ್ದಿಷ್ಟ ಒತ್ತಡ ಮತ್ತು ಉಷ್ಣತೆಗಳಲ್ಲಿ ಅನಿಲಗಳು ಒಂದರೊಡನೊಂದು ಸಂಯೋಗಿಸುವಾಗ ನಿರ್ದಿಷ್ಟ ಸರಳಾನುಪಾತಗಳಲ್ಲಿ ಸಂಯೋಗಿಸುವುವು; ಮತ್ತು ಫಲಿಸುವ ಹೊಸ ಅನಿಲದ/ಅನಿಲಗಳ ಗಾತ್ರ ಈ ಕ್ರಿಯೆಯಲ್ಲಿ ಭಾಗವಹಿಸಿದ ಅನಿಲಗಳ ಗಾತ್ರಗಳಿಗೆ ಸರಳಾನುಪಾತದಲ್ಲಿರುತ್ತದೆ ಎಂಬುದೇ ಈ ನಿಯಮದ ನಿರೂಪಣೆ. ಉದಾಹರಣೆಗೆ ಹೈಡ್ರೊಜನಿನ ಎರಡು ಅಂಶಗಳು ಆಕ್ಸಿಜನಿನ ಒಂದು ಅಂಶದೊಡನೆ ಸೇರಿ ನೀರು ($H_2O$) ದೊರೆಯುತ್ತದೆ. ಹೈಡ್ರೊಜನಿನ ಒಂದು ಅಂಶ ಕ್ಲೋರಿನಿನ ಒಂದು ಅಂಶದೊಡನೆ ಸೇರಿ ಹೈಡ್ರೊಜನ್ ಕ್ಲೋರೈಡ್ ($HCl$) ಆಗುತ್ತದೆ; ಹೈಡ್ರೊಜನಿನ ಮೂರು ಅಂಶಗಳು ನೈಟ್ರೊಜನಿನ ಒಂದು ಅಂಶದೊಡನೆ ಸೇರಿ ಅಮೋನಿಯ ($NH_3$) ಲಭಿಸುತ್ತದೆ; ಇತ್ಯಾದಿ. ಸಂಯೋಗಿಸುವ ಘನಗಾತ್ರಗಳನ್ನು ಕುರಿತ ಈ ನಿಯಮವನ್ನು ಆವಿಷ್ಕರಿಸುವಲ್ಲಿ ಸುವಿಖ್ಯಾತ ನೈಸರ್ಗಿಕ ವಿಜ್ಞಾನಿ ಹಂಬೋಲ್ಟ್‌ನಿಂದ (ನೋಡಿ– ಹಂಬೋಲ್ಟ್, ಫ್ರೀಡರಿಶ್ ವಿಲ್‌ಹೆಲ್ಮ್ ಹೈನ್ರಿಕ್ ಅಲೆಕ್ಸಾಂಡರ್) ಗೇ–ಲ್ಯೂಸ್ಯಾಕನಿಗೆ ದೊರೆತ ಸಹಕಾರ ಅಮೂಲ್ಯ. ಅದೇ ವರ್ಷ (1809) ಹಂಬೋಲ್ಟನೊಡಗೂಡಿ ನೀರನ್ನು ವಿದ್ಯುದ್ವಿಶ್ಲೇಷಿಸಿ ಅದು ಹೈಡ್ರೊಜನ್ ಮತ್ತು ಆಕ್ಸಿಜನುಗಳ ಸಂಯೋಗದಿಂದ ಆದುದೆಂದು ಗೇ–ಲ್ಯೂಸ್ಯಾಕ್ ಖಚಿತಪಡಿಸಿದ. ಈತ ಪೊಟ್ಯಾಸಿಯಮ್ ಕಾರ್ಬೊನೇಟ್ ಲವಣದಿಂದ ಪೊಟ್ಯಾಸಿಯಮ್ ಧಾತುವನ್ನು ತಯಾರಿಸಿದ್ದು 1808ರಲ್ಲಿ. ಬಳಿಕ ಹೈಡ್ರೊಸಯನಿಕ್ ಆಮ್ಲದಲ್ಲಿ ಆಕ್ಸಿಜನ್ ಇಲ್ಲವೆಂದು ಸಿದ್ಧಪಡಿಸಿ ಆಮ್ಲಗಳಲ್ಲಿ ಆವಶ್ಯಕ ಧಾತು ಆಕ್ಸಿಜನ್ ಅಲ್ಲ, ಹೈಡ್ರೊಜನ್ ಎಂಬ ಸಿದ್ಧಾಂತಕ್ಕೆ ಪುಷ್ಟಿ ನೀಡಿದ. ಹುದುಗುವಿಕೆಯ ವಿಧಾನಗಳಲ್ಲೂ ಆರ್ಗ್ಯಾನಿಕ್ ಸಂಯುಕ್ತಗಳ ಪರೀಕ್ಷೆ, ವಿಶ್ಲೇಷಣ ವಿಧಾನಗಳ ಬಗ್ಗೆಯೂ ಸಂಶೋಧನೆಯನ್ನು 1810–15ರ ಅವಧಿಯಲ್ಲಿ ನಡೆಸಿದ. ಮೊದಲ ಬಾರಿಗೆ ಸಯನೋಜನ್ ಮತ್ತು ಬೋರಾನುಗಳನ್ನು ತಯಾರಿಸಿದ ಕೀರ್ತಿ ಸಹ ಈತನದು. ಔದ್ಯಮಿಕ ರಂಗದಲ್ಲಿಯೂ ಈತನ ಸಂಶೋಧನೆಗಳು ಗಣನೀಯವಾದುವು. ಅನೇಕ ಉದ್ಯಮಗಳಿಗೆ ಇವನು ಸಲಹೆಗಾರ ನಾಗಿದ್ದ. ಸಲ್ಫ್ಯೂರಿಕ್ ಮತ್ತು ಆಕ್ಸ್ಯಾಲಿಕ್ ಆಮ್ಲಗಳ ತಯಾರಿಕಾ ವಿಧಾನಗಳನ್ನು ಉತ್ತಮಗೊಳಿಸಿದ. ಚಲುವೆ (ಬ್ಲೀಚಿಂಗ್) ಪುಡಿಯಲ್ಲಿ ಕ್ಲೋರಿನ್ ಅಂಶವನ್ನೂ ಪೊಟಾಷಿನಲ್ಲಿ ಪೊಟ್ಯಾಸಿಯಮ್ ಅಂಶವನ್ನೂ ತಿಳಿಯುವ ವಿಧಾನಗಳನ್ನು ಕಂಡುಹಿಡಿದ. ಖನಿಜಗಳಲ್ಲಿ ಬೆಳ್ಳಿಯ ಅಂಶವನ್ನು ತಿಳಿಯುವುದಕ್ಕೆ ವಿಧಾನವೊಂದನ್ನು ಯೋಜಿಸಿದ. ಸಂಶೋಧಕನಾಗಿ ಈತ ಸೇವೆ ಸಲ್ಲಿಸಿದ ಸುಮಾರು 50 ವರ್ಷಗಳಲ್ಲಿ ಹಂಬೋಲ್ಟ್, ಥೆನಾರ್ಡ್, ಲೀಬಿಗ್ ಮತ್ತು ವಾಲ್ಟರ್ ಅವರೊಡನೆ ಕೂಡಿ ಪ್ರಕಟಿಸಿದ ಬರೆಹಗಳಲ್ಲದೆ ಸ್ವತಂತ್ರವಾಗಿ 148 ಸಂಶೋಧನ ಪ್ರಬಂಧಗಳನ್ನು ಕೂಡ ಪ್ರಕಟಿಸಿದ್ದಾನೆ.



ಫ್ರಾನ್ಸಿನ ಸೇಂಟ್ ಲಿಯೊನಾರ್ಡ್ ಎಂಬಲ್ಲಿ 1778ರ ಡಿಸೆಂಬರ್ 6ರಂದು ಗೇ–ಲ್ಯೂಸ್ಯಾಕ್ ಜನಿಸಿದ. ಮೂಲ ವಿದ್ಯಾಭ್ಯಾಸದ ಬಳಿಕ ಹಲವು ಕಾಲ ರಸಾಯನ ಶಾಸ್ತ್ರಜ್ಞ ಕ್ಲಾಡ್ ಬರ್ತೋಲೆಟನ ಸಹಾಯಕನಾಗಿ ಕೆಲಸ ಮಾಡಿದ. 1802ರಲ್ಲಿ ತನ್ನ ಊರಿನ ಪಾಲಿಟೆಕ್ನಿಕ್ ಶಾಲೆಯಲ್ಲಿ ನಿದರ್ಶಕೋಪಾಧ್ಯಾಯನಾಗಿ ನೇಮಕಗೊಂಡು 1809ರಲ್ಲಿ ಅಲ್ಲಿಯೇ ರಸಾಯನ ವಿಜ್ಞಾನ ಪ್ರಾಧ್ಯಾಪಕನಾದ. 1808ರಿಂದ 1832ರ ವರೆಗೆ ಸಾರ್ಬೋನಿನಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ. 1832ರಲ್ಲಿ ಸಾರ್ಬೋನ್ ಬಿಟ್ಟು ಯಾರ್ಡಿನ್ ಡೆಪ್ಲಾಂಟೆಸಿನಲ್ಲಿ ರಸಾಯನವಿಜ್ಞಾನ ಪ್ರಾಧ್ಯಾಪಕನಾದ. 1806ರಲ್ಲಿ ಇವನಿಗೆ ಅಕಡೆಮಿಷಿಯನ್ ಗೌರವವೂ ಹಾಯ್ಸೆವಿಯನ್ಸೆಯಲ್ಲಿನ ಛೇಂಬರ್ ಆಫ್ ಡೆಪ್ಯುಟೀಸಿನಲ್ಲಿ ಸದಸ್ಯತ್ವವೂ ದೊರೆತವು. 1839ರಲ್ಲಿ ಛೇಂಬರ್ ಆಫ್ ಪೀರ್‍ಸಿನಲ್ಲಿ ಸದಸ್ಯತ್ವ ದೊರೆಯಿತು. ಈತನ ಮೊದಲ ಸಂಶೋಧನೆಗಳು ಅನಿಲಗಳ ಗುಣಗಳು ಮತ್ತು ವಾತಾವರಣವನ್ನು ಕುರಿತವು. ವಾಯುಮಂಡಲದಲ್ಲಿನ ಕಾಂತತ್ವದ ಬಗ್ಗೆ ಅಭ್ಯಾಸಕ್ಕೆ 1804ರಲ್ಲಿ ತೊಡಗಿದ. ಬೆಲೂನುಗಳ ನೆರವಿನಿಂದ ಸುಮಾರು 6096ಮೀ ಎತ್ತರದ ವರೆಗೂ ಏರಿ ಅಲ್ಲಿನ ಉಷ್ಣತೆ, ಆರ್ದ್ರತೆ ಮತ್ತು ಅಲ್ಲಿರುವ ಅನಿಲಗಳು ಹಾಗೂ ಅವುಗಳ ಪ್ರಮಾಣಗಳ ಬಗ್ಗೆ ಸಂಶೋಧನೆ ನಡೆಸಿದ. ಈತ 1850 ಮೇ 9ರಂದು ಪ್ಯಾರಿಸಿನಲ್ಲಿ ನಿಧನನಾದ. (ಕೆ.ಟಿ.ಎಸ್.)

**ಗೇವಿಯಾಲಿಸ್ :** ಕ್ರಾಕೊಡಿಲಿಯ ಗಣದ ಗೇವಿಯಾಲಿಡೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಮೊಸಳೆ. ಗೇವಿಯಾಲಿಸ್ ಗ್ಯಾಂಜೆಟಿಕಸ್ ಇದರ ವೈಜ್ಞಾನಿಕ ನಾಮ. ಭಾರತ, ಬರ್ಮ ಮತ್ತು ಮಲೇಷ್ಯಯಗಳ ನದಿಗಳಲ್ಲಿ ವಾಸಿಸುತ್ತದೆ. ಭಾರತದ ಗಂಗಾನದಿಯಲ್ಲಿ ಇದನ್ನು ಕಾಣಬಹುದು. ತೆಳುವಾದ ಮತ್ತು ಉದ್ದವಾದ ದೇಹವುಳ್ಳ ಪ್ರಾಣಿಯಿದು. ದೇಹದ ಉದ್ದ 5–6 ಮೀ (15–20'). ಮೂತಿಯೂ ಕಿರಿದಾಗಿ ಉದ್ದವಾಗಿದೆ. ಗಂಡು ಗೇವಿಯಲಿನ ಮೂತಿಯ ತುದಿಯಲ್ಲಿ ಒಂದು ರೀತಿಯ ಸಣ್ಣ ಕುಡಿಕೆಯಂಥ ಗುಬುಟು ಇದೆ. ಆದ್ದರಿಂದ ಇದನ್ನು ಹಿಂದಿ ಭಾಷೆಯಲ್ಲಿ ಗಡಿಯಲ್ (ಗಡಿ–ಗಡಿಗೆ) ಎಂದು ಕರೆಯಲಾಗುತ್ತದೆ. ಎರಡು ದವಡೆಗಳಲ್ಲೂ ಹೆಚ್ಚುಕಡಿಮೆ ಸಮಗಾತ್ರದ ಹಲ್ಲುಗಳಿವೆ. ಕಾಲುಗಳಲ್ಲಿನ ಬೆರಳುಗಳೆಲ್ಲವೂ ಪೊರೆ ಯೊಂದರಿಂದ ಕೂಡಿಕೊಂಡಿದ್ದು ಈಜಲು ಸಹಾಯಕವಾಗಿರುವ ಜಾಲಪಾದಗಳಾಗಿವೆ. ಮೂಗಿನ ಹೊಳ್ಳೆಗಳು ಮೃದುವಾಗಿದ್ದು ಬೇಕೆಂದಾಗ ಊದಿಕೊಳ್ಳಬಲ್ಲವು. ಮೀನುಗಳೇ ಗೇವಿಯಲಿನ ಪ್ರಧಾನ ಆಹಾರ. (ಎಂ.ಡಿ.ಪಿ.)

**ಗೇಷ :** ಗೀತನೃತ್ಯಗಳಲ್ಲಿ, ಮಾತುಕತೆಯಲ್ಲಿ ಪರಿಣಿತಳಾಗಿದ್ದು ಮನೋರಂಜನೆಯ ನ್ನೊದಗಿಸುವುದಕ್ಕಾಗಿಯೇ ಮೀಸಲಾದ ಜಪಾನೀ ಮಹಿಳೆ. ಶ್ರೀಮಂತ ಜನಕ್ಕೆ, ಬಳಲಿದ ವ್ಯಾಪಾರೋದ್ಯಮಿಗಳಿಗೆ ಸಂತೋಷವನ್ನು ಕೊಡುವುದೇ ಇಂಥ ಮಹಿಳೆಯರ ಕೆಲಸ. ಮಿಂಚುವ ದಟ್ಟ ಕೇಶರಾಶಿಗಳಿಂದ, ಆಶ್ಚರ್ಯಕರವಾಗಿ ಸಿದ್ಧಗೊಳಿಸಿ ಥಳಕುಬೆಳಕಿನ ಕಿಂಕಾಪು ಉಡುಪುಗಳಿಂದ, ಒನಪು ಒಯ್ಯಾರಗಳಿಂದ ಜನಮನವನ್ನು ಆಕರ್ಷಿಸುವ ಗೇಷ ರಮಣಿಯರಿಂದ ಜಪಾನಿನ ಪ್ರಮುಖ ಪಟ್ಟಣಗಳ ಜೀವನ ಆಕರ್ಷಕವಾಗಿ ರೂಪಿಸಲ್ಪಟ್ಟಿದೆ. ಹೊಳಪಿನ ಕಾಂತಿಯುತ ದೇಹಕ್ಕೆ ಆಕರ್ಷಕ ಉಡುಪನ್ನು ಧರಿಸಿದ ಇವರು ಪದ್ಯಗಳನ್ನು ಹಾಡುವುದು, ರಸಿಕೋಕ್ತಿಯೊಂದಿಗೆ ಸಂಭಾಷಿಸುವುದು, ನರ್ತಿಸುವುದು ಅಲ್ಲದೇ ಸ್ಯಾಮಿಸೆನ್ ವಾದ್ಯದಲ್ಲಿ ಜಪಾನೀ ಸಂಗೀತದ ಮಾಧುರ್ಯವನ್ನು ಹೊಮ್ಮಿಸುವುದು ಮುಂತಾದ ಕಲಾವಿಲಾಸಗಳಲ್ಲಿ ನಿಪುಣರು. ಸಂತೋಷ ಕೂಟಗಳಲ್ಲಿ ಸೇರುವ ರಸಿಕರ ಮನತಣಿಸಲು ಇವರನ್ನು ಕರೆಸಲಾಗುತ್ತದೆ. ಸಾಂಪ್ರದಾಯಿಕ ಶಿಷ್ಟಾಚಾರಗಳ ಒಡತಿಯರಾದ ಇವರು ಸಾಮಾನ್ಯವಾಗಿ ತಮ್ಮ ವೃತ್ತಿಯಲ್ಲಿ ಅಗ್ರಗಣ್ಯರು. ಅಲ್ಲದೆ ತಮ್ಮ ಆಶ್ರಯದಾತರಲ್ಲಿ ನಿಷ್ಠೆಯಿಂದ ನಡೆದು ವಿಶ್ವಾಸಕ್ಕೆ ಪಾತ್ರರಾಗುವಂಥವರು. ರಾಜಕಾರಣಿಗಳ ಅಥವಾ ಔದ್ಯಮಿಕ ವ್ಯಕ್ತಿಗಳ ಮಹತ್ತ್ವದ ಸಭೆ, ಪರಿಷತ್ತುಗಳು ಹಿಂದಿನಿಂದಲೂ ನಡೆಯುವುದು ಪ್ರಮುಖ ಗೇಷ ಮಂದಿರಗಳಲ್ಲಿಯೇ. ಆದರೂ ಗೇಷೆಯರ ಕಿವಿಯ ಮೇಲೆ ಅನಿವಾರ್ಯವಾಗಿ ಬಿದ್ದ ವಿಷಯಗಳು ಹೊರಬರುವುದು ತೀರ ಅಪರೂಪ. ಅಷ್ಟರಮಟ್ಟಿಗೆ ಅವರದು ನಿಯತ್ತಿನ ನಡತೆ.



ಗೇಷ ಮಹಿಳೆ

ಜಪಾನಿನಲ್ಲಿ ಹಿಂದೊಂದು ಕಾಲದಲ್ಲಿ ಗ್ರಾಮೀಣ ಕುವರಿಯರನ್ನು ಅಪಹರಿಸಿ ತರಬೇತುಗೊಳಿಸಿ ರಾಜಗೃಹಗಳಿಗೆ ರವಾನಿಸುತ್ತಿದ್ದರು. ಹೀಗೆ ರವಾನಿಸಲ್ಪಟ್ಟ ಹುಡುಗಿಯರು ಹಗಲಿನಲ್ಲಿ ಊಟದ ಪರಿಚಾರಿಕೆಯರಾದರೆ, ರಾತ್ರಿಯಲ್ಲಿ ನೃತ್ಯ ವಾದ್ಯಗಳೊಂದಿಗೆ ವಿನೋದವನ್ನೊದಗಿಸುತ್ತಿದ್ದರು. ಇದೇ ಪದ್ಧತಿ ಮುಂದುವರಿದು, ಕಾಲಾಂತರದಲ್ಲಿ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿ, ಗೇಷ ವ್ಯವಸ್ಥೆಯಾಗಿ ಮಾರ್ಪಟ್ಟಿತು.

ಉದಯೋನ್ಮುಖ ಗೇಷೆಯರು ಬಹು ತೀವ್ರವಾಗಿ ತಮ್ಮ ಜೀವನಕ್ರಮದಲ್ಲಿ ಮೇಲೇರುತ್ತಾರೆ. ಪ್ರಾರಂಭದಿಂದ 16–18 ನೆಯ ವರ್ಷದ ವರೆಗೆ ಹಾಡು, ನೃತ್ಯ, ಸಂಗೀತ, ಸಾಂಪ್ರದಾಯಿಕ ಶಿಷ್ಟಾಚಾರದ ನಡೆವಳಿಕೆ, ಬರೆವಣಿಗೆ, ಜೊತೆಗೆ ಹೂದಾನಿಗಳ ಹೊಂದಾಣಿಕೆ, ಚಹಕೂಟಗಳ ವ್ಯವಸ್ಥೆ ಮುಂತಾದ ವಿಷಯಗಳಲ್ಲೆಲ್ಲ ಇವರಿಗೆ ತರಬೇತಿ ಕೊಡಲಾಗುವುದು. ತಮ್ಮ ವೃತ್ತಿಯಲ್ಲಿ ಪರಿಣಿತರಾದಂತೆ ಇವರು ಹೆಚ್ಚೆಚ್ಚು ಕರ್ತವ್ಯದಕ್ಷರಾಗುವರು. ಪ್ರೌಢವಯಸ್ಕರಾದಂತೆ ಪ್ರಮುಖ ಗೇಷ ಮಂದಿರಗಳಲ್ಲಿ ಇವರು ಸಂಚಾಲಕಿಯರಾಗಬಹುದು ಇಲ್ಲವೆ ಮದುವೆಯಾಗಿ ಗೃಹಕೃತ್ಯದಲ್ಲಿ ತೊಡಗಬಹುದು. ಗೇಷೆಯರೆಲ್ಲ ವಾರಾಂಗನೆಯರಲ್ಲ. ಆದರೆ ಯಾವ ರೀತಿಯ ನಿರ್ಬಂಧವೂ ಇಲ್ಲದೆ ಶ್ರೀಮಂತರ ಪ್ರೀತಿಗೆ ಪಾತ್ರರಾಗಿ ಅವನ ಆಶ್ರಯದಲ್ಲಿದ್ದು



ಓಡೂರಿ ನೃತ್ಯದಲ್ಲಿ ಗೇಷ ಯುವತಿಯರು. ವಸಂತದ ಆಗಮನವನ್ನು ಸ್ವಾಗತಿಸುವ ಈ ನೃತ್ಯ ಜಪಾನಿನಲ್ಲಿ ಹೆಚ್ಚು ಜನಪ್ರಿಯವಾಗಿದೆ.

ಬಿಡುವವರೇ ಹೆಚ್ಚು. ಗೇಷೆಯರು ಜಪಾನಿನ ಪ್ರಧಾನಿಗಳನ್ನು ವಿವಾಹವಾದ ಉದಾಹರಣೆಗಳು ಉಂಟು. ಗೇಷೆಯರ ಸಾಮಾಜಿಕ ಪ್ರತಿಷ್ಠೆ ಕಾಲದೇಶಗಳಿಗೆ ತಕ್ಕಂತಿರುತ್ತದೆ. ಈಗ ಇವರನ್ನು 5 ರಿಂದ 10 ವರ್ಷಗಳ ಅವಧಿಯ ಮೇರೆಗೆ ಗೇಷ ಗೃಹಗಳಲ್ಲಿ ನಿಯಮಿಸಲಾಗುತ್ತಿದೆ. ಅದಕ್ಕಾಗಿ ನಿರ್ದಿಷ್ಟಪಡಿಸಿದ ಹಣ ಗೇಷೆಯರ ತಂದೆತಾಯಿಗಳಿಗೆ ಇಲ್ಲವೆ ವಾರಸುದಾರರಿಗೆ ಸೇರುತ್ತದೆ. ಸೌಂದರ್ಯಕ್ಕೆ ತಕ್ಕಂತೆ ಸಂಭಾವನೆ. ಗೇಷೆಯರ ಬಹುಪಾಲು ಆದಾಯವೆಲ್ಲ ಅವರ ಸೌಂದರ್ಯ ಹಾಗೂ ಕಲಾಸಾಧನೆಗಾಗಿ ಹಣವ್ಯಯಮಾಡಿದ ಒಡತಿಯರಿಗೆ ಸಲ್ಲುವುದು.

ಟೋಕಿಯೊ, ಕಿಯೋಟೊ, ಒಕಾಸಾದಂಥ ನಗರಗಳಲ್ಲಿ ಗೇಷ ಮಹಿಳೆಯರು ನಿರ್ದಿಷ್ಟ ಸಂಖ್ಯೆಯಲ್ಲಿದ್ದಾರಾದರೂ ಸಾಧಾರಣವಾಗಿ ಎಲ್ಲ ಕಡೆಗಳಲ್ಲಿಯೂ ಅವರನ್ನು ಕಾಣಬಹುದು. ಗೇಷ ಶಿಕ್ಷಣವೀಯುವ ಪ್ರಮುಖ ಶಾಲೆಯೊಂದು ಜಪಾನಿನ ಟೋಕಿಯೋದ ಗಿಯಾನ್ ಅಮ್ಯೂಸ್‌ಮೆಂಟ್ ಕ್ವಾರ್ಟರ್ಸ್ ಎಂಬಲ್ಲಿದೆ. ಟೋಕಿಯೋದ ಮುಖ್ಯ ಸ್ಥಳಗಳಲ್ಲಿ ಗೇಷಾಗೃಹಗಳು ಒಂದೇ ಕಡೆಗೆ ಗುಂಪುಗುಂಪಾಗಿ ನೆಲೆಗೊಂಡಿವೆ.

ಇತ್ತೀಚಿನ ದಿನಗಳಲ್ಲಿ ಬದಲಾಗುತ್ತ ನಡೆದಿರುವ ಜಪಾನಿನ ಜೀವನಕ್ಕೆ ಅನುಗುಣವಾಗಿ ಗೇಷೆಯರು ಕಣ್ಮರೆಯಾಗುತ್ತ ನಡೆದಿದ್ದಾರೆ. ಆದ್ದರಿಂದ ಜಪಾನಿನ ನವಪೀಳಿಗೆಗೆ ಗೇಷ ಮನೋರಂಜನ ಕೂಟಗಳು ಕೇವಲ ಸಾಂಪ್ರದಾಯಿಕವೆನಿಸಿವೆ. ಮಹಾಯುದ್ಧಕ್ಕೆ ಪೂರ್ವದಲ್ಲಂತೂ ಗೇಷೆಯರ ಒಡನಾಟವೆಂದರೆ ಪ್ರತಿಷ್ಠೆಯ ಸಂಕೇತವೆಂದು ಪರಿಗಣಿತವಾಗಿತ್ತು. ಪ್ರಚಲಿತ ಪಾಶ್ಚಾತ್ಯ ನೃತ್ಯ ಮತ್ತು ಮನೋರಂಜನ ವಿಧಾನಗಳಿಂದಾಗಿ ಗೇಷೆಯರ ಅದೃಷ್ಟ ಮಂಕಾಗುತ್ತಿದೆ. ಇಂಥ ನವ ವಿಧಾನಗಳೊಂದಿಗೆ ಸ್ಪರ್ಧೆಗಿಳಿಯಲು ಅನೇಕ ಗೇಷ ಸ್ತ್ರೀಯರು ಪಾಶ್ಚಾತ್ಯ ಶೈಲಿಯ ನೃತ್ಯಗಳನ್ನು ಕೈಕೊಳ್ಳುತ್ತಿದ್ದಾರೆ. ಆದರೂ ಭದ್ರ ಬುನಾದಿಯ ಮೇಲೆ ನಿಂತ ಜಪಾನಿನ ಇತರ ಹಳೆಯ ಮೌಲ್ಯಗಳಂತೆ, ಗೇಷ ಪದ್ಧತಿಯೂ ಬಹುಕಾಲ ಜಪಾನಿನ ಜನಜೀವನದಲ್ಲಿ ಉಳಿದುಕೊಳ್ಳಬಹುದಾಗಿದೆ. ಕೆಲವು ಪ್ರಸಿದ್ಧ ಗೇಷ ಮಹಿಳೆಯರ ಆತ್ಮಕಥೆಗಳು ಕಳೆದೆರಡು ದಶಕಗಳಲ್ಲಿ ಪ್ರಕಟಗೊಂಡಿದ್ದು, ಈ ಪೈಕಿ ಮೆಮೊಯರ್ಸ್ ಆಫ್ ಎ ಗೇಷ (1997) ಹಾಗೂ ಗೇಷ ಆಫ್ ಗಿಯಾನ್ (2002) ಇವನ್ನು ಹೆಸರಿಸಬಹುದು. (ಎ.ಬಿ.ಎಚ್.)

**ಗೈಗರ್, ಹ್ಯಾನ್ಸ್ :** 1882–1945. ಜರ್ಮನ್ ಭೌತವಿಜ್ಞಾನಿ. ಸಶಕ್ತ ಉಪಪರಮಾಣ್ವಕ ಕಣಗಳನ್ನು ಪತ್ತೆಹಚ್ಚುವಲ್ಲಿ ಬಳಸುವ ಗೈಗರ್ ಗುಣಕದ ಉಪಜ್ಞೆಕಾರ (1913) (**ನೋಡಿ: ಗುಣಕ, ಗೈಗರ್–ಮುಲ್ಲರ್**). ಒಂದನೆಯ ಮಹಾಯುದ್ಧದ ಹಿಂದಿನ ವರ್ಷಗಳಲ್ಲಿ ಲಾರ್ಡ್ ರುದರ್ಫರ್ಡನ (1871–1937) ಸಮರ್ಥ ಸಹಾಯಕನಾಗಿ ಸೇವೆ ಸಲ್ಲಿಸಿದ ಮತ್ತು ಆ ಅವಧಿಯಲ್ಲಿ ಗೈಗರ್ ಗುಣಕವನ್ನು ನಿರ್ಮಿಸಿ ಪ್ರಸಿದ್ಧಿಗೆ ಬಂದ. ಯುದ್ಧಾರಂಭವಾದ (1914) ಬಳಿಕ ಸ್ವದೇಶವಾದ ಜರ್ಮನಿಗೆ ಮರಳಿ ಫಿರಂಗಿದಳದಲ್ಲಿ ಕೆಲಸ ಮಾಡಿದ. 1925ರಲ್ಲಿ ಕೀಲ್ ವಿಶ್ವವಿದ್ಯಾಲಯದಲ್ಲೂ 1929ರಲ್ಲಿ ಟ್ಯೂಬಿಂಜನ್ ವಿಶ್ವವಿದ್ಯಾಲಯದಲ್ಲೂ ಪ್ರಾಧ್ಯಾಪಕನಾಗಿ ನೇಮಕ ಪಡೆದ. ಪ್ರಖ್ಯಾತ ಆಂಗ್ಲ ವಿಜ್ಞಾನಿ ಜೇಮ್ಸ್ ಚಾಡ್‌ವಿಕ್ ಗೈಗರನ ಶಿಷ್ಯರಲ್ಲೊಬ್ಬ. 1882ರ ಸೆಪ್ಟೆಂಬರ್ 30ರಂದು ಜನನ, 1945 ಸೆಪ್ಟೆಂಬರ್ 24 ರಂದು ಮರಣ. (ಜಿ.ಎಸ್.)


**ಗೈಟ್ಟೂನ್ ದಾರ್‌ಟ್ಸೂ :** 1235–94. ಇಟಾಲಿಯನ್ ಕವಿ. ಹುಟ್ಟಿದ್ದು ಟಸ್ಕನಿಯಲ್ಲಿ. ಇಟಲಿಯ ಪ್ರೇಮಕಾವ್ಯದಲ್ಲಿ ಪ್ರಣಯದ ಬಗ್ಗೆ ಒಂದು ರೀತಿಯ ಗಂಭೀರತೆ, ಅಭಿವ್ಯಕ್ತಿಯಲ್ಲಿ ಖಚಿತತೆ ಮತ್ತು ಪ್ರಾಮಾಣಿಕತೆ–ಇವುಗಳ ಹೊಸತನ ಕಾಣಿಸಿಕೊಳ್ಳುವ ಮೊದಲು ಟಸ್ಕನ್ ಶಿಷ್ಟಾಚಾರ ಕವಿತಾ ಪರಂಪರೆಯನ್ನು ಈತ ಸ್ಥಾಪಿಸಿದ. 1265ರಲ್ಲಿ ಮಿಲಿಟಸ್ ಮೇರಿ ವರ್ಜಿನಳ ಸೈನಿಕ ಮತ್ತು ಧಾರ್ಮಿಕ ಕಟ್ಟಳೆಗಳಿಗೆ ಸೇರಿರುವ ವರೆಗಿನ ಅವಧಿಯಲ್ಲಿ ಈತ ಬಹುಪಾಲು ಪ್ರೇಮಗೀತೆಗಳನ್ನೂ ಸಾನೆಟ್ಟುಗಳನ್ನೂ ಬರೆದ; ಅನಂತರದ ಕಾಲದಲ್ಲಿ ಕ್ಲಿಷ್ಟ ನೈತಿಕ ಗೀತೆಗಳ ರಚನೆಯಲ್ಲಿ ತೊಡಗಿದ. ಈತನ 41 ಕಾಗದಗಳು ಇಟಾಲಿಯನ್ ಪತ್ರಸಾಹಿತ್ಯದಲ್ಲಿಯೇ ಅತ್ಯಂತ ಹಳೆಯವು. ಈತನನ್ನು ಸ್ತುತಿ ಗೀತೆಗಳು ಎಂಬ ಪದ್ಯಜಾತಿಯ (ಲಾಡ್) ಜನಕನೆನ್ನಲಾಗಿದೆ. ದಾಂಟೆ ಮಹಾಕವಿ ಈತನನ್ನು ಪ್ರಬಲವಾಗಿ ಖಂಡಿಸಿದ್ದಾನೆ. ಫ್ರಾನ್ಸಿಸ್ಕೊ ಡ ಸ್ಯಾಂಕ್ಟಿಸ್ ಈತನ ಸೂಕ್ಷ್ಮ ತರ್ಕ ವೈಖರಿಯನ್ನು ಮೆಚ್ಚಿದ್ದನಾದರೂ ಈತ ಕವಿಯೇ ಅಲ್ಲವೆಂದು ಹೇಳಿದ್ದಾನೆ. (ಕೆ.ಎಸ್.ಬಿಎಚ್.)

**ಗೈಡುಗಳು ಮತ್ತು ಗೈಡು ಪದ್ಧತಿ :** ಬಾಯ್‌ಸ್ಕೌಟುಗಳು ಮತ್ತು ಸ್ಕೌಟು ಪದ್ಧತಿಗಳ ಮಾದರಿಯಲ್ಲೆ ಬಾಲಕಿಯರಿಗಾಗಿ ಏರ್ಪಟ್ಟ ವ್ಯವಸ್ಥೆಯನ್ನು ಗೈಡುಪದ್ಧತಿ ಎಂದೂ ಅದರ ಸದಸ್ಯರನ್ನು ಗೈಡುಗಳು ಎಂದೂ ಕರೆಯಲಾಗಿದೆ.

ಸ್ಕೌಟು ಪದ್ಧತಿಯ ಜನಕನೂ ಸ್ಥಾಪನಾಚಾರ್ಯನೂ ಆದ ಲಾರ್ಡ್ ಬೇಡನ್ ಪೋವೆಲನನ್ನು ಯಾರೋ ಒಮ್ಮೆ ಗೈಡು ಪದ್ಧತಿ ನಿನ್ನ ಆಲೋಚನೆಗೆ ಬಂದದ್ದು ಹೇಗೆ ಎಂದು ಪ್ರಶ್ನಿಸಿದಾಗ ಆತ ಹೀಗೆ ಉತ್ತರ ಕೊಟ್ಟನಂತೆ: "ನಿಜವಾಗಿ ಗೈಡುಗಳ ಆಲೋಚನೆ ನನಗೆ ಇರಲೇ ಇಲ್ಲ. ಬಾಲಕಿಯರು ತಾವೇ ಅದನ್ನು ಪ್ರಾರಂಭಿಸಿದರು. 1909ರಲ್ಲಿ ಕ್ರಿಸ್ಟಲ್ ಪ್ಯಾಲೇಸ್ ಆವರಣದಲ್ಲಿ ನಾನು ಕೂಡಿಸಿದ ಸ್ಕೌಟುಗಳ ಪ್ರಪ್ರಥಮ ಮೇಳಕ್ಕೆ ಬಾಲಕಿಯರು ಆಹ್ವಾನ ಕೋರದೆ ಬಂದರು. ತಾವೂ ಸ್ಕೌಟುಗಳೆಂದೂ ಸ್ಕೌಟುಗಳೊಂದಿಗೆ ನಡೆಯುವುದೇ ತಮ್ಮ ಇಚ್ಛೆಯೆಂದೂ ಹಠತೊಟ್ಟರು. ನಾನೂ ಹಠ ತೊಟ್ಟೆ. 'ನೀವು ಸ್ಕೌಟು ಬಾಲಕಿಯರಾದರೂ ನಿಮ್ಮ ಆಟಪಾಟ ಪ್ರತ್ಯೇಕವಾಗಿ ಇರತಕ್ಕದ್ದು' ಎಂದು. ಪ್ರತ್ಯೇಕ ವ್ಯವಸ್ಥೆಯ ಜವಾಬ್ದಾರಿಯನ್ನು ನನ್ನ ಸಹೋದರಿ ಅಗ್ನಿಸ್ ಬೇಡನ್ ಪೋವೆಲಳಿಗೆ ವಹಿಸಿಕೊಟ್ಟೆ. ಆಕೆ 1910ರಲ್ಲಿ 'ಬಾಲಕಿಯರಿಂದ ಚಕ್ರಾಧಿಪತ್ಯಕ್ಕೆ ಸಹಾಯ ಹೇಗೆ' ಎಂಬ ಚಿಕ್ಕ ಹೊತ್ತಗೆಯನ್ನು ಪ್ರಕಟಿಸಿದಳು. ಕೂಡಲೆ ಸ್ಕೌಟು ಪದ್ಧತಿಯಂಥ ಅನೇಕ ಬಾಲಿಕಾ ಸಮೂಹಗಳು ಕೆಲಸಮಾಡತೊಡಗಿದುವು. ಸ್ಕೌಟು ಬಾಲಕಿ ಎಂದಿದ್ದುದನ್ನು ನನ್ನ ಪತ್ನಿ ಬದಲಾಯಿಸಿ ಗೈಡು ಬಾಲಕಿ ಎಂಬ ಪದವನ್ನು ಜಾರಿಗೆ ತಂದಳು. ಅದೇ ಅತಿಶಯವಾಗಿ ಪ್ರಪಂಚದಲ್ಲೆಲ್ಲ ಬಳಕೆಗೆ ಬಂದಿದ್ದರೂ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲೂ ಇತರ ಕೆಲವು ಕಡೆಗಳಲ್ಲೂ ಸ್ಕೌಟು ಬಾಲಕಿ ಎಂಬ ಹೆಸರೇ ಉಳಿದು ಬಂದಿದೆ."

ಹಳೆಯ ಸಂಪ್ರದಾಯವಾದಿಗಳು ತೀವ್ರವಾಗಿ ಪ್ರತಿಭಟಿಸಿದರೂ ಈ ಹೊಸ ಪದ್ಧತಿ ಬೇಗ ಬೇಗ ಬೆಳೆಯುತ್ತಲೇ ಹೋಯಿತು. 1915ರಲ್ಲಿ ಬ್ರಿಟಿಷ್ ಸರ್ಕಾರ ಇದಕ್ಕೆ ಸಂಘ ಸ್ಥಾಪನಾಧಿಕಾರವನ್ನು ಕೊಟ್ಟಿತು: 1923ರಲ್ಲಿ ಪ್ರಭುಸನ್ನದನ್ನೂ ಗಳಿಸಿಕೊಂಡು ಇದು ಅಧಿಕೃತವಾಗಿ ಗರ್ಲ್ ಗೈಡಿಂಗ್ ಸಂಸ್ಥೆಯಾಯಿತು.

ಗೈಡುಪದ್ಧತಿ ಭಾರತಕ್ಕೆ 1911ರಲ್ಲೇ ಬಂದಿತೆಂದು ಗೊತ್ತಾಗಿದೆ. ಜಬಲ್‌ಪುರದಲ್ಲಿ ಮೊದಲ ಗೈಡುದಳ ಪ್ರಾರಂಭವಾಯಿತು. ಆಮೇಲೆ ಕಲ್ಕತ್ತ, ಮದ್ರಾಸು, ಮುಂಬಯಿಗಳಲ್ಲೂ ಗೈಡುಗಳು ತಲೆಯೆತ್ತಿದರು. ಕ್ರಮೇಣ ಗೈಡುಪದ್ಧತಿಯ ಕಿರಿಯ ಹಿರಿಯ ಶಾಖೆಗಳಾದ ಬೌನೀ ಬಳಗ (ಇದು ಆಮೇಲೆ ಬ್ಲೂಬರ್ಡ್ ಫ್ಲಾಕ್–ನೀಲ ಹಕ್ಕಿ ಬಳಗ–ಎಂಬ ನಾಮಾಂತರ ಹೊಂದಿತು) ಮತ್ತು ರೇಂಜರ್ ವೃಂದಗಳೂ ಹುಟ್ಟಿಬಂದುವು. 1915ರಲ್ಲಿ ಭಾರತಕ್ಕೂ ಒಂದು ಕೇಂದ್ರ ಕಚೇರಿ ಬಂತು. ಆದರೆ ಲಂಡನಿನ ಮುಖ್ಯ ಕಚೇರಿಯ ಮೇಲುಸ್ತುವಾರಿ ಕುಗ್ಗದೇ ಇತ್ತು. ಭಾರತ ಎನ್ನುವಾಗ ಐರೋಪ್ಯ ಇಲ್ಲವೆ ಆಂಗ್ಲೊ– ಇಂಡಿಯನ್ ಮತ್ತು ದೇಶೀಯ (ನೇಟಿವ್) ಎಂಬ ಅತಾರ್ಕಿಕ ವ್ಯತ್ಯಾಸ ಇದ್ದದ್ದನ್ನು ಮರೆಯಲಾಗದು. ಗೈಡು ದಳಕ್ಕೆ ಸೇರಬಹುದಾದ ಬಾಲಕಿಯರೆಲ್ಲ ಐರೋಪ್ಯರಾಗಿರಬೇಕಾಗಿತ್ತು: ದೇಶೀಯ ಬಾಲಕಿಯರಿಗೆ ಅದರಲ್ಲಿ ಸುತರಾಂ ಪ್ರವೇಶವಿರಲಿಲ್ಲ.




1–5 ಗೈಡಿನ ಸಮವಸ್ತ್ರ ಪ್ರಕಾರಗಳು, 6 ಮತ್ತು 9 ಜಾಣಬಿಲ್ಲೆಗಳು, 7 ಭಾರತದ ಸ್ಕೌಟುಗೈಡು ಧ್ವಜ, 8 ಪ್ರಪಂಚದ ಗೈಡು ಧ್ವಜ, 10 ಗೈಡು ವಂದನೆ, 11 ಭಾರತದ ಸ್ಕೌಟು–ಗೈಡು ಲಾಂಛನ, 12 ಒಂದನೆಯ ದರ್ಜೆ ಗೈಡು ಚಿಹ್ನೆ, 13 ಬುಲ್‌ಬುಲ್ ವಂದನೆ

ಆನಿ ಬೆಸೆಂಟ್ (1847–1933) ಭಾರತದ ಸ್ಕೌಟು ಸಂಘವನ್ನು ಸ್ಥಾಪಿಸಿ (1916) ದೇಶೀಯ ಬಾಲಕರಿಗೂ ಆ ಪದ್ಧತಿಯ ಪ್ರಯೋಜನ ದೊರಕುವಂತೆ ವ್ಯವಸ್ಥೆ ಮಾಡಿದಳು. ಅಲ್ಲದೆ ಚಿಕ್ಕ ಹುಡುಗಿಯರೂ ಆ ಸಂಘಕ್ಕೆ ಸೇರಿಕೊಳ್ಳಲು ಅವಕಾಶವಾಗುವಂತೆ ಗೈಡು ಸೋದರಿ ಎಂಬ ಶಾಖೆಯನ್ನು ತೆರೆದಳು. ಅವಳು ಉಪಯೋಗಿಸಿಕೊಂಡ ಸಮವಸ್ತ್ರ, ಕೊರಳು ಚೌಕ, ಸಂಘ ಬಿಲ್ಲೆಗಳ ವಿಚಾರದಲ್ಲಿ ತಮಗೆ ಮಾತ್ರ ಸರ್ವಸ್ವಾಮ್ಯ ಇರುವುದೆಂದು ಬ್ರಿಟನಿನ ಅಧಿಕಾರವರ್ಗ ಆಕ್ಷೇಪಣೆ ಎತ್ತಿದಾಗ ಆನಿ ಬೆಸೆಂಟ್ ಸ್ಕೌಟು ನಿಯಮದ ನಾಲ್ಕನೆಯ ಅಂಶದತ್ತ ಅವರ ಗಮನ ಸೆಳೆದು ಅವರ ಬಾಯಿ ಮುಚ್ಚಿಸಿದಳಂತೆ.

ಈ ಮಧ್ಯೆ ಲಖನೌದಲ್ಲಿ ಓಲೆಕಾರ ಬಾಲಕಿ (ಗರ್ಲ್ ಮೆಸೆಂಜರ್) ಎಂಬ ವ್ಯವಸ್ಥೆ ಏರ್ಪಟ್ಟು (1910) ಐರೋಪ್ಯ, ದೇಶೀಯ ಎಂಬ ಭೇದವನ್ನಿಡದೆ ಅದು ಗೈಡು ಪದ್ಧತಿಯ ರೀತಿಯಲ್ಲೇ ನಡೆಯುತ್ತ ಬಂತು. ಮದನ ಮೋಹನ ಮಾಳವೀಯ ಮತ್ತು ಕುನ್‌ಜ್ರು, ಅವರ ಆಶ್ರಯದಲ್ಲಿ 'ಸೇವಾ ಸಮಿತಿ ಸ್ಕೌಟುಗಳು' ಉದ್ಭವವಾಯಿತು (1917). ಅದರಲ್ಲಿ ಗೈಡುಗಳಿಗೂ ಪ್ರವೇಶ ಸಿಕ್ಕಿತು.

ಬೇಡನ್ ಪೋವೆಲ್ ದಂಪತಿಗಳು ಭಾರತಕ್ಕೆ ಆಗಮಿಸಿ (1921) ಇಲ್ಲಿನ ಹಲವಾರು ಸ್ಕೌಟು ಮತ್ತು ಗೈಡು ಸಂಘಗಳಿಗೆ ಭೇಟಿಕೊಟ್ಟು ಅವೆಲ್ಲವನ್ನು ಒಟ್ಟಿಗೆ ಸೇರಿಸಿ ಏಕ ಸಂಸ್ಥೆಯಾಗಿ ಮಾಡಲು ಪ್ರಯತ್ನಿಸಿದರು. ಓಲೆಕಾರ ಬಾಲಕಿ ಮತ್ತು ಗೈಡು ಸೋದರಿ ಸಂಘಗಳು ಭಾರತದ ಗೈಡು ಸಂಘದೊಳಗೆ ವಿಲೀನಗೊಳ್ಳಲು ಒಪ್ಪಿದುವು; ಸ್ಕೌಟು–ಗೈಡು ಪ್ರತಿಜ್ಞೆಯಲ್ಲಿ ಕಡ್ಡಾಯವಾಗಿದ್ದ, ಭಾರತದ ಸಾರ್ವಭೌಮನಿಗೆ ತನ್ನ ಶ್ರದ್ಧಾಭಕ್ತಿಯನ್ನು ಅರ್ಪಿಸಬೇಕೆಂಬ–ಸೂತ್ರವನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದ ಸೇವಾ ಸಮಿತಿ ಮಾತ್ರ ಈ ವಿಲೀನಕ್ಕೆ ಒಪ್ಪದೆ ಪ್ರತ್ಯೇಕವಾಗಿ ನಿಂತಿತು. ಈ ಸೂತ್ರ ಹಲವು ಕಡೆಗಳಲ್ಲಿ ಬಾಲಕಬಾಲಕಿ ತರುಣತರುಣಿಯರಿಗೆ ನುಂಗಲಾರದ ತುತ್ತಾಗಿತ್ತು. ಗೈಡುಗಳೂ ಸ್ಕೌಟುಗಳೂ ಈ ಸೂತ್ರವನ್ನು ವಿರೋಧಿಸಿ ಎಷ್ಟೋ ಕಡೆ ಮುಷ್ಕರ ಹೂಡಿದ್ದುಂಟು.

ಕ್ರಮೇಣ ಜಗತ್ತಿನ ನಾನಾ ದೇಶಗಳಲ್ಲಿ ಗೈಡು ಪದ್ಧತಿ ಹಬ್ಬಿ ಪುಷ್ಟಿಗೊಂಡಿತು. ಮೊದಲನೆಯ ಪ್ರಪಂಚ ಶಿಬಿರ (ವರ್ಲ್ಡ್ ಕ್ಯಾಂಪ್) ಫಾಕ್ಸ್‌ಲೀಸ್ ಎಂಬಲ್ಲಿ ಜರುಗಿತು (1924). ಒಂದು ವಾರದ ಪರ್ಯಂತ ನಡೆದ ಈ ಶಿಬಿರದಲ್ಲಿ ಸಾವಿರ ಮಂದಿ ಗೈಡುಗಳು ಪಾಲ್ಗೊಂಡು ಅನುಭವ ವಿನಿಮಯ ಮಾಡಿಕೊಂಡರು. 1929ರಲ್ಲಿ ಪ್ರಪಂಚ ಸಮ್ಮೇಳನ, ಪ್ರಪಂಚ ಕಾರ್ಯಸಮಿತಿ, ಪ್ರಪಂಚ ಕಾರ್ಯಶಾಲೆ ಮೊದಲಾದ ವಿಭಾಗಗಳು ಹುಟ್ಟಿಕೊಂಡವು. 1930ರಲ್ಲಿ ಲೇಡಿ ಬೇಡನ್ ಪೋವೆಲ್ ಅವರನ್ನು ಪ್ರಪಂಚದ ಗೈಡು ಮುಖ್ಯೆಯಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು. ಅಮೆರಿಕದ ಸ್ಟರ್‍ರೊ ಎಂಬ ಮಹಿಳೆ ನೀಡಿದ ದ್ರವ್ಯಸಹಾಯದಿಂದ ಸ್ವಿಟ್ಜರ್ಲೆಂಡಿನಲ್ಲಿ ಗೈಡುಗಳಿಗಾಗಿ ಒಂದು ದಾರುಕುಟಿ (ಷಾಲೇ) ನಿರ್ಮಾಣಗೊಂಡಿತು (1922).

1937ರಲ್ಲಿ ಬೇಡನ್ ಪೋವೆಲ್ ದಂಪತಿಗಳು ಪುನಃ ಭಾರತಕ್ಕೆ ಭೇಟಿಯಿತ್ತರು. ದೇಶದಲ್ಲಿದ್ದ ಮೂರು ಪ್ರಮುಖ ಸ್ಕೌಟು ಸಂಘಗಳನ್ನು ಒಕ್ಕೂಟಗೊಳಿಸುವುದು ಅವರ ಉದ್ದೇಶವಾಗಿತ್ತು. ಆಗ ಅದು ಕಾರ್ಯಗತವಾಗಲಿಲ್ಲ. ಸೇವಾ ಸಮಿತಿ ಮತ್ತು ರಾಷ್ಟ್ರೀಯ ಸ್ಕೌಟು ಸಂಘಗಳು ಒಂದಾಗಿ (1938) ಹಿಂದೂಸ್ತಾನ್ ಸ್ಕೌಟ್ ಸಂಘ ಏರ್ಪಟ್ಟಿತು. ಎರಡನೆಯ ಮಹಾಯುದ್ಧ ಮುಗಿದು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬರುವ ಆಶಾಭಾವ ಮೂಡಿದಾಗ ಭಾರತದ ವೈಸರಾಯ್ ಅವರ ಪತ್ನಿ ಲೇಡಿ ಮೌಂಟ್‌ಬ್ಯಾಟನಳ ಅಭಿಲಾಷೆಯಂತೆ ಆಗಿನ ವಿದ್ಯಾಸಚಿವ ಆಜ಼ಾದ್ ಒಂದು ಜಂಟಿ ಸಭೆಯನ್ನು 1947ನೆಯ ಮೇ 9ರಂದು ಕರೆದರು. ಪಕ್ವಾಸ ಅವರ ಅಧ್ಯಕ್ಷತೆಯಲ್ಲಿ ಒಂದು ಕ್ರಿಯಾಸಮಿತಿ ರಚಿತವಾಯಿತು. ಅದರ ಸಂಧಾನದ ಫಲವಾಗಿ ಇಂಡಿಯ ಸ್ಕೌಟು, ಹಿಂದೂಸ್ತಾನ್ ಸ್ಕೌಟು ಸಂಘಗಳು 1950ನೆಯ ನವೆಂಬರ್ 7ರಂದು ಒಂದಾದುವು. ಇಂಡಿಯ ಗೈಡು ಸಂಘ ಕೆಲವು ಸಂದೇಹ ಪರಿಹಾರಕ್ಕೋಸ್ಕರ ತನ್ನ ಸೇರ್ಪಡೆಯನ್ನು ಮುಂದಕ್ಕೆ ತಳ್ಳಿತು. ಸ್ಕೌಟು ಮುಖಂಡರಿಂದ ಭರವಸೆ ಸಿಕ್ಕಿದ ಅನಂತರ 1951ರ ಆಗಸ್ಟ್ 5ರಂದು ಅದೂ ಸೇರಿಕೊಂಡಿತಾಗಿ, ಭಾರತ ಸ್ಕೌಟುಗಳು ಮತ್ತು ಗೈಡುಗಳು ಎಂಬ ಒಂದೇ ಸಂಘ ರೂಪುಗೊಂಡಿತು. ಈ ಬಗೆಯ ವ್ಯವಸ್ಥೆ ಭಾರತವಲ್ಲದೆ ಇನ್ನೆರಡು ದೇಶಗಳಲ್ಲಿ ಮಾತ್ರ ಇದೆ. ಆದ್ದರಿಂದ ಪ್ರಪಂಚ ಕಾರ್ಯಶಾಲೆ ತನ್ನೊಂದು ಅಂಗವಾಗಿ ಭಾರತ ಸ್ಕೌಟು ಗೈಡು ಸಂಘವನ್ನು ಸ್ವೀಕರಿಸಲು ಮೊದಲಿಗೆ ತಡಮಾಡಿತಾದರೂ 1953ರಲ್ಲಿ ಅದನ್ನು ಸ್ವೀಕರಿಸಿತು.

ಜಗತ್ತಿನ ನಾಲ್ಕು ಸ್ಥಳಗಳಲ್ಲಿ ಮಾತ್ರ ಗೈಡುಗಳ ದಾರುಕುಟಿ ಅಥವಾ ವಿಹಾರ ಕೇಂದ್ರಗಳಿವೆ: ಸ್ವಿಟ್ಜರ್ಲೆಂಡಿನ 'ನಮ್ಮ ಕುಟೀರ', ಲಂಡನಿನ 'ಒಲೇವ್ ನಿವಾಸ' ಮೆಕ್ಸಿಕೊದ 'ನಮ್ಮ ಮರ ಜೋಪಡಿ', ಪುಣೆ ಬಳಿಯ 'ಸಂಗಮ್',–ಇವೇ ಆ ನಾಲ್ಕು ಕೇಂದ್ರಗಳು. ಸುಮಾರು 12.8 ಲಕ್ಷ (2005) ಗೈಡುಗಳುಳ್ಳ ಭಾರತದ ಸಂಘ ಸಂಖ್ಯಾಬಲದಲ್ಲಿ ಪ್ರಪಂಚದಲ್ಲಿ ಮೂರನೆಯ ಸ್ಥಾನಗಳಿಸಿದೆ.

**ಹೆಸರು, ಧ್ಯೇಯ, ಸಂಘ ನೀತಿ, ಶಿಕ್ಷಣ ರೀತಿ :** ಗೈಡ್ ಶಬ್ದಕ್ಕೆ ಇದ್ದದ್ದು ಎರಡು ಮುಖ್ಯಾರ್ಥ. ಭಾರತದ ವಾಯವ್ಯ ಗಡಿಯಲ್ಲಿ ಸೈನ್ಯದ ಮುಂಭಾಗದಲ್ಲಿಯೇ ಇರುತ್ತ ಉಪಯುಕ್ತ ಸುದ್ದಿಸಂಗತಿಯನ್ನು ಪತ್ತೆಹಚ್ಚುವ ಮುಂಚೂಣಿ ಯೋಧ, ಅಪಾಯಕ್ಕೂ ಕಷ್ಟಕ್ಕೂ ಜಗ್ಗದ ಧೀರಜೀವಿ ಮತ್ತು ಯುರೋಪಿನ ಆಲ್ಪ್ಸ್ ಪರ್ವತದ ಕಡಿದು ಎತ್ತರಗಳನ್ನು ಏರಬಯಸುವ ಧೈರ್ಯಶಾಲಿಗಳಿಗೆ ದಾರಿ ತೋರುಗ, ಬಹಳ ಶಕ್ತ, ಸಾಹಸಗಾರ–ಎಂಬುವು. ಬಾಲಕಿಯನ್ನು ಗೈಡು ಎನ್ನುವಾಗ ಅದರ ತಾತ್ಪರ್ಯ ಬೇರೆಯಾಗುತ್ತದೆ. ಶೀಲ ಕರುಣೆ ಧರ್ಮಶ್ರದ್ಧೆ ಇತ್ಯಾದಿ ಗುಣಗಳಲ್ಲಿ ಹೆಂಗಸು ಗಂಡಸಿಗೆ ಮೇಲ್ಪಂಕ್ತಿಯೂ ಮಾರ್ಗದರ್ಶಿಯೂ ಆಗುತ್ತಾಳೆಂದು ಕವಿ ಜಾನ್ ರಸ್ಕಿನ್ ಗೈಡ್ ಎಂಬ ಪದಕ್ಕೆ ಅರ್ಥಮಾಡಿದ್ದ. ಹೆಸರಿನಲ್ಲೇ ಆ ಆದರ್ಶ ಅಡಗಿರಬೇಕೆಂದು ಗೈಡ್ ಪದ್ಧತಿಯ ಆಕಾಂಕ್ಷೆ.

ಗಂಡಾಗಲಿ ಹೆಣ್ಣಾಗಲಿ ನಾಡಿನ ಸತ್ಪ್ರಜೆಯಾಗಿ ಬಾಳಬೇಕು ಎಂಬುದು ಲೋಕ ನೀತಿ. ಅದು ಸಿದ್ಧಿಯಾಗುವುದಕ್ಕೆ ತಕ್ಕ ಶಿಕ್ಷಣ ಮನೆಯಲ್ಲೂ ವಿದ್ಯಾಶಾಲೆಯಲ್ಲೂ ಮಕ್ಕಳಿಗೂ ಕಿರಿಯರಿಗೂ ದೊರಕುವುದೇನೋ ನಿಜ. ಆದರೆ ಅಷ್ಟೇ ಸಾಲದು. ಆ ಕೊರೆಯನ್ನು ತುಂಬಿಕೊಡುವ ಪೂರಕ ತರಬೇತಿ ಒದಗಿಸುವುದೇ ಗೈಡುಪದ್ಧತಿಯ ಉದ್ದೇಶ. ಸ್ನೇಹವಿಲ್ಲದ ಬದುಕು ಬೆಂಗಾಡಿನ ಬದುಕು. ಬಾಲಕಿಯರಿಗೆ ಉತ್ತಮ ಗೆಳತಿಯರು ಗೈಡುದಳದಲ್ಲಿ ಅನಾಯಾಸವಾಗಿ ಸಿಗುತ್ತಾರೆ. ವಿರಾಮಕಾಲದ ಸದುಪಯೋಗ ಯಾವಾಗಲೂ ಒಂದು ಸಮಸ್ಯೆಯೆ; ಗೈಡು ಪದ್ಧತಿ ಒಳ್ಳೆಯ ಹವ್ಯಾಸವಾದ್ದರಿಂದ ಅದನ್ನು ಸುಲಭವಾಗಿಯೂ ಸಂತಸಪ್ರದವಾಗಿಯೂ ಬಿಡಿಸಿಬಿಡುತ್ತದೆ. ಇದು ಜಗದ್ವ್ಯಾಪಿಯಾಗಿ ವರ್ಧಿಸುತ್ತಿರುವ ಸಂಘವೂ ಹೌದು. ಅದರ ಸದಸ್ಯತ್ವಕ್ಕೆ ದೇಶದೇಶದ ಗೈಡುಗಳ ಸೌಹಾರ್ದವೂ ಸೋದರಿತನವೂ ತಾನಾಗಿ ಲಭಿಸುತ್ತದೆ. ಜನಾಂಗ, ಬಣ್ಣ, ಭಾಷೆ ಮುಂತಾದ ಸಂಕುಚಿತತತ್ತ್ವವನ್ನು ಬದಿಗೊತ್ತಿದ ಸಹಜಮಾನವತೆಯ ನಿಜಾನುಭವಕ್ಕೆ ಗೈಡುಪದ್ಧತಿ ಒಂದು ದಾರಿ. ಗುಣಶೀಲ, ಪರೋಪಕಾರ ಎಂಬೆರಡು ಮಾತುಗಳಲ್ಲಿ ಮನುಷ್ಯಜೀವನದ ಸಾರ–ಸತ್ವ ವರ್ಣಿತವಾಗುತ್ತದೆ. ಇವೆರಡನ್ನೂ ತನ್ನ ವಯಸ್ಸಿಗೆ ತಕ್ಕಂತೆ ಗೈಡು ರೂಢಿಸಿಕೊಳ್ಳಬೇಕೆಂಬುದೇ ಈ ಪದ್ಧತಿಯ ಸ್ಪಷ್ಟ ಗುರಿ.

ವಿಶಾಲಭಾವನೆ, ಮೈತ್ರಿ, ನೇರತನ, ನಿರಾಡಂಬರ ಸೌಜನ್ಯಾಸಕ್ತಿಗಳ ತಳಹದಿಯ ಮೇಲೆ ಗೈಡುಪದ್ಧತಿಯ ಸಂಘನೀತಿಯನ್ನು ರೂಪಿಸಲಾಗಿದೆ. ಸಮವಸ್ತ್ರ, ಗುಂಪು ಕವಾಯಿತು, ದಳಶಿಸ್ತು, ಇತ್ಯಾದಿ ಗೈಡುಗಳಿಗೆ ಇವೆಯಾದರೂ ಗೈಡುಪದ್ಧತಿ ಯುದ್ಧದ ಕಡೆಗೆ ಎಂದೂ ಮನಸ್ಸನ್ನು ತಿರುಗಗೊಡುವುದಿಲ್ಲ; ಅದರ ಪಡೆಗಳೆಲ್ಲ ಶಾಂತಿಪಡೆ. ಯಾವೊಂದು ಮತಧರ್ಮಕ್ಕೂ ಅದು ಆಳಲ್ಲವಾದರೂ ಯಾವೊಂದು ಮತಧರ್ಮವನ್ನೂ ಅದು ವಿರೋಧಿಸುವುದಿಲ್ಲ, ಎಂದರೆ ಅದು ಧರ್ಮಬಾಹಿರವಲ್ಲ. ಸರ್ವಮತಗಳೂ ಸಕಲಪ್ರವಾದಿಗಳೂ ಸಮಾನವಾಗಿ ಸಾರುವ ಅನ್ಯೋನ್ಯ ಪ್ರೀತಿ, ಅನುಕಂಪೆ, ದಯೆ, ಸತ್ಯನಿಷ್ಠೆ, ಪರಿಶುದ್ಧತೆ, ದೈವಭಕ್ತಿ ಮೊದಲಾದವನ್ನು ಒತ್ತಿ ಹೇಳುತ್ತ ಅನುಷ್ಠಾನಕ್ಕೆ ತರುವಂತೆ ಪ್ರಚೋದಿಸುತ್ತ ವಿಶೇಷ ಬಗೆಯ ಧಾರ್ಮಿಕ ಸೊಬಗನ್ನು ಅದು ತಳೆದಿದೆ. ಸತ್ತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯತೆ, ಸಮಾಜ ಸುಧಾರಣೆಗಳಿಗೆ ಸೇರಿದ ಯಾವೊಂದು ಪಕ್ಷವೂ ಅದು ತನ್ನದೆಂದು ಹೇಳುವಂತಿಲ್ಲ. ಕಿರಿಯರ ವಿದ್ಯಾಭ್ಯಾಸಕ್ಕೆ ಅದು ಮೀಸಲಾಗಿದೆಯೆಂದು ವಿವರಿಸಬಹುದು; ಅದೊಂದು ನೂತನ ಶೈಕ್ಷಣಿಕ ಪ್ರಯೋಗ. ಚಿಕ್ಕವರಿಗಾಗಿ ಇರುವ ಇತರ ಯಾವ ಸಂಸ್ಥೆಯನ್ನೂ ಗೈಡುಪದ್ಧತಿ ನಿಷೇಧಿಸುವುದಿಲ್ಲ, ಅಣಕಿಸುವುದಿಲ್ಲ; ಎಲ್ಲ ಸಂಸ್ಥೆಗಳ ಬಗ್ಗೆಯೂ ಅದಕ್ಕೆ ಪ್ರಾಮಾಣಿಕ ಸಹಾನುಭೂತಿ. ಹಣದ ವಿಚಾರವಾಗಿ ಹೇಳುವುದಾದರೆ ಸ್ವಾವಲಂಬನಕ್ಕೇ ಪ್ರಾಧಾನ್ಯ.

ಗೈಡುಪದ್ಧತಿಯ ಕಟ್ಟುಪಾಡು ಬಾಲಕಿಯರ ವಯಸ್ಸಿಗೂ ದೇಹದಾರ್ಢ್ಯಕ್ಕೂ ಮನಸ್ಸಿನ ಬೆಳೆವಣಿಗೆಗೂ ಅನುರೂಪವಾಗಿ ಹೊಂದಿಕೊಂಡು ಮೂರು ಹಂತಗಳ ಕ್ರಮದಲ್ಲಿದೆ. 7–10 ವಯಸ್ಸಿನ ಮಕ್ಕಳನ್ನು ಬುಲ್‌ಬುಲ್ ಬಳಗದವರೆಂದೂ (ಇತರ ದೇಶಗಳಲ್ಲಿ ಬ್ರೌನಿ, ಬ್ಲೂ ಬರ್ಡ್, ಕಬ್ ಗೈಡ್ ಇತ್ಯಾದಿ ಅಂಕಿತಗಳಿವೆ) 10–17 ವಯಸ್ಸಿನ ಮಕ್ಕಳನ್ನು ಗೈಡು ದಳವೆಂತಲೂ ಆಮೇಲೆ 21 ವಯಸ್ಸಿನ ವರೆಗೆ ರೇಂಜರ್ ವೃಂದದವರೆಂದೂ ಕರೆಯುವ ವಾಡಿಕೆಯಿದೆ. ವಿನೋದವರ್ತನೆಯೆಲ್ಲ ಆಯಾ ವಯೋಮಿತಿಗೆ ಸ್ವಾಭಾವಿಕವಾಗುವಂತೆ ನಿಯಮಿತವಾಗಿರುವುದರಿಂದ ಈ ಬಳಗಗಳಲ್ಲಿ ಏನೇನೂ ಕೃತಕತೆಯಿಲ್ಲ, ಬಲಾತ್ಕಾರವಿಲ್ಲ, ಅಹಿತವಿಲ್ಲ. ಮೊದಲು ಬುಲ್‌ಬುಲ್ಲಾಗಿದ್ದು ಆಮೇಲೆ ಗೈಡ್ ಆಗಿ ಕೊನೆಗೆ ರೇಂಜರ್ ಆಗುವುದು ಸಹಜ ಸರಣಿ. ಆದರೂ

ಬುಲ್‌ಬುಲ್ಲಾಗದೆ ಗೈಡಾಗಬಯಸುವವರಿಗೂ ಗೈಡಾಗದೆ ರೇಂಜರ್ ಆಗಬಯಸು ವವರಿಗೂ ಗೈಡುಪದ್ಧತಿಯಲ್ಲಿ ಆಸ್ಪದವುಂಟು. ಅದು ಬಾಲಕಿಯ ಸ್ವಂತ ಇರಾದೆಗೆ ಸೇರಿದ್ದಾದ್ದರಿಂದ ಅಂಥ ಅವಕಾಶ ಇರುವುದು ಕ್ಷೇಮ.

ಗೈಡುಪದ್ಧತಿಯಲ್ಲಿ ಅನುಸರಿಸುವ ಶಿಕ್ಷಣರೀತಿಯೂ ವಿಶಿಷ್ಟಬಗೆಯದು. ಸ್ವಯಂ ಶಿಕ್ಷಣ ಮತ್ತು ಕ್ರೀಡಾಮನೋಭಾವ–ಈ ಎರಡೂ ಅದರ ಚಾಲಕ ತತ್ತ್ವ. ಗೈಡು ಪದ್ಧತಿ ಒಂದು ಗುಂಪು ಆಟದಂತೆ; ಅದರ ಎಲ್ಲ ಕಾರ್ಯಕ್ರಮವೂ ನಲವಿನಿಂದ ಕೂಡಿ ಸೊಗಸಾಗಿರುತ್ತದೆ. ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತ ಗೈಡುಗಳು ತಾವು ತಾವೇ ಪಾಠ ಕಲಿಯುತ್ತಾರೆ, ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾರೆ. ಇಂಥ ಆಧುನಿಕ ವಿಧಾನದಿಂದ ಅವರಿಗೆ ಸಿದ್ಧಿಸುವ ವಿದ್ಯಾಭ್ಯಾಸದಲ್ಲಿ ಆರೋಗ್ಯ–ಶಾರೀರಿಕ ಬೆಳೆವಣಿಗೆ, ದೃಢತೆ, ತಡೆದುಕೊಳ್ಳುವ ಶಕ್ತಿ, ನೈರ್ಮಲ್ಯ, ನಿರೋಗ; ಹಸ್ತಕೌಶಲ–ಕೈಗೆಲಸಗಳ ಮೂಲಕ, ಸಮಯಕ್ಕೆ ಸಲ್ಲುವ ಸಾಮಾನುಗಳ ತಯಾರಿಕೆಯ ಮೂಲಕ ಕುದುರುವ ನೈಪುಣ್ಯ; ಒಳ್ಳೆಯ ನಡೆನುಡಿ– ಕರ್ತವ್ಯಪರತೆ, ಸಂಯಮ, ಸ್ವಾವಲಂಬನ, ಗುರಿಸಾಧನೆ, ಹೆಚ್ಚು ವಿನಯ, ಔದಾರ್ಯ ಮೊದಲಾದ ಸದ್ಗುಣಗಳ ಪೋಷಣೆಯಿಂದ ಉಂಟಾಗುವ ಸೌಶೀಲ್ಯ; ಸೇವೆ–ಗೈಡು ತಾನೇ ದಕ್ಷಳಾಗಿರುವುದರಿಂದ ಅದಕ್ಕರಿಗೆ ಸಹಾಯಮಾಡುವ ಆಕಾಂಕ್ಷೆ–ಈ ನಾಲ್ಕೂ ಅವಳಲ್ಲಿ ತಾನಾಗಿ ವಿಕಾಸಗೊಳ್ಳುತ್ತವೆ.

**ಗೈಡು ಪದ್ಧತಿಯ ವಿಭಾಗಗಳು :** (ಅ) ಬುಲ್‌ಬುಲ್ ವಿಭಾಗ; 12–24ರ ಸಂಖ್ಯೆಯ ವರೆಗೆ ಬುಲ್‌ಬುಲ್‌ಗಳು ಕೂಡಿದರೆ ಅದು ಒಂದು ಬಳಗ (ಫ್ಲಾಕ್) ಆಗುತ್ತದೆ. ಬಳಗಕ್ಕೆ 19 ವರ್ಷಕ್ಕೆ ಕಡಿಮೆಯಿಲ್ಲದ ಒಬ್ಬಳು ಮುಂದಾಳು (ಫ್ಲಾಕ್ ಲೀಡರ್) ಮತ್ತು 17 ವರ್ಷಕ್ಕೆ ಕಡಿಮೆಯಿಲ್ಲದ ಒಬ್ಬಳು ಸಹಾಯಕಿ (ಅಸಿಸ್ಟೆಂಟ್ ಫ್ಲಾಕ್ ಲೀಡರ್) ಇರುತ್ತಾರೆ. ಬುಲ್‌ಬುಲ್‌ಗಳು ಆರು ಆರಾಗಿ ವಿಂಗಡಗೊಂಡು ಪೆಟ್ರೋಲುಗಳಾಗುತ್ತವೆ; ಹಸಿರು ನೀಲಿ ಕೆಂಪು ಇತ್ಯಾದಿ ಬಣ್ಣ ಪೆಟ್ರೋಲಿನ ನಾಮಧೇಯ. ಪ್ರತಿ ಪೆಟ್ರೋಲಿನಲ್ಲೂ ಸಿಕ್ಸರ್ ಎಂಬ ಮೊದಲಗಿತ್ತಿ, ಸೆಕೆಂಡ್ ಎಂಬ ಎರಡನೆಯವಳು ಇದ್ದು ಅವರು ತಮ್ಮ ಪೆಟ್ರೋಲಿಗೆ ಜವಾಬ್ದಾರರಾಗಿರುತ್ತಾರೆ. ಮುಂದಾಳು, ಸಹಾಯಕಿ, ಎಲ್ಲ ಬುಲ್‌ಬುಲ್‌ಗಳೂ ಸೇರಿದ ಬಳಗದ ಸಭೆ ಏರ್ಪಡುತ್ತದೆ.

ಬಳಗಕ್ಕೆ ಸೇರಿದ, ಚಿಕ್ಕ ಹುಡುಗಿ ಈ ಪಟ್ಟಿಯಲ್ಲಿ ನಮೂದಿಸಿರುವಷ್ಟನ್ನೂ ಕಲಿತು ಕೋಮಲವಾದ (ಟೆಂಡರ್‌ಫುಟ್) ದೀಕ್ಷೆಗೆ ಅನುವಾಗುತ್ತಾಳೆ. ಬುಲ್‌ಬುಲ್ ಭಾಷೆ, ನಿಯಮ, ಆದರ್ಶ ವಚನ, ವಂದನೆ; ಎರಡು ಗೀತಕೃತಿಗಳು; ದಿನಚರಿ ಉಪಕಾರ; ರಾಷ್ಟ್ರಗೀತೆ; ನಾಲ್ಕು ಬಳಗಗೋಷ್ಠಿಯಲ್ಲಿ ಹಾಜರಾತಿ.

ಭಾಷೆ : ಇದು ನನ್ನ ಪ್ರತಿಜ್ಞೆ; ನನ್ನ ಕೈಲಾದಮಟ್ಟಿಗೂ 1 ದೇವರಲ್ಲೂ ಸ್ವದೇಶದಲ್ಲೂ ಶ್ರದ್ಧಾಭಕ್ತಿ ಇಟ್ಟುಕೊಂಡು, ಬುಲ್‌ಬುಲ್ ನಿಯಮದಂತೆ ನಡೆದುಕೊಳ್ಳುತ್ತೇನೆ; ಮತ್ತು 2 ಪ್ರತಿದಿನವೂ ಒಂದಾದರೂ ಉಪಕಾರಮಾಡುತ್ತೇನೆ (ಜೈನ, ಬೌದ್ಧ ಇತ್ಯಾದಿ ಮತಗಳ ಬಾಲಕಿಯರು ದೇವರು ಎಂಬ ಪದದ ಬದಲು ಧರ್ಮ ಎಂಬ ಪದವನ್ನು ಬಳಸಬಹುದು).

ನಿಯಮ : 1 ಬುಲ್‌ಬುಲ್ ಹಿರಿಯರು ಹೇಳಿದ್ದನ್ನು ಕೇಳುತ್ತಾಳೆ. 2 ಬುಲ್‌ಬುಲ್ ಶುಚಿವಂತೆ ಮತ್ತು ವಿನಯಶೀಲೆ.

ಆದರ್ಶವಚನ; ಕೈಲಾದಷ್ಟನ್ನೂ ಮಾಡು.

ವಂದನೆ : ಬಲಗೈಯನ್ನು ಮಡಿಸಿ ಮೇಲಕ್ಕೆತ್ತಿ ಸೂಚನೆಬೆರಳು ನಡುಬೆರಳು ಎರಡನ್ನೂ ಅಗಲ ಬಿಡಿಸಿಕೊಂಡು ಬಲಗಡೆ ತಲೆಯನ್ನು ಮುಟ್ಟಿಸುವುದು.

ಕೋಮಲಪಾದದ ಮುಂದಣ ಮಜಲಿಗೆ ಒಂಬತ್ತು ಲಘುಪರೀಕ್ಷೆಗಳಲ್ಲಿ (ಟೆಸ್ಟ್) ಹುಡುಗಿ ಉತ್ತೀರ್ಣಳಾಗಬೇಕು; ಆಗ ಅವಳಿಗೆ ಮೊದಲನೆಯ ಚುಕ್ಕಿ (ಫಸ್ಟ್ ಸ್ಟಾರ್) ದೊರೆಯುತ್ತದೆ. ರಾಷ್ಟ್ರಬಾವುಟ; ಗೈಡು ಬಾವುಟಗಳ ಪರಿಚಯ; ಸಮಗಂಟನ್ನೂ ಮೂಲೆಗಂಟನ್ನೂ ಹಾಕುವುದು; ಯಾವುದಾದರೂ ಒಂದು ನಿಸರ್ಗ ವಸ್ತುವಿನ ವರ್ಣನೆ; ಗಡಿಯಾರ ನೋಡಿ ಘಂಟೆ ಹೇಳುವುದು; ಎರಡು ಬಟ್ಟೆಗುಂಡಿ ಹೊಲಿಯುವುದು; ಏನಾದರೂ ಒಂದು ಪದಾರ್ಥದ ತಯಾರಿಕೆ; ಉಗುರು ಕತ್ತರಿಸಿಕೊಳ್ಳುವುದು, ಮೂಗಿನಲ್ಲೇ ಉಸಿರಾಡುವುದು ಏತಕ್ಕೆ ಎಂಬುದನ್ನು ತಿಳಿಯುವುದು; ಚೆಂಡನ್ನು ಎಸೆದು ತಿರುಗಿ ತನಗೆ ಬಂದ ಚೆಂಡನ್ನು ಬುತ್ತಿಹಿಡಿಯುವುದು; ಇಬ್ಬರಿಗೆ ಊಟ ಬಡಿಸುವುದು.

ಅನಂತರ ಎರಡನೆಯ ಚುಕ್ಕಿ (ಸೆಕೆಂಡ್ ಸ್ಟಾರ್); ಇದನ್ನು ಗಳಿಸುವುದಕ್ಕೆ 16 ಲಘು ಪರೀಕ್ಷೆಗಳನ್ನು ದಾಟಬೇಕು. ಜಗತ್ತಿನ ಗೈಡು ಬಾವುಟದ ಪರಿಚಯ; ಬಾವುಟಗಳ ಮೂಲಕ ವರ್ತಮಾನ ಅಥವಾ ವೀಕ್ಷಕಿ ಬಿಲ್ಲೆಗೊ ತೋಟಗಾತಿ ಬಿಲ್ಲೆಗೊ ಅಗತ್ಯವಾದ ಪರಿಜ್ಞಾನ; ದಿಕ್ಸೂಚಿಯ ತಿಳಿವಳಿಕೆ; ಬೀಜ ಅಥವಾ ರೆಂಬೆ ಹುಟ್ಟಿ ಹಾಕಿ ಗಿಡ ಬೆಳೆಸುವುದು; ಕೊಟ್ಟಿಗೆ ಗಂಟನ್ನೂ ಕುಣಿಕೆ ಗಂಟನ್ನೂ ಹಾಕುವುದು; ಗೈಡು ಪದ್ಧತಿ ಬೆಳೆದು ಬಂದ ವಿಷಯದ ಜ್ಞಾನ; ಒಲೆ ಹೊತ್ತಿಸುವುದು; ಟೀ ಅಥವಾ ಕಾಫಿ ತಯಾರಿಕೆ, ಅಥವಾ ಮೊಸರು ಕಡೆಯುವುದು; ಲಾಂದ್ರ ಹೊತ್ತಿಸುವಿಕೆ; ಸಣ್ಣದೊಂದು ಉಡುಪನ್ನು ಹೊಲಿಯುವುದು; ಅಥವಾ ಹೆಣೆಯುವುದು; ಶಿರದ ಮೇಲೆ ಪುಸ್ತಕಗಳನ್ನೊ ಇತರ ವಸ್ತುವನ್ನೊ ಇರಿಸಿಕೊಂಡು ಅದು ಬೀಳದಂತೆ ನಡೆಯುವುದು; 30ಬಾರಿ ಹಗ್ಗ ಕುಪ್ಪಳಿಕೆ ಮಾಡುವುದು; ಹತ್ತಿರ ಆಸ್ಪತ್ರೆ ಅಥವಾ ವೈದ್ಯ, ಅಂಚೆಕಚೇರಿ, ಪೋಲಿಸು ಠಾಣೆಗಳು ಎಲ್ಲಿವೆಯೆಂಬುದರ ಮಾಹಿತಿ; ಹನ್ನೆರಡು ಪದಗಳ ವಾಕ್ಯವನ್ನು ಸುದ್ದಿಯಾಗಿ ಕೊಂಡೊಯ್ಯುವುದು; ಉಟ್ಟ ಬಟ್ಟೆಗೆ ಬೆಂಕಿ ತಗಲಿದರೆ ಏನು ಮಾಡಬೇಕೆಂಬುದರ ಮಾಹಿತಿ; ಗಾಯಗೊಂಡ ಬೆರಳಿಗೊ ಮೊಣಕಾಲಿಗೊ ಬ್ಯಾಂಡೇಜು ಕಟ್ಟುವುದು. ಅಲ್ಲದೆ ಬುಲ್‌ಬುಲ್ ಬಳಗಕ್ಕೆ ಸೇರಿ 9 ತಿಂಗಳು ಕಳೆದಿರತಕ್ಕದ್ದು.

ಬುಲ್‌ಬುಲ್ ಆಮೇಲೆ ಬಲ್ಲಿಕೆ ಬಿಲ್ಲೆಗಳಲ್ಲಿ (ಪ್ರೊಫಿಶಿಯನ್ಸಿ ಬ್ಯಾಡ್ಜ್) ಆದಷ್ಟನ್ನು ಪಡೆಯಲು ಪ್ರಯತ್ನಿಸುತ್ತಾಳೆ. ಅಂಥವು 15 ಇವೆ. ಅವುಗಳಲ್ಲಿ ಮನೆಯ ಒಪ್ಪ ಓರಣ, ವೀಕ್ಷಕಿ, ಈಜುಗಾತಿ, ವ್ಯಾಯಾಮ ಪಟು, ಆಟ ಪಟು ಮುಂತಾದ ಕೆಲವನ್ನು ಆರ್ಜಿಸಿಕೊಂಡ ಬಾಲಕಿಗೆ ಹಾರುವ ಬುಲ್‌ಬುಲ್ (ಫ್ಲಯಿಂಗ್ ಬುಲ್‌ಬುಲ್) ಎಂಬ ಗೌರವಪದಕ ದೊರೆಯುತ್ತದೆ.

(ಆ) ಗೈಡು ವಿಭಾಗ: 12 ರಿಂದ 32ರ ಸಂಖ್ಯೆಯ ವರೆಗೆ ಗೈಡುಗಳಿದ್ದರೆ ಅದು ದಳ (ಗೈಡು ಕಂಪನಿ) ಎನಿಸುತ್ತದೆ. ದಳದಲ್ಲಿ ಗೈಡು ಕ್ಯಾಪ್ಟನ್ ಎಂಬ ಮುಂದಾಳೂ ಅವಳ ಸಹಾಯಕಿಯೂ ಇರುವರು. ಪೆಟ್ರೋಲಿಗೆ ಎಂಟು ಗೈಡುಗಳು; ಮೊದಲಗಿತ್ತಿಯೂ ಎರಡನೆಯವಳೂ ಪೆಟ್ರೋಲಿಗೆ ಹೊಣೆಗಾರರು. ದಳದ ಬಲು ಮುಖ್ಯವಾದ ಅಂಗ ಅದರ ಶೀಲಮಂಡಲಿ (ಕೋರ್ಟ್ ಆಫ್ ಆನರ್). ಅದರಲ್ಲಿ ಮುಂದಾಳು, ಸಹಾಯಕಿ, ಮೊದಲಗಿತ್ತಿ, ಎಲ್ಲರೂ ಸದಸ್ಯರಾಗಿರುತ್ತಾರೆ; ದಳದ ಕಾರ್ಯಾವಳಿ, ಯೋಗಕ್ಷೇಮ, ಒಳ್ಳೆಯ ಹೆಸರು ಮುಂತಾದ ವಿಚಾರವಷ್ಟೂ ಶೀಲಮಂಡಲಿಯ ಹೊಣೆಗಾರಿಕೆ ಯಾಗಿರುತ್ತದೆ.

ದಳಕ್ಕೆ ಪ್ರವೇಶ ಪಡೆದ ಬಾಲಕಿಗೆ ಉತ್ಕಾಂಕ್ಷಿ (ಆಸ್ಪಿರಂಟ್) ಎಂದು ಹೆಸರು. ಬಾಲಕಿ ಕೋಮಲಪಾದ ದೀಕ್ಷೆಗೆ ಅನುವಾಗಬೇಕಾದರೆ ಗೈಡು ಭಾಷೆ, ಗೈಡು ನಿಯಮ, ಆದರ್ಶ ವಚನ, ಗೈಡು ವಂದನೆ ಉಪಕಾರ, ಜಾಡು ಹಿಡಿಯುವ ಕುರುಹುಗಳು, ಸೀಟಿಯ ಸಂಜ್ಞೆ, ಕೈಸಂಜ್ಞೆಗಳು, ಹುರಿ ಸುತ್ತುವಿಕೆ ಮತ್ತು ಏಳರಲ್ಲಿ ನಾಲ್ಕು ಗಂಟುಗಳು, ಸಮಗಂಟು, ಮೂಲೆಗಂಟು, ಕೊಟ್ಟಿಗೆ ಗಂಟು, ಕುಣಿಕೆ ಗಂಟು, ಬೆಸ್ತ ಗಂಟು, ಕುರಿಗಂಟು, ಎರಡು ಅರೆಗಂಟು ಒಂದು ಸುತ್ತು, ರಾಷ್ಟ್ರಬಾವುಟ, ಭಾರತದ ಸ್ಕೌಟು–ಗೈಡು ಬಾವುಟ, ಜಗತ್ತಿನ ಗೈಡು ಬಾವುಟಗಳ ಪರಿಚಯ, ರಾಷ್ಟ್ರಗೀತೆ, ದಳಗೋಷ್ಠಿಗಳಲ್ಲಿ ಒಂದು ತಿಂಗಳು ಹಾಜರಾತಿ–ಇವೆಲ್ಲ ಅಗತ್ಯ. ಇವುಗಳ ವಿವರ ಹೀಗಿದೆ.

ಭಾಷೆ : ಇದರ ವಿಚಾರ ಹಿಂದೆ ಬಂದಿದೆ.

ನಿಯಮ : 1. ಗೈಡು ನಂಬಿಕೆಗೆ ಯೋಗ್ಯ. (ಮನಸ್ಸಿನಲ್ಲಿರುವುದನ್ನು ಆಡುತ್ತಾಳೆ, ಆಡಿದಂತೆ ಮಾಡುತ್ತಾಳೆ.) 2. ಗೈಡು ಶ್ರದ್ಧಾಭಕ್ತಿಯುಳ್ಳವಳು. (ದೇವರು ದೇಶ ಕುಟುಂಬ ಗೆಳತಿಯರು ತನಗಿಂತ ಮೇಲಣವರು ತನ್ನ ಕೈಕೆಳಗಿನವರು–ಎಲ್ಲರಿಗೂ ತನ್ನ ಹೊಣೆಯನ್ನು ಪಾಲಿಸುತ್ತಾಳೆ). 3. ಗೈಡು ತನ್ನ ಕರ್ತವ್ಯವನ್ನು ಬಲ್ಲಳು (ದೇವರಲ್ಲಿ ಭಕ್ತಿ, ದೇಶಕ್ಕೆ ಸೇವೆ, ಇತರರಿಗೆ ನೆರವಾಗುವುದು–ಇವು ತನ್ನ ಕಾರ್ಯಶೀಲವೆಂದು ಅವಳಿಗೆ ಗೊತ್ತು). 4. ಗೈಡು ಸರ್ವರಿಗೂ ಸ್ನೇಹಿತೆ; ಇತರ ಎಲ್ಲ ಗೈಡುಗಳಿಗೂ ಸೋದರಿ. 5. ಗೈಡು ವಿನಯಶೀಲೆ. (ಮುಖ್ಯವಾಗಿ ವೃದ್ಧರು ದುರ್ಬಲರು ಎಂದರೆ ಅವಳ ಆದರಣೆ ಯುಕ್ತವಾಗಿಯೇ ಹೆಚ್ಚು). 6. ಗೈಡು ಪ್ರಾಣಿಗಳನ್ನು ಕುರಿತು ದಯಾನ್ವಿತೆ. 7. ಗೈಡು ಶಿಸ್ತಿನಾಕೆ, ಆಜ್ಞೆಗೆ ವಿಧೇಯಳು. 8. ಗೈಡು ಧೈರ್ಯಶಾಲಿ, ಕಷ್ಟಬಂದಾಗ ಆಕೆ ಧೈರ್ಯಗೆಡಳು. 9. ಗೈಡು ಮಿತವ್ಯಯಿ (ಕಾಲ, ಹಣ, ಸೌಕರ್ಯ, ಸ್ವಶಕ್ತಿ ಮುಂತಾದುವನ್ನು ಪೋಲುಮಾಡದೆ ಸಮಂಜಸವಾಗಿ ಬಳಸಿಕೊಳ್ಳುತ್ತಾಳೆ). 10. ಗೈಡು ಕಾಯೇನವಾಚಾ ಮನಸಾ ಪರಿಶುದ್ಧೆ.

ಆದರ್ಶವಚನ : ಸಿದ್ಧಳಾಗಿರು (ಬೀ ಪ್ರಿಪೇರ್ಡ್).

ಗೈಡು ವಂದನೆ : ಬಲಗೈಯಿನ ತರ್ಜನಿ ಮಧ್ಯಮ ಅನಾಮಿಕ ಬೆರಳುಗಳನ್ನು ಒಟ್ಟುಗೂಡಿಸಿ ಮಿಕ್ಕೆರಡರ ವರ್ತುಳದಿಂದ ಬಂಧಿಸಿ ಕೈಯೆತ್ತಿ ತಲೆಯ ಬಲಗಡೆ ಮುಟ್ಟಬೇಕು.

ಕೋಮಲಪಾದ ಮಜಲನ್ನು ದಾಟಿದ ಬಾಲಕಿ ಗೈಡು ದೀಕ್ಷೆ ಪಡೆದು, ಎರಡನೆಯ ದರ್ಜೆ ಲಘುಪರೀಕ್ಷೆಗಳಿಗೆ ತರಬೇತಿ ಹೊಂದುತ್ತಾಳೆ. ಆ ಪರೀಕ್ಷೆಗಳು ನಾಲ್ಕು ವಿಧದವು: (ಅ) ಬುದ್ಧಿಶಕ್ತಿ : ಗೈಡು ಭಾಷೆ ಮತ್ತು ನಿಯಮಗಳ ಹೆಚ್ಚು ತಿಳಿವಳಿಕೆ, ಬಾಳಿನಲ್ಲಿ ಅವುಗಳ ಅನ್ವಯ; ಮಾರ್ಸ್ ಅಥವಾ ಸೆಮಾಫೋರ್ ಬಾವುಟ ಸಂಕೇತದ ಮೂಲಕ ವರ್ತಮಾನ ಕಳಿಸುವುದು, ಸ್ವೀಕರಿಸುವುದು; ಅಥವಾ ಎರಡರಿಂದ ಐದರ ಒಳಗಿನ

ಮಗುವನ್ನು ನೋಡಿಕೊಳ್ಳುವುದು ಹೇಗೆ ಎಂಬುದರ ಅರಿವು; ಅಥವಾ ಮೂರು ಬಗೆ ಹೂ, ಮೂರು ಬಗೆ ತರಕಾರಿ ಬೆಳೆಯುವುದು; ಕಾಡಿಗೆ ಸಂಬಂಧಿಸಿದ ಕುರುಹುಗಳಿಂದಲೊ ಚೂರು ಕಾಗದ ಕಲ್ಲುಗಳು ಮುಂತಾದವುಗಳಿಂದಲೊ ಜಾಡು ಹಾಕುವುದು, ಹಾಕಿದ ಜಾಡನ್ನು ಗುರುತಿಸುವುದು; ಆರು ಸಾಮಾನ್ಯ ಮರಗಳ ಹೆಸರು, ಲಕ್ಷಣ, ಉಪಯೋಗಗಳ ಅರಿವು. (ಆ) ಕರಕೌಶಲ : ಇವುಗಳಲ್ಲಿ ಏಳು ಗಂಟುಗಳ ಪರಿಚಯ; ಸಮ, ಮೂಲೆ, ಕೊಟ್ಟಿಗೆ, ಕುಣಿಕೆ, ಬೆಸ್ತ, ಕುರಿ, ಸುತ್ತು ಮತ್ತು ಎರಡು ಅರೆಗಂಟು, ನಾಟಾ ಅರೆ ಗಂಟು, ಚೌಕ ಬಿಗಿತ; ಎರಡಕ್ಕೆ ಹೆಚ್ಚಾಗಿ ಬೆಂಕಿಕಡ್ಡಿ ಉಪಯೋಗಿಸದೆ ಒಲೆ ಹೊತ್ತಿಸಿ, ಮನೆಯೊಳಗಲ್ಲದೆ ಹೊರಗಡೆ ಎರಡು ಸಾಮಾನ್ಯ ಊಟತಿಂಡಿ ಮಾಡುವುದು, ಉರಿ ನಂದಿಸಿ, ಅಡುಗೆ ಜಾಗ ಅಡುಗೆ ಪಾತ್ರೆಗಳನ್ನು ಚೊಕ್ಕಟಗೊಳಿಸುವುದು; ಬೆಂಕಿ ತಾಕದಂತೆಯೂ ಹರಡದಂತೆಯೂ ಇರಲು ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕ್ರಮ; ಉಡುಪೊಂದಕ್ಕೆ ಬಣ್ಣ ಹಾಕುವುದು, ಬಣ್ಣಹಾಕಿದ ಉಡುಪಿನ ಜೋಪಾನ. (ಇ) ಆರೋಗ್ಯ : ನಡೆಯುವಾಗ ಕುಳಿತಿರುವಾಗ ನಿಂತಿರುವಾಗ ಯಾವ ಬಗೆಯ ದೇಹ ಭಂಗಿ ಸರಿ ಎಂಬುದರ ತಿಳಿವಳಿಕೆ ಮತ್ತು ಅಭ್ಯಾಸ (ಇದನ್ನು ದಳದ ಶೀಲಮಂಡಲಿ ಮೆಚ್ಚಬೇಕು); ಸೌಟು ಹೆಜ್ಜೆಯಲ್ಲಿ 12 ನಿಮಿಷಕ್ಕೆ 1.5 ಕಿಮೀ ಹೋಗತಕ್ಕದ್ದು; ಅರ್ಧ ಸೇರಿನಷ್ಟು ಕಾಳನ್ನು ಬೀಸುವಕಲ್ಲಿನಲ್ಲಿ ಹಿಟ್ಟು ಮಾಡುವುದು, ಅಥವಾ 100 ಹಗ್ಗ ಕುಪ್ಪಳಿಕೆ. ನಿರ್ಬಲರಾದ ಗೈಡುಗಳಿಗೆ ಸೌಟು ಹೆಜ್ಜೆ ಮತ್ತು ಕುಪ್ಪಳಿಕೆಯಿಂದ ರಿಯಾಯಿತಿ ಉಂಟು; ಉಡುಪು ಊಟತಿಂಡಿ ಗಾಳಿ ಬೆಳಕು ಅಂಗ ವ್ಯಾಯಾಮಗಳ ವಿಚಾರದಲ್ಲಿ ಯುಕ್ತಕ್ರಮಗಳ ಪರಿಜ್ಞಾನ; ಸಾಧಾರಣ ಡ್ರಿಲ್ ಸಂಜ್ಞೆಗಳ ತಿಳಿವಳಿಕೆ. (ಈ) ಸೇವೆ : ಪ್ರಥಮ ಚಿಕಿತ್ಸೆಗೆ ಸಂಬಂಧಪಟ್ಟಂತೆ (i) ಚೂರಿಗಾಯ, ಸುಟ್ಟಗಾಯ, ಉಸಿರುಕಟ್ಟುವಿಕೆ, ಬವಳಿ, ರಕ್ತಸೋರಿಕೆಗಳಿಗೆ ಚಿಕಿತ್ಸೆ ಮತ್ತು ಕಟ್ಟು ಬಿಗಿತ, (ii) ದೊಡ್ಡ ಕೈತೂಗು, (iii) ಉಳುಕಿದ ಹಿಮ್ಮಡಿಗೆ ಕಟ್ಟು, (೪) ಕಣ್ಣುರಿ, ಕಜ್ಜಿ, ಪಾದರಕ್ಷೆಯ ಕಚ್ಚುಗಳ ಚಿಕಿತ್ಸೆ–ಇವನ್ನು ಅಭ್ಯಾಸ ಮಾಡುವುದು; ದಳಕ್ಕೆ ಬೇಕಾಗುವ ಸಂಜ್ಞಾ ಬಾವುಟವನ್ನೋ ಹೆಗಲು ಸಂಚಿಯನ್ನೋ ಮತ್ತಾವ ಪದಾರ್ಥವನ್ನೋ ತಯಾರಿಸುವುದು; ಭಾರತಕ್ಕೆ ಸೇವೆ ಸಲ್ಲಿಸಿದ ನಾಲ್ಕು ಸುಪ್ರಸಿದ್ಧ ಭಾರತೀಯರ ಜೀವನಕಥೆಯ ಪರಿಚಯ.

ಎರಡನೆಯ ದರ್ಜೆಯನ್ನು ಮುಟ್ಟಿದ ಗೈಡಿಗೆ ಎರಡು ರೀತಿಯ ಮುಂದುವರಿಕೆ ಸಾಧ್ಯ : ಜಾಣಬಿಲ್ಲೆಗಳ ಗಳಿಕೆ ಮತ್ತು ಮೊದಲನೆಯ ದರ್ಜೆ.

ಜಾಣ ಬಿಲ್ಲೆಗಳು: ಕಲಾವಿದೆ, ಪುಸ್ತಕಪ್ರೇಮಿ, ದುಭಾಷಿ, ಪ್ರಕೃತಿಪ್ರೇಮಿ, ತೋಟಗಾತಿ, ದರ್ಜಿ, ಜೇನುಸಾಕಣೆ, ನರ್ತಕಿ, ಈಜುಗಾತಿ. ಆಂಬ್ಯುಲೆನ್ಸ್, ರೋಗದಾದಿ, ಮುಂತಾದ 67 ಬಿಲ್ಲೆಗಳಿವೆ; ತನ್ನ ಕೈಲಾದಷ್ಟಕ್ಕೆ ಗೈಡು ಅರ್ಹತೆ ಹೊಂದತಕ್ಕದ್ದು.

ಮೊದಲನೆಯ ದರ್ಜೆ : (ಅ) ಪೀಠಿಕೆ : ಎರಡನೆಯ ದರ್ಜೆ ಗೈಡಾಗಿ ಸ್ವಲ್ಪ ಕಾಲ ಕಳೆದಿರಬೇಕು; ದಳದ ಇತರ ಗೈಡುಗಳಿಗೆ ಅವಳನ್ನು ಕುರಿತು ಪ್ರೀತಿಯೂ ಗೌರವವೂ ಉಂಟಾಗುವಂತೆ ಅವಳು ನಡೆದುಕೊಳ್ಳತಕ್ಕದ್ದು; ಗೈಡು ಪದ್ಧತಿಯ ಮೂಲ ಉದ್ದೇಶ ಇತಿಹಾಸಗಳ ಸಾಕಷ್ಟು ಅರಿವು, ಭಾರತದ ಗೈಡುಪದ್ಧತಿಯ ಚರಿತ್ರೆಯ ಮುಖ್ಯಾಂಶಗಳ ಅರಿವು. (ಆ) ಬುದ್ಧಿಶಕ್ತಿ; ಈ ಐದರಲ್ಲಿ ಮೂರರ ಅಂದಾಜು ಮಾಡುವ ಜಾಣತನ; ಎತ್ತರ, ತೂಕ, ದೂರ, ಸಂಖ್ಯೆ, ಕಾಲ (ಅಂದಾಜಿಗೂ ವಾಸ್ತವತೆಗೂ ಅಂತರ ಶೇಕಡ 25ನ್ನು ಮೀರಿರಬಾರದು); ದಿಕ್ಸೂಚಿಯನ್ನು ಉಪಯೋಗಿಸುವ ವಿಧಾನವನ್ನು ಅರಿತುಕೊಂಡು, 16 ದಿಕ್ಕುಗಳನ್ನು ಇಂಗ್ಲಿಷಿನಲ್ಲೂ ತಾಯ್ನುಡಿಯಲ್ಲೂ ಹೇಳುವುದು, ಹಾಗೂ ನಕ್ಷತ್ರ ಸೂರ್ಯ ಚಂದ್ರರ ಮೂಲಕ ದಿಕ್ಕುಗಳನ್ನು ಗುರುತಿಸುವುದು; ದಳ ಗೋಷ್ಠಿಗೆ ಕ್ಲುಪ್ತ ಸಮಯದಲ್ಲಿ ಹಾಜರಿ, ಆದಾಯ ವೆಚ್ಚದ ಲೆಕ್ಕ ಇಡುವ ತಿಳಿವಳಿಕೆ; ಒಬ್ಬ ಹೊಸ ಉಮೇದುವಾರಳನ್ನು ಕೋಮಲಪಾದ ಬ್ಯಾಡ್ಜಿಗೆ ಅರ್ಹಳಾಗುವಂತೆ ಕಲಿಕೆ ನೀಡುವುದು. ಮನಿ ಆರ್ಡರ್, ರಿಜಿಸ್ಟ್ರೇಷನ್, ಇನ್ಶೂರೆನ್ಸ್ ಪಾರ್ಸೆಲು, ಟೆಲಿಗ್ರಾಮ್ ಕಳುಹಿಸುವ ಸ್ವೀಕರಿಸುವ ಕ್ರಮಗಳ ಪರಿಚಯ, ರಸೀತಿ ಬರೆದುಕೊಡುವುದರ ಪರಿಚಯ; ಸುಳಿವು ಕೊಡದೆ ಬೆನ್ನಟ್ಟುವ ಉಪಾಯ ಮರೆ ಕಂಡು ಕೊಳ್ಳುವ ಜಾಣ್ಮೆ. (ಇ) ಕರಕೌಶಲ: ಅಡುಗೆ, ಸೂಜಿಕೆಲಸ, ಮಗುವಿನ ದಾದಿ–ಈ ಮೂರು ಜಾಣಬಿಲ್ಲೆಗಳ ಗಳಿಕೆ; ಸೀಮೆಸುಣ್ಣ, ಎಲೆ, ಹೂಗಳಿಂದ ಕೊಠಡಿಯನ್ನೋ ಅಂಗಳವನ್ನೋ ಸಿಂಗರಿಸುವುದು. (ಈ) ಆರೋಗ್ಯ : ಅರ್ಧ ಗಂಟೆಯಲ್ಲಿ 3 ಕಿಮೀ ದೂರ ನಡೆಯುವುದು; ಕೋಮಲಪಾದ ಗೈಡೊಬ್ಬಳಿಗೆ ಆರೋಗ್ಯಸೂತ್ರಗಳನ್ನು ಸ್ಫುಟವಾಗಿ ಮನಮುಟ್ಟುವಂತೆ ಬೋಧಿಸಬಲ್ಲ ಚಾತುರ್ಯ; 45 ಮೀ.ನಷ್ಟು ದೂರ ಈಜುವುದು ಅಥವಾ ವ್ಯಾಯಾಮಪಟು ಅಥವಾ ಗೃಹಕೃತ್ಯ ಜಾಣಬಿಲ್ಲೆಯನ್ನು ಆರ್ಜಿಸುವುದು. (ಉ) ಸೇವೆ : ಆಂಬ್ಯುಲೆನ್ಸ್ ಅಥವಾ ರೋಗದಾದಿ ಜಾಣಬಿಲ್ಲೆಯ ಗಳಿಕೆ; ಮನೆಯ ಅಥವಾ ಗೈಡು ಕಚೇರಿಯ ಸುತ್ತ 1 ಕಿಮೀ ಸರಹದ್ದಿನಲ್ಲಿರುವ ರಸ್ತೆ, ವಸತಿ, ಜನರ ಖಚಿತ ಪರಿಚಯ, ಪರಸ್ಥಳದವರಿಗೆ ಹತ್ತಿರದ ವೈದ್ಯ, ಪೊಲೀಸು ಠಾಣೆ, ರೈಲ್ವೆಸ್ಟೇಷನ್ನು, ಬಸ್ಸು ನಿಲ್ದಾಣ, ಪೆಟ್ರೋಲು ಮಳಿಗೆ, ಅಂಚೆ ಕಚೇರಿ ಮೊದಲಾದುವನ್ನು ತೋರಿಸಿಕೊಡುವ ಅರಿವು; ಭೂಪಟದ ಪರಿಚಯ ಮತ್ತು ಉಪಯೋಗಕ್ಕೆ ಬರುವ ಮ್ಯಾಪು (ನಕ್ಷೆ) ತಯಾರಿಕೆ, ಅಥವಾ ಜಮಾ ಖರ್ಚಿನ ಲೆಕ್ಕವನ್ನು ಎರಡು ತಿಂಗಳು ಬರೆದು, ಮನೆಯಲ್ಲಿ ಒಂದು ವಾರಕ್ಕೆ ಸಮವಾಗುವ ತಿಂಡಿಊಟಗಳ ತಪಶೀಲು, ಅಂಗಡಿ ಸಾಮಾನಿನ ಪಟ್ಟಿ, ಖರೀದಿಗಳ ಅಂದಾಜು ಮಾಡುವಿಕೆ; ಇಬ್ಬರು ಎರಡನೆಯ ದರ್ಜೆ ಗೈಡುಗಳೊಂದಿಗೆ ಮ್ಯಾಪನ್ನು ಅನುಸರಿಸಿ ನಡೆದು ಸುಮಾರು 4.5 ಗಂಟೆಯ ಅರ್ಧದಿವಸವನ್ನು ಊರಿನ ಹೊರಗೆ ಬೀಡು ಬಿಡಬೇಕು, ತಮ್ಮದೇ ಊಟ ಉಪಚಾರ ಅಗತ್ಯ; ಆಕಸ್ಮಿಕ ದಿಗಿಲು, ಉಸಿರುಕಟ್ಟುವಿಕೆ, ಬೆಂಕಿ ಉಪದ್ರವ, ಬಿಸಿಲು ಹೊಡೆತ, ಹಾವು ಕುಟುಕು, ವಿದ್ಯುದಾಘಾತ ಮುಂತಾದ ಆಕಸ್ಮಿಕಗಳು ಉಂಟಾದ ಸಂದರ್ಭಕ್ಕೆ ತಕ್ಕ ಚಿಕಿತ್ಸಾಕ್ರಮದ ಅರಿವು; ಇನ್‌ಫ್ಲುಯೆಂಜ, ಕ್ಷಯ, ಕಾಲರ, ಪ್ಲೇಗು, ಸಿಡುಬು, ಟೈಫಾಯಿಡ್, ಆಮಶಂಕೆ, ಮಲೇರಿಯ, ದಡಾರ ಮುಂತಾದ ಕಾಯಿಲೆಗಳ ವಿಚಾರದಲ್ಲಿ ಆವಶ್ಯಕವಾದ ಮುನ್ನೆಚ್ಚರಿಕೆಯ ಪರಿಜ್ಞಾನ; ಋತುವ್ಯತ್ಯಾಸದಿಂದಾಗಿ ಸಾಮಗ್ರಿಗಳು ಕೆಡದಂತೆ ಜೋಪಾನಿಸುವ ಜಾಣ್ಮೆ. ಮೊದಲನೆಯ ದರ್ಜೆಯ ಗೈಡು ಇನ್ನು ಕೆಲವು ಕೌಶಲಗಳನ್ನು ಗಳಿಸಿ ರಾಷ್ಟ್ರಾಧ್ಯಕ್ಷರ ಗೈಡ್ (ಪ್ರೆಸಿಡೆಂಟ್ಸ್ ಗೈಡ್) ಮಟ್ಟಕ್ಕೆ ಏರಬಹುದು. ಇದಕ್ಕೆ ಪ್ರಾಯ 15ಕ್ಕೆ ಕಡಮೆ ಇರಕೂಡದು ಎಂಬ ವಿಧಿಯಿದೆ. 14 ವರ್ಷ ತುಂಬಿದ ಮೇಲೆ ಸೀನಿಯರ್ ಗೈಡು ಎಂಬ ದಳದ ಉಪಶಾಖೆಗೆ ಸದಸ್ಯಳಾಗಬಹುದು. ಆದರೆ ಎಲ್ಲ ಕಡೆಯೂ ಈ ಉಪಶಾಖೆಯ ಸೌಲಭ್ಯವಿಲ್ಲ.

ರೇಂಜರ್ ವಿಭಾಗ : ರೇಂಜರ್ ವೃಂದದಲ್ಲಿ 4ರಿಂದ 24ರ ಸಂಖ್ಯೆಯ ವರೆಗೆ 16, 17 ವಯಸ್ಸು ತುಂಬಿದ ಹೆಣ್ಣುಮಕ್ಕಳಿಗೆ ಅವಕಾಶ ಉಂಟು. ವೃಂದಕ್ಕೆ ಮುಂದಾಳೂ (ರೇಂಜರ್ ಲೀಡರ್) ಸಹಾಯಕಿಯೂ ಇರುತ್ತಾರೆ. ವೃಂದಗಳು ಪೆಟ್ರೋಲುಗಳಾಗಿಯೋ ಒಟ್ಟಾಗಿಯೋ ಕೆಲಸಮಾಡಬಹುದು. 4ರಿಂದ 6 ರೇಂಜರುಗಳು ಇರುವ ಒಂದು ಪೆಟ್ರೋಲಿಗೆ ಮೊದಲಗಿತ್ತಿ (ರೇಂಜರ್‌ಮೇಟ್) ಹೊಣೆಗಾತಿಯಾಗಿರುತ್ತಾಳೆ. ವೃಂದದ ಆಶಯ, ಕಾರ್ಯಾವಳಿ, ಒಳಗೋಷ್ಠಿ, ಹೊರಪಯಣ, ಸೇವಾಯೋಜನೆ, ಎಲ್ಲವನ್ನೂ ನಿರ್ಧರಿಸಿ ಆಚರಣೆಗೆ ತರುವ ಹೊಣೆ ಶೀಲಮಂಡಲಿಯದು. ವೃಂದದಲ್ಲಿ ಬಳಗ, ದಳಗಳಿಗಿಂತ ಶೀಲ ಮಂಡಲಿಯದೇ ಹೆಚ್ಚಿನ ಆಡಳಿತ, ಅಧಿಕಾರ.

ವೃಂದಕ್ಕೆ ಸೇರಿದ ಉತ್ಕಾಂಕ್ಷಿ ಈ ಲಘುಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ರೇಂಜರ್ ದೀಕ್ಷೆಗೆ ಅನುವಾಗುತ್ತಾಳೆ. ಗೈಡು ವಿಭಾಗದ ಕೋಮಲಪಾದ ಬ್ಯಾಡ್ಜಿಗೆ ಬೇಕಾದ ಜ್ಞಾನದ ಸ್ವಾಮ್ಯ; ಪ್ರಪಂಚದ ಗೈಡಿಂಗ್ ಸೌಟಿಂಗುಗಳ ಅರಿವು; ಯುವಕ ಯುವತಿಯರಿಗಾಗಿ ಏರ್ಪಾಡಾಗಿರುವ ಇನ್ನೆರಡು ಬೇರೆ ಸಂಘಗಳ ಪರಿಚಯ; ಭಾರತದ ಗೈಡು ಪದ್ಧತಿಯ ಮೇಲಣ ಗ್ರಂಥಗಳ ವ್ಯಾಸಂಗ; ಅಂಚೆ ಟೆಲಿಫೋನು ರೈಲ್ವೆ ಮುಂತಾದವುಗಳ ಖಚಿತ ಮಾಹಿತಿ; ದಿಕ್ಸೂಚಿ ಮತ್ತು ದಿಕ್ಕುಗಳ ಅರಿವು; ಮ್ಯಾಪನ್ನು ಓದುವುದು, ರಚಿಸುವುದು; ಐದು ಮೈಲಿ ಕಾಲ್ನಡೆ (ಹೈಕ್) ಮಾಡಿ ವರದಿ ಒಪ್ಪಿಸುವುದು; ಸರಳ ಅಡುಗೆ ತಯಾರಿಸಿ ಬಡಿಸುವುದು; ಆರೋಗ್ಯ ಸೂತ್ರಗಳ ಜ್ಞಾನ ಅಥವಾ ಮಗುವಿನ ಆರೈಕೆ; ಭಾಷೆ ನಿಯಮ, ಒಳ ತಾತ್ಪರ್ಯದ ಅರಿವು, ವಾಕ್ಯರಚನೆ ಒಂದೇ ಆದರೂ ಅರ್ಥಗ್ರಹಿಕೆಯಲ್ಲಿ ರೇಂಜರ್ ದೃಷ್ಟಿಗೆ ಹೆಚ್ಚು ವೈಶಾಲ್ಯ.

ಆಮೇಲೆ ರೇಂಜರ್ ತಾರೆ (ರೇಂಜರ್ ಸ್ಟಾರ್) ದರ್ಜೆಗೆ ಏರಲು ಪ್ರಯತ್ನಿಸಬೇಕು. ಗೈಡುಗಳ ಜಾಣಬಿಲ್ಲೆ 10ರಲ್ಲಿ 6ನ್ನು ಗಳಿಸಿಕೊಳ್ಳತಕ್ಕದ್ದು: ಅಡುಗೆ, ದಾದಿ, ಪೌರತನ, ಶಿಬಿರಪಟು, ಗೃಹಕೃತ್ಯ, ಜಗತ್ತಿನ ನಾಗರಿಕ, ಊರಿನ ನೈರ್ಮಲ್ಯ, ರಕ್ಷಕಿ (ರೆಸ್ಕ್ಯೂಯರ್), ಸಂಕೇತ ಸುದ್ದಿಗಾತಿ, ದುಭಾಷಿ; ತನ್ನ ಸರಹದ್ದಿನ ರಸ್ತೆ ವಸತಿ, ಜನಗಳ ಅರಿವು; ಒಂದು ರಾತ್ರಿ ಕಾಲ್ನಡೆ (ಓವರ್‌ನೈಟ್ ಹೈಕ್), ವಯಸ್ಕರ ಶಿಕ್ಷಣ, ಆಸ್ಪತ್ರೆ ಸೇವೆ, ಶ್ರಮದಾನ, ಮಕ್ಕಳ ಯೋಗಕ್ಷೇಮ ಮುಂತಾದುವಲ್ಲಿ ಒಂದನ್ನು ಆರಿಸಿಕೊಂಡು ಒಂದು ತಿಂಗಳು ದುಡಿಮೆ.

ಅನಂತರ ಒಬ್ಬಳು ಗೈಡಿಗೆ ಮೊದಲನೆಯ ದರ್ಜೆ ಗೈಡಾಗಲು ಕಲಿಸಿಕೊಟ್ಟು, ಮತ್ತೆ 6 ಜಾಣಬಿಲ್ಲೆ ಪಡೆದು, ಒಂದು ವಾರ ಗುಡಾರದಲ್ಲಿ ಶಿಬಿರವಾಸ ಕೈಗೊಂಡು, ಗೈಡು ಪದ್ಧತಿಯಲ್ಲಿ ಉತ್ತಮ ದರ್ಜೆಯದಾದ ಭಾರತ ರೇಂಜರ್ ಎನ್ನಿಸಿಕೊಳ್ಳಬಹುದು.

**ಸಮವಸ್ತ್ರ, ಲಾಂಛನ, ಸಿಲ್ಪಿ, ಇತ್ಯಾದಿ :** ಗೈಡಿನ ಸಮವಸ್ತ್ರ ಎಂದರೆ ದಪ್ಪಬಟ್ಟೆಯ ನೀಲಿ ಲಂಗ (ಓವರ್‌ಆಲ್ ಅಥವಾ ಫ್ರಾಕ್) ಅಥವಾ ನೀಲಿ ಸೀರೆ ಮತ್ತು ಬಿಳಿಯ ಕುಪ್ಪಸ–ಇವು ಸೇರಿರುತ್ತವೆ. ಲಂಗವಾದರೆ ಅದು ಮೊಳಕಾಲಿನಿಂದ ಸ್ವಲ್ಪ ಕೆಳಕ್ಕೆ ಇಳಿದಿದ್ದು, ಅರೆತೋಳುಗಳನ್ನು ಹೊಂದಿ ನಾಲ್ಕು ಮುಚ್ಚಳ ಜೇಬುಗಳನ್ನೂ (ಪ್ಯಾಚ್ ಪ್ಯಾಕೆಟ್ಸ್) ಹೆಗಲುಪಟ್ಟಿಗಳನ್ನೂ (ಎಪಾಲೆಟ್ಸ್) ಉಳ್ಳದ್ದಾಗಿರಬೇಕು. ಕುಪ್ಪಸಕ್ಕೂ ಎರಡು ಮುಚ್ಚಳ ಜೇಬು ಹೆಗಲುಪಟ್ಟಿಗಳು ಇರಬೇಕು. ತೋಳಿನ ಅಂಚು 1.5" ಎತ್ತಿ

ಮಡಿಸಿರಬೇಕು. ಕುಪ್ಪಸ ಸೊಂಟದಿಂದ ನಾಲ್ಕು ಅಂಗುಲ ಕೆಳಕ್ಕೆ ಬರುವಷ್ಟು ಉದ್ದವಿರತಕ್ಕದ್ದು. ಸೀರೆಗೆ ಅಂಚು ಬೇಕಾಗಿಲ್ಲ; ಅಂಚು ಅಪೇಕ್ಷಿತವಾದರೆ ಅದು ಕಾಲಂಗುಲದ ಅಗಲದ ಬಿಳಿಯ ಬಣ್ಣದ್ದಾಗಿರಬೇಕು. ಮುಮ್ಮೂಲೆಯ ಕೊರಳುವಸ್ತ್ರದ (ಸ್ಕಾರ್ಫ್) ಎರಡು ತುದಿಗಳೂ ಸೊಂಟದ ವರೆಗೂ ಇಳಿದಿರಬೇಕು. ಕೊರಳುವಸ್ತ್ರದ ಬಣ್ಣ ಗುಂಪು ಗುಂಪಿಗೆ ಬೇರೆಯದಾಗಿರುತ್ತದೆ. ಯಾವ ಬಳಗ, ದಳ, ವೃಂದ ಎಂಬುದನ್ನು ಸುಲಭವಾಗಿ ಗುರ್ತಿಸುವುದಕ್ಕೆ ಬಣ್ಣದ ಭೇದ ಅಗತ್ಯ. ಕೊರಳುವಸ್ತ್ರದ ಎರಡು ಭಾಗಗಳನ್ನು ಕೂಡಿಸಿ ಹಿಡಿಯುವುದಕ್ಕೆ ಅಗಲ ಉಂಗುರದಂಥ ವಾಗಲ್ ಎಂಬ ಸಾಧನ ಉಪಯುಕ್ತ. ಸೊಂಟಪಟ್ಟಿ (ಬೆಲ್ಟ್), ಒಂಟಿಬಣ್ಣದ ಕಾಲುಚೀಲ (ಸಾಕ್ಸ್), ಕಂದು ಬಣ್ಣದ ಪಾದರಕ್ಷೆ–ಇವು ಭಾರತದಲ್ಲಿ ಗುಂಪುಗಳ ಇಚ್ಛೆಗೆ ಬಿಟ್ಟದ್ದಾಗಿವೆ; ಇವನ್ನು ಬಯಸಿದ್ದಾದರೆ ಒಂದು ಗುಂಪಿಗೆಲ್ಲ ಒಂದೇ ಮಾದರಿಯ ಬಣ್ಣ ಇರತಕ್ಕದ್ದು. ಇವುಗಳ ಜೊತೆಗೆ ಗೈಡು ದರ್ಜೆಯ ಭುಜಪಟ್ಟಿ, ಲಾಂಛನ, ಸಿಳ್ಳಿ ಸಿಳ್ಳಿಹುರಿ–ಇವೂ ಇರುವುದುಂಟು.

ಗೈಡುಪದ್ಧತಿಯ ಒಂದು ವೈಶಿಷ್ಟ್ಯವೇನೆಂದರೆ, ಬುಲ್‌ಬುಲ್‌ನಿಂದ ಹಿಡಿದು ಲೇಡಿ ಬೇಡನ್ ಪೋವೆಲಳ ವರೆಗೆ ಸಕಲ ಗೈಡು ಗೈಡರ್ (ಗೈಡರ್ ಎಂಬುದು ಎಲ್ಲ ಮುಂದಾಳುಗಳಿಗೂ ಅನ್ವಯಿಸುವ ಏಕನಾಮ) ಕಮಿಷನರುಗಳಿಗೂ ಸಮವಸ್ತ್ರದಲ್ಲಿ ಯಾವ ಭೇದವೂ ಕಾಣದು; ಒಂದೆರಡು ಲಾಂಛನ ಮಾತ್ರ ವ್ಯತ್ಯಾಸಗಳಿರುತ್ತವೆ.

**ಆಡಳಿತ ವ್ಯವಸ್ಥೆ :** ಗೈಡುಪದ್ಧತಿಯಲ್ಲಿ ಆಡಳಿತಾಧಿಕಾರ ಸೂಕ್ತರೀತಿಯಲ್ಲಿ ಹಂಚಿಕೆಯಾಗಿದೆಯಾಗಿ ಕ್ರಮಬದ್ಧ ಪ್ರಜಾಪ್ರಭುತ್ವ ಅದರ ಲಕ್ಷಣವೆನ್ನಬಹುದು. ಆಜ್ಞೆಮಾಡುವವರಾಗಲೀ ದಂಡನೆಗೆ ಗುರಿಯಾಗುವವರಾಗಲೀ ಇಲ್ಲಿಲ್ಲ. ಆವಶ್ಯಕವಾಗಿ ಇರಲೇಬೇಕಾದ ಹಲವಾರು ನಿಯಮಗಳು ಗೈಡಿಂಗ್ ಎಂಬ ಆಟ–ಶಿಕ್ಷಣದ ಅಭ್ಯಾಸಕ್ಕೆ ಒದಗುವ ದಾರಿ ಕಂಬಗಳೇ ಹೊರತು ಅವು ಶಾಸನಗಳಲ್ಲ, ಕಾನೂನುಗಳಲ್ಲ, ಕಬ್ಬಿಣ ಕಟ್ಟುಗಳಲ್ಲ. ಆದ್ದರಿಂದ ಗೈಡು ಪದ್ಧತಿಯ ಮುಖ್ಯ ಆಧಾರವೆಂದರೆ ಬಳಗ, ದಳ, ವೃಂದಗಳು. ಹಲವಾರು ಅಂಥ ಗುಂಪುಗಳು ಒಟ್ಟು ಸೇರಿ ಒಂದು ಸ್ಥಳೀಯ ಸಂಸ್ಥೆ ಏರ್ಪಡುತ್ತದೆ. ಹಲವು ಸ್ಥಳೀಯ ಸಂಸ್ಥೆಗಳಿಂದ ಒಂದು ಜಿಲ್ಲಾ ಸಂಸ್ಥೆಯಾಗುತ್ತದೆ. ಹಲವು ಜಿಲ್ಲಾ ಸಂಸ್ಥೆಗಳಿಂದ ಒಂದು ವಿಭಾಗ ಅಥವಾ ಕೌಂಟೀ ಸಂಸ್ಥೆ (ಡಿವಿಷನಲ್ ಅಥವಾ ಕೌಂಟೀ ಅಸೋಸಿಯೇಷನ್) ಆಗುತ್ತದೆ. ಇಂಥ ಕೌಂಟೀ ಸಂಸ್ಥೆಗಳು ಸೇರಿ ರಾಜ್ಯಸಂಸ್ಥೆ ಏರ್ಪಾಡು. ರಾಜ್ಯಸಂಸ್ಥೆಗಳು ಕೂಡಿ ರಾಷ್ಟ್ರಸಂಸ್ಥೆ ರೂಪುಗೊಳ್ಳುತ್ತದೆ. ಅದಕ್ಕೆ ಇದು ಆಶ್ರಯ, ಇದಕ್ಕೆ ಅದು ಆಶ್ರಯ, ಇದೇ ರಚನಾತತ್ತ್ವ; ಯಾವುದು ಯಾವುದನ್ನೂ ಯಜಮಾನ–ಸೇವಕ ಸಂಬಂಧದಲ್ಲಿ ಅವಲಂಬಿಸಿಕೊಂಡಿಲ್ಲ. ಎಲ್ಲ ಮಟ್ಟಗಳಲ್ಲಿಯೂ ಮಂತ್ರಾಲೋಚನ ಸಭೆ ಮತ್ತು ಕಾರ್ಯಸಮಿತಿಗಳು ಚುನಾಯಿತಗೊಂಡಿರುತ್ತವೆ. ಇನ್ನೊಂದು ಕಡೆ, ಕಮಿಷನರುಗಳು ನೇಮಿತರಾಗಿ ಸಮರ್ಪಕ ರೀತಿಯಲ್ಲಿ ಗೈಡುಗಳ ವ್ಯಾಸಂಗ, ವ್ಯಾಯಾಮ, ವಿನೋದಬ್ಯಾಡ್ಜು ಗಳಿಕೆ, ಪರೋಪಕಾರ–ಮೊದಲಾದವುಗಳ ಮೇಲುಸ್ತುವಾರಿ ನಡೆಸುತ್ತಾರೆ.

ಗೈಡರುಗಳಿಗೆ ಶಿಕ್ಷಣ ಕೊಡುವುದಕ್ಕಾಗಿ ಒಂದೆರಡು ವಾರಗಳ ಶಿಬಿರ ಆಗಾಗ ಜರುಗುತ್ತದೆ. ಸರಿಸುಮಾರಾಗಿ ಒಂದೇ ಮಾದರಿಯ ಶಿಕ್ಷಣಕ್ರಮ ಪ್ರಪಂಚದಲ್ಲೆಲ್ಲ ಅಂಗೀಕೃತವಾಗಿದೆ; ದೇಶೀಯ ಸ್ಥಳೀಯ ವ್ಯತ್ಯಾಸಗಳು ಬಹಳ ಕಡಿಮೆ. ಗೈಡು ಪದ್ಧತಿ ಜಗತ್ತಿಗೆಲ್ಲ ಒಂದೇ ಆಗಿದೆ. (ಎಸ್.ವಿ.ಆರ್.)


**ಗೈಬೆಲ್, ಎಮಾನ್ಯುಯೆಲ್ ಫಾನ್ :** 1815–84. ಜರ್ಮನ್ ಕವಿ. ಲೂಬೆಕ್‌ನಲ್ಲಿ ಹುಟ್ಟಿದ. ಬಾನ್ ವಿಶ್ವವಿದ್ಯಾಲಯದಲ್ಲಿ ವೇದಾಂತವನ್ನು ಓದಿದ. ಅನಂತರ ಗ್ರೀಸ್ ದೇಶವನ್ನು ಸುತ್ತಿಬಂದು ಪರ್ಷಿಯದ ದೊರೆ ಫ್ರೀಡ್ರಿಕ್ ವಿಲಿಯಂನಿಂದ ಗೌರವವೇತನ ಪಡೆದ. ಲೂಯಿಸ್ ದೊರೆಯ ಕರೆಯ ಮೇರೆಗೆ ಮ್ಯೂನಿಕ್‌ನಲ್ಲಿ ಜರ್ಮನ್ ಸಾಹಿತ್ಯದ ಪ್ರಾಧ್ಯಾಪಕನಾದ (1852). ಮೊದಲಿಗೆ ಕ್ರಾಂತಿಕಾರಕ ಕವಿಗಳಲ್ಲಿ ಒಬ್ಬನೆನಿಸಿದ್ದ ಈತ ಅನಂತರ ಸಂಪ್ರದಾಯಬದ್ಧ ಕವಿಯಾದ. 1848–1870 ರವರೆಗೆ ಈತ ಜರ್ಮನ್ ಕವಿಗಳನ್ನು ಪ್ರತಿನಿಧಿಸಿದ. ಈತನ ಭಾವಗೀತೆಗಳು ಭಾವಾತಿರೇಕವುಳ್ಳವಾಗಿದ್ದರೂ ರಚನೆ ಮತ್ತು ಶೈಲಿಯ ದೃಷ್ಟಿಯಿಂದ ಶಕ್ತಿಯುತ ಕವನಗಳೆನಿಸಿವೆ. ಪೋಯೆಮ್ಸ್ (1840), ನ್ಯೂ ಪೊಯೆಮ್ಸ್ (1857)–ಇವು ಈತನ ಕವನ ಸಂಕಲನಗಳು. ಈ ಎರಡರಲ್ಲಿನ ಆಯ್ದ ಕವನಗಳ ಇಂಗ್ಲಿಷ್ ಭಾಷಾಂತರ 1864ರಲ್ಲಿ ಅಚ್ಚಾಗಿದೆ. ಬ್ರೂನ್‌ಹಿಲ್ಟ್ (1854–ಇಂಗ್ಲಿಷ್ ಭಾಷಾಂತರ 1879) ಮತ್ತು ಸಫೊನಿಸ್ಬ (1869)–ಇವು ಈತನ ನಾಟಕಗಳು. ಎರಡನೆಯದು ಷಿಲರ್ ಬಹುಮಾನ ಪಡೆಯಿತು. *

**ಗೈಲ್ಸ್ ಲಿಟ್ಟನ್ ಸ್ಟ್ರೇಚಿ :** 1880–1932. ಗೈಲ್ಸ್ ಲಿಟ್ಟನ್ ಸ್ಟ್ರೇಚಿ ಇಂಗ್ಲೆಂಡಿನ ಲೇಖಕ ಮತ್ತು ವಿಮರ್ಶಕ. ಈತ 1880ರ ಮಾರ್ಚ್ 1ರಂದು ಲಂಡನ್‌ನಲ್ಲಿ ಜನಿಸಿದ. ತಂದೆ ಲೆಫ್ಟನೆಂಟ್ ಜನರಲ್ ಸರ್ ರಿಚರ್ಡ್ ಸ್ಟ್ರೇಚಿ ಶ್ರೇಷ್ಠ ಯೋಧ ಮತ್ತು ಸಾರ್ವಜನಿಕ ಆಡಳಿತಗಾರ. ರಿಚರ್ಡ್ ಸ್ಟ್ರೇಚಿ 30 ವರ್ಷಗಳಿಗೂ ಹೆಚ್ಚು ಕಾಲ ಭಾರತದಲ್ಲಿ ಸೇವೆ ಸಲ್ಲಿಸಿದ. ತಾಯಿ ಲೇಡಿ ಸ್ಟ್ರೇಚಿ ಭಾಷೆಗಳು ಮತ್ತು ಸಾಹಿತ್ಯದಲ್ಲಿ ಆಸಕ್ತಿಯುಳ್ಳವಳಾಗಿದ್ದಳು. ಭಾರತದ ವೈಸರಾಯ್ ಆಗಿದ್ದ ಅರ್ಲ್ ಆಫ್ ಲಿಟ್ಟನ್, ರಿಚರ್ಡ್‌ನ ಸ್ನೇಹಿತ, ಅವನ ಹೆಸರನ್ನೇ ತನ್ನ 5ನೆಯ ಮಗನಿಗೆ ಲಿಟ್ಟನ್ ಎಂದು ಇಟ್ಟ. 1887ರಿಂದಲೇ ಲಿಟ್ಟನ್ ಫ್ರೆಂಚ್ ಭಾಷೆಯನ್ನು ಅಧ್ಯಯನ ಮಾಡಲು ಪ್ರಾರಂಭಿಸಿದ. ಈತ ಸಂಸ್ಕೃತಿಯನ್ನು ಬಹಳವಾಗಿ ಮೆಚ್ಚಿದ್ದ. ಈತ ಕೇಂಬ್ರಿಜ್ ಮತ್ತು ಲಿವರ್‌ಪೂಲ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದ. ಈತ ಎಡಿನ್ ಬರೋ ರಿವ್ಯೂ, ನೇಷನ್ ಅಥೇನುಯೆಮ್, ಸ್ಪೆಕ್ಟೇಟರ್ ಮುಂತಾದ ನಿಯತಕಾಲಿಕೆಗಳಿಗೆ ಲೇಖನಗಳನ್ನು ಬರೆಯಲು ಪ್ರಾರಂಭಿಸಿದ. 'ಬ್ಲೂಮ್ಸ್‌ಬರಿ ಗುಂಪಿ'ನ ಪ್ರಮುಖ ಸದಸ್ಯನಾಗಿದ್ದ.

ಲಿಟ್ಟನ್ ಸ್ಟ್ರೇಚಿ ಜೀವನ ಚರಿತ್ರೆಗಳ ರಚನೆಯಲ್ಲಿ ನಾಯಕನ ಉದಾತ್ತ ಗುಣಗಳನ್ನು ಹಾಡಿ ಹೊಗಳುವ, ನಿಧನರಾದವರ ನೆನಪಿಗಾಗಿ ಸಂಪುಟಗಳನ್ನು ಪ್ರಕಟ ಮಾಡುವ ಸಂಪ್ರದಾಯಗಳನ್ನು ತಳ್ಳಿಹಾಕಿದ. ವ್ಯಂಗ, ಕಟಕಿ, ಹರಿತವಾದ ಶೈಲಿ ಇವು ಇವನ ಬರವಣಿಗೆಯ ವೈಶಿಷ್ಟ್ಯ. ಮನುಷ್ಯ ಸ್ವಭಾವದ ಜಟಿಲತೆ, ವೈಚಿತ್ರ್ಯಗಳಲ್ಲಿ ಈತನಿಗೆ ಆಸಕ್ತಿ. ನಿರ್ಲಿಪ್ತತೆ, ವಿವೇಚನೆ, ಕೃತ್ರಿಮವಿಲ್ಲದ ಮಾನವ ಬಾಂಧವ್ಯ ಇವುಗಳನ್ನು ಹೆಚ್ಚಾಗಿ ಮೆಚ್ಚುತ್ತಾನೆ. ಈತ ರಚಿಸಿದ ಜೀವನಚರಿತ್ರೆಗಳು ಕಾದಂಬರಿಗಳಂತೆ ಓದುಗರನ್ನು ಆಕರ್ಷಿಸುತ್ತವೆ. ಅನೇಕರು ಇವನನ್ನು 'ಜೀವನ ಚರಿತ್ರೆಗಳ ಕಾದಂಬರಿಕಾರ' ಎಂದೇ ಗುರುತಿಸುವರು. ಈತ ತನ್ನ 51ನೆಯ ವಯಸ್ಸಿನಲ್ಲಿ (1932) ಹೊಟ್ಟೆಯ ಕ್ಯಾನ್ಸರ್‌ನಿಂದ ನಿಧನನಾದ.

ಈತನ ಲೈಫ್ ಅಂಡ್ ಲೆಟರ್ಸ್, ಲ್ಯಾಂಡ್ ಮಾರ್ಕ್ ಇನ್ ಫ್ರೆಂಚ್ ಲಿಟರೇಚರ್ (1912), ಎಮಿನೆಂಟ್ ವಿಕ್ಟೋರಿಯನ್ಸ್ (1918), ಕ್ವೀನ್ ವಿಕ್ಟೋರಿಯ (1921) ಎಂಬ ಕೃತಿಗಳು ಇವನಿಗೆ ಅಪಾರ ಯಶಸ್ಸನ್ನು ತಂದುಕೊಟ್ಟವು. ಜೀವನಚರಿತ್ರೆಯ ವಿಧಾನದಲ್ಲಿಯೇ ಹೊಸ ಮೈಲಿಗಲ್ಲನ್ನು ಸ್ಥಾಪಿಸಿದ ಬರಹಗಳೆಂದು ಇವು ಪ್ರಸಿದ್ಧವಾಗಿವೆ. ಬುಕ್ಸ್ ಅಂಡ್ ಕ್ಯಾರೆಕ್ಟರ್ಸ್ (1922), ಪೋಪ್ (1925), ಎಲಿಜಬೆತ್ ಅಂಡ್ ಎಸೆಕ್ಸ್ (1928), ಕ್ಯಾರೆಕ್ಟರ್ಸ್ ಅಂಡ್ ಕಾಮೆಂಟರೀಸ್ (1933) ಇವು ಈತನ ಮುಖ್ಯ ಕೃತಿಗಳು. ಇವನ ನಿಧನದ ಅನಂತರ 'ಕ್ಯಾರೆಕ್ಟರ್ ಅಂಡ್ ಕಾಮೆಂಟರೀಸ್' ಕೃತಿ ಪ್ರಕಟವಾಯಿತು. ಈತ ಬರೆದ ಹಾಲ್‌ರಾಮ್ಡ್‌ರ ಜೀವನಚರಿತ್ರೆ ಎರಡು ಸಂಪುಟಗಳಲ್ಲಿ 1967–68ರಲ್ಲಿ ಪ್ರಕಟಗೊಂಡಿದೆ. (ಎಲ್.ಎಸ್.ಎಸ್.)

**ಗೊಂಗೊರಾ ಇ ಆರ್ಗೋಟಾ, ಲೂಯಿಸ್ ಡೆ :** 1561–1627. ಸುವರ್ಣಯುಗವನ್ನು ಪ್ರತಿನಿಧಿಸುವ ಪ್ರಸಿದ್ಧ ಕವಿಗಳಲ್ಲಿ ಕೊನೆಯ ಸ್ಪಾನಿಷ್ ಕವಿ. ಕಾರ್ಡೊಬದ ಶ್ರೀಮಂತ ಮನೆತನವೊಂದರಲ್ಲಿ 1561ರ ಜುಲೈ 11ರಂದು ಜನಿಸಿದ. ತಂದೆ ಫ್ರಾನ್ಸಿಸ್ಕೊ ಡಿ ಆರ್ಗೋಟಾ ನಗರದ ಮೇಯರ್ ಆಗಿದ್ದ. ಅಲ್ಲದೆ ಇವನ



ಪುಸ್ತಕ ಭಂಡಾರ ಇಡೀ ಊರಿಗೇ ಪ್ರಸಿದ್ಧವಾದುದಾಗಿತ್ತು.

ಗೊಂಗೊರಾ ಸಾಲಮಾಂಕ ವಿಶ್ವವಿದ್ಯಾಲಯದಲ್ಲಿ ಕಾನೂನು ಶಾಸ್ತ್ರ ಕುರಿತು ಉನ್ನತ ವ್ಯಾಸಂಗ ಮಾಡಿದ. ಆದರೂ ಒಲವು ಕಾವ್ಯದ ಕಡೆಗೇ ಇತ್ತು. ಈತ ತನ್ನ 24ನೆಯ ವಯಸ್ಸಿನಲ್ಲಿಯೇ ಶ್ರೇಷ್ಠ ಕವಿಯೆನಿಸಿಕೊಂಡ. ಸುವಿಖ್ಯಾತ ಸಾಹಿತಿ ಸರ್ವಾಂಟಿಸ್ ತನ್ನ ಗ್ಯಾಲಟೀಯ ಎಂಬ ಕೃತಿಯಲ್ಲಿ ಈತನ ಭಾವಗೀತೆಗಳ ಶ್ರೇಷ್ಠತೆಯನ್ನು ಪ್ರಶಂಸಿಸಿದ್ದಾನೆ.

ಶ್ರೇಷ್ಠವಾದ ಕವಿತೆಗಳನ್ನು ಎಷ್ಟು ಬರೆದರೂ ಅದರಿಂದ ಜೀವನ ಸಾಗದೆಂದು ಕಂಡುಕೊಂಡ ಕವಿ ಚರ್ಚಿನಲ್ಲಿ ಪಾದ್ರಿಯಾದ. 3ನೆಯ ಫಿಲಿಪ್ ದೊರೆಯ ಆಸ್ಥಾನದಲ್ಲಿ ಸಾಕಷ್ಟು ವರ್ಚಸ್ಸೂ ಪ್ರಭಾವವೂ ಇದ್ದ ಕೆಲವರ ಬೆಂಬಲ ದೊರಕಿ ಕಾಲಕ್ರಮದಲ್ಲಿ ರಾಜಾನುಗ್ರಹವನ್ನು ಪಡೆದು ಅರಮನೆಯ ಚಾಪ್ಲಿನ್ ಆದ. ಹಾಗಾಗಿ ಜೀವಮಾನದ ಬಹು ಭಾಗವನ್ನು ಮ್ಯಾಡ್ರಿಡ್ ನಗರದಲ್ಲೇ ಕಳೆದ. ಈತನ ಅಭಿಮಾನಿಗಳಾಗಿದ್ದವರು ಕೆಲವರು ಮುಂದೆ ಆಸ್ಥಾನದಲ್ಲಿ ತಮಗಿದ್ದ ಪ್ರತಿಷ್ಠೆಯನ್ನು ಕಳೆದುಕೊಂಡರು. ಕೆಲವರು ಮರಣ ಹೊಂದಿದರು. ಇನ್ನು ಕೆಲವರು ಹತರಾದರು. ರಾಜಾನುಗ್ರಹ ತಪ್ಪಿತು. ಕವಿಗೆ ಚಾಪ್ಲಿನ್ ಪದವಿಗಿಂತ ಹೆಚ್ಚಿನ ಸ್ಥಾನ ದೊರೆಯದೇ ಹೋಯಿತು.

ಇಷ್ಟಾದರೂ ಗೊಂಗೊರಾನ ಕಾವ್ಯ ರಚನೆ ಮಾತ್ರ ತಡೆಯಿಲ್ಲದೆ ಸಾಗಿತ್ತು. ವಿವಿಧ ಬಗೆಯ ಕಿರುಗವನಗಳನ್ನು ಬರೆದು ಜನಪ್ರಿಯನಾದ. ಈತನ ಚಿತ್ತಾಕರ್ಷಕವಾದ ಇಟಾಲಿಯನ್ ಸಾನೆಟ್ಟುಗಳು, ಓಡ್ ಮುಂತಾದ ಲಲಿತ ಭಾವಗೀತೆಗಳು, ವಿಡಂಬನಾತ್ಮಕ ಹಾಡುಗಳು, ಗಿಟಾರ್ ವಾದನಕ್ಕೆಂದೇ ವಿಶೇಷವಾಗಿ ರಚಿತವಾದ ಹಾಡುಗಳು ಭಾವದ ಸೊಗಸು, ಸುಂದರವಾದ ಶೈಲಿ, ಮಧುರವಾದ ಭಾಷೆಗಳೆಲ್ಲ ಮೇಳವಿಸಿದ್ದರಿಂದ ಅಮೂಲ್ಯವಾದ ಭಾವಗೀತೆಗಳಾಗಿವೆ.

1600ರ ಅನಂತರ ಈತನ ಕಾವ್ಯದ ವಸ್ತು, ಭಾಷೆ, ಶೈಲಿ ಸಂಪೂರ್ಣವಾಗಿ ಬೇರೆಯೇ ಆದವು. ಮೊದಲಿನ ಸರಳವಾದ ಪ್ರೇಮಗೀತೆಗಳಿಗೆ ಬದಲಾಗಿ ಶ್ರೀಮಂತರ ಪ್ರಶಸ್ತಿ ಪದ್ಯಗಳು, ದೀರ್ಘಕಾವ್ಯಗಳು ಹೊರಬಂದವು. ವಿಂಡಬನೆ ಇನ್ನೂ ಹರಿತವಾಯಿತು. ರೂಢಿಯಲ್ಲಿದ್ದ ಕಾವ್ಯದ ಹಾಗೂ ಭಾಷೆಯ ನಿಯಮಗಳನ್ನು ಉಲ್ಲಂಘಿಸಿದನೆಂಬ ಆಕ್ಷೇಪಣೆಯೂ ಈತನ ಮೇಲೆ ಬಂತು. ಕವಿ ಇದೊಂದನ್ನೂ ಲೆಕ್ಕಿಸದೆ ಹೊಸದೊಂದು ಕಾವ್ಯಮಾರ್ಗವನ್ನೇ ನಿರ್ಮಾಣಮಾಡಿದ.

ಇಂಗ್ಲೆಂಡಿನ ಯೂಫ್ಯೂಯಿಸಂ ಇಟಲಿಯ ಷಿಯಾಬ್ರೆಸೆರಿಂ ಶೈಲಿಯನ್ನೇ ಹೋಲುವ ಈ ನೂತನ ಕಾವ್ಯಪದ್ಧತಿಯನ್ನು ಕಲ್ಚೆರಾನಿಸ್ಮೊ ಅಥವಾ ಸ್ಟೈಲೊಕಲ್ಟೊ ಎಂದು ಕರೆದರು. ಅತಿಯಾದ ಶಬ್ದಾಡಂಬರ, ಲ್ಯಾಟಿನ್ ಭೂಯಿಷ್ಠವಾದ ಭಾಷೆ, ಮಾತು ಮಾತಿಗೆ ಪೌರಾಣಿಕ ಪೂರ್ವವೃತ್ತಾಂತಗಳ ಸೂಚನೆ, ಅಸ್ಪಷ್ಟತೆ ಮುಂತಾದ ಲಕ್ಷಣಗಳಿಂದ ಕೂಡಿದ ಈ ಕಾವ್ಯಮಾರ್ಗ ಕೃತಕವೂ ಬುದ್ಧಿಚಮತ್ಕಾರ ಪ್ರದರ್ಶಕವೂ ಆಗಿತ್ತು. ರಸ–ಭಾವಗಳಿಗಿರುವ ಪ್ರಾಶಸ್ತ್ಯ ಮಾಯವಾಗಿ ಕೇವಲ ರಚನಾ ಕೌಶಲಕ್ಕೇ ಇಲ್ಲಿ ಮನ್ನಣೆ. ಈ ಕಾವ್ಯರೀತಿಯ ಸುಳುಹು 16ನೆಯ ಶತಮಾನದ ಕೆಲವು ಕಾವ್ಯಗಳಲ್ಲಿ ಅಲ್ಲಲ್ಲಿ ಕಂಡುಬಂದರೂ ಗೊಂಗೊರಾ ಕವಿಯ ಪ್ರತಿಭೆಯ ಮೂಸೆಯಲ್ಲಿ ಇದು ಹೊಚ್ಚ ಹೊಸದೆಂಬಂತೆ, ಈತನ ವಿಶಿಷ್ಟ ಸೃಷ್ಟಿಯೆಂಬಂತೆ ಕಂಗೊಳಿಸಿ ಗೊಂಗೊರಿಸಮ್ ಎಂದೇ ಹೆಸರಾಯಿತು. ಗೊಂಗೊರಾನ ಎಲ್ ಪಾಲಿಫಿಮೊ, ಲಾಸ್ ಸೋಲೆಡಾಡಿಸ್ ಎಂಬ ಮಹಾಕೃತಿಗಳು ಈ ಕಾವ್ಯ ಶೈಲಿಯ ಅತ್ಯುತ್ಕೃಷ್ಟ ಮಾದರಿಗಳಾಗಿವೆ. ಹಲವಾರು ಕಿರಿಯ ಕವಿಗಳು ಈ ಶೈಲಿಯ ಪ್ರಭಾವದಿಂದಾಕರ್ಷಿತರಾದುದು ಮಾತ್ರವಲ್ಲ 17ನೆಯ ಶತಮಾನದ ಸ್ಪ್ಯಾನಿಷ್ ಕಾವ್ಯದ ಮೇಲೆಲ್ಲ ಇದರ ಪ್ರಭಾವ ಬಿದ್ದಿತು. ಈ ಶೈಲಿಯನ್ನು ಕಟುವಾಗಿ ಖಂಡಿಸಿದ ವಿಮರ್ಶಕರೂ ಇದ್ದರು. ಹೀಗೆ ಈ ಕಾವ್ಯಪದ್ಧತಿ ತೀವ್ರವೂ ಕೋಲಾಹಲಕರವೂ ಆದ ವಿವಾದವನ್ನೇ ಎಬ್ಬಿಸಿತು. 18ನೆಯ ಶತಮಾನದಲ್ಲಿಯಾದರೊ ಈ ಶೈಲಿಯ ಕಾವ್ಯಕ್ಕೆ ಮನ್ನಣೆಯೇ ಇಲ್ಲವಾಯಿತು. ಸುಮಾರು 2 ಶತಮಾನಗಳ ಕಾಲ ಗೊಂಗೊರಾನ ಕಾವ್ಯಗಳು ಅವಜ್ಞೆಯ ಕಂದರದಲ್ಲಿ ಬಿದ್ದುಹೋದವು. 1927ರಲ್ಲಿ ಡಮಾಸೊ ಅಲೆನ್ಸೊ ಎಂಬ ಸಾಹಿತ್ಯ ವಿದ್ವಾಂಸ ಸೋಲೆಡಾಡಿಸ್ ಕೃತಿಯನ್ನು ಸಂಪಾದಿಸಿ ಅದಕ್ಕೊಂದು ದೀರ್ಘವಾದ ವಿಮರ್ಶಾತ್ಮಕ ಮುನ್ನುಡಿ ಬರೆದು, ಅನುಬಂಧದಲ್ಲಿ ಕಾವ್ಯದ ತಾತ್ಪರ್ಯವನ್ನು ಸರಳವಾದ ಗದ್ಯದಲ್ಲಿ ಕೊಟ್ಟು ಪ್ರಕಟಿಸಿದ ಅನಂತರ ಗೊಂಗೊರಾನ ಹಿರಿಮೆ ಪುನಃ ಪ್ರತಿಷ್ಠಾಪಿತವಾಯಿತು. ಗೊಂಗೊರಾ ಸ್ಪೇನಿನ ಹಿರಿಯ ಕವಿಗಳ ಸಾಲಿಗೆ ಸೇರತಕ್ಕವ. ಈತನ ಕಾವ್ಯ ಕ್ಲಿಷ್ಟವಾಗಿರಬಹುದೇ ವಿನಾ ಎಲ್ಲಿಯೂ ನೀರಸವಾಗಿಲ್ಲ. ಈತನ ಶೈಲಿ ಶುದ್ಧವಾದುದು.

ಪಾಲಿಫಿಮೊ, ಸೋಲೆಡಾಡಿಸ್ ಕಾವ್ಯಗಳಲ್ಲಿ ಮಹಾಕಾವ್ಯದ ಅಂಶಗಳೂ ಕುರಿಗಾಹಿ ಕಾವ್ಯ (ಪ್ಯಾಶ್ಟೊರಲ್ ಪೊಯೆಟ್ರಿ) ಸಂಕೇತಗಳೂ ಸೇರಿವೆ. ನಿರ್ದಿಷ್ಟವಾದ ವಸ್ತುವಾಗಲೀ ಭಾವದ ಅಂಶವಾಗಲೀ ಇಲ್ಲದಿದ್ದರೂ ಕವಿಯ ಅದ್ಭುತವಾದ ವರ್ಣನಾಚಾತುರ್ಯ ದಿಂದಾಗಿ ಪಾತ್ರ, ಸನ್ನಿವೇಶ, ನಿಸರ್ಗ ಜೀವದುಂಬಿ ನಿಲ್ಲುತ್ತವೆ. ಕಾವ್ಯದ ಉದ್ದಕ್ಕೂ ಇಂಪಾದ ಸಂಗೀತದ ಲಯ ಕಾಣುತ್ತದೆ.

ಸೋಲೆಡಾಡಿಸ್ ಕಾವ್ಯದಲ್ಲಿ ತೆರೆಯುವ ಅಚ್ಚನಾಗರಿಕ ಲೋಕ, ಪಾಲಿಫಿಮೊ ಕಾವ್ಯದಲ್ಲಿ ಬರುವ ನಶ್ವರವಾದರೂ ತೀವ್ರ ಸಂವೇದನೆಯಿಂದ ಪುಷ್ಟಿಗೊಳ್ಳುವ ಐಹಿಕ ಸುಖದ ವರ್ಣನೆ ಸ್ಪೇನಿನ ಸಾಹಿತ್ಯಕ್ಕೆ ಕವಿಯ ಅಪೂರ್ವವಾದ ಕಾಣಿಕೆಗಳಾಗಿವೆ.

ಪ್ರಯೋಗ ಸಾಧ್ಯವಲ್ಲದ ಮೂರು ನಾಟಕಗಳು, ಪಿರಮೊ ಇ ಥಿಸ್ಬಿ ಎಂಬ ಕೃತಿ, ಅಮೂಲ್ಯವಾದ ಪತ್ರಗಳ ಒಂದು ಸಂಕಲನ–ಇವು ಈತನ ಇತರ ಕೃತಿಗಳು. ಈತನ ಕಾವ್ಯವನ್ನು ಕುರಿತು ಬೆಳೆದಿರುವ ವಿಮರ್ಶೆ ಹಾಗೂ ವಿವಿಧ ವ್ಯಾಖ್ಯಾನ ಸಾಹಿತ್ಯ–ಗ್ರಂಥಗಳು ಅಲಕ್ಷಿಸಲಾಗದಷ್ಟು ಸತ್ತ್ವಯುತವಾಗಿವೆ.

1626ರಲ್ಲಿ ಪಾರ್ಶ್ವವಾಯುಪೀಡಿತನಾಗಿ ಮ್ಯಾಡ್ರಿಡ್‌ನಿಂದ ಕಾರ್ಡೊಬಕ್ಕೆ ಹಿಂತಿರುಗಿದ ಕವಿ ಒಂದು ವರ್ಷ ಕಾಲ ನರಳಿ ಮರಣ ಹೊಂದಿದ. (ಕೆ.ಬಿ.ಪಿ.)

**ಗೊಂಡಲ್ :** ಭಾರತದ ಒಂದು ಮಾಜಿ ದೇಶೀಯ ಸಂಸ್ಥಾನ; ಅದರ ರಾಜಧಾನಿಯಾಗಿದ್ದ ಪಟ್ಟಣ. ಈಗ ಗುಜರಾತ್ ರಾಜ್ಯದ ರಾಜಕೋಟೆ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಅದರ ಕೇಂದ್ರ. ಸಂಸ್ಥಾನದ ವಿಸ್ತೀರ್ಣ 1,024 ಚ.ಮೈ. 1941ರ ಗಣತಿಯ ಪ್ರಕಾರ ಅದರ ಜನಸಂಖ್ಯೆ 2,44,514 ಇತ್ತು. ಇಲ್ಲಿ ಗೊಂಡಲ್ ಮತ್ತು ಪಾನೇಲೀ ಎಂಬ ಎರಡು ಸರೋವರಗಳಿವೆ. ಹತ್ತಿ ಮತ್ತು ಉಣ್ಣೆ ಜವಳಿ, ಜರಿ, ಪಾತ್ರೆ, ಮರದ ಆಟಿಗೆ, ದಂತದ ಬಳೆ ಮುಂತಾದ ಪದಾರ್ಥಗಳು ತಯಾರಾಗುತ್ತವೆ. ಎಣ್ಣೆಯ, ಹಿಟ್ಟಿನ ಮತ್ತು ಹತ್ತಿಯ ನೂಲಿನ ಗಿರಣಿಗಳೂ ಮುದ್ರಣಾಲಯಗಳೂ ಬೆಂಕಿಪೆಟ್ಟಿಗೆಯ ಮತ್ತು ಚರ್ಮದ ಕಾರ್ಖಾನೆಗಳೂ ಇವೆ. ಹಿಂದೆ ಸಂಸ್ಥಾನದಲ್ಲಿ 172 ಪ್ರಾಥಮಿಕ ಶಾಲೆಗಳು, 2 ಪ್ರೌಢಶಾಲೆಗಳು, ಒಂದು ಕಾಲೇಜು ಇದ್ದವು. ಪ್ರಾಥಮಿಕ ಹಾಗೂ ಉಚ್ಚಶಿಕ್ಷಣಗಳು ಉಚಿತವಾಗಿದ್ದವು. ಕಡ್ಡಾಯ ಶಿಕ್ಷಣ, ಸ್ತ್ರೀ ಶಿಕ್ಷಣ ಜಾರಿಯಲ್ಲಿದ್ದವು. ಆಗಿನ ಸಂಸ್ಥಾನದ ವಾರ್ಷಿಕ ಹುಟ್ಟುವಳಿ 60 ಲಕ್ಷ ರೂ. ಅದು ಬ್ರಿಟಿಷರಿಗೆ ವರ್ಷಕ್ಕೆ 1,10,721 ರೂ. ಕಪ್ಪ ಕೊಡಬೇಕಾಗಿತ್ತು. ಗೊಂಡಲ್ ಸಂಸ್ಥಾನವನ್ನಾಳುತ್ತಿದ್ದ ರಾಜ ರಜಪೂತವಂಶಸ್ಥ. ಆತನ ಮೂಲ ಪುರುಷ 17ನೆಯ ಶತಮಾನದ ಕುಂಭೋಜಿ. 1807ರಲ್ಲಿ ಬ್ರಿಟಿಷರೊಂದಿಗೆ ಆಗಿನ ರಾಜ ಸಂಧಿ ಮಾಡಿಕೊಂಡಿದ್ದ.

ಗೊಂಡಲ್ ಪಟ್ಟಣ ಗೊಂಡಲೀ ನದಿಯ ಪಶ್ಚಿಮ ದಡದಲ್ಲಿ ಉ.ಅ. $21^0$, 58' ಮತ್ತು ಪೂ.ರೇ. $70^0$, 48' ಮೇಲೆ ಇದೆ. ಜನಸಂಖ್ಯೆ 95,991 (2001). ಇದರ ನಾಲ್ಕು ಮೂಲೆಗಳಲ್ಲಿ ಬುರುಜುಗಳನ್ನೂ ಸುತ್ತ ಕೋಟೆಗೋಡೆಯ ಅವಶೇಷಗಳನ್ನೂ ಕಾಣಬಹುದು. ಇಲ್ಲಿರುವ ನೌಲಾಖಾ ಅರಮನೆ 17ನೆಯ ಶತಮಾನದ್ದಾಗಿದ್ದು ಇದರ ವಾಸ್ತುಶಿಲ್ಪ ಬಹು ಸುಂದರವಾಗಿದೆ. (ಎನ್.ಆರ್.ಜಿ.)

**ಗೊಂದಲಿಗರು :** ಅಂಬಾಭವಾನಿಯ ಹೆಸರಿನಲ್ಲಿ ಗೊಂದಲ ಹಾಕುವ ಜನರನ್ನು ಈ ಹೆಸರಿನಿಂದ ಕರೆಯುತ್ತಾರೆ. ಗೋಂಧಳಿ, ಗೊಂದಲಿ ಎಂಬುವು ಗೊಂದಲ ಎಂಬ ಪದಕ್ಕೆ ಇರುವ ಇತರ ರೂಪಗಳು. ಈ ಜನ ಮಹಾರಾಷ್ಟ್ರದವರು. ಜಮದಗ್ನಿ ಮತ್ತು ಆತನ ಪತ್ನಿ ರೇಣುಕ ಈ ಪಂಗಡದವರ ಸ್ಥಾಪಕರೆಂದು ಪ್ರತೀತಿ. ಇವರು ಶಿವಾಜಿಯ ಗೂಢಚಾರರಾಗಿ, ಭಿಕ್ಷುಕರಂತೆ ವೇಷಧಾರಿಗಳಾಗಿ ಮುಸಲ್ಮಾನರ ರಾಜ್ಯವಾಗಿದ್ದ ಬಿಜಾಪುರಕ್ಕೆ ಬಂದರು. ಅಲ್ಲಿನ ಪರಿಸ್ಥಿತಿಯಿಂದಾಗಿ ಇವರು ತಮ್ಮ ವೇಷವನ್ನೇ ಜೀವನಾಧಾರವನ್ನಾಗಿ ಮಾಡಿಕೊಳ್ಳಬೇಕಾಯಿತು.



ಗೊಂದಲಿಗರ ಮೇಳ

ಅಂಬಾಭವಾನಿ (ತುಳುಜಾಭವಾನಿ) ಇವರ ಕುಲದೇವತೆ. ಮಹಾರಾಷ್ಟ್ರದ ತುಳಜಾಪುರ ಈ ದೇವತೆಯ ಮೂಲಸ್ಥಾನ.

ಗೊಂದಲಿಗರಲ್ಲಿ ಎರಡು ಗೋತ್ರಗಳಿವೆ : ಸ್ವಗೋತ್ರ ಮತ್ತು ಭಿನ್ನಗೋತ್ರ. ಸ್ವಗೋತ್ರದ ಗುಂಪು ಬ್ರಾಹ್ಮಣ, ಧಾನಗಾರ, ಮರಾಠಾ, ಕಂಭಾರ, ಕದಮ್‌ರಾಮ್, ರೇಣುಕ್‌ರಾಮ್, ಮಾಲಿ, ಅಕರ್ಮಾಸೆ – ಎಂಬ ಎಂಟು ಗುಂಪುಗಳಾಗಿವೆ. ಭಿನ್ನ ಗೋತ್ರ ಪವಾರ್, ಗಾಯಕವಾಡ ಮೊದಲಾಗಿ ಹನ್ನೆರಡು ರೀತಿಯಾಗಿ ಒಡೆದಿದೆ.

ಗಂಡುಮಕ್ಕಳ ಉಡುಗೆತೊಡುಗೆ ಸಾಮಾನ್ಯವಾದುದು. ಅಂಗಿ ಇಲ್ಲವೆ ಜುಬ್ಬ, ಕಚ್ಚೆಪಂಚೆ ಇಲ್ಲವೆ ಪೈಜಾಮ, ತಲೆಗೆ ಸುಮಾರು ಹನ್ನೆರಡು ಅಡಿಗಳಿಗೂ ಹೆಚ್ಚಿನ ನೀಳವಾದ ಬಟ್ಟೆರುಮಾಲು (ಮುಂಡಾಸು) ಇಲ್ಲವೆ ಟೋಪಿ, ಕೈಬೆರಳಲ್ಲಿ ಉಂಗುರ, ಕೊರಳಿನಲ್ಲಿ ಚಿನ್ನದಸರ ಇರುವುದುಂಟು. ಹೆಣ್ಣುಮಕ್ಕಳು ಸಾದಾ ಸೀರೆ ರವಿಕೆ ತೊಡುತ್ತಾರೆ. ಹೆಂಗಸರು ಕಚ್ಚೆ ಹಾಕುವುದು ರೂಢಿ. ಇವರ ಆಭರಣಗಳು ಬಹಳ ವಿಶಿಷ್ಟವಾದವು. ತಲೆಗಂಟಿನ ಜಾಗದಲ್ಲಿ ಗಜರ; ಮೂಗಿನಲ್ಲಿ ನತ್ತು; ಕಿವಿಯ ಮೇಲೆ ಬುಗುಡಿ; ಕೆಳಗೆ ಹೂ; ಕೊರಳಿನಲ್ಲಿ ಗುಂಡಿನ ಸರ, ಚಪ್ಪಲ ಹಾರ, ಬೋರುಮಾಳ, ತಾಂಡಳೀಪೂರ್, ಮುತ್ತಳೀಸರ, ತಾಳಿ ಸಾಮಾನು, ಕೋಯಿ, ವಜ್ರಟಿಕ್ಕಿ; ಗೆಜ್ಜೆಟಿಕ್ಕಿ; ತೋಳಿಗೆ ತೋಳುಬಂದಿ, ಪಾಟ್ಲಿ, ಬಿಲ್ವರ್, ಬಳೆ; ಸೊಂಟಕ್ಕೆ ಡಾಬು; ಕಾಲಿಗೆ ತೋಡೆ, ಪೈಜಾಮ್, ಕಾಲುಂಗುರ, ಕಾಲುಮಚ್ಚಿ ಗೇಂಡು.

ಗೊಂದಲಿಗರಲ್ಲಿ ಮಹಾಶಕ್ತಿದೇವತೆಯೊಂದುಂಟು. ಸಟವೈ ಎಂದು ಅದರ ಹೆಸರು. ಮಗುವಿನ ಹಣೆಯ ಮೇಲೆ ಒಳ್ಳೆಯದನ್ನು ಬರೆಯಲಿ ಎಂದು ಆ ದೈವವನ್ನು ಪೂಜಿಸುತ್ತಾರೆ. ಮಗು ಜನನವಾದ ಐದು ದಿನಕ್ಕೆ ಆಚರಿಸುವ ಪೂಜೆಗಳನ್ನು ಐದ್ವೀಶಿ ಎನ್ನುತ್ತಾರೆ. ಮಗು ಹುಟ್ಟಿದ ಹನ್ನೆರಡನೆಯ ದಿನ ತೊಟ್ಟಿಲಿಗೆ ಹಾಕುವುದು, ಹೆಸರಿಡುವುದು, ಜೋಗುಳ ಹಾಡುವುದು ರೂಢಿಯಲ್ಲಿದೆ.

ಲಗ್ನವಾದ ಹೆಣ್ಣು ಮೈನೆರೆದಾಗ ಅವಳ ಪತಿಗೆ ಬಣ್ಣ ಎರಚುವುದು (ರಂಗು ಹಲ್ದಾತ್) ಉಂಟು. ಮಕರ (ಮೈನೆರೆದ ಹೆಣ್ಣನ್ನು ಕೂಡಿಸುವ ಪ್ರತ್ಯೇಕವಾದ ಗುಡಿಸಲು) ಬಿಟ್ಟು ಹೆಣ್ಣು ಹೊರಗೆ ಬರುವತನಕ ಗಂಡಿನ ಮೈಮೇಲೆ ಬಣ್ಣ ಇರಬೇಕಾಗುತ್ತದೆ. ಬಟ್ಟೆ ಬದಲಾಯಿಸಿದರೆ ಮತ್ತೆ ರಂಗು ಹಾಕುತ್ತಾರೆ.

ಗೊಂದಲಿಗರಲ್ಲಿ ಮೊದಮೊದಲು ತೊಟ್ಟಿಲುವಿವಾಹ, ಬಾಲ್ಯವಿವಾಹ ಇದ್ದುವು. ಈಗ ವಧುವಿಗೆ ಏಳೆಂಟು ವರ್ಷಗಳಾದ ಮೇಲೆ ಲಗ್ನ ಮಾಡುವುದು ಬಳಕೆಯಲ್ಲಿದೆ.

ಇವರಲ್ಲಿ ಲಗ್ನವಾಗುವಾಗ ವೀಳ್ಯದ ಶಾಸ್ತ್ರ ಇಟ್ಟುಕೊಳ್ಳುತ್ತಾರೆ. ಲಗ್ನದ ದಿನವನ್ನು ಗೊತ್ತುಮಾಡುತ್ತಾರೆ. ಮೂರು ದಿನಗಳ ಲಗ್ನ ಇವರಲ್ಲಿ ಉಂಟು. ಮೊದಲ ದಿನ ಹಸುರು ಚಪ್ಪರದಲ್ಲಿ ನೆರೆದಿರುವವರಿಗೆ ಕುಂಕುಮದಿಂದ ಹೆಬ್ಬೆಟ್ಟು ಗಾತ್ರದ ನಾಮ ಬಳಿಯುತ್ತಾರೆ. ಅಕ್ಕಿಯೊಂದಿಗೆ ಜೋಳ ಬೆರೆಸಿದ ಅಕ್ಷತೆಯನ್ನು ಎಲ್ಲರ ಕೈಗೂ ಹಂಚುತ್ತಾರೆ. ಅವರಲ್ಲಿ ಒಬ್ಬ ಮಂತ್ರ ಹೇಳುತ್ತ ತಾಳಿ ಕಟ್ಟಿಸುತ್ತಾನೆ. ಎರಡನೆಯ ದಿನ ಸೊಲಿಗೆ ನೀರಿನ ಸ್ನಾನದ ಕಾರ್ಯಕ್ರಮ ಇರುತ್ತದೆ. ಸ್ನಾನ ಆದಮೇಲೆ ಮೈ ಒರೆಸಿಕೊಳ್ಳುವ ಮುಂಚೆಯೇ ಚಂಡಾಡುವ ಶಾಸ್ತ್ರ ಮಾಡುತ್ತಾರೆ. ಆ ಚಂಡುಗಳು ಬೇವಿನ ಸೊಪ್ಪಿನಿಂದ ಆದವು. ಉಳಿದ ಶಾಸ್ತ್ರಗಳು ಮಾಮೂಲಿನಂತೆ.

ಗೊಂದಲಿಗರಲ್ಲಿ ಏನಾದರೂ ಜಗಳವಾದರೆ ಫಿರ್ಯಾದಿ ಓಣಿಯ ಜನಕ್ಕೆ ತಿಳಿಸುತ್ತಾನೆ. ಆಗ ಪಂಚರು ಸೇರಿ ನ್ಯಾಯಕ್ಕೆ ಕೂರುತ್ತಾರೆ. ಏನಿದ್ದರೂ ಆ ಜಗಲಿಯಲ್ಲಿ, ಅವರ ಮುಂದೇ ಇತ್ಯರ್ಥವಾಗಬೇಕು. ಕೋರ್ಟಿಗೆ ಹೋಗುವ ಸಂದರ್ಭಗಳು ಅಪರೂಪ. ತಪ್ಪಿತಸ್ಥನಿಗೆ ದಂಡ ವಿಧಿಸಲಾಗುತ್ತದೆ. ದಂಡ ಕೊಡದವರಿಗೆ ಇವರ ಸಮಾಜದಲ್ಲಿ ಯಾವ ಸ್ಥಾನವೂ ಇರುವುದಿಲ್ಲ.

ಗೊಂದಲಿಗರಲ್ಲಿ ಲಗ್ನವಾದವರು ಮಾತ್ರ ಹೆಣ ಹೊರುವ, ಸಂಸ್ಕಾರ ಮಾಡುವ ಹಕ್ಕು ಪಡೆದಿರುತ್ತಾರೆ. ಲಗ್ನವಾದವರು ಸತ್ತರೆ ಎಷ್ಟೇ ಚಿಕ್ಕ ಪ್ರಾಯದವರಿದ್ದರೂ ಸುಡುತ್ತಾರೆ. ಲಗ್ನವಾಗದೆ ಸತ್ತ ಹೆಣವನ್ನು ಎಕ್ಕದ ಗಿಡದೊಂದಿಗೆ ಲಗ್ನಮಾಡುತ್ತಾರೆ. ಇನ್ನೂ ಲಗ್ನವಾಗದ, ಹನ್ನೆರಡು ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಸತ್ತರೆ ಅಂಥವರನ್ನು ಹುಗಿಯುತ್ತಾರೆ. ಮಕ್ಕಳು ಸತ್ತರೆ ಮೊರವನ್ನು ಉಪಯೋಗಿಸದೆ ಕೈಗಳಿಂದಲೇ ಅವನ್ನು ಒಯ್ದು ಶ್ಮಶಾನದಲ್ಲಲ್ಲದೆ ಬೇರೆ ಜಾಗದಲ್ಲಿ ಹೂಳುತ್ತಾರೆ.

ಎಲ್ಲ ಹಬ್ಬಗಳನ್ನು ಇವರು ಆಚರಿಸುತ್ತಾರೆ. ಮೊಹರಂ ಮತ್ತು ಹೋಳಿ ಹಬ್ಬಗಳೂ ಇವರಲ್ಲಿ ಉಂಟು. ಈ ಎರಡು ಹಬ್ಬಗಳಲ್ಲಿ ಕಟ್ಟುವ ವೇಷಕ್ಕೆ ಸೋಂಗು ತೆಗೆಯುವುದು ಎಂದು ಕರೆಯುತ್ತಾರೆ. ಹಣ ಸಂಪಾದನೆಯೇ ಇಲ್ಲಿ ಮುಖ್ಯವಾದುದು. ದೀಪಾವಳಿಯಲ್ಲಿ ಲಕ್ಷ್ಮೀಪೂಜೆ ಮಾಡುತ್ತಾರೆ. ಆಷಾಢದ ಕೊನೆಯಲ್ಲಿ ಇಲ್ಲವೆ ಶ್ರಾವಣದ ಮೊದಲಲ್ಲಿ ನಡೆಯುವ ದುರ್ಗವ್ವನ ಹಬ್ಬ ಇವರಿಗೆ ಮುಖ್ಯವಾದುದು.

ಗೊಂದಲ ಹಾಕುವುದು ಸಾಮಾನ್ಯವಾಗಿ ಅಂಬಾಭವಾನಿಯ ಮುಂದೆ. ದೇವಿಯ ಗುಡಿಯ ಮುಂದೆ ಅದು ನಡೆಯುತ್ತದೆ. ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅಂಬಾಭವಾನಿಯ ಒಕ್ಕಲವರು ತಮ್ಮ ಮನೆಗಳಲ್ಲಿ ಗೊಂದಲ ಹಾಕಿಸುವ ಪದ್ಧತಿ ಉಂಟು. ಗೊಂದಲ ಪ್ರಾರಂಭವಾಗುತ್ತಿದ್ದಂತೆ ನೆಲದ ಮೇಲಿದ್ದ ಸಂಬಾಳ (ಜೋಡಿ ತಬಲಗಳು) ಹೆಗಲೇರುತ್ತದೆ. ಚೌಡಿಕೆ ಶ್ರುತಿಗೊಳ್ಳುತ್ತದೆ. ಪತ್ತ ಕೈ ಸೇರುತ್ತದೆ. ಮುಂಡಾಸು ಕಚ್ಚೆಗಳು ಬಿಗಿಗೊಳ್ಳುತ್ತವೆ. ಮೊದಲು ಬರುವ ಸ್ವರವೇ ಚೌಡಿಕೆಯದು. ಈ ಮೇಳದಲ್ಲಿ ಮೂರು ಜನ ಇರುತ್ತಾರೆ. ಪತ್ತ ಹಾಕುವವನೇ ಕಥೆಗಾರ. ಗಣಪತಿ ಸ್ತೋತ್ರದಿಂದ ಗೊಂದಲ ಪ್ರಾರಂಭವಾಗುತ್ತದೆ. ಅನಂತರ ದೇವೀಸ್ತೋತ್ರ. ಕನ್ನಡ ಮತ್ತು ಮರಾಠಿ ಭಾಷೆಗಳೆರಡರಲ್ಲೂ ಈ ಸ್ತೋತ್ರವನ್ನು ನಾನಾಗತ್ತಿನಲ್ಲಿ ಹೇಳುತ್ತಾರಾದರೂ ಮರಾಠಿ ಬಳಕೆಯೇ ಹೆಚ್ಚು. ಗೊಂದಲದ ಲಾವಣಿಗಳು ವೀರರಸ ಪ್ರಧಾನವಾದವು. ಅನೇಕ ದೇಶಭಕ್ತರ ಕಥೆಗಳು ಅವುಗಳಲ್ಲಿ ಬರುತ್ತವೆ. ಈ ಭಕ್ತರು ಮೈಮರೆತು ಕುಣಿಯುವ ನೃತ್ಯ ರೋಮಾಂಚಕಾರಿಯಾದುದು. ತಮ್ಮ ವಾದ್ಯಗಳಿಂದ ಹೊರಹೊಮ್ಮುವ ಸ್ವರದ ರೂಪದಲ್ಲಿ ತಮ್ಮ ಆರಾಧ್ಯದೈವ ಪ್ರತ್ಯಕ್ಷಗೊಂಡಿತು ಎಂದವರು ನಂಬುತ್ತಾರೆ. ಮೇಳ ಬೆಳಕು ಹರಿಯುವ ತನಕ ನಡೆಯುತ್ತದೆ. ಆದಕಾರಣ ಕಥೆಯ ವಿಸ್ತಾರಕ್ಕೆ ಸಮವಾಗಿ ಅಲ್ಲಿ ಸ್ತೋತ್ರಗಳ, ಮನೋರಂಜನೆಗಾಗಿ ಹಾಡುವ ಲಾವಣಿಗಳ ಸಂಖ್ಯೆಯನ್ನು ಅಳವಡಿಸಲಾಗುತ್ತದೆ.

ಗೊಂದಲಿಗರಿಗೆ ನಾಗರಿಕ ಸಂಪರ್ಕ ಉಂಟಾಗುವ ಮುನ್ನ ಅವರು ಗೊಂದಲಕ್ಕೆಂದು ಬಳಸುತ್ತಿದ್ದ ವೇಷಭೂಷಣಗಳು ಹೀಗೆ ಇದ್ದವು; ಐವತ್ತು ಅರವತ್ತು ಅಡಿ ಉದ್ದದ ಬಟ್ಟೆಯ ಮುಂಡಾಸು, ಕಾಲತನಕ ಇರುವ ಉದ್ದನೆಯ ಅಂಗಿ, ಎದೆಯ ಮೇಲೆ ಕತ್ತರಿ ಆಕಾರದ ಕವಡೆಪಟ್ಟಿಗಳು, ಕವಡೆಪಟ್ಟಿಗಳ ನಡುವೆ ದೇವೀವಿಗ್ರಹ, ನಡುವಿಗೆ ಕವಡೆಪಟ್ಟಿ, ಕಾಲಿಗೆ ಗೆಜ್ಜೆ. ಈಗಲೂ ವಿಶೇಷ ಸಂದರ್ಭಗಳಲ್ಲಿ ಈ ವೇಷದಲ್ಲೇ ಗೊಂದಲ ಹಾಕುತ್ತಾರೆ. ಈಗ ಸಾಮಾನ್ಯವಾಗಿ ದೈನಂದಿನ ವೇಷದಲ್ಲೇ ಗೊಂದಲ ನಡೆದುಹೋಗುತ್ತದೆ.

ಬಹುಪಾಲು ಗೊಂದಲಿಗರು ಈಗ ಬಿಜಾಪುರ, ಬೆಳಗಾವಿ, ಧಾರವಾಡ, ಶಿವಮೊಗ್ಗ, ಗುಲ್ಬರ್ಗ, ಬಿದರೆ, ಬಳ್ಳಾರಿ, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. (ಪಿ.ಆರ್.ಟಿ.)

**ಗೊಂಬೆಗಳು :** ಆಟಿಕೆಗಳಲ್ಲಿ ಬಹು ಮುಖ್ಯವಾದ ಒಂದು ವಿಭಾಗ. ಗೊಂಬೆಗಳಲ್ಲಿ ಮನುಷ್ಯರ ಆಕೃತಿಗಳಂತೆ ಮೃಗಪಕ್ಷಿ, ಗಿಡಮರಗಳ ಆಕೃತಿಗಳನ್ನೂ ಕಾಣಬಹುದು. ಜನಪದ ಸಾಹಿತ್ಯ ಮತ್ತು ವಸ್ತುಗಳ ಸಂಗ್ರಹಕಾರ್ಯ ನಡೆದಂತೆಲ್ಲ ಅತಿ ಹಿಂದಿನ ಕಾಲದ ಆಟಿಕೆಗಳನ್ನು ಉತ್ಖನನ ಮಾಡಿ ವಸ್ತುಸಂಗ್ರಹಾಲಯಗಳಲ್ಲಿ ಕೂಡಿಡುತ್ತ ಬಂದಿದ್ದಾರೆ.



**ಮೊಹೆಂಜೊದಾರೋದಲ್ಲಿ ದೊರೆತ ಮಕ್ಕಳ ಆಟದ ಗೊಂಬೆಗಳು: 1. ಮರದ ಕೊಂಬೆಯನ್ನೇರುತ್ತಿರುವ ಅಳಿಲು, 2. ಗಿಣಿ, 3. ಗಾಲಿಗಳಿದ್ದ ಪಾರಿವಾಳ, 4. ಗಾಲಿಗಳಿದ್ದ ಪಕ್ಷಿ, 5. ಕೋಳಿ, 6. ಕೀಲುಗಳಿದ್ದ ಬೊಂಬೆ, 7. ತಾಯಿಮಗು, 8. ನಾಯಿಮರಿ, 9. ಟಗರು**

ಗೊಂಬೆಗಳ ತಯಾರಿಕೆ ಭಾರತದ ಒಂದು ಪ್ರಾಚೀನ ಕೈಗಾರಿಕೆ ಎಂಬುದನ್ನು ಐತಿಹಾಸಿಕ ಸಂಶೋಧನೆಗಳು ತೋರಿಸಿಕೊಟ್ಟಿವೆ. ನಾಗರಿಕತೆಯ ಉಗಮವಾದಾಗಿನಿಂದಲೂ ಕುತೂಹಲಕಾರಿಯಾದ ಅನೇಕ ಗೊಂಬೆಗಳನ್ನು ಕಾಣಬಹುದಾಗಿದೆ. ತನ್ನ ಉದರ ಪೋಷಣೆಗೆ ಆದಿಮಾನವ ಬೇಟೆಯನ್ನು ಅವಲಂಬಿಸಬೇಕಾಯಿತಷ್ಟೆ. ಇದಕ್ಕಾಗಿ ಕೋಲುಗಳು, ಬಿಲ್ಲುಗಳು, ಅನೇಕ ಕಲ್ಲಿನ ಉಪಕರಣಗಳು ಮುಂತಾದವನ್ನು ಬಳಸುತ್ತಿದ್ದ. ತನ್ನ ಬಳಕೆಯ ವಸ್ತುಗಳ ಆಕೃತಿಯಲ್ಲೇ ತನ್ನ ಮಕ್ಕಳಿಗೆ ಆಟದ ವಸ್ತುಗಳನ್ನು ಆತ ಮಾಡಿಕೊಟ್ಟ. ಕಾಲಕ್ರಮಿಸಿದಂತೆ ಅವನ ಜೀವನದಲ್ಲಿ ಪರಿವರ್ತನೆಯಾಗುತ್ತ ಬಂದು ವ್ಯವಸ್ಥಿತವಾದ ಒಂದು ಬದುಕಿನ ಹಾದಿಯನ್ನು ಆತ ಕಂಡುಕೊಂಡಾಗ, ಮಡಕೆ, ಕುಡಿಕೆ ಮುಂತಾದ ಪದಾರ್ಥಗಳನ್ನೂ ಬಟ್ಟೆಬರೆಗಳನ್ನೂ ಲೋಹದ ವಸ್ತುಗಳನ್ನೂ ಬಳಸಲು ಅರಿತಾಗ, ಮಕ್ಕಳ ಆಟದ ಗೊಂಬೆಗಳಿಗೂ ಅದೇ ಆಕೃತಿಗಳು ದೊರೆತವು. ಪೂರ್ವ ಭಾವಿ ಇತಿಹಾಸ ಯುಗಕ್ಕೆ ಸೇರಿದ ಹರಪ್ಪ, ಮೊಹೆಂಜೊದಾರೋಗಳಲ್ಲಿ ದೊರೆತಿರುವ ಆಟದ ಸಾಮಾನುಗಳಲ್ಲಿ ಗೊಂಬೆಗಳಿಗೆ ಒಂದು ವಿಶಿಷ್ಟ ಪ್ರಾಮುಖ್ಯವಿದೆ.

ಅಲ್ಲಿನ ಗೊಂಬೆಗಳಲ್ಲಿ, ಹಾಸಿಗೆಯಲ್ಲಿ ಮಲಗಿಕೊಂಡ ಮಗುವೊಂದನ್ನು ಆರೈಕೆ ಮಾಡುತ್ತಿರುವ ಸ್ತ್ರೀಮೂರ್ತಿಯೊಂದು ತುಂಬ ಕುತೂಹಲಜನಕವಾಗಿದೆ. ಆ ಗೊಂಬೆಗೆ ಒಂದು ವಿಧವಾದ ಒಳಲಂಗವನ್ನು ತೊಡಿಸಿ ಒಂದು ವಿಚಿತ್ರವಾದ ಟೋಪಿಯನ್ನು

ಹಾಕಲಾಗಿದೆ. ಆಟದ ಗೊಂಬೆಗಳ ಸಮೂಹದಲ್ಲಿ ಪ್ರಾಣಿಗಳೂ ಇವೆ. ತಲೆಯನ್ನು ಅತ್ತಿಂದಿತ್ತ ಅಲ್ಲಾಡಿಸಬಲ್ಲ ಗೂಳಿಗಳು ದೊರೆತಿವೆ. ಹೀಗೆ ಅಲ್ಲಾಡಬಲ್ಲ ಅನೇಕ ಬಿಡಿ ತಲೆಗಳು ದೊರೆತಿವೆ. ಅನೇಕ ಪಕ್ಷಿರಥಗಳೂ ಮಣ್ಣಿನ ಟಗರುಗಳೂ ಸಿಕ್ಕಿವೆ. ಟಗರಿನ ಗೊಂಬೆಯ ಮೈಮೇಲಿನ ಉಣ್ಣೆಯನ್ನು ಸೂಚಿಸಲು ಕೆಂಪುವರ್ಣದ ಗೆರೆಗಳನ್ನು ಎಳೆಯಲಾಗಿದೆ. ಅದಕ್ಕೆ ದಾರ ಕಟ್ಟಿ ಎಳೆದಾಡುವ ಸಲುವಾಗಿ ಕತ್ತಿನಲ್ಲಿ ಒಂದು ಸಣ್ಣ ರಂಧ್ರವನ್ನು ಮಾಡಲಾಗಿದೆ. ಇವುಗಳ ಜೊತೆಗೆ ಸುಟ್ಟ ಜೇಡಿಮಣ್ಣಿನ ಗುಳಿಗೆಗಳಿರುವ ಮಣ್ಣಿನ ಗಿಲಿಕೆಗಳೂ ಕೋಳಿ ಹಾಗೂ ಪಾರಿವಾಳಗಳ ಆಕಾರದಲ್ಲಿರುವ ಪೀಪಿಗಳೂ ಮಣ್ಣಿನ ಚಕ್ರಗಳೂ ಶಂಖಗಳೂ ದೊರೆತಿವೆ. ಸುಟ್ಟಮಣ್ಣಿನ ಚಿಕ್ಕ ಆಟದ ಬಂಡಿಗಳು ಚನ್ಹುದಾರೋದಲ್ಲಿ ದೊರೆತವು. ಹರಪ್ಪದಲ್ಲಿ ಪುಟ್ಟ ತಾಮ್ರದ ಬಂಡಿ ಸಿಕ್ಕಿದೆ. ಅದಕ್ಕೆ ಒಂದು ಛತ್ರಿಯನ್ನು ಅಳವಡಿಸಲಾಗಿದೆ. ಆದರೆ ಬಂಡಿಯ ಚಕ್ರಗಳು ದೊರೆತಿಲ್ಲ. ಕೇವಲ ಎರಡು ಅಂಗುಲ ಎತ್ತರದ ಈ ಬಂಡಿಯ ಹಿಂದಿನ ಭಾಗಗಳು ತೆರೆದಂತಿದ್ದು ಎಡಬಲ ಪಕ್ಕಗಳು ಮುಚ್ಚಿವೆ. ಮುಂದೆ ಸಾರಥಿಯೂ ಇದ್ದಾನೆ.



ಗೃಹಾಲಂಕರಣದ ಒಂದು ಅಂಗವಾಗಿ, ಕಪಾಟಿನಲ್ಲಿ ಜೋಡಿಸಿರುವ ಗೊಂಬೆಗಳು

ಈ ಎಲ್ಲವುಗಳಲ್ಲಿಯೂ ಉನ್ನತ ಮಟ್ಟದ ಕಲೆಗಾರಿಕೆಯನ್ನು ಕಾಣಬಹುದು. ಗೊಂಬೆ ಮತ್ತು ಚೆಂಡುಗಳನ್ನು ಜೇಡಿಮಣ್ಣು ಮತ್ತು ಕಲ್ಲುಗಳಲ್ಲಿ ಮಾಡುತ್ತಿದ್ದರೆಂದು ಊಹಿಸಬಹುದು. ಮೊಹೆಂಜೊದಾರೋದಲ್ಲಿ ಜೀವಸದೃಶವಾಗಿರುವ ಕೆಲವು ಹುಂಜಗಳು ದೊರೆತಿವೆ. ಅಲ್ಲಿನ ಗೂಳಿಗಳೂ ಕೋಣಗಳೂ ಕಾಳಗಕ್ಕೆ ಸಿದ್ಧವಾದ ರೀತಿಯಲ್ಲಿ ನಿರ್ಮಿತವಾಗಿವೆ. ಒಂದು ಕಡೆ ಒಂದು ಕೋಣ ಅನೇಕ ಜನರನ್ನು ತಿವಿದು ಬೀಳಿಸಿರುವ ದೃಶ್ಯವೂ ದೊರೆಯುತ್ತದೆ.

ಹೀಗೆ ನಿರ್ದಿಷ್ಟವಾದ ಕೆಲವು ಕಾಲದಲ್ಲಿ ವಸ್ತು, ಕಲ್ಪನೆ ಮತ್ತು ಕಲೆಗಾರಿಕೆಗಳಲ್ಲಿ ಏಕಸೂತ್ರತೆ ಇರುವ ಗೊಂಬೆಗಳನ್ನು ಕಾಣಬಹುದು. ಈ ವಿಪುಲ ವಸ್ತುಗಳು ಭಾರತೀಯ ಸಂಸ್ಕೃತಿಯ ಒಂದು ನಿಧಿ ಎಂದೇ ಹೇಳಬೇಕು. ಪಟಣದ ಕುಮ್ರಹಾರ್, ಖಿಲಂದಿಬಾಗಿನ ಕದಮ್‌ಖಾನ್, ಬಿಹಾರದ ಮುಜಾಪಾವರ್, ಅಲಹಾಬಾದಿನ ಕೌಶಾಂಬಿ, ಶರಣ್ ಜಿಲ್ಲೆಯ ಬೆಲ್ಸಾ, ಕೊಲ್ಹಾಪುರ ಭಾಗದ ಬ್ರಹ್ಮಪುರಿ, ಕರ್ನಾಟಕದ ಬ್ರಹ್ಮಗಿರಿ–ಇಲ್ಲೆಲ್ಲ ಮಕ್ಕಳ ಆಟದ ವಿವಿಧ ರೀತಿಯ ಪ್ರಾಣಿಗಳು, ಹಕ್ಕಿಗಳು, ಗಾಡಿಗಳು, ವರ್ಣರಂಜಿತ ಕುಡಿಕೆಗಳು, ಗೋಲಿಗಳು ಮುಂತಾದವು ದೊರೆತಿವೆ. ಈ ವಸ್ತುಗಳಲ್ಲಿ ಆಯಾ ಪ್ರದೇಶದ ಒಂದೊಂದು ವೈಲಕ್ಷಣ್ಯವನ್ನು ಕಾಣಬಹುದು. ಕೆಲವು ಕಡೆಗಳಲ್ಲಿನ ಗೊಂಬೆಗಳಲ್ಲಿ ಅಷ್ಟು ನಯ, ನಾಜೂಕು ಇಲ್ಲದಿರುವ ನಿದರ್ಶನಗಳೂ ಉಂಟು.

ಗೊಂಬೆಗಳ ತಯಾರಿಕೆಯಲ್ಲಿ ವಿವಿಧ ಮಾಧ್ಯಮಗಳನ್ನು ಕಾಣಬಹುದು. ಎಷ್ಟೋ ವೇಳೆ ಜೇಡಿಮಣ್ಣನ್ನು ಒಣ ಹುಲ್ಲಿನೊಡನೆ ಬೆರಸುತ್ತಿದ್ದರು. ಮೊದಲು ಸುಣ್ಣವನ್ನು ಲೇಪಿಸಿ, ಅನಂತರ ಕೆಮ್ಮಣ್ಣನ್ನು ಬಳಿದ ಗೊಂಬೆಗಳೂ ಇವೆ. ಕೆಲವು ಕಂದು ಹಾಗೂ ಕಪ್ಪು ಜೇಡಿಮಣ್ಣಿನಿಂದ ತಯಾರಾದವು. ಬಡವ ತನ್ನ ಶಿಲ್ಪಸಿದ್ಧಿಯನ್ನು ಮೆರೆಯಬಲ್ಲ ಏಕೈಕ ಸಾಧನವಾದ ಜೇಡಿಮಣ್ಣಿನಲ್ಲಿ ಹೆಚ್ಚು ಗೊಂಬೆಗಳು ನಿರ್ಮಿತವಾಗಿವೆ. ಗಾಜು, ಕಲ್ಲು, ಕಂಚು, ತಾಮ್ರ ಮತ್ತು ಮರಗಳನ್ನು ಬಳಸಿರುವ ನಿದರ್ಶನಗಳೂ ಉಂಟು.

ಪಾಟ್ನ ವಸ್ತುಸಂಗ್ರಹಾಲಯದಲ್ಲಿ ಈ ಬಗೆಯ ಅನೇಕ ಮಾದರಿಗಳನ್ನು ಕಾಣಬಹುದು. ವಸ್ತು, ರೀತಿ, ಶೈಲಿಗಳೊಂದೊಂದರಲ್ಲೂ ವೈಶಿಷ್ಟ್ಯದಿಂದ ಕೂಡಿದ ಅನೇಕ ಅಪೂರ್ವ ಗೊಂಬೆಗಳನ್ನು ಅಲ್ಲಿ ಸಂಗ್ರಹಿಸಲಾಗಿದೆ. ಶುಂಗ, ಕುಶಾನ ಮತ್ತು ಸಾತವಾಹನರ ಕಾಲಕ್ಕೆ ಸೇರಿದ ವಸ್ತುಗಳೂ ಅಲ್ಲುಂಟು. ದಖನ್ ಪ್ರದೇಶದ ಬ್ರಹ್ಮಪುರಿಯ ಕಂಚಿನ ಗಾಡಿಗಳನ್ನೂ ನರ್ಮದಾತೀರದ ಮಹೇಶ್ವರ ಮುಂತಾದ ಮಧ್ಯಪ್ರದೇಶಕ್ಕೆ ಸೇರಿದ ನೆಲೆಗಳ ಕೆಲವು ಪ್ರಾಣಿಗಳ ಗೊಂಬೆಗಳನ್ನೂ ಅಲ್ಲಿ ನೋಡಬಹುದು.

ಮೆದು ಕಲೆಯಲ್ಲಿ ಕಲಾವಿದರು ಶೀಘ್ರ ಕರಕೌಶಲ ಮತ್ತು ವ್ಯಕ್ತಿತ್ವ ಪ್ರದರ್ಶನಕ್ಕೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಅಲಂಕಾರ ವಿಷಯಗಳಲ್ಲಿ ರೇಖೆಯ ಸೌಂದರ್ಯ ಮತ್ತು ಆಕೃತಿಗಳಲ್ಲಿ ಆಭರಣದ ಬೆಡಗುಗಳನ್ನು ತರಲು ಯತ್ನಿಸಬೇಕಾಗುತ್ತದೆ. ಶುಂಗಕಾಲದ ವಸ್ತುಗಳಲ್ಲಿ ನಾಲ್ಕು ಹೋರಿಗಳನ್ನು ಕಟ್ಟಿದ ಮಣ್ಣಿನ ರಥ, ಗಂಭೀರವಾದ ಕುದುರೆ, ಮೊಂಡುಬುದ್ಧಿಯ ಟಗರು ಮುಂತಾದವುಗಳಲ್ಲಿ ಮಣ್ಣಿನ ಕೈಕೆಲಸದ ಅತ್ಯಂತ ಶ್ರೇಷ್ಠಮಟ್ಟದ ಕಲೆಗಾರಿಕೆಯನ್ನು ಕಾಣುತ್ತೇವೆ. ಕುಶಾನರ ಕಾಲದ ಗೊಂಬೆಗಳಲ್ಲಿ ಸರಳ ರೇಖಾ ವಿನ್ಯಾಸವಿದ್ದರೂ ಅಪಾರ ಆಭರಣಗಳ ಅಲಂಕಾರವು ಇಲ್ಲದಿಲ್ಲ.

ದಕ್ಷಿಣ ಸಾತವಾಹನರ ಕಾಲದ ಕಂಚಿನ ಗೊಂಬೆಗಳಿಗೆ ಒಂದು ಅಪೂರ್ವ ಸ್ಥಾನವಿದೆ. ಮಣ್ಣಿನ ಗೊಂಬೆಗಳಿಗಿಂತ ತೀರ ಭಿನ್ನವಾದ ಇವು ಲೋಹ ಪ್ರಾಮುಖ್ಯವನ್ನು ಹೊಂದಿದ ಒಂದು ಉನ್ನತ ನಾಗರಿಕತೆಯ ಸಂಕೇತಗಳಾಗಿವೆ. ಕಂಚಿನ ಒಂದು ಆನೆಯ ಬೆನ್ನಿನ ಮೇಲೆ ಒಂದು ಇಡೀ ಸಂಸಾರವನ್ನೇ ಬಿಡಿಸಲಾಗಿದೆ. ಹುಲಿ ತನ್ನ ಪಂಜವನ್ನು ಮೇಲೆತ್ತಿ ಅಪ್ಪಳಿಸಲು ಅನುವಾದಂತೆ ಕಡೆಯಲಾಗಿದೆ.



ಆಟದ ಗೊಂಬೆಗಳು

ಹೀಗೆ ಭಾರತದ ಸಂಸ್ಕೃತಿಯಲ್ಲಿ ಗೊಂಬೆಗಳಿಗೆ ಒಂದು ಪ್ರಮುಖ ಸ್ಥಾನವಿತ್ತು. ಪ್ರಾಚೀನ ಕಾಲದಲ್ಲಿಯೇ ಭಾರತೀಯರು ಒಂದು ಉನ್ನತ ಸಂಸ್ಕೃತಿಯನ್ನು ಬೆಳೆಸಿಕೊಂಡು ಕಲಾಪೂರ್ಣವಾದ ಜೀವನವನ್ನು ನಡೆಸಿದರೆಂಬುದಕ್ಕೆ ಇವು ಉತ್ತಮ ನಿದರ್ಶನಗಳಾಗಿವೆ. ಆಧುನಿಕ ಕಾಲದಲ್ಲಿ ಊಹಿಸಲೂ ಆಗದಂಥ ಅದ್ಭುತ ಕಲೆಗಾರಿಕೆ ಆಗಿನ ಗೊಂಬೆಗಳಲ್ಲಿ ಕಾಣಬರುತ್ತದೆ.

ಇನ್ನು ಜನಪದ ಕಲೆಗಳನ್ನು ತೆಗೆದುಕೊಂಡರೆ ಅಲ್ಲಿ ವಿಶಿಷ್ಟವಾದ ಗೊಂಬೆಗಳನ್ನು ಗಮನಿಸಬಹುದಾಗಿದೆ. ತೊಗಲು ಬೊಂಬೆಗಳು, ಸೂತ್ರದ ಗೊಂಬೆಗಳು, ಕೀಲುಗೊಂಬೆಗಳು –ಇವು ಮುಖ್ಯವಾದವು. ಕಿಳ್ಳೇಕ್ಯಾತರ ತೊಗಲಗೊಂಬೆಗಳ ಆಟ ಅತಿ ಪ್ರಾಚೀನ ಕಾಲದಿಂದ ಬೆಳೆದುಬಂದ ಕಲೆ. ಈ ಕಲೆ ಭಾರತದ ಒಳಗೂ ಹೊರಗೂ ಪ್ರಚಾರದಲ್ಲಿದೆ. ಇದು ಮಹಾರಾಷ್ಟ್ರದಲ್ಲಿ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ಅಲ್ಲಿಂದ ಇದು ಕರ್ನಾಟಕ, ಆಂಧ್ರದ ರಾಯಲಸೀಮೆ ಮತ್ತು ತಮಿಳುನಾಡುಗಳಿಗೆ ಪಸರಿಸಿತು.

ಈ ಗೊಂಬೆಗಳ ರಚನೆ ವಿಶಿಷ್ಟವಾದುದು. ಹುಲ್ಲೆಯ ಕರು ಇಲ್ಲವೆ ಎಳೆಯ ಆಡುಗಳ ಹದಮಾಡಿದ ಚರ್ಮದಿಂದ ಇವನ್ನು ಮಾಡುತ್ತಾರೆ. ಅನಂತರ ತೊಗಲಿನ ಮೇಲೆ ರೇಖೆಗಳಿಂದ ಚಿತ್ರ ಬಿಡಿಸುತ್ತಾರೆ. ಅಲ್ಲಲ್ಲಿ ಕತ್ತರಿಸಿ ಚಿತ್ರಗಳ ಆಕಾರ ಬಿಡಿಸುತ್ತಾರೆ. ಅನಂತರ ಗಿಡಮೂಲಿಕೆಗಳಿಂದ ತೆಗೆದ ಬಣ್ಣಗಳನ್ನು ಲೇಪಿಸಿ ನೆರಳಿನಲ್ಲಿ ಒಣಗಿಸುತ್ತಾರೆ. ರಾತ್ರಿಯ ದೀಪದ ಬೆಳಕು ಬಿದ್ದಕೂಡಲೇ ಅವುಗಳ ಕಾಂತಿ ಎದ್ದು ತೋರುತ್ತದೆ. ಗೊಂಬೆಗಳು ನೇರವಾಗಿ ನಿಲ್ಲಲು ಅವುಗಳಿಗೆ ಬಿದಿರಿನ ಕಡ್ಡಿಯನ್ನು ಜೋಡಿಸಿರುತ್ತಾರೆ. ಇವನ್ನು ಗೊಂಬೆರಾಮರು ಪೂಜಾವಸ್ತುಗಳೆಂದೇ ತಿಳಿದು ಪೂಜಿಸುತ್ತಾರೆ. 3'–4' ಉದ್ದದ ತೊಗಲ ಗೊಂಬೆಗಳು ಚಿಕ್ಕ ಆಟದಲ್ಲೂ '5–6' ಉದ್ದದ ಗೊಂಬೆಗಳು ದೊಡ್ಡ

ಆಟದಲ್ಲೂ ಬಳಕೆಯಲ್ಲಿವೆ. ಅನೇಕ ವೇಳೆ ಬೊಂಬೆಯ ತಲೆ, ಎದೆ, ಕೈ ಕಾಲುಗಳು ಬೇರೆಬೇರೆಯಾಗಿದ್ದು ಅವನ್ನು ದಾರಗಳಿಂದ ಜೋಡಿಸಲಾಗಿರುತ್ತದೆ. ಕೈ, ಕಾಲು, ದೇಹ, ತಲೆ ಸರಿದಾಡುವ ಅವುಗಳಿಗೆ ಬಿದಿರಿನ ಅಥವಾ ಈಚಲ ಕಡ್ಡಿಗಳನ್ನು ಜೋಡಿಸಿರುತ್ತಾರೆ.

ಸೂತ್ರದ ಗೊಂಬೆ (ಪುತಲಿ ಗೊಂಬೆ) ಆಟವೂ ಬಹಳ ಹಿಂದಿನಿಂದಲೂ ಬೆಳೆದು ಬಂದ ಒಂದು ಅಪೂರ್ವ ಜನಪದ ಕಲೆ. ಈ ಆಟ ಚಕ್ಕಳ ಗೊಂಬೆಯಾಟದಿಂದ ಕೆಲವು ರೀತಿಯಲ್ಲಿ ಬೇರೆಯಾಗಿದೆ. ಈ ಗೊಂಬೆಗಳು ಮರದಲ್ಲಿ ತಯಾರಾದುವು. ಉದ್ದ 2'–3' ಕೈ, ಕಾಲು, ಮೂಗು, ಕಣ್ಣು, ತಲೆ, ಎದೆ ಎಲ್ಲವನ್ನೂ ನಯವಾಗಿ ಮಾಟವಾಗಿ ಕಡೆದಿರುತ್ತಾರೆ. ಆಯಾ ಗೊಂಬೆಗೆ ತಕ್ಕಂತೆ ಬಣ್ಣಗಳನ್ನು ಲೇಪಿಸಿರುತ್ತಾರೆ. ಪಾತ್ರಕ್ಕೆ ತಕ್ಕಂತೆ ಉಡುಪು, ಒಡವೆ, ಸರ, ಸೊಂಟಕ್ಕೆ ವಡ್ಯಾಣ, ಪಾದಕ್ಕೆ ನೂಪುರ, ಕಾಲುಂಗುರ, ತಲೆಗೆ ಜಡೆಬಿಲ್ಲೆ, ಕೆನ್ನೆಸರ ಮುಂತಾದುವನ್ನು ಬೇರೆಬೇರೆಯಾಗಿ ತೊಡಿಸಿರುತ್ತಾರೆ. ಗೊಂಬೆಯ ಎಲ್ಲ ಭಾಗಗಳೂ ಸುಲಭವಾಗಿ ಚಲಿಸುವಂತಿರುತ್ತವೆ.



ಕೀಲು ಗೊಂಬೆಗಳು

ಆಟ ಆಡಿಸುವವರು ನೂಲು ಅಥವಾ ಸಲಾಕಗಳಿಂದ ಗೊಂಬೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡಿರುತ್ತಾರೆ. ಆಟದಲ್ಲಿವರು ತಮ್ಮ ಎಲ್ಲ ಕೈಚಳಕವನ್ನು ಆ ಗೊಂಬೆಗಳ ಮೇಲೆ ಪ್ರಯೋಗ ಮಾಡುತ್ತಾರೆ. ತಮ್ಮ ಕಲಾವಂತಿಕೆಯನ್ನು ಮೆರೆಯುತ್ತಾರೆ. ಪ್ರಪಂಚದ ಎಲ್ಲೆಡೆಯೂ ಈ ಸೂತ್ರದ ಬೊಂಬೆ ಆಟ ಇದ್ದಂತೆ ತೋರುತ್ತದೆ. ಗ್ರೀಕರು ಈ ಆಟಗಳಿಂದ ಮನೋರಂಜನೆ ಪಡೆಯುತ್ತಿದ್ದರು. ಚೀನ, ಇಂಗ್ಲೆಂಡ್‍ಗಳಲ್ಲೂ ಈ ಕಲೆ ಇತ್ತೆಂದು ಹೇಳಲಾಗಿದೆ. ಫ್ರಾನ್ಸ್‌ನಲ್ಲಿ ಈಗಲೂ ಈ ಆಟಗಳನ್ನು ನಡೆಸಲಾಗುತ್ತಿದೆ. ಅಮೆರಿಕ, ಲ್ಯಾಟಿನ್ ಅಮೆರಿಕ ಭಾಗಗಳಲ್ಲಿ ಇಟಲಿ ಜನ ಆಗಾಗ ಹೋಗಿ ಈ ಆಟ ಪ್ರದರ್ಶಿಸಿ ಬರುವುದುಂಟು. ಭಾರತದಲ್ಲಿ ಈ ಆಟಕ್ಕೆ ಹಿಂದಿದ್ದ ಪುರಸ್ಕಾರ ಈಗ ದೊರಕದ ಕಾರಣ ಈ ಒಂದು ಕಲೆ ಅಳಿಸಿ ಹೋಗುವ ಭಯ ಉಂಟಾಗಿದೆ.

ಗೌರಿಗೊಂಬೆಗಳೂ ದಸರೆ ಗೊಂಬೆಗಳೂ ಭಾರತದಲ್ಲಿ ಈಗಲೂ ಅನೇಕ ನಗರಗಳ, ಪಟ್ಟಣಗಳ, ಗ್ರಾಮಗಳ ಮನೆಮನೆಗಳಲ್ಲಿ ಉಳಿದು ಬಂದಿವೆ. ಹಬ್ಬಗಳಲ್ಲಿ ಅವನ್ನು ಓರಣವಾಗಿ ಕೂರಿಸಿ ಪೂಜಿಸುವುದು ಮುಂದುವರಿದಿದೆ. ಈ ಗೊಂಬೆಗಳನ್ನು ಮರದ ಹೊಟ್ಟಿನಲ್ಲಿ ಇಲ್ಲವೆ ಜೇಡಿಮಣ್ಣಿನಲ್ಲಿ ಮಾಡಿರುತ್ತಾರೆ. ಚಂದನದ ಗೊಂಬೆಗಳೂ ಉಂಟು. ಈ ಗೊಂಬೆಗಳಿಗೆ ಬಟ್ಟೆ, ಆಭರಣಗಳನ್ನು ತೊಡಿಸಿ ಅಲಂಕರಿಸಿ ಪ್ರದರ್ಶಿಸುತ್ತಾರೆ. ದಸರೆಯ ಗೊಂಬೆಯ ಪ್ರದರ್ಶನ ಮನೆಯವರಿಗೊಂದು ಕಲಾ ಪ್ರದರ್ಶನಾವಕಾಶವನ್ನು ಒದಗಿಸುತ್ತದೆ. ಜೊತೆಗೆ ಗೊಂಬೆಯ ಎದುರು ಹೆಣ್ಣುಮಕ್ಕಳು ಕೋಲಾಟವಾಡುವ ಸಂಪ್ರದಾಯ ಹಿಂದಿನಿಂದ ನಡೆದು ಬಂದಿದೆ.

ಗ್ರಾಮದಿಂದ ಗ್ರಾಮಕ್ಕೆ ಸಾಗುವ ಮಾರಮ್ಮ, ಉಡುಗೋಲಜ್ಜಿಗಳ ಮರದ ವಿಗ್ರಹಗಳನ್ನು ಇಂದಿಗೂ ನೋಡಬಹುದಾಗಿದೆ. ಒಂದು ಊರಿನ ಗಡಿಯಿಂದ ಮತ್ತೊಂದು ಊರಿನ ಗಡಿಗೆ ಮಾರಮ್ಮನ ವಿಗ್ರಹವನ್ನು ಆಯಾ ಊರಿನ ಜನ ಸಾಗಿಸಿಕೊಂಡು ಹೋಗುತ್ತಾರೆ. ಹೀಗೆ ನೂರಾರು ಮೈಲಿಗಳ ಆಚೆ ಪ್ರಯಾಣ ಬೆಳೆಸಿ ಕೊನೆಗೆ ಸಮುದ್ರದಲ್ಲೋ ಕೆರೆಯಲ್ಲೋ ಅದನ್ನು ವಿಸರ್ಜನೆ ಮಾಡುತ್ತಾರೆ. ಊರಿಗೆ ಬರುವಂಥ ಪ್ಲೇಗು, ಕಾಲರ ಮುಂತಾದ ರೋಗರುಜಿನಗಳು ಸಾಮೂಹಿಕವಾಗಿ ಈ ದೇವತೆಯ ಮೂಲಕವಾಗಿ ಸಾಗಿ ಹೋಗಲಿ ಎಂಬರ್ಥದಲ್ಲಿ ಈ ದೈವವನ್ನು ರಚಿಸಿ, ಪೂಜಿಸಿ, ಸಾಗಿಸುವ ಜನಪದ ನಂಬಿಕೆ ನಮ್ಮಲ್ಲಿ ಬಹಳ ಹಿಂದಿನಿಂದಲೂ ಬೆಳೆದುಬಂದಿದೆ.

ಗ್ರಾಮಗಳ ದೇವಾಲಯಗಳಲ್ಲಿ ತಲೆಭೂತ ಕೈಭೂತ ಸೋಮ ಮುಂತಾದ ದೈವದ ಮೂರ್ತಿಗಳನ್ನು ಕಾಣಬಹುದಾಗಿದೆ. ಆಯಾ ಗ್ರಾಮಗಳಲ್ಲಿ ಇರುವ ಕುಶಲಕರ್ಮಿಗಳು ಇವನ್ನು ಬಹಳ ಕಲಾತ್ಮಕವಾಗಿ ರಚಿಸಿಕೊಡುತ್ತಾರೆ. ಸಿರಿಯಾಳ ಷಷ್ಠಿ, ಗೋಕುಲಾಷ್ಟಮಿ, ಗಣಪತಿ ಮಹೋತ್ಸವ ಮೊದಲಾದ ಹಬ್ಬಗಳಲ್ಲಿ ಮನೆಯವರೇ ಎರೆಯ ಮಣ್ಣಿನಿಂದ ಆಯಾ ವಿಗ್ರಹಗಳನ್ನು ಮಾಡುವ ಹವ್ಯಾಸ ಇನ್ನೂ ಅನೇಕ ಕಡೆ ಉಳಿದು ಬಂದಿದೆ. ರಥೋತ್ಸವ ಮತ್ತು ಜಾತ್ರೆಗಳ ಸಮಯದಲ್ಲಿ ಹಳ್ಳಿಯ ಕಸಬುದಾರರು ಬೊಂಬೆಗಳನ್ನು ಮಾಡಿ ಬಣ್ಣ ಕಟ್ಟಿ ಮಾರಾಟಕ್ಕೆ ಇಡುವುದನ್ನು ಇಲ್ಲಿ ನೆನೆಯಬಹುದು. ಬಹುಮಟ್ಟಿಗೆ ಹಳ್ಳಿಯ ಮಕ್ಕಳಿಗೆ ಇಲ್ಲಿ ಸಿಗುವ ರಾಟೆ, ಕಿಸಗಾಲು ಗೊಂಬೆ, ಅಂಬೆಗಾಲು ಕೃಷ್ಣ, ಪೀಪಿ, ಕುದುರೆ, ಗಿಣಿ, ಗುಬ್ಬಿ, ರಾಜ, ರಾಣಿ–ಈ ವಸ್ತುಗಳೇ ಬಹು ಪ್ರಿಯವಾದ ಆಟದ ಸಾಮಾನುಗಳು.



ಸೂತ್ರದ ಗೊಂಬೆ

ಬಿದಿರ ಬೊಂಬಿನಿಂದ, ಅರಗಿನಿಂದ, ಬಟ್ಟೆಗಳಿಂದ, ಕಪ್ಪೆಚಿಪ್ಪಿನಿಂದ ನಾನಾ ನಮೂನೆಯ ಗೊಂಬೆಗಳನ್ನು ರಚಿಸಲಾಗುತ್ತಿದೆ. ಭಾರತದ ಸರ್ಕಾರ ಈ ಗೊಂಬೆಗಳಿಗೆ ಬಹಳ ಪ್ರೋತ್ಸಾಹ ನೀಡಿ ಈ ಕಲೆಯ ಉಳಿವಿಗೆ ನೆರವಾಗಿದೆ.

ವಿಜ್ಞಾನ ಬೆಳೆದಂತೆಲ್ಲ ಕೈಕೆಲಸ ಹಿಂದಾಗಿ ಯಂತ್ರಗಳು ಪ್ರಾಮುಖ್ಯಕ್ಕೆ ಬರುತ್ತಿದೆ. ಅದರ ಪರಿಣಾಮವಾಗಿ ಪ್ಲಾಸ್ಟಿಕ್, ರಬ್ಬರ್ ಮೊದಲಾದವನ್ನು ಬಳಸಿಕೊಂಡು ಯಂತ್ರದಿಂದ ತಯಾರಿಸಿದ ಬಹು ಮುದ್ದಾದ ಗೊಂಬೆಗಳು ಈಗ ಜನಪ್ರಿಯವಾಗಿವೆ. **(ಪಿ.ಆರ್.ಟಿ.)**

**ಗೊಡೀಷಿಯ :** ಉದ್ಯಾನಗಳಲ್ಲಿ ಅಂದಕ್ಕಾಗಿ ಬೆಳೆಸಲಾಗುವ ಒಂದು ಏಕವಾರ್ಷಿಕ ಸಸ್ಯಜಾತಿ. ಆನಗ್ರೇಸೀ ಕುಟುಂಬಕ್ಕೆ ಸೇರಿದೆ. ಸ್ವಿಟ್ಜರ್ಲೆಂಡಿನ ಪ್ರಸಿದ್ಧ ಸಸ್ಯಶಾಸ್ತ್ರಜ್ಞ ಸಿ.ಎಚ್.ಗೊಡೆಟ್ ಎಂಬವನ ಗೌರವಾರ್ಥವಾಗಿ ಗಿಡಕ್ಕೆ ಈ ಹೆಸರನ್ನು ಇಡಲಾಗಿದೆ.



ಗೊಡೀಷಿಯ ಗ್ರ್ಯಾಂಡಿಫ್ಲೋರ ಪ್ರಭೇದ

ಗೊಡೀಷಿಯು ಸುಮಾರು 15 ಪ್ರಭೇದಗಳನ್ನೊಳಗೊಂಡಿದೆ. ಎಲ್ಲವೂ ಅಮೆರಿಕದ ಪಶ್ಚಿಮ ಪ್ರದೇಶಗಳ ಮೂಲ ನಿವಾಸಿಗಳು. ಇವುಗಳಲ್ಲಿ ಕೆಲವು $^{3}/_{4}$–1 ಮೀ ಎತ್ತರಕ್ಕೆ ಬೆಳೆಯುವ ಪೊದೆಸಸ್ಯಗಳು, ಇನ್ನು ಕೆಲವು $^{1}/_{4}$ ಮೀ ಎತ್ತರದ ಮೂಲಿಕೆಗಳು. ಪೊದೆ ಬಗೆಯವನ್ನು ಅಂಚು ಇಲ್ಲವೆ ಕಲ್ಲೇರಿ ಸಸ್ಯಗಳನ್ನಾಗಿಯೂ ಮೂಲಿಕೆ ಬಗೆಯವನ್ನು ಕುಂಡ ಸಸ್ಯಗಳನ್ನಾಗಿಯೂ ಬೆಳೆಸಲಾಗುತ್ತದೆ. ವಿವಿಧ ಬಗೆಗಳು ಚೆಲುವಾದ ಮತ್ತು ಬಿಳಿ, ಗುಲಾಬಿ, ಕಡುಗೆಂಪು, ಕೆನ್ನೀಲಿ ಮುಂತಾದ ವರ್ಣ ವೈವಿಧ್ಯವನ್ನು ತೋರುವ ಹೂಗಳನ್ನು ಬಿಡುತ್ತವೆ. ಕೆಲವಲ್ಲಿ ದಳಗಳ ಮೇಲೆ ಬಣ್ಣಬಣ್ಣದ ಮಚ್ಚೆಗಳಿರುವುದುಂಟು. ಬಹು ಪಾಲು ಬಗೆಗಳಲ್ಲಿ ಹೂಗಳು ಒಂಟಿಸುತ್ತಿನ ದಳ ಉಳ್ಳವು. ಅಡ್ಡ ತಳಿಯೆಬ್ಬಿಕೆಯ ಪ್ರಯೋಗಗಳ ಮೂಲಕ ಹಲವಾರು ಸುತ್ತಿನ ದಳಗಳುಳ್ಳ

ತಳಿಗಳನ್ನು ಪಡೆದು ವೃದ್ಧಿಸಲಾಗಿದೆ. ಹೂಗಳು ರೇಸೀಮ್ ಇಲ್ಲವೇ ಸ್ಪೈಕ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ.

ಗೊಡೀಷಿಯದ ಪ್ರಭೇದಗಳು ಬೆಟ್ಟಸೀಮೆ ಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ. ಶೀತ ಹವಾಗುಣ ಇವುಗಳ ಬೆಳೆವಣಿಗೆಗೆ ಉತ್ತಮವಾದ್ದು. ಮೈದಾನ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಇವನ್ನು ಬೆಳೆಸುವುದು ಒಳ್ಳೆಯದು. ಇವನ್ನು ಬೀಜಗಳ ಮೂಲಕ ವೃದ್ಧಿಸಬಹುದು. ಉದ್ಯಾನಗಾರಿಕೆ ಯಲ್ಲಿ ಹೆಚ್ಚು ಪ್ರಸಿದ್ಧವಾದವು–ಗೊ. ಅಮೀನ, ಗೊ. ಬಾಟೀ, ಗೊ. ಗ್ರ್ಯಾಂಡಿಫ್ಲೋರ ಪ್ರಭೇದಗಳು. (ಕೆ.;ಬಿ.ಎ.ಪಿ.)

**ಗೊಡ್ಡು ಈಚಲು :** ಜಿಮ್ನೋಸ್ಪರ್ಮೀ (ನಗ್ನಬೀಜೀ) ವರ್ಗ, ಸೈಕಡೇಲೀಸ್ ಗಣ, ಸೈಕಡೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯಜಾತಿ. ಮಂಡೀಚಲು ಇದರ ಪರ್ಯಾಯ ನಾಮ. ಸೈಕ್ಯಾಸ್ ವೈಜ್ಞಾನಿಕ ಹೆಸರು. ಪ್ರಪಂಚದ ಉಷ್ಣ ಹಾಗೂ ಉಪೋಷ್ಣವಲಯಗಳಲ್ಲಿ ಹಬ್ಬಿರುವ ಸುಮಾರು 20 ಪ್ರಭೇದಗಳನ್ನು ಇದು ಒಳಗೊಂಡಿದೆ. ಭಾರತದಲ್ಲಿ ಸರ್ಸಿನ್ಯಾಲಿಸ್, ರೆವಲ್ಯೂಟ, ರಂಫಿಯೈ, ಪೆಕ್ಟಿನೇಟ ಮತ್ತು ಬೆಡೋಮಿಯೈ ಎಂಬ 5 ಪ್ರಭೇದಗಳು ಕಾಣ ದೊರೆಯುತ್ತವೆ. ಇವುಗಳ ಪೈಕಿ ರೆವಲ್ಯೂಟ ಮತ್ತು ರಂಫಿಯೈಗಳನ್ನು ಉದ್ಯಾನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸಲಾಗಿದೆ. ಇವು ಕ್ರಮವಾಗಿ ಜಪಾನ್ ಮತ್ತು ಮಲಕ್ಕಗಳ ಮೂಲವಾಸಿಗಳು. ಉಳಿದ ಪ್ರಭೇದಗಳು ಭಾರತದಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆ.



ಗೊಡ್ಡು ಈಚಲು: ಈಚಲು ಗರಿಯಂಥ ಎಲೆಗಳನ್ನೂ ಮಧ್ಯದಲ್ಲಿ ಗಂಡು ಶಂಕುವನ್ನೂ ಗಮನಿಸಬಹುದು.

ಗೊಡ್ಡು ಈಚಲು ಹೊರನೋಟಕ್ಕೆ ಹೆಚ್ಚು ಕಡಿಮೆ ಈಚಲು ಮರದಂತೆಯೇ ಕಾಣುತ್ತದೆ. ಇದರ ಎತ್ತರ ಸಾಮಾನ್ಯವಾಗಿ 2ಮೀ ಗಳಿಗೆ ಮೀರದು. ಆದರೂ ಅಪರೂಪಕ್ಕೆ 6 ಮೀ ಎತ್ತರಕ್ಕೂ ಬೆಳೆಯುವುದುಂಟು. ಈಚಲು, ತೆಂಗು ಮುಂತಾದವುಗಳಂತೆ ಇದರಲ್ಲೂ ಕವಲೊಡೆಯದ ಮುಖ್ಯ ಕಾಂಡವೊಂದಿದ್ದು ಅದರ ತುದಿಯಲ್ಲಿ ಎಲೆಗಳ ಕಿರೀಟವೊಂದಿದೆ. ಕಾಂಡ ಅಪೂರ್ವವಾಗಿ ಕವಲೊಡೆಯುವು ದುಂಟು. ಎಲೆಗಳು ಸಂಯುಕ್ತ ಮಾದರಿಯವು; ಹೆಚ್ಚುಕಡಿಮೆ ಈಚಲು ಗರಿಗಳಂತೆ ಕಾಣುತ್ತವೆ. ಅವುಗಳಂತೆಯೆ ಆಗಾಗ್ಗೆ ಬಿದ್ದುಹೋಗುವ ಇವುಗಳ ಬುಡಭಾಗ ಮಾತ್ರ ಕಾಂಡದ ಮೇಲೆ ಬಹಳ ಕಾಲ ಉಳಿದಿರುತ್ತದೆ. ಗೊಡ್ಡು ಈಚಲಿನ ಕೆಲವು ಬೇರುಗಳು ಭೂಮಿಯಿಂದ ಮೇಲಕ್ಕೆ ಕವಲೊಡೆದು ಬೆಳೆದು ಅಗಲಿಸಿದ ಕೈ ಬೆರಳುಗಳಂತೆ ಕಾಣುತ್ತವೆ. ಇವಕ್ಕೆ ಕಾರಲಾಯಿಡ್ ಬೇರುಗಳೆಂದು ಹೆಸರು.

ಗೊಡ್ಡು ಈಚಲು ಭಿನ್ನಲಿಂಗಿ. ಗಂಡು ಮತ್ತು ಹೆಣ್ಣು ಲಿಂಗಾಂಗಗಳು ಶಂಕು (ಕೋನ್) ಇಲ್ಲವೆ ಸ್ಟ್ರೋಬೈಲಸ್ ಎಂದು ಕರೆಯಲಾಗುವ ರಚನೆಗಳಲ್ಲಿ ಸ್ಥಿತವಾಗಿವೆ. ಗಂಡು ಶಂಕು ಸುಮಾರು 1/3 ಮೀ ಉದ್ದವಿದ್ದು ಅನೇಕ ಸೂಕ್ಷ್ಮಬೀಜಾಣುಪತ್ರಗಳನ್ನು (ಮೈಕ್ರೋಸ್ಪೋರೋಫಿಲ್ಸ್) ಒಳಗೊಂಡಿದೆ. ಶಂಕುವಿನ ಕೇಂದ್ರ ಅಕ್ಷದ ಮೇಲೆ ಒತ್ತಾಗಿ ಜೋಡಣೆಗೊಂಡಿರುವ ಮತ್ತು ಕ್ಷೀಣಿಸಿದ ಪತ್ರಗಳಂತಿರುವ ಇವುಗಳಲ್ಲಿ ಒಂದೊಂದರಲ್ಲೂ ಕಿರಿದಾದ ಬುಡಭಾಗ ಮತ್ತು ಅಗಲವಾದ ಮುಂಭಾಗಗಳನ್ನು ಗುರುತಿಸಬಹುದು. ಅಲ್ಲದೆ ಇವುಗಳ ತುದಿ ಮುಳ್ಳಿನಂತಾಗಿ ಮೇಲ್ಮುಖವಾಗಿ ಬಾಗಿದೆ. ಪ್ರತಿ ಬೀಜಾಣುಪತ್ರದ ಕೆಳಮೈ ಮೇಲೆ ಅಸಂಖ್ಯಾತ ಪರಾಗ ಚೀಲಗಳಿವೆ. ಇವುಗಳಲ್ಲಿ ಪರಾಗ ಉತ್ಪತ್ತಿಯಾಗುತ್ತದೆ. ಹೆಣ್ಣು ಶಂಕುವಿನಲ್ಲಿಯೂ ಅನೇಕ ಬೀಜಾಣು ಪತ್ರಗಳಿವೆ. ಇವು ಗಾತ್ರದಲ್ಲಿ ಸೂಕ್ಷ್ಮಬೀಜಾಣು ಪತ್ರಗಳಿಗಿಂತ ದೊಡ್ಡವು. ಇವುಗಳ ಸಂಖ್ಯೆಯೂ ಕಡಿಮೆ. ಅಲ್ಲದೆ ಇವು ಅಳ್ಳಕವಾಗಿ ಜೋಡಣೆಗೊಂಡಿವೆ. ಇದಕ್ಕೆ ಸ್ಥೂಲಬೀಜಾಣು ಪತ್ರಗಳೆಂದು (ಮೆಗಸ್ಪೋರೋಫಿಲ್ಸ್) ಹೆಸರು. ಒಂದೊಂದು ಪತ್ರದ ಎರಡು ಅಂಚುಗಳಲ್ಲೂ 2–3 ಜೊತೆ ಅಂಡಕಗಳು (ಓವ್ಯೂಲ್ಸ್) ಇವೆ. ಮುಂದೆ ಪರಾಗಸ್ಪರ್ಶ ಕ್ರಿಯೆ ಮತ್ತು ನಿಷೇಚನಗಳು ಪೂರ್ಣಗೊಂಡ ಮೇಲೆ ಅಂಡಕಗಳು ಬೀಜಗಳಾಗಿ ಬೆಳೆಯುತ್ತವೆ. ಗೊಡ್ಡು ಈಚಲಿನ ಬೀಜಗಳು ಯಾವ ಬಗೆಯ ಹೊದಿಕೆಯಿಂದಲೂ ಆವೃತವಾಗಿಲ್ಲ. ಇದರಿಂದಲೇ ಇದೊಂದು ನಗ್ನಬೀಜೀಸಸ್ಯ ಅನ್ನಿಸಿಕೊಂಡಿದೆ.

ಗೊಡ್ಡು ಈಚಲು ಹಲವಾರು ಬಗೆಗಳಲ್ಲಿ ಉಪಯುಕ್ತವೆನಿಸಿದೆ. ಇದರ ಎಲೆಗಳು ಬಹುಕಾಲ ಹಸಿರಾಗಿ ಉಳಿಯುವುದರಿಂದ ಅಲಂಕಾರಕ್ಕಾಗಿ ಬಳಸುವುದುಂಟು. ಸರ್ಸಿನ್ಯಾಲಿಸ್ ಮತ್ತು ರೆವಲ್ಯೂಟ ಪ್ರಭೇದಗಳ ಕಾಂಡದ ತಿರುಳಿನಿಂದ ಪಿಷ್ಟವನ್ನು ತೆಗೆದು ಸಬ್ಬಕ್ಕಿಯನ್ನು (ಸೇಗೊ) ತಯಾರುಮಾಡುತ್ತಾರೆ. ಗೊಡ್ಡು ಈಚಲಿನ ಎಳೆಯ ಚಿಗುರೆಲೆ ಮತ್ತು ಮೊಗ್ಗುಗಳನ್ನು ಕೆಲವು ಕಡೆ ತರಕಾರಿಯಂತೆ ಬಳಸುವುದೂ ಉಂಟು. ಜಪಾನಿನಲ್ಲಿ ಇದರ ಕಾಂಡ ಮತ್ತು ಬೀಜಗಳ ಸಾರದಿಂದ ವಿಶಿಷ್ಟ ಬಗೆಯ ಮದ್ಯವೊಂದನ್ನು ತಯಾರಿಸುವುದುಂಟು. ಭಾರತದಲ್ಲಿ ಕೆಲವು ತಳಿಗಳ ಗಂಡು ಶಂಕುವಿನ ಹುರುಪೆಗಳನ್ನು ಉತ್ತೇಜಕ ಮತ್ತು ಕಾಮೋತ್ತೇಜಕವಾಗಿಯೂ ಮೂತ್ರಪಿಂಡ ಸಂಬಂಧಿ ನೋವುಗಳ ನಿವಾರಕವಾಗಿಯೂ ಉಪಯೋಗಿಸುತ್ತಾರೆ. ಇಂಡೊನೇಷ್ಯದಲ್ಲಿ ಕಾಂಡ ಮತ್ತು ಎಲೆಗಳಿಂದ ಪೊರಕೆ, ಬುಟ್ಟಿ ಮುಂತಾದವನ್ನು ತಯಾರಿಸುತ್ತಾರೆ. ಗುಡಿಸಲುಗಳಿಗೆ ಹೊದಿಸುವ ಗರಿಗಳನ್ನು ಮಾಡಲು ಬಳಸುವುದಲ್ಲದೆ ಎಲೆಗಳಿಂದ ನಾರನ್ನು ತೆಗೆದು ಬಟ್ಟೆ, ಹಗ್ಗ, ಹುರಿ ಇತ್ಯಾದಿಗಳ ತಯಾರಿಕೆಗೆ ಉಪಯೋಗಿಸುತ್ತಾರೆ. (ಎಂ.ಎಸ್.ಎಸ್.ಆರ್.)

**ಗೊಡ್ಡುಗೇರು ಮರ :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಒಂದು ಪರ್ಣಪಾತಿವೃಕ್ಷ. ಸೆಮಿಕಾರ್ಪಸ್ ಅನಕಾರ್ಡಿಯಮ್ ವೈಜ್ಞಾನಿಕ ಹೆಸರು. ಭಾರತಾದ್ಯಂತ ಸ್ವಾಭಾವಿಕವಾಗಿ ಬೆಳೆಯುತ್ತದೆ.

ಗೊಡ್ಡುಗೇರುಮರ ಸುಮಾರು 6 ಮೀ ಎತ್ತರಕ್ಕೆ ಬೆಳೆಯುವ ಮಧ್ಯಮ ಗಾತ್ರದ ಮರ. ಇದರ ಎಲೆಗಳು ಸರಳ ಮಾದರಿಯವು; ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ. ಎಲೆಗಳ ಮೇಲ್ಮೈ ಮೃದುವಾದ ತುಪ್ಪುಳಿಂದ ಕೂಡಿದೆ. ಹೂಗಳು ಚಿಕ್ಕವು; ಸಂಕೀರ್ಣ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಇವು ಏಕಲಿಂಗಿಗಳಾಗಿರಬಹುದು. ಇಲ್ಲವೆ ದ್ವಿಲಿಂಗಿಗಳಾಗಿರಬಹುದು. ಗಂಡು ಹೂಗಳು ಹೆಣ್ಣು ಮತ್ತು ದ್ವಿಲಿಂಗಿ ಹೂಗಳಿಗಿಂತ ಚಿಕ್ಕವು. ಗಂಡು ಹೂಗಳಲ್ಲಿ ಅನೇಕ ಕೇಸರಗಳೂ ಒಂದು ಗೊಡ್ಡು ಅಂಡಾಶಯವೂ ಇವೆ. ಪುಷ್ಪಪತ್ರ ಮತ್ತು ಪುಷ್ಪದಳಗಳ ಸಂಖ್ಯೆ ಐದು. ದ್ವಿಲಿಂಗಿ ಹಾಗೂ ಹೆಣ್ಣು ಹೂಗಳಲ್ಲಿ ಉಚ್ಚಸ್ಥಾನದ ಅಂಡಾಶಯವಿದೆ. ಇದರಲ್ಲಿನ ಕಾರ್ಪೆಲಿನ ಸಂಖ್ಯೆ ಮೂರು. ಆದರೆ ಒಂದು ಕಾರ್ಪೆಲು ಮಾತ್ರ ಪೂರ್ಣ ಬೆಳೆವಣಿಗೆಯನ್ನು ತೋರುತ್ತದೆ. ಅಂಡಾಶಯದ ಕೆಳಭಾಗದಲ್ಲಿ ತಟ್ಟೆಯಂಥ ರಚನೆಯೊಂದು ಇದೆ. ಶಲಾಕೆ ಮೂರು ಭಾಗಗಳಾಗಿ ಕವಲೊಡೆದಿದೆ. ಕಾಯಿ ಅಷ್ಠಿಫಲ ಮಾದರಿಯದು. ತೀಕ್ಷ್ಣ ಉತ್ತೇಜನಕಾರಿ. ಬಣ್ಣ ಕಪ್ಪು, ಹೊರಸಿಪ್ಪೆ ಬಹಳ ದಪ್ಪ. ಇದರಲ್ಲಿ ರಾಳದಿಂದ (ರೆಸಿನ್) ತುಂಬಿರುವ ಅನೇಕ ಕುಳಿಗಳಿವೆ. ಇದರ ತಿರುಳಿನಲ್ಲಿ ಸಿಹಿಯಾದ ಒಂದು ರೀತಿಯ ಎಣ್ಣೆಯಿದೆ. ಸಿಪ್ಪೆಯ ರಸದಲ್ಲಿ ಅನಕಾರ್ಡಿಕ್ ಎಂಬ ಆಮ್ಲವಿದೆ. ಈಥರಿನಲ್ಲಿ ಸುಲಭವಾಗಿ ಕರಗುವ ಇದು ಗಾಳಿಗೆ ತೆರೆದಿಟ್ಟರೆ ಬೇಗ ಕಪ್ಪುಬಣ್ಣಕ್ಕೆ ತಿರುಗುತ್ತದೆ.

ಗೊಡ್ಡುಗೇರು ಮರದ ಹೆಚ್ಚು ಉಪಯುಕ್ತ ಭಾಗವೆಂದರೆ ಅದರ ಕಾಯಿಗಳು. ಬಟ್ಟೆಗಳಿಗೆ ಗುರುತು ಮಾಡಲು ಅಗಸರು ಇವನ್ನು ಉಪಯೋಗಿಸುತ್ತಾರೆ. ಕಾಯಿಯ ತಿರುಳು ಉತ್ತಮ ಶಕ್ತಿವರ್ಧಕ ಹಾಗೂ ಒಳ್ಳೆಯ ಜೀರ್ಣಕಾರಿ. ಇದನ್ನು ಜಂತುನಾಶಕ ಔಷಧಿಗಳಲ್ಲಿ ಬಳಸುತ್ತಾರೆ. ಫಲದ ಕಷಾಯವನ್ನು ಬೆಣ್ಣೆಯ ಜೊತೆ ಸೇವಿಸಿದರೆ ಅಜೀರ್ಣ, ಮೂಲವ್ಯಾಧಿ ಮೊದಲಾದ ರೋಗಗಳು ವಾಸಿಯಾಗುತ್ತವೆ. ತಿರುಳು ಶಾಮಕ ಔಷಧಿಯೂ ಹೌದು. ಸೆಳವು ರೋಗವನ್ನು ತಡೆಯುವ, ದೇಹದಲ್ಲಿ ಪೋಷಣ ವ್ಯಾಪಾರಗಳನ್ನು ಬದಲಾಯಿಸಿ ಅವನ್ನು ಆರೋಗ್ಯ ಸ್ಥಿತಿಗೆ ತರುವ ಸಾಮರ್ಥ್ಯವೂ

ಇದಕ್ಕಿದೆ. ನರಗಳ ದೌರ್ಬಲ್ಯಕ್ಕೆ ಇದು ಒಳ್ಳೆಯ ಮದ್ದು. ಕಾಯಿಯ ಹೊರಸಿಪ್ಪೆಯಿಂದ ತೆಗೆದ ರಸವನ್ನು ಅಲ್ಪ ಪ್ರಮಾಣದಲ್ಲಿ ಕುಷ್ಠ ರೋಗಿಗಳಿಗೆ ಕೊಡುವ ಕ್ರಮವೂ ಇದೆ. ಪಾರ್ಶ್ವವಾಯು, ಮೂರ್ಛೆರೋಗ ಮತ್ತು ಹಲವು ವಿಧದ ಚರ್ಮರೋಗಗಳಿಗೂ ಇದು ದಿವ್ಯೌಷಧ. ರಸವನ್ನು ಅತ್ಯಲ್ಪ ಪ್ರಮಾಣದಲ್ಲಿ ತುಪ್ಪ ಅಥವಾ ಜೇನುತುಪ್ಪದೊಡನೆ ಬೆರೆಸಿ ತೆಗೆದುಕೊಂಡರೆ ಹುಣ್ಣು, ಸಂಧಿವಾತ, ಉಬ್ಬಸ ಮೊದಲಾದವು ಬೇಗನೆ ಗುಣಮುಖವಾಗುತ್ತದೆ. ನ್ಯೂಮೋನಿಯ ಜ್ವರದಲ್ಲೂ ಇದನ್ನು ಬಳಸುವುದುಂಟು.

ಕಾಯಿಯ ಹೊರಸಿಪ್ಪೆಯಿಂದ ಪಡೆಯಲಾಗುವ ಎಣ್ಣೆ ಪ್ರಬಲವಾದ ಪೂತಿನಾಶಕ. ಇದನ್ನು ಉಳುಕಿಗೂ ಎಲುಬು ಹಾಗೂ ಕೀಲುಗಳ ನೋವಿಗೂ ಬಳಸುತ್ತಾರೆ. ಚಳಿಗಾಲದಲ್ಲಿ ಇದನ್ನು ಸತತವಾಗಿ ತೆಗೆದುಕೊಳ್ಳುವುದರಿಂದ ನೆಗಡಿ, ಕೆಮ್ಮು ಮತ್ತು ಗೂರಲು ರೋಗಗಳು ನಿವಾರಣೆಯಾಗುತ್ತವೆ. ರಕ್ತ ಹೀನತೆ ಮತ್ತು ಬ್ರಾಂಕೈಟಿಸುಗಳಿಗೂ ಇದು ಪರಿಣಾಮಕಾರಿ. (ಎಸ್.ಡಿ.ಕೆ.)

**ಗೊಡ್ಡೆ :** ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ ಒಂದು ಉಪಯುಕ್ತ ಕಾಡುಮರ. ಊದಿಮರ, ಉಡೀಮರ, ಸಿಂಟೆಮರ ಪರ್ಯಾಯನಾಮಗಳು. ಇಂಗ್ಲಿಷಿನಲ್ಲಿ ಇಂಡಿಯನ್ ಆಷ್ ಟ್ರೀ ಎಂದು ಕರೆಯಲಾಗುತ್ತದೆ. ಲ್ಯಾನಿಯ ಕೋರೊಮ್ಯಾಂಡಲಿಕ ಇದರ ವೈಜ್ಞಾನಿಕ ಹೆಸರು. ಭಾರತಾದ್ಯಂತ ಇದರ ವ್ಯಾಪ್ತಿ ಇದೆ. ಇದು ಅಂಡಮಾನ್ ದ್ವೀಪಗಳಲ್ಲೂ ಕಾಣದೊರೆಯುತ್ತದೆ. ಹಿಮಾಲಯದಲ್ಲಿ 1500 ಮೀ ಎತ್ತರದ ವರೆಗಿನ ಪ್ರದೇಶಗಳ ಸಾಲವೃಕ್ಷಗಳ ಕಾಡುಗಳಲ್ಲೂ ದೇಶದ ಉಳಿದೆಡೆ ಶುಷ್ಕ ಹವೆಯಿರುವ ಮೈದಾನ ಇಲ್ಲವೆ ಬೆಟ್ಟಸೀಮೆಗಳ ಮಿಶ್ರಪರ್ಣಪಾತಿ ಕಾಡುಗಳಲ್ಲೂ ಇದನ್ನು ಕಾಣಬಹುದು. ಸುಮಾರು 15–24 ಮೀ ಎತ್ತರಕ್ಕೆ ಬೆಳೆಯುವ ಪರ್ಣಪಾತಿ ಮರವಿದು. ಇದರ ರೆಂಬೆಗಳು ದೃಢವಾಗಿದ್ದು ಚಪ್ಪರದಂತೆ ಅಗಲವಾಗಿ ಹರಡಿಕೊಂಡು ಬೆಳೆಯುತ್ತವೆ. ತೊಗಟೆ ನಯವಾಗಿದೆ; ಇದರ ಬಣ್ಣ ಬೂದು ಇಲ್ಲವೆ ಬಿಳಿ; ಇದು ಆಗಾಗ್ಗೆ ವೃತ್ತಾಕಾರದ ಹಾಳೆಗಳಂತೆ ಸುಲಿದು ಬೀಳುತ್ತದೆ. ಎಲೆಗಳು ಸಂಯುಕ್ತ ಮಾದರಿಯವು; ಸಾಮಾನ್ಯವಾಗಿ ರೆಂಬೆಗಳ ತುದಿಯಲ್ಲಿ ಗುಂಪು ಗುಂಪಾಗಿರುತ್ತವೆ. ಹೂಗಳು ಚಿಕ್ಕ ಗಾತ್ರದವು. ಹಳದಿ ಇಲ್ಲವೆ ನಸು ಊದಾ ಬಣ್ಣದವು; ಏಕಲಿಂಗಿಗಳು. ಗಂಡು ಹೂಗಳು ಸಂಯುಕ್ತ ರೇಸೀಮ್ ಗೊಂಚಲುಗಳಲ್ಲೂ ಹೆಣ್ಣು ಹೂಗಳು ಸರಳ ರೇಸೀಮ್ ಗೊಂಚಲುಗಳಲ್ಲೂ ಸಮಾವೇಶಗೊಂಡಿವೆ. ಫಲ ಅಷ್ಟಿ ಮಾದರಿಯದು. ಇದರ ಬಣ್ಣ ಕೆಂಪು. ಹಣ್ಣಿನೊಳಗೆ ಒಂದೇ ಬೀಜವಿದೆ.

ಗೊಡ್ಡೆ ಮರಳುಶಿಲೆ, ಸುಣ್ಣಕಲ್ಲು, ಜಂಬಿಟ್ಟಿಗೆ (ಲ್ಯಾಟರೈಟ್) ಮುಂತಾದ ಹಲವಾರು ವಿಧದ ಮಣ್ಣಿನಲ್ಲಿ ಬೆಳೆಯಬಲ್ಲುದಾದರೂ ನೀರು ಸರಾಗವಾಗಿ ಬಸಿದು ಹೋಗುವಂಥ ಮೆಕ್ಕಲು ಮಣ್ಣಿನಲ್ಲಿ ಮಾತ್ರ ಬಲು ಉತ್ಕೃಷ್ಟವಾಗಿ ಬೆಳೆಯುತ್ತದೆ. ಈ ಮರ ಹವೆಯ ಶುಷ್ಕತೆಯನ್ನು ಎದುರಿಸಬಲ್ಲುದು. ಆದರೆ ಕಡುಚಳಿಯನ್ನು ತಡೆಯಲಾರದು. ಮರವನ್ನು ಕಡಿದಾಗ ಉಳಿಯುವ ಮೋಟಿನಿಂದ ಬಲುಬೇಗ ಚಿಗುರೊಡೆಯುವುದರಿಂದ ಮತ್ತು ವಿಪುಲವಾಗಿ ಬೇರುಸಸಿಗಳು (ರೂಟ್ ಸಕರ್ಸ್) ಒಡೆಯುವುದರಿಂದ ಗೊಡ್ಡೆ ಒಳ್ಳೆಯ ಕಾಡುಮರ ಅನ್ನಿಸಿಕೊಂಡಿದೆ. ನಿಸರ್ಗದಲ್ಲಿ ಗೊಡ್ಡೆಯ ಸಂತಾನವೃದ್ಧಿ ಬೀಜಗಳಿಂದ ನಡೆಯುತ್ತದೆ. ಬೀಜಪ್ರಸಾರ ಹಕ್ಕಿಗಳ ಮೂಲಕ. ಕೃತಕವಾಗಿ ಗೊಡ್ಡೆಯನ್ನು ಬೀಜಗಳಿಂದಲೇ ಬೆಳೆಸಬಹುದಾದರೂ ಬೀಜಗಳ ಮೊಳೆಯುವ ಸಾಮರ್ಥ್ಯ ಬಹಳ ಕಡಿಮೆಯಾದ್ದರಿಂದ 1–2 ವರ್ಷ ವಯಸ್ಸಾದ ಕಾಂಡತುಂಡುಗಳಿಂದ ವೃದ್ಧಿಸುವುದೇ ವಾಡಿಕೆಯಲ್ಲಿರುವ ಕ್ರಮ. (ಟಿ.ಸಿ.)

ಗೊಡ್ಡೆಯಿಂದ ಸಾಕಷ್ಟು ಗಟ್ಟಿಯಾಗಿರುವ, ಒತ್ತಾದ ಕಣವಿನ್ಯಾಸ ಮತ್ತು ಸಮ ರಚನೆಯುಳ್ಳ ಹಾಗೂ ಹಗುರವಾದ ಚೌಬೀನೆಯನ್ನು ಪಡೆಯಬಹುದು. ಚೌಬೀನೆಗೆ ಜಿಂಗನ್ ಅಥವಾ ಒಡಿಯರ್ ಎಂಬ ವಾಣಿಜ್ಯ ನಾಮವಿದೆ. ಹೊಸದಾಗಿ ಕತ್ತರಿಸಿದಾಗ ಚೌಬೀನೆಯ ಚೇಗುಭಾಗ ನಸುಗೆಂಪಾಗಿದ್ದು ಕಾಲ ಕಳೆದಂತೆ ಕಂದುಮಿಶ್ರಿತ ಕೆಂಪುಬಣ್ಣವನ್ನು ತಳೆಯುತ್ತದೆ. ರಸಕಾಷ್ಠ ಮೊದಲಿಗೆ ಬಿಳಿ ಇಲ್ಲವೆ ನಸುಹಳದಿ ಬಣ್ಣಕ್ಕಿದ್ದು ಬರಬರುತ್ತ ಕಂದು ಮಿಶ್ರಿತ ಬೂದಿಬಣ್ಣಕ್ಕೆ ತಿರುಗುತ್ತದೆ. ಚೌಬೀನೆಯನ್ನು ಸಂಸ್ಕರಿಸುವುದು ಕೊಂಚ ಕಷ್ಟ. ಅಲ್ಲದೆ ಇದಕ್ಕೆ ಬಹಳ ಕಾಲ ಹಿಡಿಯುತ್ತದೆ. ಚೇಗು ಮತ್ತು ರಸಕಾಷ್ಠಗಳು ಏಕಕಾಲದಲ್ಲಿ ಒಣಗದೆ ಇರುವುದೂ ಒಣಗುವಾಗ ಇವುಗಳ ತುದಿಭಾಗಗಳು ಸೀಳುವುದೂ ರಸಕಾಷ್ಠ ಬಲುಬೇಗ ಕೀಟಗಳ ಹಾವಳಿಗೆ ತುತ್ತಾಗುವುದೂ ಸಂಸ್ಕರಣೆಯಲ್ಲಿನ ತೊಂದರೆಗೆ ಕಾರಣ. ಆದರೂ ಗರಗಸದಿಂದ ಸರಾಗವಾಗಿ ಕೊಯ್ಯಬಹುದಾದ್ದರಿಂದ ಮತ್ತು ಇದು ಮರಗೆಲಸಗಳಿಗೆ ಸುಲಭವಾಗಿ ಮಣಿಯುವುದರಿಂದ, ಚೌಬೀನೆಯನ್ನು ಮನೆ ಕಟ್ಟಡಗಳಿಗೆ, ಪೆಟ್ಟಿಗೆ, ಪೀಠೋಪಕರಣ, ಗಾಣದ ಸಾಮಾನುಗಳು, ಅಕ್ಕಿಕೊಟ್ಟಣ, ನೇಗಿಲು ನೊಗ, ಬ್ರಷ್ ಹಿಡಿ, ಮರದ ಹೂಜಿ, ಪೀಪಾಯಿ, ಆಸರೆಗಂಬ, ಮೋಟಿಯಚ್ಚು, ದೋಣಿ, ಬಾಚಣಿಗೆ ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದರಿಂದ ಪ್ಲೈವುಡ್, ಚಹಾ ಪೆಟ್ಟಿಗೆ, ಪೆನ್ಸಿಲ್ ಮತ್ತು ಸ್ಲೇಟುಗಳ ಚೌಕಟ್ಟು, ದಾರ, ಹುರಿ, ಮುಂತಾದವನ್ನು ಸುತ್ತಿಡುವ ಉರುಳೆಗಳು, ರೈಲ್ವೆ ಸ್ಲೀಪರುಗಳು ಮತ್ತು ಬೆಂಕಿಕಡ್ಡಿ ಮೊದಲಾದವನ್ನೂ ತಯಾರಿಸಬಹುದು. ಮೇಲೆ ಹೇಳಿದ ಕೆಲಸಗಳಿಗೆ ಬಾರದ ಕೆಳದರ್ಜೆಯ ಮರವನ್ನು ಸೌದೆಯಾಗಿ ಬಳಸಬಹುದು. ಗೊಡ್ಡೆಮರದಲ್ಲಿ ಸೂಕ್ತ ಪ್ರಮಾಣದಲ್ಲಿ ಸೆಲ್ಯುಲೋಸ್ ಶೇ. 53.37, ಲಿಗ್ನಿನ್ ಶೇ. 24.11, ಪೆಂಟೋಸಾನುಗಳು ಶೇ. 15.40 ಇರುವುದರಿಂದ ಇದನ್ನು ಬಿದಿರಿನೊಂದಿಗೆ ಮಿಶ್ರಿಸಿ ಕಾಗದ ತಯಾರಿಕೆಯಲ್ಲೂ ಬಳಸಬಹುದಾಗಿದೆ.

ಗೊಡ್ಡೆಮರದಿಂದ ಹಳದಿ ಬಣ್ಣದ ಗೋಂದು ದೊರೆಯುತ್ತದೆ. ಅರ್‍ಯಾಬಿಕ್ ಗೋಂದನ್ನು ಹೋಲುವ ಇದು ಅದರಂತೆಯೆ ನೀರಿನಲ್ಲಿ ಸುಲಭವಾಗಿ ಕರಗುತ್ತದೆ. ಆದರೆ ಗೊಡ್ಡೆಮರದ ಗೋಂದಿಗೆ ಸ್ನಿಗ್ಧತೆ ಕಡಿಮೆ. ಇದನ್ನು ಕ್ಯಾಲಿಕೊ ಮುದ್ರಣ, ಶಾಯಿ ಮತ್ತು ಕೆಳದರ್ಜೆಯ ಮೆರುಗೆಣ್ಣೆಗಳ ತಯಾರಿಕೆ. ಮೀನುಬಲೆಗಳ ರಕ್ಷಣೆ, ಮಿಠಾಯಿ ತಯಾರಿಕೆ ಮೊದಲಾದ ಕಾರ್ಯಗಳಿಗೆ ಬಳಸುತ್ತಾರೆ. ಅಲ್ಲದೆ ಗೋಂದನ್ನು ಆಲ್ಕೊಹಾಲಿನಿಂದ ಶುದ್ಧೀಕರಿಸಿ ಕಬ್ಬಿನ ರಸವನ್ನು ಸ್ವಚ್ಛಗೊಳಿಸಲು ಉಪಯೋಗಿಸುವುದುಂಟು. ಗೊಡ್ಡೆಮರದ ತೊಗಟೆಯಲ್ಲಿ ಫ್ಲೋಬ ಟ್ಯಾನಿನ್ ಎಂಬ ವಿಶೇಷ ವಸ್ತುವಿರುವುದರಿಂದ ತೊಗಟೆಯನ್ನು ಚರ್ಮ ಹದಗೊಳಿಸುವುದಕ್ಕೆ ಉಪಯೋಗಿಸುತ್ತಾರೆ. ತೊಗಟೆಯ ರಸವನ್ನು ಹತ್ತಿ ಮತ್ತು ಸಿಲ್ಕ್ ಬಟ್ಟೆಗಳಿಗೆ, ಕಂದಿನಿಂದ ಕಪ್ಪು ಬಣ್ಣದವರೆಗಿನ ಬಣ್ಣ ಕೊಡಲು ಬಳಸುತ್ತಾರೆ.

ಗೊಡ್ಡೆಮರಕ್ಕೆ ಔಷಧೀಯ ಗುಣಗಳೂ ಉಂಟು. ಇದರ ತೊಗಟೆಯ ಕಷಾಯವನ್ನು ತರಚುಗಾಯ, ವ್ರಣ, ಕಣ್ಣುಹುಣ್ಣು ಮೊದಲಾದವುಗಳಿಗೆ ಬಳಸುವುದುಂಟು. ಗೋಂದನ್ನು ಉಬ್ಬಸಕ್ಕೆ ಉಪಯೋಗಿಸುವುದಿದೆ. ಎಲೆಗಳನ್ನು ಕುದಿಸಿ ಉಳುಕು, ತರಚುಗಾಯ, ಬಾವು ಮುಂತಾದವುಗಳಿಗೆ ಬೆಚ್ಚಾರವಾಗಿ ಲೇಪಿಸುತ್ತಾರೆ. *

**ಗೊಡ್ಲೆ ಮೀನು :** ಸೈಲ್ಲೂರಿಫಾರ್ಮೀಸ್ ಗಣದ ಸೈಲ್ಯೂರಿಡೀ ಕುಟುಂಬಕ್ಕೆ ಸೇರಿದ ಒಂದು ಬಗೆಯ ಸಿಹಿನೀರು ಮೀನಿಗಿರುವ ಸಾಮಾನ್ಯ ಹೆಸರು. ಓಂಪಾಕ್ ಬೈಮ್ಯಾಕ್ಯುಲೇಟಸ್ ಇದರ ವೈಜ್ಞಾನಿಕ ನಾಮ. ಮೀಸೆ ಮೀನು (ಕ್ಯಾಟ್ ಫಿಶ್) ಗಳ ಹತ್ತಿರದ ಸಂಬಂಧಿ. ದೊಮ್ಮೆ ಮೀನು ಪರ್ಯಾಯ ನಾಮ. ಏಷ್ಯದ ಅಫ್ಘಾನಿಸ್ತಾನದಿಂದ ಹಿಡಿದು ಚೀನ, ಭಾರತ, ಥೈಲೆಂಡ್ ದೇಶಗಳಲ್ಲಿ ಕಂಡುಬರುತ್ತದೆ. ಇದು ಭಾರತಾದ್ಯಂತ ಕಾಣಬರುತ್ತದೆ. ಕರ್ನಾಟಕದ ಕಾವೇರಿ ನದಿಯಲ್ಲಿ, ಅನೇಕ ಕೆರೆಗಳಲ್ಲಿ ಕಂಡುಬರುತ್ತದೆ. ಗರಿಷ್ಠ 30 ಸೆಂಮೀ ವರೆಗೆ ಬೆಳೆಯುವ ಮಧ್ಯಮ ಗಾತ್ರದ ಮೀನು. ಪಕ್ಕದಿಂದ ಪಕ್ಕಕ್ಕೆ ಚಪ್ಪಟೆಯಾದ ದೇಹ, ಎರಡು ಜೊತೆ ಮೀಸೆಗಳು, ಇವುಗಳಲ್ಲಿ ಒಂದು ಜೊತೆ ಗುದದ್ವಾರದ ಈಜುರೆಕ್ಕೆಯವರೆಗೂ ಚಾಚುವಂತಿರುವುದು, ಎದೆಯ ಈಜುರೆಕ್ಕೆಯ ಮೇಲ್ಭಾಗದಲ್ಲಿರುವ ಕಪ್ಪು ಮಚ್ಚೆ, ಕಪ್ಪು ಬಣ್ಣದ ಪಟ್ಟೆಗಳು ಮತ್ತು ಕಪ್ಪು ಅಂಚುಳ್ಳ ಗುದದ ಈಜು ರೆಕ್ಕೆ, ಕವಲೊಡೆದ ಬಾಲದ ಈಜು ರೆಕ್ಕೆ, ಇವು ಬೆಳ್ಳಿ ಬಣ್ಣದ ಗೊಡ್ಲೆ ಮೀನಿನ ಪ್ರಮುಖ ಗುಣಲಕ್ಷಣಗಳು.


ಗೊಡ್ಲೆ ಮೀನಿನ ಆಹಾರ ಪ್ರಧಾನವಾಗಿ ನೀರಿನಲ್ಲಿರುವ ಚಿಗಟಗಳು, ಸಣ್ಣ ಮೃದ್ವಂಗಿಗಳು, ಕಠಿಣ ಚರ್ಮಿಗಳು, ಇತರೆ ಬಗೆಯ ಮೀನುಗಳು, ಇತ್ಯಾದಿ. ಇದರ ಸಂತಾನೋತ್ಪತ್ತಿಯ ಕಾಲ ಜೂನ್ ನಿಂದ ಆಗಸ್ಟ್ ವರೆಗೆ. ಇದು ಇತರೆ ಮೀನುಗಳಿಗೆ ಮಾರಕವಾದ್ದರಿಂದ ಈ ಮೀನು ಸಾಕಲು ಯೋಗ್ಯವಾಗಿಲ್ಲ. ಆದರೆ ಇದರ ಮಾಂಸ ರುಚಿಯಾಗಿರುವುದರಿಂದ ಇದಕ್ಕೆ ಹೆಚ್ಚು ಬೇಡಿಕೆ ಇದ್ದೇ ಇದೆ. ದಾವಣಿ ಬಲೆಗಳು, ಎಸೆ ಬಲೆಗಳ ಸಹಾಯದಿಂದ ಈ ಮೀನುಗಳನ್ನು ಹಿಡಿಯುತ್ತಾರೆ. (ಬಿ.ಎನ್.)

**ಗೊದಮೊಟ್ಟೆ :** ಮೊಟ್ಟೆಯಿಂದ ಹೊರ ಬಂದು, ಕೆಲ ಕಾಲ ನೀರಿನಲ್ಲಿ ವಾಸಿಸುವ ಮರಿ ಕಪ್ಪೆಗಳಿಗೆ ಗೊದ ಮೊಟ್ಟೆ ಎನ್ನುವರು. ಇವು ಬಾಲ ಹೊಂದಿದ್ದು, ಕಿವಿರುಗಳಿಂದ ಉಸಿರಾಡುತ್ತವೆ. ವಾತಾವರಣದಲ್ಲಿನ ಉಷ್ಣಾಂಶ ಕಪ್ಪೆಗಳು ಮೊಟ್ಟೆಯಿಡುವ ಕಾಲವನ್ನು ನಿರ್ಧರಿಸುತ್ತದೆ. ಕಪ್ಪೆಗಳು ನೀರಿನಲ್ಲಿ ಜೊಂಡಿನ ಮಧ್ಯೆ, ಕೊಚ್ಚೆಯ ಕಾಲುವೆಗಳಲ್ಲಿ ಮೊಟ್ಟೆಯಿಡುತ್ತವೆ. ಗಂಡು ಹೆಣ್ಣುಗಳ ಸಂಭೋಗ ನಡೆಸಿ, 3–4 ದಿನಗಳ ಅನಂತರ, ಹೆಣ್ಣು ಕಪ್ಪೆ ಮೊಟ್ಟೆಗಳನ್ನಿಡಲು ಪ್ರಾರಂಭಿಸುತ್ತದೆ. ಗರ್ಭಧರಿಸಿದ 8–10 ದಿನಗಳ ಅನಂತರ, ಮೊಟ್ಟೆಯಿಂದ ಮರಿ ಹೊರಬರುತ್ತದೆ. ಮರಿಗಳು ಪ್ರೌಢ ಕಪ್ಪೆಯಂತೆ ಇರುವುದಿಲ್ಲ. ಇವುಗಳಿಗೆ ಕಣ್ಣು, ಬಾಯಿ, ಕಿವಿರು, ಕಾಲುಗಳು ಇರುವುದಿಲ್ಲ. ತಲೆ ಕಳಗೆ ಅರ್ಧಚಂದ್ರಾಕಾರದ ಹೀರು ಬಟ್ಟಲಿರುತ್ತದೆ. ಇದರಿಂದ ಒಂದು ರೀತಿಯ ಅಂಟು ದ್ರವ ಉತ್ಪತ್ತಿಯಾಗುತ್ತದೆ. ಇದರ ನೆರವಿನಿಂದ ಕಪ್ಪೆ ಮರಿಗಳು ಜೊಂಡಿಗೆ ತಗುಲಿಕೊಂಡು ನೇತಾಡುತ್ತವೆ. ಬೆಳವಣಿಗೆಯಾದಂತೆ, ಬಾಯಿ, ಕಣ್ಣುಗಳು ಬೆಳೆಯುತ್ತವೆ.

ತಲೆಯ ಎರಡು ಕಡೆ ಕಿವಿರುಗಳು ಬೆಳೆಯುತ್ತವೆ. ಇವೇ ಶ್ವಾಸಾಂಗಗಳು ಬಾಯೊಳಗೆ ಕೊಂಬಿನಿಂದಾದ ಹಲವು ಸಾಲು ಹಲ್ಲುಗಳಿರುತ್ತವೆ. ಈ ಹಲ್ಲುಗಳ ಸಹಾಯದಿಂದ ಮರಿಗಳು ಮೃದುವಾದ ಸಸ್ಯ ಪದಾರ್ಥಗಳನ್ನು ತಿನ್ನುತ್ತವೆ. ದೇಹದೊಳಗೆ ಸುರುಳಿಯಾಕಾರದ ಕರುಳು ಬೆಳೆಯುತ್ತದೆ. ಬಾಲದ ಭಾಗವು ಬೆಳೆದಂತೆಲ್ಲ ಅರ್ಧಚಂದ್ರಾಕಾರದ ಹೀರು ಬಟ್ಟಲು ನಶಿಸಿ ಹೋಗುತ್ತದೆ. ಕ್ರಮೇಣ ಕಿವಿರುಗಳ ಮೇಲೆ ಚರ್ಮದ ಹೊದಿಕೆ ಬೆಳೆಯುತ್ತದೆ. ಬೆಳವಣಿಗೆಯು ಮುಂದುವರೆಯುತ್ತಾ, ಹೊರಕಿವಿರುಗಳು ನಶಿಸಿ, ಒಳ ಕಿವಿರುಗಳು ರೂಪುಗೊಳ್ಳುತ್ತವೆ. ಈ ಕಿವಿರುಗಳು ಹೊರ ಚರ್ಮದಿಂದ ರೂಪುಗೊಳ್ಳುತ್ತವೆ.

ಲಾರ್ವ ರೂಪ ಪರಿವರ್ತನೆ ಪ್ರಾರಂಭಿಸಿದಾಗ ಗೊದಮೊಟ್ಟೆ ಹಂತ ಮುಗಿಯುತ್ತದೆ. ರೂಪ ಪರಿವರ್ತನೆಯಾಗುವಾಗ, ಗೊದಮೊಟ್ಟೆ ರಚನೆಯಲ್ಲಿ ಕೆಲವು ಬದಲಾವಣೆಗಳಾ ಗುತ್ತವೆ. ಈ ಎಲ್ಲ ಬದಲಾವಣೆಗಳಿಗೆ ಥೈರಾಯ್ಡ್ ಗ್ರಂಥಿ ಸ್ರವಿಸುವ ಚೋದಕದಿಂದಾಗುವ ಕ್ರಿಯೆ ಕಾರಣ. ಗೊದಮೊಟ್ಟೆ ರೂಪ ಪರಿವರ್ತನೆಯ ಕೊನೆಯಲ್ಲಿ ಬಾಲ ನಶಿಸುತ್ತದೆ. ಇದಕ್ಕೆ ಲೈಸೋಸ್ಸೋಮ್‌ನಲ್ಲಿ ಉತ್ಪತ್ತಿಯಾಗುವ ಹೈಡ್ರೋಲೈಟಿಕ್ ಕಿಣ್ವವೇ ಕಾರಣ. (ಎಸ್.ಆರ್.ಎಸ್.)

**ಗೊದ್ದ :** ಇನ್ಸೆಕ್ಟ ವರ್ಗದ ಫಾರ್ಮಿಸಿಡೀ ಕುಟುಂಬಕ್ಕೆ ಸೇರಿದ ಒಂದು ಕೀಟ. ಇರುವೆಗಳಿಗೆ ಹತ್ತಿರ ಸಂಬಂಧಿ. ಇದು ಸಾಮಾನ್ಯವಾಗಿ ಮರದ ತುಂಡು ಮತ್ತು ದಿಮ್ಮಿಗಳ ಪೊಟರೆಗಳಲ್ಲಿ ಗೂಡುಮಾಡಿಕೊಂಡು ದೊಡ್ಡ ಗುಂಪುಗಳಲ್ಲಿ ವಾಸಿಸುತ್ತದೆ. ಕೆಲವೊಮ್ಮೆ ಹಸಿ ಮರಗಳಲ್ಲಿ ಇರಬಹುದಾದ ಗಾಯಗಳ ಮೂಲಕ ಮರದೊಳಕ್ಕೆ ಪ್ರವೇಶಿಸಿ ವಾಸಮಾಡತೊಡಗುವುದುಂಟು. ಸತ್ತ ಇತರ ಕೀಟಗಳು ಮತ್ತು ಕೆಲವು ಗಿಡಗಳ ಎಲೆಗಳ ಮೇಲೆ ಗಿಡಹೇನುಗಳು ಸ್ರವಿಸುವ ಸಿಹಿಯಾದ ಅಂಟು ಪದಾರ್ಥ– ಇವೇ ಗೊದ್ದದ ಆಹಾರ. ಅನೇಕ ವೇಳೆ ಮನೆಗಳೊಳಕ್ಕೆ ಬಂದು ಸಕ್ಕರೆಗೂ ಮುತ್ತುವುದುಂಟು. ಗೊದ್ದಗಳ ಒಂದು ಹಿಂಡಿನಲ್ಲಿ ಸಾಮಾನ್ಯವಾಗಿ ಒಂದು ರಾಣಿ, ಹಲವಾರು ದೊಡ್ಡ ಹಾಗೂ ಚಿಕ್ಕ ಕೆಲಸಗಾರ ಗೊದ್ದಗಳು ಮತ್ತು ಅನಿಷೇಚನ ರೀತಿಯಲ್ಲಿ ಬೆಳೆದ ಗಂಡು ಗೊದ್ದಗಳು ಇರುತ್ತವೆ. ದೊಡ್ಡ ಗುಂಪುಗಳಲ್ಲಿ ನಿಯಮಿತ ಲೈಂಗಿಕ ಕಾರ್ಯ ನಿರ್ವಹಿಸುವ ಮತ್ತು ರೆಕ್ಕೆಯುಳ್ಳ ಗಂಡು ಹಾಗೂ ಹೆಣ್ಣು ಗೊದ್ದಗಳು



ಕಾಣಸಿಗುತ್ತವೆ. ಆದರೆ ಇವು ಅನುಕೂಲ ಪರಿಸ್ಥಿತಿಯಲ್ಲಿ ಮಾತ್ರ ಕೊಂಚ ಕಾಲ ಹಾರಾಡುತ್ತಿದ್ದು ಕೊನೆಗೆ ಸಂಭೋಗ ಕ್ರಿಯೆಯಲ್ಲಿ ತೊಡಗುತ್ತವೆ. ಗರ್ಭ ಧರಿಸಿದ ಹೆಣ್ಣು ಗೊದ್ದ ಹೊಸ ಗೂಡು ಮಾಡಲು ಸೂಕ್ತವಾದ ಮರವನ್ನೇರಿ ಅದನ್ನು ಕೊರೆದು ಒಳಗೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಡುವ ಮುನ್ನ ಅದರ ರೆಕ್ಕೆಗಳು ಕಳಚಿಬೀಳುತ್ತವೆ. ಮೊಟ್ಟೆಗಳು ಒಡೆದು ಮರಿ ಹುಳುಗಳು ಹೊರಬರುತ್ತವೆ. ತಾಯಿ ಗೊದ್ದ ತನ್ನ ದೇಹದಿಂದ ಸ್ರವಿಸುವ ವಸ್ತುಗಳಿಂದ ಮರಿಹುಳುಗಳನ್ನು ಪೋಷಿಸುತ್ತದೆ. 2–3 ತಿಂಗಳುಗಳಲ್ಲಿ ಇವು ಕೆಲಸಗಾರ ಇರುವೆಗಳಾಗಿ ಬೆಳೆಯುತ್ತವೆ. ಭಾರತ ಮತ್ತು ಪಾಕಿಸ್ತಾನಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಗೊದ್ದ ಕ್ಯಾಂಪೊನೋಟಸ್ ಕಂಪ್ರೆಸಸ್ ಎಂಬುದು. ಅರಗಿನ ಕೀಟದ ಶತ್ರುಗಳನ್ನು ತಿಂದು ಹಾಕುವುದರಿಂದ ಇದು ಅರಗಿನ ಉತ್ಪಾದನೆಗೆ ಸಹಕಾರಿಯೆನ್ನಲಾಗಿದೆ. (ಕೆ.ಜಿ.ಎನ್.)

**ಗೊದ್ದನಮರ :** ಬರ್ಸರೇಸೀ ಕುಟುಂಬಕ್ಕೆ ಸೇರಿದ ಒಂದು ಕಾಡುಮರ. ಅರೆನೆಲ್ಲಿ, ಬೋಳಮಟೆ, ಹಾಲಉಲಿಗೆ ಇದರ ಪರ್ಯಾಯ ನಾಮಗಳು. ಗಾರುಗ ಪಿನೇಟ ವೈಜ್ಞಾನಿಕ ಹೆಸರು. ಭಾರತಾದ್ಯಂತ ಮಿಶ್ರಪರ್ಣಪಾತಿ ಕಾಡುಗಳಲ್ಲಿ ತೇಗ ಮತ್ತು ಸಾಲ ವೃಕ್ಷಗಳ ಜೊತೆಯಲ್ಲಿ ಕಂಡುಬರುತ್ತದೆ. ಆಗ್ನೇಯ ಏಷ್ಯ ಮತ್ತು ಪೆಸಿಫಿಕ್ ಸಾಗರದ ಕೆಲವು ದ್ವೀಪಗಳಲ್ಲೂ ಇದರ ವ್ಯಾಪ್ತಿಯಿದೆ. ಸುಮಾರು 15 ಮೀ ಎತ್ತರಕ್ಕೆ ಬೆಳೆಯುವ ಮರ ಇದು. ಮುಖ್ಯ ಕಾಂಡವೇ ಸುಮಾರು 8 ಮೀ ಇದ್ದು ನೇರವಾಗಿ ಉರುಳೆಯಂತೆ ಬೆಳೆಯುತ್ತದೆ. ಮರದ ತೊಗಟೆ ಬೂದಿಮಿಶ್ರಿತ ಕಂದುಬಣ್ಣದ್ದು. ಆಗಿಂದಾಗ್ಗೆ ತೊಗಟೆ ಹಾಳೆಗಳಂತೆ ಕಳಚಿ ಬೀಳುತ್ತದೆ. ಎಲೆಗಳು ಸಂಯುಕ್ತ ಮಾದರಿಯವು; ಕೆಲವು ವೇಳೆ ಎಲೆಗಳ ಮೇಲೆ ಕೆಂಪುಬಣ್ಣದ ಗಂಟುಗಳನ್ನು ಗಮನಿಸಬಹುದು. ಹೂಗಳು ಹಳದಿ ಅಥವಾ ಹಸಿರುಮಿಶ್ರಿತ ಬಿಳಿಬಣ್ಣದವು; ಏಕಲಿಂಗಿಗಳಾಗಿರಬಹುದು ಇಲ್ಲವೆ ದ್ವಿಲಿಂಗಿಗಳಾಗಿರಬಹುದು. ಒಂದೇ ಮರದಲ್ಲಿ ಎರಡು ಬಗೆಗಳೂ ಇವೆ. ಹಣ್ಣು ಅಷ್ಠಿಫಲ ಮಾದರಿಯದು; ಆಕಾರ ಗುಂಡಗೆ; ಬಣ್ಣ ಹಳದಿಮಿಶ್ರಿತ ಹಸುರು ಬಣ್ಣದಿಂದ ಕಪ್ಪು ಬಣ್ಣದವರೆಗೂ ವ್ಯತ್ಯಾಸವಾಗುತ್ತದೆ. ಹಣ್ಣಿನಲ್ಲಿ 3–4 ಬೀಜಗಳಿರುತ್ತವೆ.

ಗೊದ್ದನಮರಕ್ಕೆ ಹೆಚ್ಚು ಬಿಸಿಲು ಬೇಕು. ಇದು ಕಡುಚಳಿಯನ್ನಾಗಲೀ ಶುಷ್ಕತೆಯನ್ನಾಗಲೀ ಸಹಿಸುವುದಿಲ್ಲ. ಆದರೆ ಕಾಳ್ಗಿಚ್ಚಿಗೆ ಬೇಗನೆ ತುತ್ತಾಗುವುದಿಲ್ಲ. ಮರವನ್ನು ಕಡಿದು ಹಾಕಿದಾಗ ಉಳಿಯುವ ಮೋಟಿನಿಂದ ಬೇಗನೆ ಚಿಗುರುತ್ತದೆ. ಅಲ್ಲದೆ ಯಥೇಚ್ಛವಾಗಿ ಬೇರುಸಸಿಗಳನ್ನೂ ಉತ್ಪಾದಿಸುತ್ತದೆ. ಇದರ ಸ್ವಾಭಾವಿಕ ಪುನರುತ್ಪತ್ತಿ ಬೀಜಗಳ ಮೂಲಕ. ಪ್ರತಿವರ್ಷ ಮಳೆಗಾಲದ ವೇಳೆಗೆ ಇದರ ಹಣ್ಣುಗಳು ಮಾಗಿ ನೆಲಕ್ಕೆ ಬಿದ್ದು ಬಿರಿಯುತ್ತವೆ. ಒಳಗಿನ ಬೀಜಗಳು ಮರು ವರ್ಷದ ಮಳೆಗಾಲದಲ್ಲಿ ಮೊಳೆತು ಸಸಿಗಳಾಗುತ್ತವೆ. ಗೊದ್ದನಮರವನ್ನು ಕೃತಕವಾಗಿ ವೃದ್ಧಿಸಲು ಬೀಜಗಳನ್ನೇ ಬಳಸಬಹುದಾದರೂ ಬೀಜಗಳು ಮೊಳೆಯಲು ಒಂದು ವರ್ಷ ಬೇಕಾಗುತ್ತದಲ್ಲದೆ ಸಸಿಗಳ ಬೆಳವಣಿಗೆ ನಿಧಾನವಾದ್ದರಿಂದ ಕಾಂಡ ತುಂಡುಗಳನ್ನು ನೆಟ್ಟು ಬೆಳೆಸುವುದೇ ವಾಡಿಕೆಯಲ್ಲಿರುವ ಮತ್ತು ಸೂಕ್ತವಾದ ಕ್ರಮವಾಗಿದೆ. ಇಂಥ ಗಿಡಗಳು ಶೀಘ್ರಗತಿಯಲ್ಲಿ ಬೆಳೆಯುತ್ತವೆ.

ಗೊದ್ದನಮರದ ಚೌಬೀನೆಯ ರಸಕಾಷ್ಠ ಬಿಳಿಯಬಣ್ಣದ್ದು. ಚೇಗು ಕೆಂಪುಮಿಶ್ರಿತ ಕಂದು ಬಣ್ಣದ್ದು. ಚೇಗು ಗಟ್ಟಿಯಾಗಿದೆ. ಚೌಬೀನೆಯನ್ನು ಗಾಳಿಯ ಸಹಾಯದಿಂದ ಒಣಗಿಸಬಹುದಾದರೂ ರಸಕಾಷ್ಠ ಸುಲಭವಾಗಿ ಒಣಗದು. ಇದರಿಂದಾಗಿ ರಸಕಾಷ್ಠವನ್ನು ಸೂಕ್ತ ವಿಧಾನಗಳಿಂದ ಸಂಸ್ಕರಿಸಬೇಕು. ಚೌಬೀನೆಯನ್ನು ಸುಲಭವಾಗಿ ಗರಗಸದಿಂದ ಕೊಯ್ಯಬಹುದು. ಅಲ್ಲದೆ ಇದು ಮರಗೆಲಸಗಳಿಗೆ ಒಗ್ಗುತ್ತದೆ. ಚೇಗಿನಿಂದ ಪೀಠೋಪಕರಣಗಳನ್ನು ತಯಾರಿಸಬಹುದು. ಸಣ್ಣ ದೋಣಿ, ಮರದ ಹಲಗೆ, ಪೆಟ್ಟಿಗೆ, ಪೀಪಾಯಿ, ಪ್ಲೈವುಡ್, ಮನೆಕಟ್ಟಲು ಬೇಕಾಗುವ ಮರದ ವಸ್ತುಗಳು ಮುಂತಾದವನ್ನು ತಯಾರಿಸಲು ಚೌಬೀನೆಯನ್ನು ಉಪಯೋಗಿಸುತ್ತಾರೆ. ಕೆಳದರ್ಜೆಯ ಪೆನ್ಸಿಲುಗಳ ಹಾಗೂ ಬೆಂಕಿಪೊಟ್ಟಣದ ತಯಾರಿಕೆಗೆ ಸಹ ಬಳಸುವುದುಂಟು. ಇದರಿಂದ ಒಳ್ಳೆಯ ದರ್ಜೆಯ ಇದ್ದಲನ್ನೂ ಪಡೆಯಬಹುದು. ಗೊದ್ದನಮರದ ತಿರುಳನ್ನು ಗೊಡ್ಡೆಮರದ ತಿರುಳಿನೊಂದಿಗೆ ಸೇರಿಸಿ ಕಂದುಬಣ್ಣದ ಕಾಗದವನ್ನು ತಯಾರಿಸಲು ಬಳಸುತ್ತಾರೆ.

ಗೊದ್ದನಮರದ ಹಣ್ಣುಗಳನ್ನು ಹಸಿಯಾಗಿ, ಬೇಯಿಸಿ ಹಾಗೂ ಉಪ್ಪಿನಕಾಯಿ ರೂಪದಲ್ಲಿ ತಿನ್ನಬಹುದು. ಹುಳಿಯಾಗಿರುವ ಇವಕ್ಕೆ ತಂಪುಕಾರಕ ಹಾಗೂ ಜೀರ್ಣಕಾರಕ ಗುಣಗಳಿವೆ. ಎಲೆಯ ರಸವನ್ನು ಜೇನು ಹಾಗೂ ಇತರ ವಸ್ತುಗಳೊಡನೆ ಉಬ್ಬಸ ನಿವಾರಣೆಗೆ ಬಳಸುತ್ತಾರೆ. ಫಿಲಿಪೀನ್ಸಿನಲ್ಲಿ ಇದರ ಬೇರಿನ ಕಷಾಯವನ್ನು ಪುಪ್ಪುಸ ಸಂಬಂಧವಾದ ರೋಗಗಳ ಚಿಕಿತ್ಸೆಯಲ್ಲಿ ಬಳಸುವುದಿದೆ. ಇದರ ಎಲೆಗಳು ಹಾಗೂ ಎಳೆ ಚಿಗುರುಗಳು ದನಕರುಗಳಿಗೆ ಒಳ್ಳೆಯ ಮೇವು. ಮರದ ತೊಗಟೆ ಹಾಗೂ ಎಲೆಯ ಮೇಲಿನ ಗಂಟುಗಳನ್ನು ಚರ್ಮ ಹದ ಮಾಡಲು ಉಪಯೋಗಿಸುತ್ತಾರೆ. ಗೊದ್ದನಮರಕ್ಕೆ ಬೆಂಕಿಯನ್ನು ನಿರೋಧಿಸುವ ಸಾಮರ್ಥ್ಯವಿರುವುದರಿಂದ ಮತ್ತು ಈ ಮರ ಸುಲಭವಾಗಿ ಬೆಳೆಯುವುದರಿಂದ ಇದನ್ನು ಅರಣ್ಯ ವೃದ್ಧಿಗೆ ಉಪಯೋಗಿಸುತ್ತಾರೆ. (ಕೆ.ಜಿ.)

**ಗೊಬ್ಬರ :** ಸಸ್ಯಕ್ಕೆ ಅವಶ್ಯವಿರುವ ಯಾವುದೋ ಒಂದು ಅಥವಾ ಅಧಿಕ ಪೋಷಕಗಳನ್ನು ಒದಗಿಸುವ ಉದ್ದೇಶದಿಂದ ಮತ್ತು ಅಗತ್ಯವಿದ್ದಲ್ಲಿ ಮಣ್ಣಿನ ಭೌತಗುಣವನ್ನು ಉತ್ತಮಗೊಳಿಸುವ ಸಲುವಾಗಿ ಉಪಯೋಗಿಸುವ ಪದಾರ್ಥ. ಸಸ್ಯದ ಉತ್ತಮ ಬೆಳವಣಿಗೆಗೆ ಹಲವಾರು ಮೂಲವಸ್ತಗಳು ಅವಶ್ಯ. ಇವುಗಳ ಪೈಕಿ ಕೆಲವನ್ನು ಅದು ಮಣ್ಣಿನಿಂದಲೂ ಉಳಿದವನ್ನು ನೀರು ಮತ್ತು ವಾಯುವಿನಿಂದಲೂ ಪಡೆಯುತ್ತದೆ. ಈ ಮೂಲವಸ್ತುಗಳಿಗೆ ಸಸ್ಯಪೋಷಕಗಳು (ಪ್ಲಾಂಟ್ ನ್ಯೂಟ್ರಿಯೆಂಟ್ಸ್) ಎಂದು ಹೆಸರು. ಇವನ್ನು ಪ್ರಧಾನ ಸಸ್ಯಪೋಷಕಗಳು ಮತ್ತು ಗೌಣ ಸಸ್ಯಪೋಷಕಗಳು ಎಂಬುದಾಗಿ ವಿಭಾಗಿಸಬಹುದು. ಕಾರ್ಬನ್, ಹೈಡ್ರೊಜನ್, ಆಕ್ಸಿಜನ್, ನೈಟ್ರೊಜನ್, ಫಾಸ್ಫರಸ್, ಪೊಟ್ಯಾಸಿಯಮ್, ಸಲ್ಫರ್, ಕ್ಯಾಲ್ಸಿಯಮ್ ಮತ್ತು ಮೆಗ್ನೀಸಿಯಮ್ ಪ್ರಧಾನ ಸಸ್ಯಪೋಷಕಗಳು. ಕಬ್ಬಿಣ, ಮ್ಯಾಂಗನೀಸ್, ಬೊರಾನ್, ಸತು, ತಾಮ್ರ ಮತ್ತು ಮಾಲಿಬ್ಡಿನಮ್ ಗೌಣ ಸಸ್ಯಪೋಷಕಗಳು. ಪೋಷಕಗಳ ಪೈಕಿ ಹೆಚ್ಚಿನವು ಮಣ್ಣಿನಿಂದಲೇ ಸಸ್ಯಕ್ಕೆ ಒದಗುತ್ತವೆ. ಆದರೆ ಮಣ್ಣಿನಲ್ಲಿ ಇವು ಸಾಕಷ್ಟು ಪರಿಮಾಣದಲ್ಲಿ ಇಲ್ಲದಾಗ